ಶುಕ್ರವಾರ, ಏಪ್ರಿಲ್ 12, 2024 | ₹ 7.00

• www.prajavani.net


prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ

ಕೋಲ್ಕತ್ತದಲ್ಲಿ ಗುರುವಾರ ಬಂಗಾಳಿ ಭಾಷೆಯ 'ಆಲಾಪ್' ಚಲನಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ನಟಿ, ಟಿಎಂಸಿ ಮಾಜಿ ಸಂಸದೆ ಮಿಮಿ ಚಕ್ರವರ್ತಿ ಪಾಲ್ಗೊಂಡಿದ್ದರು



ಜಾಗೃತಿ ಕಾರ್ಯಕ್ರಮ, ಪ್ರಖ್ಯಾತರ ಮನವಿ, ರಾಜಕಾರಣಿಗಳ ಒತ್ತಾಸೆಗೂ ಮಣಿಯದ ನಗರ ಮತದಾರ ● ಮತದಾನದ ದಿನ ಮೋಜು– ಮಸ್ತಿಗೆ ಆದ್ಯತೆ!

ರಾಜ್ಯ, ರಾಷ್ಟ್ರಮಟ್ಟ ತಲುಪದ 'ಬುದ್ಧಿವಂತರು'

● ಆರ್. ಮಂಜುನಾಥ್

ಬೆಂಗಳೂರು: ಪ್ರಜ್ಞಾವಂತರು, ಪ್ರಶ್ನೆ ಮಾಡುವವರು, ಬುದ್ಧಿವಂತರನ್ನು ಹೆಚ್ಚಾಗಿ ಹೊಂದಿರುವ ಬೆಂಗಳೂರು ನಗರ, ಕಳೆದ ಮೂರು ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರ ಮತ್ತು ರಾಜ್ಯದ ಒಟ್ಟಾರೆ ಮತದಾನದ ಪ್ರಮಾಣಕ್ಕಿಂತಲೂ ಹಿಂದೆಯೇ ಉಳಿದಿದೆ.

ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರಗಳಲ್ಲಿ 92 ಲಕ್ಷ ಮತದಾರರೂ ಸೇರಿದಂತೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಂದು ಕೋಟಿಗೂ ಅಧಿಕ ಮತದಾರರಿದ್ದಾರೆ. ಪ್ರತಿ ಚುನಾವಣೆ ಮುಗಿದ ಮೇಲೆ 'ಬೆಂಗಳೂರಿನಲ್ಲಿ ಕಡಿಮೆ ಮತದಾನವಾಗಿದೆ, ಮುಂದಿನ ಬಾರಿ ಹೆಚ್ಚಿಸಬೇಕು, ಮತದಾರರು ಜಾಗೃತಗೊಂಡು ಮತದಾನ ಮಾಡಬೇಕು' ಎಂದೆಲ್ಲ ಹೇಳಲಾಗುತ್ತದೆ. ಅದಕ್ಕೆ ಅತಿ ಹೆಚ್ಚು 'ಸ್ವೀಪ್' ಕಾರ್ಯಕ್ರಮಗಳನ್ನೂ ನಡೆಸಲಾಗುತ್ತಿದೆ. ಇಷ್ಟಾದರೂ ನಗರದ 'ಬುದ್ಧಿವಂತ' ಮತದಾರರು ಮಣಿಯುತ್ತಿಲ್ಲ.

ಮತದಾನದ ದಿನ ರಜೆ ಇರುತ್ತದೆ. ಅದರ ಹಿಂದಿನ ಅಥವಾ ಮುಂದಿನ ದಿನ ರಜೆ ಇದ್ದರೆ, ವಾರಾಂತ್ಯವಾಗಿದ್ದರೆ ಮತದಾನವನ್ನು ಮರೆಯುವ 'ಬುದ್ಧಿವಂತರು' ಪ್ರವಾಸದ ಮೋಜಿಗೆ ನಗರ ಬಿಟ್ಟು ಹೊರಡುತ್ತಾರೆ. ಈ ಕಾರಣದಿಂದಲೇ ಕಳೆದ ವಿಧಾನಸಭೆ, ಲೋಕಸಭೆ ಚುನಾವಣೆಗಳಲ್ಲಿ ಮತದಾನದ ಪ್ರಮಾಣ ಕಡಿಮೆಯಾಗಿರುವುದು ಅರಿವಿಗೆ ಬಂದಿದೆ. 'ಹೈಟೆಕ್ ಪ್ರದೇಶ', ಐಷಾರಾಮಿ ಸ್ಥಳ, ಸಾಫ್ಟ್‌ವೇರ್– ಹಾರ್ಡ್‌ವೇರ್ ಕಂಪನಿಗಳ ಸಿಬ್ಬಂದಿಯಿರುವ ಪ್ರದೇಶಗಳಲ್ಲೇ ಮತದಾನದ ಪ್ರಮಾಣ ಕಡಿಮೆಯಾಗುತ್ತಿರುವುದೂ ಆತಂಕದ ವಿಷಯವಾಗಿದೆ.

ಶೇ 20ರಷ್ಟು ಮತದಾನ

2019ರ ಲೋಕಸಭಾ ಹಾಗೂ 2023ರ ವಿಧಾನಸಭೆ ಚುನಾವಣೆಯಲ್ಲಿ 4,471 ಮತಗಟ್ಟೆಗಳಲ್ಲಿ ಶೇ 20ರಷ್ಟು ಹಾಗೂ 704 ಮತಗಟ್ಟೆಗಳಲ್ಲಿ ಶೇ 5 ರಿಂದ 20ರಷ್ಟು ಮತದಾನವಾಗಿದೆ. ಈ ಬಾರಿ, 28 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ 7,154 ಮತಗಟ್ಟೆಗಳಿವೆ.

ಎಲ್ಲೆಲ್ಲಿ ಎಷ್ಟೆಷ್ಟು ಮತಗಟ್ಟೆಗಳಲ್ಲಿ ಕಡಿಮೆ ಮತದಾನ

ವಿಧಾನಸಭೆ ಕ್ಷೇತ್ರ	ಶೇ 20ರಷ್ಟು ಮತದಾನ	ಶೇ 20ಕ್ಕಿಂತಲೂ ಕಡಿಮೆ
ಬೆಂಗಳೂರು ದಕ್ಷಿಣ	306	46
ಮಹದೇವಪುರ	279	24
ಯಶವಂತಪುರ	275	12
ಬ್ಯಾಟರಾಯನಪುರ	238	75
ಕೆ.ಆರ್.ಪುರ	233	21
ಯಲಹಂಕ	213	87
ದಾಸರಹಳ್ಳಿ	213	62
ರಾಜರಾಜೇಶ್ವರಿ ನಗರ	207	28
ಆನೇಕಲ್	178	64
ಬೊಮ್ಮನಹಳ್ಳಿ	178	16
ಸರ್ವಜ್ಞನಗರ	158	33
ಪದ್ಮನಾಭನಗರ	147	9
ಗೋವಿಂದರಾಜ ನಗರ	133	11
ವಿಜಯನಗರ	131	10
ಹೆಬ್ಬಾಳ	129	20
ಬಿಟಿಎಂ ಲೇಔಟ್	126	10
ಮಹಾಲಕ್ಷ್ಮಿ ಲೇಔಟ್	125	16
ಚಿಕ್ಕಪೇಟೆ	124	20
ಸಿ.ವಿ. ರಾಮನ್‌ನಗರ	119	26
ಗಾಂಧಿನಗರ	118	12
ಬಸವನಗುಡಿ	118	6
ರಾಜಾಜಿನಗರ	115	8
ಜಯನಗರ	110	9
ಮಲ್ಲೇಶ್ವರ	104	11
ಪುಲಕೇಶಿನಗರ	103	21
ಚಾಮರಾಜಪೇಟೆ	103	18
ಶಾಂತಿನಗರ	101	113
ಶಿವಾಜಿನಗರ	98	16

'ರಸ್ತೆ ಸರಿ ಇಲ್ಲ, ಗುಂಡಿಗಳೇ ಇವೆ, ಮಳೆಯ ನೀರು ಮನೆಗೆ, ವಿಲ್ಲಾಗೆ ನುಗ್ಗಿದೆ, ಬೆಂಗಳೂರು ಮುಳುಗುತ್ತೆ, ಇಲ್ಲಿ ಸೌಲಭ್ಯಗಳಿಲ್ಲ' ಎಂದು ಸಾಮಾಜಿಕ ತಾಣಗಳಲ್ಲಿ ಸಾಕಷ್ಟು ಪ್ರಚಾರ ಹಾಗೂ ಪ್ರಶ್ನೆ ಮಾಡುವ ಪ್ರದೇಶದ ಜನರೇ ಮತದಾನದ ಹಬ್ಬದಲ್ಲಿ ಬಹುತೇಕ ಪಾಲ್ಗೊಳ್ಳದಿರುವುದನ್ನೂ ಅಂಕಿ–ಅಂಶಗಳು ಬಹಿರಂಗಗೊಳಿಸಿವೆ.

'ನಗರದ ಮತದಾರರೆಲ್ಲರೂ ಮತದಾನ ಮಾಡಬೇಕು. ಮತದಾನದ ಹಬ್ಬದಲ್ಲಿ ಪಾಲ್ಗೊಳ್ಳಬೇಕು. ಮತದಾನದ ಪ್ರಮಾಣ ಹೆಚ್ಚಾಗಬೇಕು' ಎಂದು ಜಿಲ್ಲಾಡಳಿತ, ನಗರ ಜಿಲ್ಲಾ ಚುನಾವಣೆ ಅಧಿಕಾರಿಗಳು 'ಸ್ವೀಪ್' ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ. ಬೀದಿನಾಟಕ, ರ್‍ಯಾಲಿ, ವಾಕಥಾನ್, ಸೈಕಲ್‌ಥಾನ್ ಎಂದೆಲ್ಲ ಚಟುವಟಿಕೆಗಳನ್ನು ಪ್ರತಿ ಚುನಾವಣೆಯ ಸಮಯದಲ್ಲೂ ನಡೆಸಲಾಗುತ್ತಿದೆ. ಈ ಬಾರಿಯೂ ಇವೆಲ್ಲ ಚಟುವಟಿಕೆಗಳೂ ನಡೆಯುತ್ತಿವೆ.


ಬೆಂಗಳೂರಿನ ಉತ್ತರ, ಕೇಂದ್ರ, ದಕ್ಷಿಣ ಲೋಕಸಭಾ ಕ್ಷೇತ್ರಗಳಲ್ಲಿ ತಲಾ 20 ಲಕ್ಷಕ್ಕೂ ಹೆಚ್ಚು ಮತದಾರರಿದ್ದಾರೆ. ಉತ್ತರ ಲೋಕಸಭೆ ಕ್ಷೇತ್ರದಲ್ಲಿ ಈ ಬಾರಿ ಮತದಾರರ ಸಂಖ್ಯೆ 31 ಲಕ್ಷ ಮೀರಿದೆ. ಆದರೆ, ಮತದಾನದ ಪ್ರಮಾಣ ಮಾತ್ರ ಹೆಚ್ಚಾಗುತ್ತಿಲ್ಲ. 2009ರಲ್ಲಿ ಸುಮಾರು 60 ಲಕ್ಷ ಮತದಾರರಿದ್ದ ನಗರದಲ್ಲಿ ಈ ಬಾರಿ ಮತದಾರರ ಸಂಖ್ಯೆ ಒಂದು ಕೋಟಿ ಮೀರುತ್ತಿದೆ. 2009ರಲ್ಲಿ ಸರಾಸರಿ ಶೇ 45ರಷ್ಟು ಮತದಾನವಾಗಿತ್ತು. 2019ರಲ್ಲಿ ಶೇ 54ರಷ್ಟು ಮತದಾನವಾಗಿದೆ. ಮತದಾರ ಪಟ್ಟಿ (ಎಪಿಕ್) ಮಾಡಿಸಿಕೊಳ್ಳುವಲ್ಲಿನ ಆಸಕ್ತಿ, ಮತದಾನ ಮಾಡುವಲ್ಲಿ ಇಲ್ಲ ಎಂಬುದು ಕಳೆದ ವಿಧಾನಸಭೆ ಚುನಾವಣೆಯಲ್ಲೂ ಸಾಬೀತಾಗಿದೆ. ಆ ಚುನಾವಣೆಯಲ್ಲಿ ಶೇ 54.53ರಷ್ಟು ಮಾತ್ರ ಮತದಾನವಾಗಿತ್ತು.

ಕಳೆದ ಮೂರು ಲೋಕಸಭಾ ಚುನಾವಣೆಗಳಲ್ಲಿ ರಾಷ್ಟ್ರ ಹಾಗೂ ರಾಜ್ಯಮಟ್ಟದ ಒಟ್ಟಾರೆ ಮತದಾನದ ಪ್ರಮಾಣಕ್ಕೆ ಹೋಲಿಸಿದರೆ ಬೆಂಗಳೂರು ನಗರದ ಮತದಾರರು ಹಿಂದೆಯೇ ಇದ್ದಾರೆ. ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲೂ ನಗರ ಜಿಲ್ಲೆಯ ಜನರಿದ್ದಾರೆ. ಅಲ್ಲಿ ನಗರದ ಮೂರು ಕ್ಷೇತ್ರಗಳಿಗಿಂತ ಹೆಚ್ಚಿನ ಮತದಾನವಾಗಿದೆ. ಆದರೆ, ಅಭಿವೃದ್ಧಿ, ಸೌಕರ್ಯ ಸೇರಿದಂತೆ ಎಲ್ಲವನ್ನೂ ಅತಿಹೆಚ್ಚೇ ಬಯಸುವ ನಗರದ ಬುದ್ಧಿವಂತ ಮತದಾರರು, ಮತದಾನದಲ್ಲಿ ಇಂದಿಗೂ ಹಿಂದೆಯೇ ಉಳಿದಿದ್ದಾರೆ.

	2009 ಒಟ್ಟು ಮತದಾರರು	2009 ಮತ ಹಾಕಿದವರು	2014 ಒಟ್ಟು ಮತದಾರರು	2014 ಮತ ಹಾಕಿದವರು	2019 ಒಟ್ಟು ಮತದಾರರು	2019 ಮತ ಹಾಕಿದವರು	2024 ಒಟ್ಟು ಮತದಾರರು
ಬೆಂಗಳೂರು ಗ್ರಾ.	19,04,135	11,02,833	21,90,398	14,55,610	24,97,458	16,21,906	27,63,910
ಬೆಂಗಳೂರು ಉತ್ತರ	21,44,091	10,01,657	24,01,472	13,57,553	28,49,250	15,59,459	31,74,098
ಬೆಂಗಳೂರು ಕೇಂದ್ರ	19,01,346	8,46,982	19,31,456	10,74,602	22,04,817	11,97,234	23,98,910
ಬೆಂಗಳೂರು ದಕ್ಷಿಣ	20,31,030	9,09,065	19,98,724	11,14,359	22,15,489	15,59,459	23,17,472
ಚಿಕ್ಕಬಳ್ಳಾಪುರ	14,37,155	9,78,610	16,58,410	12,63,911	18,08,780	13,86,963	19,66,067



ಲೋಕಸಭೆ ಚುನಾವಣೆ: ಮತದಾನದ ಪ್ರಮಾಣ



ಲೋಕಸಭಾ ಚುನಾವಣೆ | ಮತದಾರರು ಏನಂತಾರೆ?

'ಸ್ಮಾರಕಗಳ ರಕ್ಷಣೆ ಮಾಡಿ'



ಬೆಂಗಳೂರು ದಕ್ಷಿಣ, ಕೇಂದ್ರ ಹಾಗೂ ಉತ್ತರ ಲೋಕಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಸ್ಮಾರಕಗಳನ್ನು ರಕ್ಷಣೆ ಮಾಡಲು ಕ್ರಮವಹಿಸಬೇಕು. ಮಾಯವಾಗುತ್ತಿರುವ ಕೆರೆಗಳನ್ನು ಸಂರಕ್ಷಿಸಿ, ಮರುಜೀವ ನೀಡಬೇಕು. ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಒದಗಿಸಿ, ಅಭಿವೃದ್ಧಿಪಡಿಸಬೇಕು. ಈ ಮೂಲಕ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಪ್ರತಿ ವಿಧಾನಸಭೆ ಕ್ಷೇತ್ರದಲ್ಲಿ ಸುಸಜ್ಜಿತ ಸರ್ಕಾರಿ ಆಸ್ಪತ್ರೆ ಸ್ಥಾಪಿಸಿ, ಅಗತ್ಯ ಚಿಕಿತ್ಸೆ ಜನಸಾಮಾನ್ಯರಿಗೆ ಸುಲಭವಾಗಿ ಒದಗಿಸಲು ಕ್ರಮವಹಿಸಬೇಕು. ಸಾರ್ವಜನಿಕರು ವಿವಿಧ ಸಮಸ್ಯೆಗಳೊಂದಿಗೆ ಬಂದಾಗ, ಸ್ಪಂದಿಸುವುದನ್ನು ಜನಪ್ರತಿನಿಧಿಗಳು ರೂಢಿಸಿಕೊಳ್ಳಬೇಕು.

ಸಿ. ಕಾಳಯ್ಯ, ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕೇಂದ್ರ ಸಮಿತಿ ಉಪಾಧ್ಯಕ್ಷ

'ಜನ ಸಂಪರ್ಕ ಸಭೆ ನಡೆಸಬೇಕು'

ಚುನಾಯಿತ ಅಭ್ಯರ್ಥಿಯು ಕ್ಷೇತ್ರದ ಜನರೊಂದಿಗೆ ಸಂಪರ್ಕ ಕಾಯ್ದುಕೊಳ್ಳಬೇಕು. ಪ್ರತಿ ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆ ನಡೆಸುವ ಮೂಲಕ ಕುಂದು- ಕೊರತೆಗಳನ್ನು ಆಲಿಸಿ, ಪರಿಹರಿಸಲು ಶ್ರಮಿಸಬೇಕು. ಸರ್ಕಾರಿ ಯೋಜನೆಗಳು ಹಾಗೂ ಸೌಲಭ್ಯಗಳು ಕ್ಷೇತ್ರದ ಫಲಾನುಭವಿಗಳನ್ನು ತಲುಪುತ್ತಿವೆಯೇ ಎಂದು ಪರಿಶೀಲನೆ ಮಾಡಬೇಕು. ಸಂಸದರು ತಮ್ಮ ಕ್ಷೇತ್ರದಲ್ಲಿ ಕಚೇರಿ ತೆಗೆದು, ತಮ್ಮ ಸಂಪರ್ಕ ಸಂಖ್ಯೆ ಹಾಗೂ ಇ ಮೇಲ್ ವಿಳಾಸ ನೀಡಬೇಕು. ಆಸ್ಪತ್ರೆ, ಗ್ರಂಥಾಲಯ, ರಂಗಮಂದಿರ ಸೇರಿ ವಿವಿಧ ಸೌಕರ್ಯಗಳನ್ನು ಜನರಿಗೆ ಒದಗಿಸಬೇಕು.



ಗೋವಿಂದಪ್ಪ, ಬಸವೇಶ್ವರ ನಗರ

ನನ್ನ ಕ್ಷೇತ್ರ ನನ್ನ ಕಾರ್ಯಸೂಚಿ

ಲೋಕಸಭೆ ಚುನಾವಣೆಯ ಅಭ್ಯರ್ಥಿಯು ನಿಮ್ಮ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾಡಬೇಕಾಗಿರುವುದೇನು? ನಿಮ್ಮ ಕಾರ್ಯಸೂಚಿಯನ್ನು 100 ಪದಗಳ ಮಿತಿಯಲ್ಲಿ ಬರೆಯಿರಿ. ಹೆಸರು, ವಿಳಾಸ, ಭಾವಚಿತ್ರ ಜತೆಗಿರಲಿ

96060 38256



ಪಕ್ಷದ ಅಭ್ಯರ್ಥಿ ಡಿ.ಕೆ. ಸುರೇಶ್ ಪರ ರಾಜರಾಜೇಶ್ವರಿ ನಗರದಲ್ಲಿ ನಡೆದ ಚುನಾವಣಾ ಪ್ರಚಾರಸಭೆಯಲ್ಲಿ ಡಿ.ಕೆ. ಶಿವಕುಮಾರ್ ಮಾತನಾಡಿದರು

'ಕೈ' ಹಿಡಿಯಿರಿ: ಡಿಕೆಶಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮ್ಮ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ನಾವು ಬದ್ಧ. ನಿಮ್ಮ ಮನೆ ಬಾಗಿಲಿಗೆ ಬಂದಿರುವ, ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸುವ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ರಾಜರಾಜೇಶ್ವರಿ ನಗರದ ವಿವಿಧ ವಸತಿ ಸಮುಚ್ಚಯಗಳಲ್ಲಿ ಪಕ್ಷದ ಅಭ್ಯರ್ಥಿ ಡಿ.ಕೆ. ಸುರೇಶ್ ಪರ ಚುನಾವಣಾ ಪ್ರಚಾರ ಸಭೆಗಳಲ್ಲಿ ಅವರು ಮಾತನಾಡಿದರು.

'ನೀರು, ರಸ್ತೆಯ ಸಮಸ್ಯೆಗಳ ಬಗ್ಗೆ ಗಮನವಿದ್ದು, ಶೀಘ್ರದಲ್ಲೇ ಅಧಿಕಾರಿಗಳನ್ನು ಕಳುಹಿಸಿ ಪರಿಹಾರ ನೀಡುತ್ತೇವೆ. ಕುಡಿಯುವ ನೀರಿಗಾಗಿ ನಾವು ಮೇಕೆದಾಟು ಪಾದಯಾತ್ರೆ ಮಾಡಿದೆವು. ರಾಜರಾಜೇಶ್ವರಿ ನಗರದಲ್ಲಿ ನಾವು ಸೋತಿದ್ದೇವೆ. ಕುಸುಮಾ ಅವರು ಗೆದ್ದಿದ್ದರೆ ನಿಮ್ಮ ಅರ್ಧ ಸಮಸ್ಯೆ ಇಷ್ಟು ಹೊತ್ತಿಗೆ ಬಗೆಹರಿಯುತ್ತಿತ್ತು. ಆದರೂ ನಾವು ನಿಮ್ಮ ಸೇವೆ ಮಾಡಲು ಹಿಂದೇಟು ಹಾಕುತ್ತಿಲ್ಲ. ನಿಮ್ಮ ಸಹಕಾರ ಇದ್ದಷ್ಟು ನಾವು ಸೇವೆಗೆ ಸಿದ್ಧರಾಗಿರುತ್ತೇವೆ' ಎಂದರು.

'ಬಿಜೆಪಿ ನಿಮ್ಮ ಯಾವುದೇ ಸಮಸ್ಯೆಗಳನ್ನು ಕಣ್ಣೆತ್ತಿಯೂ ನೋಡಿಲ್ಲ. ಸರ್ಕಾರದ ಪ್ರತಿನಿಧಿಯಾಗಿ ನಿಮ್ಮ ಬಳಿ ಬಂದು ಸಮಸ್ಯೆಗಳನ್ನು ಗಮನಿಸಿದ್ದೇನೆ. ಭವಿಷ್ಯದಲ್ಲಿ ನಿಮ್ಮ ಜೊತೆ ಇರುತ್ತೇನೆ' ಎಂದು ಭರವಸೆ ನೀಡಿದರು.

'ಡಿ.ಕೆ. ಸುರೇಶ್ ಅತ್ಯಂತ ಕ್ರಿಯಾಶೀಲ ಸಂಸದ. ಕೋವಿಡ್ ಸಂದರ್ಭದಲ್ಲಿ ಜನರ ಸಂಕಷ್ಟಕ್ಕೆ ಸ್ಪಂದಿಸಿದ ಏಕೈಕ ಸಂಸದ. 'ನಮ್ಮ ತೆರಿಗೆ ನಮ್ಮ ಹಕ್ಕು' ಹೋರಾಟದ ಮೂಲಕ ಕನ್ನಡಿಗರ ತೆರಿಗೆ ಹಣ ನಷ್ಟವಾಗುತ್ತಿರುವ ಬಗ್ಗೆ ಮಾತನಾಡಿದ್ದಾರೆ. ನಾವು ಬೆಂಗಳೂರಿಗೆ ಹೊಸ ರೂಪ ನೀಡಬೇಕು. ನಿಮ್ಮ ಬದುಕನ್ನು ಕಟ್ಟುವ ರೀತಿಯಲ್ಲಿ ಆಡಳಿತ ನೀಡಬೇಕು. ಯಾವುದೇ ಹಿಂಜರಿಕೆ ಇಲ್ಲದೇ ನಿಮ್ಮ ಸಮಸ್ಯೆಗಳನ್ನು ಮುಕ್ತವಾಗಿ ನಮ್ಮ ಗಮನಕ್ಕೆ ತರಬಹುದು. ನಾನು, ಸುರೇಶ್ ಅದನ್ನು ಬಗೆಹರಿಸುತ್ತೇವೆ' ಎಂದೂ ವಾಗ್ದಾನ ನೀಡಿದರು.

'ನಮ್ಮ ಗ್ಯಾರಂಟಿ ಯೋಜನೆಗಳು ಜನಸಾಮಾನ್ಯರ ಮನಗೆದ್ದಿವೆ. ಮುಂದಿನ ಅವಧಿಗೂ ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರಲಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮಹಾಲಕ್ಷ್ಮಿ ಯೋಜನೆ ಮೂಲಕ ಬಡ ಮಹಿಳೆಯರಿಗೆ ವಾರ್ಷಿಕವಾಗಿ ₹ 1 ಲಕ್ಷ, ಯುವಕರಿಗೆ ವಾರ್ಷಿಕ ₹ 1 ಲಕ್ಷ ಶಿಷ್ಯವೇತನ, ರೈತರ ಸಾಲ ಮನ್ನಾ ಮತ್ತು ಬೆಂಬಲ ಬೆಲೆ, ₹ 25 ಲಕ್ಷದವರೆಗೂ ಆರೋಗ್ಯ ವಿಮೆ ಸೇರಿದಂತೆ ಅನೇಕ ಜನಪರ ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ತಿಳಿಸಿದ್ದೇವೆ. ರಾಜ್ಯದಲ್ಲಿ ಗ್ಯಾರಂಟಿ ಯೋಜನೆ ಜಾರಿ ಮಾಡಿದಂತೆ ರಾಷ್ಟ್ರದಲ್ಲೂ ಮಾಡುತ್ತೇವೆ' ಎಂದರು.

ಪತ್ರಕರ್ತ ದೀಪಕ್ ತಿಮ್ಮಯ 'ಕೈ' ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತ ದೀಪಕ್ ತಿಮ್ಮಯ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಗುರುವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡರು.

ಬಳಿಕ ಮಾತನಾಡಿದ ಶಿವಕುಮಾರ್, 'ಕಾಂಗ್ರೆಸ್ ಪಕ್ಷಕ್ಕೆ ಸೀಮಿತವಾಗಿ ಕೆಪಿಸಿಸಿ ಅಧ್ಯಕ್ಷರ ರಾಜಕೀಯ ಹಾಗೂ ಸಂವಹನ ಕಾರ್ಯದರ್ಶಿಯಾಗಿ ದೀಪಕ್ ತಿಮ್ಮಯ ಅವರನ್ನು ನೇಮಿಸಲಾಗಿದೆ. ಉಪ ಮುಖ್ಯಮಂತ್ರಿಗೆ ಪ್ರತ್ಯೇಕ ರಾಜಕೀಯ ಹಾಗೂ ಸಂವಹನ ಕಾರ್ಯದರ್ಶಿ ಇರಲಿದ್ದಾರೆ. ದೀಪಕ್ ತಿಮ್ಮಯ ಅವರಿಗೆ ಕಾಂಗ್ರೆಸ್ ಭವನದಲ್ಲಿ ಕಚೇರಿ ನೀಡಲಾಗುವುದು' ಎಂದರು.



ದೀಪಕ್ ತಿಮ್ಮಯ

'ಮಾಧ್ಯಮ ಕ್ಷೇತ್ರದಲ್ಲಿ ಸುಮಾರು 30-40 ವರ್ಷಗಳ ಅನುಭವವಿರುವ ದೀಪಕ್ ತಿಮ್ಮಯ, ತಮ್ಮದೇ ಆದ ಸಂಸ್ಥೆ ಮೂಲಕ ಮಕ್ಕಳನ್ನು ನಾಯಕರನ್ನಾಗಿ ರೂಪಿಸುವ ಕೆಲಸ ಮಾಡಿಕೊಂಡು ಬಂದಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತ, ವಿಚಾರವಾಗಿ ಅವರು ಅನೇಕ ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಹೀಗಾಗಿ ಕಾಂಗ್ರೆಸ್ ಪಕ್ಷದ ಭಾಗವಾಗುವಂತೆ ಅವರಿಗೆ ಮನವಿ ಮಾಡಿದ್ದೆ' ಎಂದರು.

ಇಂದಿರಾ ಹತ್ಯೆಕೋರನ ಮಗ ಮತ್ತೆ ಚುನಾವಣಾ ಕಣಕ್ಕೆ

ಚಂಡೀಗಢ (ಪಿಟಿಐ): ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಹತ್ಯೆಕೋರ ಬಿಯಾಂತ್ ಸಿಂಗ್ ಪುತ್ರ ಸರಬ್‌ಜಿತ್ ಸಿಂಗ್ ಪ್ರಸಕ್ತ ಲೋಕಸಭೆ ಚುನಾವಣೆಯಲ್ಲಿ ಪಂಜಾಬ್‌ನ ಫರೀದ್‌ಕೋಟದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಗುರುವಾರ ತಿಳಿಸಿದ್ದಾರೆ.



ಇಂದಿರಾ ಗಾಂಧಿ

2004ರ ಲೋಕಸಭಾ ಚುನಾವಣೆಯಲ್ಲಿ ಭಟಿಂಡ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಿಂಗ್ 1.13 ಲಕ್ಷ ಮತ ಪಡೆದಿದ್ದರು. 2014ರಲ್ಲೂ ಅವರು ಫತೇಹ್‌ಗಢ ಸಾಹೀಬ್ ಕ್ಷೇತ್ರದಲ್ಲಿ ಪರಾಜಿತಗೊಂಡಿದ್ದರು. 2007ರಲ್ಲಿ ಪಂಜಾಬ್ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದರು.

ಸರಬ್‌ಜಿತ್ ಅವರ ತಾಯಿ ಬಿಮಾಲ್ ಕೌರ್ 1989ರಲ್ಲಿ ಲೋಕಸಭೆಗೆ ಆಯ್ಕೆಯಾಗಿದ್ದರು.



ಪ್ರಚಾರ ವಾಹನ

ಕೇಂದ್ರ ಸರ್ಕಾರದ ಸಾಧನೆಗಳನ್ನು ಬಿಂಬಿಸುವ ವಿಡಿಯೊ, ಕಿರುಚಿತ್ರಗಳು ಮತ್ತು ರೀಲ್ಸ್‌ಗಳನ್ನು ಪ್ರದರ್ಶಿಸುವ ಪ್ರಚಾರ ವಾಹನಗಳಿಗೆ ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕ ವಿ.ಸುನೀಲ್‌ಕುಮಾರ್ ಗುರುವಾರ ಚಾಲನೆ ನೀಡಿದರು. ವಿಧಾನಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್, ಬಿಜೆಪಿ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್ ಹಾಜರಿದ್ದರು

ನೀತಿ ಸಂಹಿತೆ ಜಾರಿಯಿಂದಾಗಿ ರಂಗಮಂದಿರ ಕಾಯ್ದಿರಿಸಲು ಸಂಘ-ಸಂಸ್ಥೆಗಳ ನಿರಾಸಕ್ತಿ

'ಕಲಾ' ಕ್ಷೇತ್ರಕ್ಕೂ ತಟ್ಟಿದ ಚುನಾವಣೆ 'ಬಿಸಿ'

● ವರುಣ ಹೆಗಡೆ

ಬೆಂಗಳೂರು: ಲೋಕಸಭೆ ಚುನಾವಣೆ ನೀತಿ ಸಂಹಿತೆಯ ಬಿಸಿ ಸಾಂಸ್ಕೃತಿಕ ಲೋಕಕ್ಕೂ ತಟ್ಟಿದೆ. ರವೀಂದ್ರ ಕಲಾಕ್ಷೇತ್ರ ಸೇರಿ ನಗರದ ವಿವಿಧ ಸರ್ಕಾರಿ ರಂಗಮಂದಿರಗಳಲ್ಲಿ ಪೂರ್ವ ನಿಗದಿಯಾಗಿದ್ದ ಕಾರ್ಯಕ್ರಮಗಳು ರದ್ದಾಗುತ್ತಿದ್ದರೆ, ಹೊಸದಾಗಿ ಕಾಯ್ದಿರಿಸಲು ಸಂಘ–ಸಂಸ್ಥೆಗಳು ನಿರಾಸಕ್ತಿ ತೋರುತ್ತಿವೆ.

ಏಪ್ರಿಲ್–ಮೇ ತಿಂಗಳು ಮಕ್ಕಳಿಗೆ ಬೇಸಿಗೆ ರಜೆ ಇರುವುದರಿಂದ ಪ್ರತಿ ವರ್ಷ ಈ ಅವಧಿಯಲ್ಲಿ ತಿಂಗಳು ಪೂರ್ತಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಇದರಿಂದಾಗಿ ಇಲ್ಲಿನ ಸರ್ಕಾರಿ ರಂಗಮಂದಿರಗಳಿಗೆ ಸಹಜವಾಗಿಯೇ ಬೇಡಿಕೆ ಹೆಚ್ಚಿರಲಿದೆ.

ಆದರೆ, ಈಗ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ರಾಜಕಾರಣಿಗಳಿಗೆ ಆಹ್ವಾನ ನೀಡದೆ ಕಾರ್ಯಕ್ರಮ ನಡೆಸಲು ಇಲಾಖೆ ಸಂಘ–ಸಂಸ್ಥೆಗಳಿಗೆ ಸೂಚಿಸಿದೆ. ಬ್ಯಾನರ್ ಅಳವಡಿಕೆಗೆ ಅವಕಾಶ ನಿರಾಕರಣೆ ಸೇರಿ ಕೆಲ ನಿರ್ಬಂಧ ವಿಧಿಸಲಾಗಿದೆ. ನೀತಿ ಸಂಹಿತೆಯು ಏಪ್ರಿಲ್ ತಿಂಗಳ ಜತೆಗೆ ಮೇ ತಿಂಗಳೂ ಜಾರಿಯಲ್ಲಿ ಇರುವುದರಿಂದ ಖಾಲಿ ಇರುವ ದಿನಗಳನ್ನು ಕಾಯ್ದಿರಿಸಲೂ ಸಂಘ–ಸಂಸ್ಥೆಗಳು ನಿರಾಸಕ್ತಿ ತೋರುತ್ತಿವೆ.



ರವೀಂದ್ರ ಕಲಾಕ್ಷೇತ್ರ

ನಗರದಲ್ಲಿ ಸುಸಜ್ಜಿತ ರಂಗಮಂದಿರಗಳ ಕೊರತೆ, ಖಾಸಗಿ ರಂಗಮಂದಿರಗಳಿಗೆ ಹೆಚ್ಚಿನ ಬಾಡಿಗೆ ಸೇರಿ ವಿವಿಧ ಕಾರಣಗಳಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯ ರಂಗಮಂದಿರಗಳಿಗೆ ಸದಾ ಬೇಡಿಕೆ ಇರಲಿದೆ. ರವೀಂದ್ರ ಕಲಾಕ್ಷೇತ್ರ ಸೇರಿ ಹಲವು ರಂಗಮಂದಿರಗಳು ವರ್ಷದ ಬಹುತೇಕ ದಿನಗಳು ಕಾಯ್ದಿರಿಸಲ್ಪಟ್ಟಿರುತ್ತವೆ. ಇಲಾಖೆಯು ರಂಗಮಂದಿರಗಳ ಕಾಯ್ದಿರಿಸುವಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ಪೋರ್ಟಲ್ ರೂಪಿಸಿ, ಅವಕಾಶ ಕಲ್ಪಿಸಿದೆ. ಈ ಪೋರ್ಟಲ್‌ನಲ್ಲಿ ಮುಂದಿನ ಎರಡು ತಿಂಗಳು ಕಾಯ್ದಿರಿಸಲು ಅವಕಾಶ ನೀಡಲಾಗಿದೆ. ಇದರಿಂದಾಗಿ ಏಪ್ರಿಲ್ ಹಾಗೂ ಮೇ ತಿಂಗಳಿಗೂ ಕೆಲ ದಿನಗಳು ಸಂಘ–ಸಂಸ್ಥೆಗಳು ಕಾಯ್ದಿರಿಸಿದ್ದವು. ಆದರೆ, ಚುನಾವಣೆ ನೀತಿ ಸಂಹಿತೆ ಜಾರಿಯಿಂದಾಗಿ ಕಾರ್ಯಕ್ರಮಗಳನ್ನು ಮುಂದೂಡಿ, ಕಾಯ್ದಿರಿಸುವಿಕೆ ರದ್ದುಗೊಳಿಸಲಾಗುತ್ತಿದೆ.

ಕಳೆದ ವರ್ಷವೂ ಈ ವೇಳೆ ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಿಂದಾಗಿ ಕೆಲ ಪೂರ್ವನಿಯೋಜಿತ ಕಾರ್ಯಕ್ರಮಗಳು ರದ್ದಾಗಿದ್ದವು. ಇದರಿಂದಾಗಿ ಕಲಾವಿದರು ಪ್ರದರ್ಶನಗಳಿಲ್ಲದೆಯೇ ಸಮಸ್ಯೆ ಎದುರಿಸಿದ್ದರು.

ಗೊಂದಲದಲ್ಲಿ ಆಯೋಜಕರು: ರವೀಂದ್ರ ಕಲಾಕ್ಷೇತ್ರ ಒಳಗೊಂಡಂತೆ ನಗರದ ಏಳು ರಂಗ ಮಂದಿರಗಳನ್ನು ಸಂಸ್ಕೃತಿ ಇಲಾಖೆ ನಿರ್ವಹಣೆ ಮಾಡುತ್ತಿದೆ. ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ರವೀಂದ್ರ ಕಲಾಕ್ಷೇತ್ರವು ಕ್ರಮವಾಗಿ 24 ಹಾಗೂ 18 ದಿನಗಳು ಕಾಯ್ದಿರಿಸಲ್ಪಟ್ಟಿದ್ದವು. ಪೂರ್ವ ನಿಗದಿತ ಇಲಾಖೆ ಕಾರ್ಯಕ್ರಮಗಳಿಗೂ ಕೆಲ ದಿನ ಕಲಾಕ್ಷೇತ್ರವನ್ನು ಮೀಸಲಿಡಲಾಗಿತ್ತು.

ಏಪ್ರಿಲ್ ತಿಂಗಳಲ್ಲಿ ದೇವರ ದಾಸಿಮಯ್ಯ ಜಯಂತಿ, ಭಗವಾನ್ ಮಹಾವೀರ ಜಯಂತಿ, ಅಕ್ಕಮಹಾದೇವಿ ಜಯಂತಿ, ಮೇ ತಿಂಗಳಲ್ಲಿ ಬಸವ ಜಯಂತಿ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ, ಶಂಕರಾಚಾರ್ಯ ಜಯಂತಿ ಹಾಗೂ ಭಗೀರಥ ಜಯಂತಿ ನಿಗದಿಯಾಗಿದ್ದವು. ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಜಯಂತಿಗಳನ್ನು ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲು ಇಲಾಖೆ ನಿರ್ಧರಿಸಿದೆ.

ನಯನ ಸಭಾಂಗಣವು ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಕ್ರಮವಾಗಿ 22, 14, ಕಲಾಗ್ರಾಮದಲ್ಲಿರುವ ಸಾಂಸ್ಕೃತಿಕ ಸಮುಚ್ಚಯವು 14, 17, ಸಂಸ ಬಯಲು ರಂಗಮಂದಿರವು 5, 7 ದಿನಗಳು ಮುಂಚಿತವಾಗಿ ಬುಕ್ಕಿಂಗ್ ಆಗಿವೆ. ಪುಸ್ತಕ ಬಿಡುಗಡೆ ಸೇರಿ ವಿವಿಧ ಕಾರ್ಯಕ್ರಮಗಳಿಗೆ ದಿನ ಕಾಯ್ದಿರಿಸಿದ್ದವರೂ ನೀತಿ ಸಂಹಿತೆ ನಿರ್ಬಂಧಗಳಿಂದ ಗೊಂದಲಕ್ಕೆ ಒಳಗಾಗಿದ್ದಾರೆ. ಈಗಾಗಲೇ 5ಕ್ಕೂ ಅಧಿಕ ಕಾರ್ಯಕ್ರಮಗಳನ್ನು ಆಯೋಜಕರು ರದ್ದುಗೊಳಿಸಿದ್ದಾರೆ.

'ಠೇವಣಿ ಮಾತ್ರ ವಾಪಸ್'

'ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಈಗ ಕಾರ್ಯಕ್ರಮಗಳಿಗೆ ಅಷ್ಟಾಗಿ ಜನ ಬರುತ್ತಿಲ್ಲ. ಕೆಲವರು ಕಾರ್ಯಕ್ರಮ ರದ್ದು ಪಡಿಸುತ್ತಿದ್ದಾರೆ. ಮುಂಗಡವಾಗಿ ಕಾಯ್ದಿರಿಸಿದ ಕಾರ್ಯಕ್ರಮ ರದ್ದುಪಡಿಸಿದಲ್ಲಿ ಠೇವಣಿ ಹಣ ಮಾತ್ರ ವಾಪಸ್ ನೀಡಲಾಗುತ್ತದೆ' ಎಂದು ಸಂಸ್ಕೃತಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ರಂಗಮಂದಿರ ಕಾಯ್ದಿರಿಸುವಿಕೆಗೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ಹಣವನ್ನು ಪಾವತಿಸಿಕೊಳ್ಳಲಾಗುತ್ತದೆ. ಆ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತದೆ. ಇಲಾಖೆ ವತಿಯಿಂದಲೇ ಕಾರ್ಯಕ್ರಮ ರದ್ದುಗೊಳಿಸಿದರೆ ಠೇವಣಿ ಜತೆಗೆ ಬಾಡಿಗೆ ಹಣ, ಜಿಎಸ್‌ಟಿ ಮೊತ್ತವನ್ನೂ ಮರಳಿಸುತ್ತೇವೆ' ಎಂದು ಹೇಳಿದರು.

ಆನ್‌ಲೈನ್ ವ್ಯವಸ್ಥೆ

ಸರ್ಕಾರಿ ರಂಗಮಂದಿರಗಳ ಕಾಯ್ದಿರಿಸುವಿಕೆಯಲ್ಲಿ ಪಾರದರ್ಶಕತೆ ತರಲು ಇಲಾಖೆಯು 2022ರ ಏ.1ರಿಂದ ಆನ್‌ಲೈನ್ ವ್ಯವಸ್ಥೆ ಜಾರಿಗೆ ತಂದಿದೆ. ಸರ್ಕಾರಿ ನಿಯಮಗಳ ಅನುಸಾರ ನಿಗದಿಯಾದ ಕಾರ್ಯಕ್ರಮ ನಿಂತಲ್ಲಿ, ಹಣ ಹಿಂತಿರುಗಿಸುವ ಬದಲು, ಮತ್ತೊಂದು ದಿನಾಂಕ ಆಯ್ಕೆಗೆ ಅವಕಾಶ ನೀಡಲಾಗುತ್ತಿದೆ. ಮೂರು ದಿನಗಳಿಗಿಂತಲೂ ಹೆಚ್ಚಿನ ಅವಧಿ ಸತತವಾಗಿ ಸಭಾಂಗಣ ಕಾಯ್ದಿರಿಸಲು ಅವಕಾಶವಿಲ್ಲ.

ಮತದಾನ ಜಾಗೃತಿಗೆ ಸೈಕಲ್ ಜಾಥಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತದಾರರು ಮತಗಟ್ಟೆಗಳಿಗೆ ಬಂದು ತಮ್ಮ ಹಕ್ಕು ಚಲಾಯಿಸಬೇಕು. ಮತದಾನ ನಮ್ಮ ಕರ್ತವ್ಯ, ನಮ್ಮ ಜವಾಬ್ದಾರಿ' ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಹೇಳಿದರು.

ಲೋಕಸಭಾ ಚುನಾವಣೆಯ ಅಂಗವಾಗಿ ಚುನಾವಣಾ ಆಯೋಗ, ಬಿಬಿಎಂಪಿ ಹಾಗೂ ಯೂನಿಯನ್ ಬ್ಯಾಂಕ್ ಸಹಯೋಗದಲ್ಲಿ ಮತದಾನದ ಜಾಗೃತಿಗಾಗಿ ವಿಧಾನಸೌಧದ ಮುಂಭಾಗ ಗುರುವಾರ ಹಮ್ಮಿಕೊಂಡಿದ್ದ ಸೈಕಲ್ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಏಪ್ರಿಲ್ 26 ರಂದು ನಡೆಯುವ ಮತದಾನದ ಹಬ್ಬವನ್ನು ಎಲ್ಲರೂ ಸೇರಿ ಒಟ್ಟಾಗಿ ಆಚರಿಸೋಣ. ಮತ ಚಲಾಯಿಸಲು ಅರ್ಹರಿರುವ ಎಲ್ಲರೂ ತಪ್ಪದೆ ಮತ ಚಲಾಯಿಸೋಣ' ಎಂದರು.

ಲೋಕಸಭಾ ಚುನಾವಣೆಯಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮ ಹಾಗೂ ಜಾಥಾಗಳನ್ನು ಹಮ್ಮಿಕೊಳ್ಳುವ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು.

ವಿಧಾನಸೌಧದ ಮುಂಭಾಗದಿಂದ, ಕೆ.ಆರ್ ವೃತ್ತದ ನೃಪತುಂಗ ರಸ್ತೆಯ ಮೂಲಕ ಸಾಗಿದ ಸೈಕಲ್ ಜಾಥಾ ಹಡ್ಸನ್ ವೃತ್ತ, ಕಸ್ತೂರ್ ಬಾ ರಸ್ತೆ, ಕ್ವೀನ್ಸ್ ರಸ್ತೆಯಿಂದ (ಚಿನ್ನಸ್ವಾಮಿ ಕ್ರೀಡಾಂಗಣ) ಡಾ. ಬಿ.ಆರ್.ಅಂಬೇಡ್ಕರ್ ರಸ್ತೆಯ ಮೂಲಕ ವಿಧಾನಸೌಧ ಪೂರ್ವ ದ್ವಾರದ ಬಳಿ ಮುಕ್ತಾಯಗೊಂಡಿತು.

ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಕಾಂತರಾಜು, ಸ್ವೀಪ್ ನೋಡಲ್ ಅಧಿಕಾರಿ ಪ್ರತಿಭಾ, ಚುನಾವಣಾ ರಾಯಭಾರಿಗಳಾದ ಅನೂಪ್ ಶ್ರೀಧರ್, ನೀತು ವನಜಾಕ್ಷಿ, ಎನ್.ಎಸ್.ಎಸ್ ವಿದ್ಯಾರ್ಥಿಗಳು, ಸೈಕ್ಲಿಸ್ಟ್‌ಗಳು ಭಾಗವಹಿಸಿದ್ದರು.



ಚುನಾವಣಾ ಆಯೋಗ, ಬಿಬಿಎಂಪಿ ಹಾಗೂ ಯೂನಿಯನ್ ಬ್ಯಾಂಕ್ ಸಹಯೋಗದಲ್ಲಿ ಮತದಾನದ ಜಾಗೃತಿಗಾಗಿ ಸೈಕಲ್ ಜಾಥಾ ಗುರುವಾರ ನಡೆಯಿತು

ಶುಕ್ರವಾರ, ಏಪ್ರಿಲ್ 12, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 102 | ಪುಟ 18 • www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಬೆಳಿತಾರೆ, ತುಳಿತಾರೆ ಎನ್ನುವುದೆಲ್ಲ ಸುಳ್ಳು' ಹಾಸ್ಯ ನಟ ಶಿವರಾಜ್ ಕೆ.ಆರ್.ಪೇಟೆ ಸಂದರ್ಶನ



ಅಭಿವ್ಯಕ್ತಿಯ ದುರ್ಬಳಕೆಗೆ ಸುಪ್ರೀಂ ಕೋರ್ಟ್ ಕಳವಳ 9
ಆಳ-ಅಗಲ ಮಧ್ಯಪ್ರದೇಶ: 'ಕಮಲ'ದ ಮುಂದೆ 'ಕೈ' ಪೇಲವ
'ಎಚ್‌ಡಿಕೆ ಸರ್ಕಾರದಲ್ಲಿ ಶ್ರೀಗಳ ಫೋನ್ ಕದ್ದಾಲಿಕೆ' 5

ಚಿನ್ನ (Std. 10g) ₹73,910 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹84,600 (ಬೆಂಗಳೂರು)

ಬಹುತೇಕ ಕಡೆ ಬಿಜೆಪಿ–ಕಾಂಗ್ರೆಸ್ ನೇರ ಹಣಾಹಣಿ • ಬಂಡಾಯವಿದ್ದೆಡೆ ತ್ರಿಕೋನ ಸ್ಪರ್ಧೆ ಸಾಧ್ಯತೆ

2ನೇ ಹಂತ: ನಾಮಪತ್ರಕ್ಕೆ ತೆರೆದ ಪಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಇದೇ ಏಪ್ರಿಲ್ 26ಕ್ಕೆ ಮೊದಲ ಹಂತದಲ್ಲಿ ಚುನಾವಣೆ ನಡೆಯುವ ಕ್ಷೇತ್ರಗಳಲ್ಲಿ ದಿನದಿಂದ ದಿನಕ್ಕೆ ಕಾವು ಏರುತ್ತಿರುವ ಮಧ್ಯೆಯೇ ಎರಡನೇ ಹಂತದ 14 ಕ್ಷೇತ್ರಗಳಿಗೆ ಶುಕ್ರವಾರದಿಂದ (ಏ.12) ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ.

ಚುನಾವಣೆ ಘೋಷಣೆಯಾಗಿ, ಅಭ್ಯರ್ಥಿಗಳು ಆಖೈರಾದ ಬಳಿಕವೂ ಕಾಂಗ್ರೆಸ್-ಬಿಜೆಪಿಯಲ್ಲಿ ಅತೃಪ್ತಿ-ಬಂಡಾಯ ಶಮನವಾಗಿಲ್ಲ. ಕೆಲವು ಕ್ಷೇತ್ರಗಳಲ್ಲಿ ಟಿಕೆಟ್ ಕೈತಪ್ಪಿದವರು, ಅಭ್ಯರ್ಥಿ ಜತೆ ಕಾಣಿಸಿಕೊಂಡಿಲ್ಲ. ಪ್ರಚಾರದಲ್ಲೂ ಭಾಗಿಯಾಗುತ್ತಿಲ್ಲ. ಕೆಲವು ಕ್ಷೇತ್ರಗಳಲ್ಲಿ ಬಂಡಾಯ ಬಿರುಸುಗೊಳ್ಳುತ್ತಿದ್ದರೆ, ಅತೃಪ್ತರು ಒಳೇಟು ಕೊಡಲಿದ್ದಾರೆಯೇ ಎಂಬ ಆತಂಕ ನಾಯಕರಲ್ಲಿ ಮೂಡಿದೆ. ಈ ಬೆಳವಣಿಗೆಗಳ ಮಧ್ಯೆಯೇ ಎರಡನೇ ಹಂತ ಚುನಾವಣೆಗೆ ಪ್ರಕ್ರಿಯೆ ಶುರುವಾಗಲಿದೆ.

ಕರಾವಳಿಯ ಉತ್ತರ ಕನ್ನಡ, ಮಲೆನಾಡಿನ ಶಿವಮೊಗ್ಗ, ಮಧ್ಯ ಕರ್ನಾಟಕದ ದಾವಣಗೆರೆ, ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕದ ಕ್ಷೇತ್ರಗಳಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆಯಲಿದೆ.

5ನೇ ಪುಟ ನೋಡಿ

ಯಾರಿಗೆಲ್ಲ ಪ್ರತಿಷ್ಠೆ? ಏಕೆ?

ಕಾಂಗ್ರೆಸ್


- **ಮಲ್ಲಿಕಾರ್ಜುನ ಖರ್ಗೆ**–ಎಐಸಿಸಿ ಅಧ್ಯಕ್ಷರಾಗಿ ರಾಜ್ಯದಲ್ಲಿ ಹೆಚ್ಚು ಸ್ಥಾನ ಗೆಲ್ಲಿಸಿಕೊಳ್ಳುವ ಜತೆಗೆ, ತವರು ಕ್ಷೇತ್ರ ಕಲಬುರಗಿಯಲ್ಲಿ ಅಳಿಯನ ಗೆಲ್ಲಿಸುವ ಒತ್ತಡ
- **ಸಿದ್ದರಾಮಯ್ಯ**–ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅತಿಹೆಚ್ಚು ಸ್ಥಾನ ಗೆಲ್ಲಿಸಿದ ಉತ್ತರ ಕರ್ನಾಟಕದ ವಿವಿಧ ಕ್ಷೇತ್ರಗಳನ್ನು ಒಳಗೊಂಡ ಲೋಕಸಭೆ ಕ್ಷೇತ್ರಗಳನ್ನೂ ಗೆಲ್ಲಿಸಿಕೊಳ್ಳುವ ಅನಿವಾರ್ಯತೆ
- **ಡಿ.ಕೆ. ಶಿವಕುಮಾರ್**–ಕೆಪಿಸಿಸಿ ಅಧ್ಯಕ್ಷರಾಗಿ ಹೆಚ್ಚಿನ ಸ್ಥಾನ ಗೆಲ್ಲಿಸಿಕೊಳ್ಳುವ ಅನಿವಾರ್ಯತೆ.
- **ಸತೀಶ್ ಜಾರಕಿಹೊಳಿ**–ಬಿಜೆಪಿಯಲ್ಲಿನ ತಮ್ಮ ಸಹೋದರರ ನಡೆ ನಿಯಂತ್ರಿಸಿ, ಪುತ್ರಿಯನ್ನು ಗೆಲ್ಲಿಸಿಕೊಳ್ಳುವ ಸವಾಲು. ಬೆಳಗಾವಿ ಆಧಿಪತ್ಯ ಉಳಿಸಿಕೊಳ್ಳುವ ಸವಾಲು
- ಸಚಿವರಾದ **ಈಶ್ವರ ಖಂಡ್ರೆ, ಶಿವಾನಂದ ಪಾಟೀಲ, ಲಕ್ಷ್ಮಿ ಹೆಬ್ಬಾಳ್ಕರ**– ಬೀದರ್, ಬಾಗಲಕೋಟೆ, ಬೆಳಗಾವಿಯಲ್ಲಿ ತಮ್ಮ ಮಕ್ಕಳನ್ನು ಗೆಲ್ಲಿಸಿಕೊಂಡು ಸಚಿವ ಸ್ಥಾನ ಗಟ್ಟಿ ಮಾಡಿಕೊಳ್ಳುವ ಒತ್ತಡ

ಬಿಜೆಪಿ–ಜೆಡಿಎಸ್

- **ಬಿ.ವೈ.ವಿಜಯೇಂದ್ರ**– ಅಧ್ಯಕ್ಷರಾದ ಬಳಿಕ ಮೊದಲ ಚುನಾವಣೆ ಮುನ್ನಡೆಸುತ್ತಿದ್ದು ಸ್ವಕ್ಷೇತ್ರವೂ ಸೇರಿದಂತೆ, ಲಿಂಗಾಯತ ಮತ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಹೆಚ್ಚು ಸ್ಥಾನ ಗೆಲ್ಲಿಸಿಕೊಳ್ಳುವ ಅನಿವಾರ್ಯತೆ
- **ಪ್ರಲ್ಹಾದ ಜೋಶಿ**–ಕೇಂದ್ರ ಸಚಿವರಾಗಿ ತಮ್ಮ ಕ್ಷೇತ್ರ ಉಳಿಸಿಕೊಳ್ಳುವ ಸವಾಲು
- **ಜಗದೀಶ ಶೆಟ್ಟರ್**–ಕಾಂಗ್ರೆಸ್ ತೊರೆದು, ಮರಳಿ ಬಿಜೆಪಿ ಸೇರಿ ಬೆಳಗಾವಿ ಅಭ್ಯರ್ಥಿಯಾಗಿದ್ದು, ತಮ್ಮ ಸಾಮರ್ಥ್ಯ ಸಾಬೀತು ಮಾಡಬೇಕಾದ ಸವಾಲು
- **ಬಸವರಾಜ ಬೊಮ್ಮಾಯಿ**–ಮಾಜಿ ಮುಖ್ಯಮಂತ್ರಿಯಾಗಿ ತವರು ಜಿಲ್ಲೆಯಲ್ಲಿ ತಮ್ಮ ಪ್ರಭಾವ ಉಳಿಸಿಕೊಳ್ಳುವ ಅನಿವಾರ್ಯತೆ
- **ಎಚ್.ಡಿ. ಕುಮಾರಸ್ವಾಮಿ**– ಹೆಚ್ಚಿನ ಸ್ಥಾನಗಳಲ್ಲಿ ಮಿತ್ರ ಪಕ್ಷಗಳ ಗೆಲುವಿಗೆ ಸಹಕರಿಸುವ ಮೂಲಕ ಉತ್ತರ ಕರ್ನಾಟದಲ್ಲೂ ಜೆಡಿಎಸ್‌ಗೆ ಗಟ್ಟಿ ನೆಲೆ ಇದೆ ಎಂದು ಸಾಬೀತು ಮಾಡುವ ತುರ್ತು

2ನೇ ಹಂತದ ಕ್ಷೇತ್ರಗಳು;ಅಭ್ಯರ್ಥಿಗಳು •ಬಿಜೆಪಿ •ಕಾಂಗ್ರೆಸ್ | ಮತದಾನ ಮೇ 7 | ಮತ ಎಣಿಕೆ: ಜೂನ್ 4

ಕ್ಷೇತ್ರ	ಬಿಜೆಪಿ	ಕಾಂಗ್ರೆಸ್
1. ಚಿಕ್ಕೋಡಿ	ಅಣ್ಣಾ ಸಾಹೇಬ ಜೊಲ್ಲೆ	ಪ್ರಿಯಾಂಕಾ ಜಾರಕಿಹೊಳಿ
2. ಬೆಳಗಾವಿ	ಜಗದೀಶ ಶೆಟ್ಟರ್	ಮೃಣಾಲ್ ಹೆಬ್ಬಾಳ್ಕರ
3. ಬಾಗಲಕೋಟೆ	ಪಿ.ಸಿ. ಗದ್ದಿಗೌಡರ್	ಸಂಯುಕ್ತಾ ಪಾಟೀಲ
4. ವಿಜಯಪುರ (ಎಸ್‌ಸಿ)	ರಮೇಶ ಜಿಗಜಿಣಗಿ	ರಾಜು ಅಲಗೂರ
5. ಕಲಬುರಗಿ(ಎಸ್‌ಸಿ)	ಡಾ.ಉಮೇಶ್ ಜಾಧವ್	ರಾಧಾಕೃಷ್ಣ ದೊಡ್ಡಮನಿ
6. ರಾಯಚೂರು(ಎಸ್‌ಟಿ)	ರಾಜಾ ಅಮರೇಶ್ವರ ನಾಯಕ	ಜಿ. ಕುಮಾರನಾಯಕ
7. ಬೀದರ್	ಭಗವಂತ ಖೂಬಾ	ಸಾಗರ್ ಖಂಡ್ರೆ
8. ಕೊಪ್ಪಳ	ಡಾ.ಬಸವರಾಜ ಕ್ಯಾವಟೂರ್	ರಾಜಶೇಖರ ಹಿಟ್ನಾಳ್
9. ಬಳ್ಳಾರಿ(ಎಸ್‌ಟಿ)	ಬಿ. ಶ್ರೀರಾಮುಲು	ಇ.ತುಕಾರಾಂ
10. ಹಾವೇರಿ	ಬಸವರಾಜ ಬೊಮ್ಮಾಯಿ	ಆನಂದ ಗಡ್ಡದೇವರ ಮಠ
11. ಧಾರವಾಡ	ಪ್ರಲ್ಹಾದ ಜೋಶಿ	ವಿನೋದ್ ಅಸೂಟಿ
12. ಉತ್ತರ ಕನ್ನಡ	ವಿಶ್ವೇಶ್ವರ ಹೆಗಡೆ ಕಾಗೇರಿ	ಡಾ.ಅಂಜಲಿ ನಿಂಬಾಳ್ಕರ್
13. ದಾವಣಗೆರೆ	ಗಾಯತ್ರಿ ಸಿದ್ದೇಶ್ವರ	ಪ್ರಭಾ ಮಲ್ಲಿಕಾರ್ಜುನ್
14. ಶಿವಮೊಗ್ಗ	ಬಿ.ವೈ. ರಾಘವೇಂದ್ರ	ಗೀತಾ ಶಿವರಾಜ್‌ಕುಮಾರ್



ನಾಮಪತ್ರ ಸಲ್ಲಿಕೆ ಆರಂಭ:	ಏಪ್ರಿಲ್ 12
ನಾಮಪತ್ರ ಸಲ್ಲಿಕೆಗೆ ಕೊನೆ ದಿನ:	ಏ. 19
ನಾಮಪತ್ರಗಳ ಪರಿಶೀಲನೆ:	ಏ. 20
ನಾಮಪತ್ರ ವಾಪಸ್‌ಗೆ ಕೊನೆಯ ದಿನ:	ಏ. 22

14 ಕ್ಷೇತ್ರಗಳ ಮತ ಲೆಕ್ಕ

- 2.57 ಕೋಟಿ ಒಟ್ಟು ಮತದಾರರು
- 1.29 ಕೋಟಿ ಪುರುಷ ಮತದಾರರು
- 1.28 ಕೋಟಿ ಮಹಿಳಾ ಮತದಾರರು
- 1,905 ಲಿಂಗತ್ವ ಅಲ್ಪ ಸಂಖ್ಯಾತರು



ಪ್ರಾರ್ಥನೆ ಈದ್ ಉಲ್ ಫಿತ್ರ್ ಪ್ರಯುಕ್ತ ಹುಬ್ಬಳ್ಳಿಯ ಕಿತ್ತೂರು ಚನ್ನಮ್ಮ ವೃತ್ತದ ಬಳಿಯ ಈದ್ಗಾ ಮೈದಾನ ಮತ್ತು ಅದರ ಪಕ್ಕದ ರಸ್ತೆಯಲ್ಲಿ ಮುಸ್ಲಿಮರು ಗುರುವಾರ ವಿಶೇಷ ಪ್ರಾರ್ಥನೆ ಸಲ್ಲಿಸಿದರು
–ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ಆರ್‌ಟಿಐ ಅಡಿ ಚುನಾವಣಾ ಬಾಂಡ್ ವಿವರ ಒದಗಿಸಲು ಎಸ್‌ಬಿಐ ನಕಾರ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್‌ಗೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ವಿವರಗಳನ್ನು ಮಾಹಿತಿ ಹಕ್ಕು ಕಾಯ್ದೆಯ (ಆರ್‌ಟಿಐ) ಅಡಿಯಲ್ಲಿ ನೀಡಲು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ನಿರಾಕರಿಸಿದೆ. ಈ ವಿವರಗಳು ಪರಸ್ಪರ ವಿಶ್ವಾಸಕ್ಕೆ ಸಂಬಂಧಿಸಿದವು ಎಂದು ಅದು ನಿರಾಕರಣೆಗೆ ಕಾರಣ ಹೇಳಿದೆ.

ಆದರೆ, ಬಾಂಡ್‌ಗಳಿಗೆ ಸಂಬಂಧಿಸಿದ ವಿವರಗಳು ಸುಪ್ರೀಂ ಕೋರ್ಟ್‌ನ ಸೂಚನೆಯ ಪರಿಣಾಮವಾಗಿ ಈಗಾಗಲೇ ಬಹಿರಂಗಗೊಂಡಿವೆ.

ಚುನಾವಣಾ ಬಾಂಡ್ ಯೋಜನೆಯು ಅಸಾಂವಿಧಾನಿಕ ಎಂದು ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, 2019ರ ಏಪ್ರಿಲ್ 12ರಿಂದ ಖರೀದಿಸಲಾದ ಚುನಾವಣಾ ಬಾಂಡ್‌ಗಳ ವಿವರವನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು ಎಂದು ಎಸ್‌ಬಿಐಗೆ ಈಚೆಗೆ ಸೂಚಿಸಿತ್ತು. ಎಸ್‌ಬಿಐ ಸಲ್ಲಿಸಿದ ವಿವರಗಳನ್ನು ಆಯೋಗವು ಮಾರ್ಚ್ 13ಕ್ಕೆ ಮೊದಲು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ತಾಕೀತು ಮಾಡಿತ್ತು.

8ನೇ ಪುಟ ನೋಡಿ

ನಿಜ್ಜರ್ ಹತ್ಯೆ: ಟ್ರುಡೊ ಮತ್ತೆ ಪ್ರಸ್ತಾಪ

ಒಟ್ಟಾವಾ (ಪಿಟಿಐ): ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯ ಬಗ್ಗೆ ಮತ್ತೆ ಪ್ರಸ್ತಾಪಿಸಿರುವ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು, ಕೆನಡಾದ ಎಲ್ಲ ಪ್ರಜೆಗಳ ಹಕ್ಕುಗಳನ್ನು ರಕ್ಷಿಸಲು ತಮ್ಮ ಸರ್ಕಾರವು ಮುಂದಾಗುತ್ತದೆ ಎಂದು ಹೇಳಿದ್ದಾರೆ.



ಜಸ್ಟಿನ್ ಟ್ರುಡೊ

ಕೆನಡಾ ಚುನಾವಣಾ ಪ್ರಕ್ರಿಯೆಯಲ್ಲಿ ವಿದೇಶಿ ಕೈವಾಡ ಇತ್ತೇ ಎಂಬ ಬಗ್ಗೆ ವಿಚಾರಣೆ ನಡೆಸುತ್ತಿರುವ ಸಮಿತಿಯ ಎದುರು ಹಾಜರಾದ ಟ್ರುಡೊ ಅವರು, ತಮ್ಮ ಹಿಂದಿನ ಸರ್ಕಾರವು ಭಾರತದ ಇಂದಿನ ಸರ್ಕಾರಕ್ಕೆ ಬಹಳ ಹಿತಕರವಾಗುವಂತೆ ನಡೆದುಕೊಳ್ಳುತ್ತಿತ್ತು ಎಂದು ಆರೋಪಿಸಿದ್ದಾರೆ.

ನಿಜ್ಜರ್ ಹತ್ಯೆಯಲ್ಲಿ ಭಾರತದ ಏಜೆಂಟ್‌ಗಳ ಕೈವಾಡ ಇರುವ ಸಾಧ್ಯತೆ ಇದೆ ಎಂದು ಟ್ರುಡೊ ಅವರು ಸೆಪ್ಟೆಂಬರ್ ತಿಂಗಳಲ್ಲಿ ಆರೋಪಿಸಿದ ನಂತರದಲ್ಲಿ ಭಾರತದ ಮತ್ತು ಕೆನಡಾ ಸಂಬಂಧ ಹಳಸಿದೆ. ಕಳೆದ ವರ್ಷದ ಜೂನ್ 18ರಂದು ನಿಜ್ಜರ್ ಹತ್ಯೆ ಆಗಿತ್ತು.

12ನೇ ಪುಟ ನೋಡಿ

'ಬೌದ್ಧ ಮತವು ಪ್ರತ್ಯೇಕ ಧರ್ಮ'

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ 2003ರ ಪ್ರಕಾರ, ಬೌದ್ಧ ಮತವನ್ನು 'ಪ್ರತ್ಯೇಕ ಧರ್ಮ'ವೆಂದು ಪರಿಗಣಿಸಲಾಗಿದ್ದು, ಬೌದ್ಧ, ಸಿಖ್ ಮತ್ತು ಜೈನ ಧರ್ಮಕ್ಕೆ ಮತಾಂತರವಾಗುವ ಹಿಂದೂಗಳು ಜಿಲ್ಲಾಧಿಕಾರಿಗಳಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ.

ಈ ಸಂಬಂಧ ಗುಜರಾತ್ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿದೆ.

'ಹಿಂದೂ ಧರ್ಮದಿಂದ ಬೌದ್ಧ, ಸಿಖ್ ಮತ್ತು ಜೈನ ಧರ್ಮಕ್ಕೆ ಮತಾಂತರಗೊಳ್ಳಲು ಅನುಮತಿ ನೀಡುವ ಕುರಿತು' ಎಂಬ ಶೀರ್ಷಿಕೆಯಡಿ ಹೊರಡಿಸಿರುವ ಅಧಿಸೂಚನೆಯಲ್ಲಿ, ಹಿಂದೂ ಧರ್ಮದಿಂದ ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳಲು ಅನುಮತಿ ನೀಡುವಾಗ ನಿಯಮ ಪಾಲಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದೂ ತಿಳಿಸಲಾಗಿದೆ.

8ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



214 ಹುದ್ದೆಗಳಲ್ಲಿ 59 ಹುದ್ದೆಗಳಿಗೆ ನೇಮಕಾತಿ • ನಿರುಪಯುಕ್ತವಾದ ಚರಕ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ವಾಜಪೇಯಿ ಕಾಲೇಜಿಗೆ ಪ್ರಾಧ್ಯಾಪಕರ ಕೊರತೆ

• ವರುಣ ಹೆಗಡೆ

ಬೆಂಗಳೂರು: ವೈದ್ಯಕೀಯ ಶಿಕ್ಷಣದ ಜತೆಗೆ ಆರೋಗ್ಯ ಸೇವೆಗಳನ್ನೂ ಒದಗಿಸುತ್ತಿರುವ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು (ಎಬಿವಿಎಂಸಿಆರ್‌ಐ) ಪ್ರಾಧ್ಯಾಪಕರು ಹಾಗೂ ವೈದ್ಯಾಧಿಕಾರಿಗಳ ಕೊರತೆ ಎದುರಿಸುತ್ತಿದೆ. ಇದರಿಂದಾಗಿ ಶಿಕ್ಷಣದ ಜತೆಗೆ ಚಿಕಿತ್ಸೆಯಲ್ಲಿಯೂ ವ್ಯತ್ಯಯವಾಗುತ್ತಿದೆ.

ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಹೆಸರನ್ನು ಎಬಿವಿಎಂಸಿಆರ್‌ಐ ಎಂದು 2020ರಲ್ಲಿ ಮರುನಾಮಕರಣ ಮಾಡಲಾಗಿದೆ. ಸಂಸ್ಥೆಯಡಿ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ ಹಾಗೂ ಚರಕ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಬೌರಿಂಗ್ ಮತ್ತು ಘೋಷಾ ಆಸ್ಪತ್ರೆಗೆ ನಗರದ ಜತೆಗೆ ವಿವಿಧ ಜಿಲ್ಲೆಗಳಿಂದಲೂ ರೋಗಿಗಳು ಬರುತ್ತಾರೆ. ಎಬಿವಿಎಂಸಿಆರ್‌ಐ ಪ್ರಾಧ್ಯಾಪಕರು ಶಿಕ್ಷಣದ ಜತೆಗೆ ರೋಗಿಗಳಿಗೆ ಚಿಕಿತ್ಸೆಯನ್ನು ಒದಗಿಸುತ್ತಿದ್ದಾರೆ. ಸಂಸ್ಥೆಯಡಿ ಮಂಜೂರಾಗಿದ್ದ 214 ಹುದ್ದೆಗಳಲ್ಲಿ 155 ಹುದ್ದೆಗಳು ಖಾಲಿಯಿವೆ. 59 ಹುದ್ದೆಗಳಿಗೆ ಮಾತ್ರ ಪ್ರಾಧ್ಯಾಪಕರು, ವೈದ್ಯಾಧಿಕಾರಿಗಳ ನೇಮಕಾತಿ ನಡೆದಿದೆ.



ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು, ಸಂಶೋಧನಾ ಸಂಸ್ಥೆ

ಸಂಸ್ಥೆಯು ವಿಕಿರಣ ವಿಜ್ಞಾನ, ಅರವಳಿಕೆ ವಿಜ್ಞಾನ ಸೇರಿ 21 ವಿಭಾಗಗಳನ್ನುಹೊಂದಿದೆ.ಅಂಗರಚನಾವಿಜ್ಞಾನದಲ್ಲಿ ಮಂಜೂರಾದ ಮೂರು ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ಎರಡು ಹುದ್ದೆಗಳು ಖಾಲಿ ಉಳಿದಿವೆ. ಜನರಲ್ ಮೆಡಿಸಿನ್ ವಿಭಾಗದಲ್ಲಿ ನಾಲ್ಕು ಸಹ ಪ್ರಾಧ್ಯಾಪಕ ಹುದ್ದೆಯಲ್ಲಿ ಎರಡು, ಐದು ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ಎರಡು ಹುದ್ದೆಗಳಿಗೆ ಪೂರ್ಣಾವಧಿ ಪ್ರಾಧ್ಯಾಪಕರಿಲ್ಲ. ಮಕ್ಕಳ ವೈದ್ಯಕೀಯ ವಿಜ್ಞಾನ ವಿಭಾಗದಲ್ಲಿ 11 ಹುದ್ದೆಗಳಲ್ಲಿ 10 ಹುದ್ದೆಗಳು ಖಾಲಿ ಉಳಿದಿವೆ.

ಸ್ತ್ರೀರೋಗ ತಜ್ಞರ ಕೊರತೆ: ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಘೋಷಾ ಆಸ್ಪತ್ರೆಯು 120 ಹಾಸಿಗೆಗಳನ್ನು ಹೊಂದಿದ್ದು, ಇದು ತಾಯಿ–ಮಕ್ಕಳ ಆಸ್ಪತ್ರೆಯಾಗಿದೆ. ಸಂಸ್ಥೆಯ ಮಾಹಿತಿ ಪ್ರಕಾರ ಪ್ರಸೂತಿ ಮತ್ತು ಸ್ತ್ರೀರೋಗ ವಿಜ್ಞಾನ ವಿಭಾಗ ತಜ್ಞ ವೈದ್ಯರ ಕೊರತೆ ಎದುರಿಸುತ್ತಿದೆ. ಈ ವಿಭಾಗಕ್ಕೆ ಮಂಜೂರಾಗಿದ್ದ 16 ಹುದ್ದೆಗಳಲ್ಲಿ 13 ಹುದ್ದೆಗಳು ಖಾಲಿ ಉಳಿದಿವೆ. ಅದೇ ರೀತಿ, ಅರವಳಿಕೆ ವಿಭಾಗವೂ ವೈದ್ಯರ ಕೊರತೆ ಎದುರಿಸುತ್ತಿದ್ದು, ಮಂಜೂರಾಗಿರುವ 17 ಹುದ್ದೆಗಳಲ್ಲಿ 5 ಹುದ್ದೆಗಳಿಗೆ ಮಾತ್ರ ನೇಮಕಾತಿ ನಡೆದಿದೆ.

ನಗರದ ಕೇಂದ್ರ ಭಾಗವಾದ ಶಿವಾಜಿನಗರದಲ್ಲಿ ಚರಕ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡ ತಲೆಯೆತ್ತಿ ನಾಲ್ಕು ವರ್ಷವಾದರೂ ಅಗತ್ಯವಿರುವ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿಯ ನೇಮಕಾತಿ ನಡೆದಿಲ್ಲ. ಈ ಆಸ್ಪತ್ರೆ, ಎರಡು ವರ್ಷಗಳಿಂದ ನಿರುಪಯುಕ್ತವಾಗಿದೆ. ಸದ್ಯ ಈ ಆಸ್ಪತ್ರೆಯಲ್ಲಿ ತಲಾ ಇಬ್ಬರು ಶುಶ್ರೂಷಕರು, ಗ್ರೂಪ್ ಡಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೋವಿಡ್ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾದಾಗ ಸೋಂಕಿತರ ಚಿಕಿತ್ಸೆಗೆ ಈ ಆಸ್ಪತ್ರೆಯನ್ನು ಬಳಸಿಕೊಳ್ಳಲಾಗಿತ್ತು.

‘ಪ್ರಾಧ್ಯಾಪಕರ ಕೊರತೆಯಿಂದ ತಜ್ಞ ವೈದ್ಯರ ಸೇವೆ ರೋಗಿಗಳಿಗೆ ಲಭ್ಯವಾಗುತ್ತಿಲ್ಲ. ಕಿರಿಯ ವೈದ್ಯರನ್ನೇ ವಿವಿಧ ವಿಭಾಗಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು’ ಎಂದು ಸಂಸ್ಥೆಯ ವೈದ್ಯರೊಬ್ಬರು ತಿಳಿಸಿದರು.

ಸಂಸ್ಥೆಯಡಿ ಮಂಜೂರಾಗಿರುವ ಹುದ್ದೆಗಳು

ಹುದ್ದೆ	ಮಂಜೂರು	ಕಾರ್ಯನಿರ್ವಹಣೆ	ಖಾಲಿ
ಪ್ರಾಧ್ಯಾಪಕರು	17	07	10
ಸಹ ಪ್ರಾಧ್ಯಾಪಕರು	41	21	20
ಸಹಾಯಕ ಪ್ರಾಧ್ಯಾಪಕರು	57	31	26
ಹಿರಿಯ ನಿವಾಸಿ ವೈದ್ಯಾಧಿಕಾರಿ	43	00	43
ಕಿರಿಯ ನಿವಾಸಿ ವೈದ್ಯಾಧಿಕಾರಿ	29	00	29

‘ಕಡ್ಡಾಯ ಸೇವೆಯಡಿ ಭರ್ತಿ

‘ಬೋಧಕ, ನಿವಾಸಿ ವೈದ್ಯಾಧಿಕಾರಿ ಹುದ್ದೆಗಳಿಗೆ ಆರೋಗ್ಯ ಇಲಾಖೆಯ ಒಂದು ವರ್ಷ ಕಡ್ಡಾಯ ಸೇವೆ ನಿಯಮದಡಿ ಎಂಬಿಬಿಎಸ್ ಪದವೀಧರರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನ ಸುಗಮ ನಿರ್ವಹಣೆಯ ದೃಷ್ಟಿಯಿಂದ ಖಾಲಿ ಇರುವ ವಿವಿಧ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲಾಗುತ್ತದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ. ಮನೋಜ್ ಕುಮಾರ್ ತಿಳಿಸಿದರು.

ಎಫ್‌ಐಆರ್‌ನಲ್ಲಿ ಇರೋದೆ ಬೇರೆ; ಹರಿದಾಡುತ್ತಿರುವುದೇ ಬೇರೆ

ಸ್ನೇಹಿತರ ಜಗಳಕ್ಕೆ ‘ರಾಜಕೀಯ’ ಸ್ವರೂಪ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ರಾಮನಗರ: ತಾಲ್ಲೂಕಿನ ಬಿಡದಿ ಪೊಲೀಸ್ ಠಾಣೆ ವ್ಯಾಪ್ತಿಯ ಕೆಂಪಶೆಟ್ಟಿ ದೊಡ್ಡಿಯಲ್ಲಿ ಸ್ನೇಹಿತರಿಬ್ಬರ ನಡುವೆ ನಡೆದ ಜಗಳದಲ್ಲಿ ಚೌಕಹಳ್ಳಿಯ ನವೀನ್ ಎಂಬಾತನಿಗೆ ಗಾಯವಾಗಿರುವ ಘಟನೆ ರಾಜಕೀಯ ಸ್ವರೂಪ ಪಡೆದಿದೆ. ಮೂರು ದಿನಗಳ ಹಿಂದಿನ ಘಟನೆಯನ್ನು ಬಿಜೆಪಿ ನಾಯಕರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಹಂಚಿಕೊಂಡಿರುವುದು ಇದಕ್ಕೆ ಕಾರಣ.

‘ರೇಷ್ಮೆ ಬೆಳೆಗಾರ ಹಾಗೂ ಬಿಜೆಪಿ ಕಾರ್ಯಕರ್ತ ನವೀನ್ ಅವರ ಮೇಲೆ ಕಾಂಗ್ರೆಸ್ಸಿನ ಗೂಂಡಾ ವ್ಯಕ್ತಿಯೊಬ್ಬ ಮಾರಣಾಂತಿಕ ಹಲ್ಲೆ ಮಾಡಿದ್ದರೂ ಆತನನ್ನು ಬಂಧಿಸದೇ ಇರುವುದು ಅನುಮಾನಗಳಿಗೆ ಆಸ್ಪದ ಮಾಡಿಕೊಟ್ಟಿದೆ. ಜಿಲ್ಲೆಯನ್ನು ತಮ್ಮ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿರುವ ಡಿ.ಕೆ. ಬ್ರದರ್ಸ್‌ಗೆ ಅಧಿಕಾರ ದರ್ಪ ನೆತ್ತಿಗೇರಿದಂತಿದೆ’ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಗುರುವಾರ ತಮ್ಮ ‘ಎಕ್ಸ್’ ಖಾತೆಯಲ್ಲಿ ಗಾಯಾಳು ನವೀನ್ ಚಿತ್ರ ಸಮೇತ ಪೋಸ್ಟ್ ಮಾಡಿದ್ದಾರೆ. ಬಿಜೆಪಿ ಕರ್ನಾಟಕ ಖಾತೆಯಲ್ಲೂ ಘಟನೆ ಕುರಿತು ಪೋಸ್ಟ್ ಮಾಡಲಾಗಿದೆ.

ಏಪ್ರಿಲ್ 9ರಂದು ಗ್ರಾಮದ ಕಬ್ಬಡಿ ಬಾಬು ಎಂಬುವರ ತೋಟದಲ್ಲಿ ಬೆಳಿಗ್ಗೆ 10.30ರ ಸುಮಾರಿಗೆ ನವೀನ್ ಮತ್ತು ಸ್ನೇಹಿತ ಅದೇ ಗ್ರಾಮದ ಶೇಖರ್ ಜಗಳ ಆಡುತ್ತಿದ್ದರು. ವಿಷಯ ತಿಳಿದು ಸ್ಥಳಕ್ಕೆ ತೆರಳಿದ ಸಹೋದರ ಶಿವಕುಮಾರ್ ಮತ್ತು ತಂದೆ ಶೇಷಾದ್ರಿ ಜಗಳ ಬಿಡಿಸಲು ಯತ್ನಿಸಿದ್ದರು. ಜಗಳ ವಿಕೋಪಕ್ಕೆ ತಿರುಗಿದಾಗ ಶೇಖರ್ ದೊಣ್ಣೆಯಿಂದ ನವೀನ್ ತಲೆಗೆ ಹೊಡೆದಿದ್ದಾನೆ. ಬಿಡಿಸಲು ಬಂದ ಶೇಷಾದ್ರಿ ಅವರ ಕೈಗೂ ಹೊಡೆದ ಎಂದು ಶಿವಕುಮಾರ್ ದೂರಿನಲ್ಲಿ ಆರೋಪಿಸಿದ್ದರು.

ಶೇಖರ್ ಜೊತೆಗಿದ್ದ ವಯಸ್ಸಾದ ವ್ಯಕ್ತಿಯೊಬ್ಬರು ಕುಡುಗೋಲಿನಿಂದ ನವೀನ್‌ಗೆ ಹೊಡೆಯಲು ಯತ್ನಿಸಿದರು. ಶೇಖರ್ ಮತ್ತಷ್ಟು ಹುಡುಗರನ್ನು ಕರೆಯಿಸಲು ಮುಂದಾದಾಗ, ಬೈಕ್‌ನಲ್ಲಿ ನವೀನ್ ಮತ್ತು ತಂದೆಯನ್ನು ಕೂರಿಸಿಕೊಂಡು ಸ್ಥಳದಿಂದ ತೆರಳಿದೆ. ಬಿಡದಿಯ ಸುಭಾಷ್ ಆಸ್ಪತ್ರೆಗೆ ಕರೆತಂದು ಚಿಕಿತ್ಸೆಗೆ ದಾಖಲಿಸಿದೆ. ಹಲ್ಲೆ ನಡೆಸಿದ ಶೇಖರ್ ಮತ್ತು ವಯಸ್ಕ ವ್ಯಕ್ತಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಶಿವಕುಮಾರ್ ತಿಳಿಸಿದ್ದರು. ಆ ಮೇರೆಗೆ ಬಿಡದಿ ಠಾಣೆಯಲ್ಲಿ ಪ್ರಕರಣ ಕೂಡ ದಾಖಲಾಗಿತ್ತು.

‘ಹಲ್ಲೆಗೊಳಗಾದ ನವೀನ್ ಮತ್ತು ಶೇಖರ್ ಇಬ್ಬರು ಸ್ನೇಹಿತರು. ಇಬ್ಬರು ಒಟ್ಟಿಗೆ ಮದ್ಯ ಸೇವಿಸಿ ಮಾತನಾಡುವಾಗ ಮಾತಿನ ಚಕಮಕಿ ನಡೆದು ಜಗಳವಾಗಿದೆ. ಆಗ ಶೇಖರ್ ಹಲ್ಲೆ ನಡೆಸಿದ್ದಾನೆ. ತೀರಾ ವೈಯಕ್ತಿಕ ಕಾರಣಕ್ಕೆ ಜಗಳ ನಡೆದಿದ್ದು, ಇದಕ್ಕೆ ಯಾವುದೇ ರಾಜಕೀಯ ನಂಟಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.



ಸಂಗೀತೋತ್ಸವ

ರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೆಷನ್ ಟ್ರಸ್ಟ್ ಇಲ್ಲಿನ ಕೋಟೆ ಪ್ರೌಢಶಾಲೆ ಮೈದಾನದಲ್ಲಿ ಹಮ್ಮಿಕೊಂಡಿರುವ ‘ರಾಮನವಮಿ ಸಂಗೀತೋತ್ಸವ’ದಲ್ಲಿ ಅಭಿಷೇಕ್ ರಘುರಾಂ ಮಟ್ಟಿ ಮತ್ತು ತಂಡವು ಕರ್ನಾಟಕ ಸಂಗೀತ ಕಛೇರಿಯನ್ನು ಗುರುವಾರ ಪ್ರಸ್ತುತಪಡಿಸಿತು

ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಭೈರವಿ ರಾಗದಲ್ಲಿ ಗಾಯನ ಸ್ಪರ್ಧೆ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು ನಾದಯೋಗಿ ಭೈರವಿ ಕೆಂಪೇಗೌಡ ದತ್ತಿ ಆಶ್ರಯದಲ್ಲಿ 15ರಿಂದ 20 ವರ್ಷ ವಯಸ್ಸಿನವರಿಗೆ ಭೈರವಿ ರಾಗದಲ್ಲಿ ಗಾಯನ ಸ್ಪರ್ಧೆ ಹಮ್ಮಿಕೊಂಡಿದೆ.

ಕೆ. ಮೋಹನ್ ದೇವ್ ಆಳ್ವ, ಎಂ.ಕೆ. ಶೈಲಜಾ ಆಳ್ವ ಅವರು ಈ ದತ್ತಿ ಸ್ಥಾಪಿಸಿದ್ದಾರೆ. ಸ್ಪರ್ಧೆಯು ಇದೇ 28ರಂದು ನಡೆಯಲಿದೆ. ಪ್ರಥಮ ಬಹುಮಾನ ₹ 4 ಸಾವಿರ, ದ್ವಿತೀಯ ಬಹುಮಾನ ₹ 3 ಸಾವಿರ ಹಾಗೂ ತೃತೀಯ ಬಹುಮಾನ ₹ 2 ಸಾವಿರ ನಗದು ಒಳಗೊಂಡಿದೆ.



ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಬಯಸುವವರು ಇದೇ 20ರ ಸಂಜೆ 5 ಗಂಟೆಯೊಳಗೆ ನರಸಿಂಹರಾಜ ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದ ಕಚೇರಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಅರ್ಜಿಗಳು ಪ್ರತಿಷ್ಠಾನದ ಕಚೇರಿಯಲ್ಲಿ ದೊರೆಯುತ್ತವೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9972812127

ಕನ್ನಡ ಕಾವ್ಯ ರಸಗ್ರಹಣ ತರಗತಿ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು ಇದೇ 29ರಿಂದ ಹಳಗನ್ನಡ ಮತ್ತು ಮಧ್ಯಕಾಲೀನ ಕಾವ್ಯ ರಸಗ್ರಹಣ ತರಗತಿಯನ್ನು ಹಮ್ಮಿಕೊಂಡಿದೆ.

ತರಗತಿಗಳು ಎಂಟು ತಿಂಗಳು ಪ್ರತಿ ಸೋಮವಾರ ಮತ್ತು ಗುರುವಾರ ಸಂಜೆ 5.30ರಿಂದ ಸಂಜೆ 7ರವರೆಗೆ ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ನಡೆಯಲಿವೆ. ಕನ್ನಡದ ವಿದ್ವಾಂಸರಾದ ಪಿ.ವಿ. ನಾರಾಯಣ, ಆರ್.ಲಕ್ಷ್ಮೀನಾರಾಯಣ, ಕೆ.ಆರ್.ಗಣೇಶ, ರಾಜಪ್ಪ ದಳವಾಯಿ, ಸಿ.ಕೆ. ಜಗದೀಶ್, ಎನ್.ಆರ್.ಲಲಿತಾಂಬ, ಚಂದ್ರಶೇಖರ ನಾದೂರು, ಬೈರಮಂಗಲ ರಾಮೇಗೌಡ ಹಾಗೂ ಶಾಂತರಾಜು ಬೋಧನೆ ಮಾಡುತ್ತಾರೆ.

ಆಸಕ್ತರು ಏ.25ರೊಳಗೆ ದೂರವಾಣಿ ಸಂಖ್ಯೆ 9972812127 ಅಥವಾ ಇ ಮೇಲ್ ವಿಳಾಸ bmsritrust@gmail.com ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

‘ನಮ್ಮ ಮೆಟ್ರೊ’ ಪ್ರಯಾಣಿಕರ ತೃಪ್ತಿ ಸಮೀಕ್ಷೆ

ಬೆಂಗಳೂರು: ಮೆಟ್ರೊ ಪ್ರಯಾಣಿಕರ ತೃಪ್ತಿ ಸಮೀಕ್ಷೆಯನ್ನು ‘ಕಾಮೆಟ್ ನೊವಾ’ ಸಂಸ್ಥೆಯಿಂದ ಏ.8ಕ್ಕೆ ಆರಂಭಗೊಂಡಿದ್ದು ಮೇ 6ರವರೆಗೆ ನಡೆಯಲಿದೆ.

ಪ್ರಯಾಣಿಕರ ಅನುಭವವನ್ನು ಉತ್ತಮಗೊಳಿಸಲು ಮತ್ತು ನಮ್ಮ ಮೆಟ್ರೊ ಕಾರ್ಯಕ್ಷಮತೆ ಸೂಚಕಗಳನ್ನು ರೂಪಿಸಲು ಲಂಡನ್‌ನ ಇಂಪೀರಿಯಲ್ ಕಾಲೇಜಿಗೆ ಅಧ್ಯಯನ ನಡೆಸಲಿದೆ. ಈ ಸಮೀಕ್ಷೆಯು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ನಡೆಸಲಾಗುತ್ತದೆ. ಪ್ರಯಾಣಿಕರು ನಿಗಮದ ವೆಬ್‌ಸೈಟ್‌ನ (www.bmrc.co.in) ಪ್ರತಿಕ್ರಿಯೆ ಪುಟಗಳಲ್ಲಿ ಭಾಗವಹಿಸಬಹುದು.

‘ನಮ್ಮ ಮೆಟ್ರೊ’ ಅಧಿಕೃತ ಮೊಬೈಲ್ ಅಪ್ಲಿಕೇಶನ್‌ನಲ್ಲಿ, ರೈಲು ಮತ್ತು ನಿಲ್ದಾಣಗಳಲ್ಲಿ ಕ್ಯೂಆರ್ ಕೋಡ್ ಪ್ರದರ್ಶಿಸಲಾಗಿದೆ. ಪ್ರಯಾಣಿಕರು ಸಮೀಕ್ಷೆಯಲ್ಲಿ ಭಾಗವಹಿಸಿ ಪ್ರತಿಕ್ರಿಯೆ ನೀಡಬೇಕು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮನವಿ ಮಾಡಿದ್ದಾರೆ. ಮಾಹಿತಿಗೆ: travelhelp@bmrc.co.in ಅಥವಾ 1800-425-12345





ನಗರದ ನಂದಿದುರ್ಗ ರಸ್ತೆಯಲ್ಲಿರುವ ಖುದ್ದೂಸ್ ಸಾಹೇಬ್ ಈದ್ಗಾ ಮೈದಾನದಲ್ಲಿ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಡಿದ್ದರು – ಪ್ರಜಾವಾಣಿ ಚಿತ್ರ ಎಂ.ಎಸ್.ಮಂಜುನಾಥ್ (ಎಡಚಿತ್ರ) ಬಿರು ಬಿಸಿಲಿನ ನಡುವೆ ಚಾಮರಾಜಪೇಟೆ ಮೈದಾನದಲ್ಲಿ ಗುರುವಾರ ಈದ್ ಉಲ್ ಫಿತ್ರ್ ಅಂಗವಾಗಿ ಆಯೋಜಿಸಿದ್ದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದ ಮುಸ್ಲಿಂ ಸಮುದಾಯದವರು

ಈದ್ಗಾ ಮೈದಾನ, ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ • ದರ್ಗಾ ಹಾಗೂ ಮದರಸಾಗಳಿಗೆ ವಿಶೇಷ ಅಲಂಕಾರ

ನಗರದಲ್ಲಿ ಈದ್ ಉಲ್ ಫಿತ್ರ್ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಜಾನ್ ಉಪವಾಸ ಮುಗಿಸಿದ ಬಳಿಕ ಈದ್ ಉಲ್ ಫಿತ್ರ್ ಹಬ್ಬವನ್ನು ಮುಸ್ಲಿಮರು ಗುರುವಾರ ಸಂಭ್ರಮದಿಂದ ಆಚರಿಸಿದರು.

ಒಂದು ತಿಂಗಳು ಉಪವಾಸ ಮಾಡಿದ್ದ ಅವರು ತಮ್ಮ ಗಳಿಕೆಯಲ್ಲಿ ಬಡವರಿಗೆ ದಾನ ಮಾಡುವ ಸಂಪ್ರದಾಯವನ್ನು ಪಾಲಿಸಿದರು. ಜಕಾತ್, ಫಿತ್ರ್ ದಾನ ಮಾಡಿದರು. ದವಸ–ಧಾನ್ಯ, ನಗದು ನೀಡಿದರು.

ಹೊಸ ಬಟ್ಟೆ ಧರಿಸಿ ಸಮೀಪದ ಈದ್ಗಾ ಮೈದಾನಗಳು, ಮಸೀದಿಗಳಿಗೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಂತರ ಸಿಹಿ ಹಂಚಿ, ಪರಸ್ಪರ ಆಲಿಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ಲೋಕ ಕಲ್ಯಾಣಕ್ಕೆ ಅಲ್ಲಾಹುವಿನಲ್ಲಿ ಪ್ರಾರ್ಥನೆ ಸಲ್ಲಿಸಿದ ಧರ್ಮ ಗುರುಗಳು, ಹಬ್ಬದ ಸಂದೇಶ ನೀಡಿದರು.

ನಗರದ ಮೈಸೂರು ರಸ್ತೆಯ ಈದ್ಗಾ ಮೈದಾನದಲ್ಲಿ ಈದ್–ಉಲ್ ಫಿತ್ರ್ ಅಂಗವಾಗಿ ಬೆಳಿಗ್ಗೆ ಸಾವಿರಾರು ಮುಸ್ಲಿಮರು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡರು.

ಒಂದು ಗಂಟೆಗೂ ಹೆಚ್ಚು ಕಾಲ ಸಾಮೂಹಿಕ ಪ್ರಾರ್ಥನೆ ನಡೆಯಿತು. ನಂತರ ಕುರಾನ್ ಪಠಣ ನಡೆಯಿತು. ನೂರಾರು ಸಂಖ್ಯೆಯಲ್ಲಿ ಮಕ್ಕಳು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

ಪ್ರಾರ್ಥನೆಯ ಸಂದರ್ಭ ವಿವಿಧೆಡೆ ವಾಹನಗಳ ಸಂಚಾರ ಮಾರ್ಗವನ್ನು ಬದಲಿಸಲಾಗಿತ್ತು. ನಗರದ ಮಸೀದಿ, ದರ್ಗಾ ಹಾಗೂ ಮದರಸಾಗಳಿಗೆ ವಿಶೇಷ ವಿದ್ಯುತ್ ಹಾಗೂ ಬಣ್ಣದ ಕಾಗದಗಳ ಅಲಂಕಾರ ಮಾಡಲಾಗಿತ್ತು. ವಿದ್ಯುತ್ ಬೆಳಕಿನಲ್ಲಿ ಮಸೀದಿಗಳು ಕಂಗೊಳಿಸಿದವು.

ಪ್ರತಿ ಮುಸಲ್ಮಾನರ ಮನೆಯಲ್ಲಿಯೂ ಹಬ್ಬದ ಸಂಭ್ರಮವು ಮನೆ ಮಾಡಿತ್ತು. ಎಲ್ಲರೂ ಹೊಸ ಬಟ್ಟೆ ತೊಟ್ಟು ಸಂಭ್ರಮಿಸಿದರು. ಸಂಬಂಧಿಕರು ಹಾಗೂ ಸ್ನೇಹಿತರನ್ನು ಮನೆಗೆ ಆಹ್ವಾನಿಸಿ, ಹಬ್ಬದ ಶುಭಾಶಯ ಕೋರಿದರು.





ನಗರದ ನಂದಿದುರ್ಗ ರಸ್ತೆಯಲ್ಲಿರುವ ಖುದ್ದೂಸ್ ಸಾಹೇಬ್ ಈದ್ಗಾ ಮೈದಾನದಲ್ಲಿ ಮಕ್ಕಳು ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು (ಎಡಚಿತ್ರ) ಬೆಂಗಳೂರಿನ ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಈದ್ ಉಲ್‌ಫಿತ್ರ್ ಹಬ್ಬದ ಅಂಗವಾಗಿ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಮಾಡಿದರು



ಅರೆಬಿಕ್ ಉಡುಪು ಧರಿಸಿದ್ದ ಬಾಲಕನೊಬ್ಬ ಬೆಂಗಳೂರಿನ ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ನಡೆದ ಈದ್ ಉಲ್‌ಫಿತರ್ ಪ್ರಾರ್ಥನೆಯಲ್ಲಿ ಗಮನ ಸೆಳೆದನು ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್



ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅವರು ಪುತ್ರ ಜೈದ್ ಖಾನ್ ಅವರೊಂದಿಗೆ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಪ್ರಾರ್ಥನೆಯಲ್ಲಿ ಪಾಲ್ಗೊಂಡರು

ಸುದ್ದಿ 2 ನಿಮಿಷ

ಮುನಿಸು ಎಲ್ಲಿದೆ? ನಾಮಪತ್ರ ಸಲ್ಲಿಕೆ ವೇಳೆ ಭಾಗಿ; ಮುನಿಯಪ್ಪ

ಚಾಮರಾಜನಗರ: ‘ಕೋಲಾರದಲ್ಲಿ ಅಳಿಯನಿಗೆ ಟಿಕೆಟ್ ಸಿಕ್ಕಿಲ್ಲ ಎಂದು ಬೇಜಾರಿಲ್ಲ. ಪಕ್ಷದ ಅಭ್ಯರ್ಥಿ ಪರವಾಗಿ ಪ್ರಚಾರ ನಡೆಸುತ್ತಿದ್ದೇನೆ. ರಾಜ್ಯದಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲುವುದು ನಮ್ಮ ಗುರಿ’ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಗುರುವಾರ ಹೇಳಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಮುನಿಸು ಎಲ್ಲಿದೆ? ಪಕ್ಷದ ಅಭ್ಯರ್ಥಿ ನಾಮಪತ್ರ ಸಲ್ಲಿಸುವಾಗ ನಾನು ಮತ್ತು ಮಗಳು ಹೋಗಿದ್ದೇವೆ. ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿದ್ದೇವೆ. ರಾಜಕೀಯದಲ್ಲಿ 30 ವರ್ಷಗಳ ಅನುಭವವಿದೆ. 10 ವರ್ಷ ಸಂಸದನಾಗಿದ್ದೆ. ಕೋರ್ ಕಮಿಟಿ ಸದಸ್ಯನೂ ಆಗಿದ್ದೆ. ಯಾವುದೋ ಒಂದು ಸೀಟು ಸಿಕ್ಕಿಲ್ಲ ಎಂದು ಯೋಚನೆ ಮಾಡುತ್ತೇನೆಯೇ’ ಎಂದು ಕೇಳಿದರು.



‘ಪ್ರಚಾರಕ್ಕೆ ಹೋಗಿದ್ದೇನೆ. ಎರಡು ದಿನ ಮೈಸೂರು, ಚಾಮರಾಜನಗರ ಪ್ರವಾಸ ಮಾಡಿ ಬರುತ್ತೇನೆ ಎಂದು ಹೇಳಿದ್ದೇನೆ. ಮತ್ತೆ ಹೋಗುವೆ. ಸೋಲಬಾರದು ಎಂಬ ಗುರಿ ಇಟ್ಟುಕೊಂಡು ವರಿಷ್ಠರು ಅಭ್ಯರ್ಥಿಯನ್ನು ಆಯ್ಕೆ ಮಾಡಿದ್ದಾರೆ. ರಾಜ್ಯದಲ್ಲಿ 28 ಸ್ಥಾನಗಳನ್ನು ಗೆಲ್ಲುವುದು ಪಕ್ಷದ ಗುರಿ. ಕೇಂದ್ರದಲ್ಲಿ ಜಾತ್ಯತೀತವಾದ ಸರ್ಕಾರ ಬಂದಾಗ ಈ ದೇಶದಲ್ಲಿ ಶಾಂತಿ ಸ್ಥಾಪನೆಯಾಗುತ್ತದೆ’ ಎಂದು ಹೇಳಿದರು.

ಮೋದಿ ರೋಡ್ ಶೋ: ಜೇನುಗೂಡು ತೆರವಿಗೆ ಪತ್ರ !

ಮಂಗಳೂರು: ನಗರದಲ್ಲಿ ಏ.14ರಂದು ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋ ನಡೆಯಲಿರುವ ಮಾರ್ಗದಲ್ಲಿ ಇರುವ ಎಲ್ಲ ಜೇನುಗೂಡುಗಳನ್ನು ತೆರವುಗೊಳಿಸುವಂತೆ ನಗರ ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಅವರು ಉಪಅರಣ್ಯ ಸಂರಕ್ಷಣಾಧಿಕಾರಿಗೆ ಪತ್ರ ಬರೆದಿದ್ದಾರೆ.

ನಗರದ ನಾರಾಯಣಗುರು ವೃತ್ತದಿಂದ ನವಭಾರತ್ ಸರ್ಕಲ್ ವರೆಗಿನ ರೋಡ್ ಶೋ ನಡೆಯುವ ಸ್ಥಳ, ವಾಹನ ನಿಲುಗಡೆ ಸ್ಥಳ, ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಹೆಲಿಪ್ಯಾಡ್, ಸೇಫ್ ಹೌಸ್ ಮತ್ತು ಸೇಫ್ ಆಸ್ಪತ್ರೆಗಳಾದ ಎ.ಜೆ. ಆಸ್ಪತ್ರೆ, ವೆನ್ಲಾಕ್ ಆಸ್ಪತ್ರೆ, ಕೆಎಂಸಿ, ಮಂಗಳೂರು ಮಹಾನಗರ ಪಾಲಿಕೆ ಆಯುಕ್ತರ ಕಚೇರಿ, ಎಸ್‌ಡಿಎಂ ಲಾ ಕಾಲೇಜು, ಸರ್ಕ್ಯೂಟ್ ಹೌಸ್ ಮತ್ತು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಗಣ್ಯರು ಸಂಚರಿಸುವ ಕಾರ್ಯಕ್ರಮದ ಸ್ಥಳದವರೆಗಿನ ಎಲ್ಲ ಮಾರ್ಗಗಳಲ್ಲಿ ಈ ಕ್ರಮ ವಹಿಸಬೇಕು ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಈ ಪತ್ರದ ಬಗ್ಗೆ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಟೀಕಾ ಪ್ರಹಾರ ನಡೆಸಿದ್ದಾರೆ.

‘ಇದೇನು ಹೊಸ ಕ್ರಮವಲ್ಲ. ಪ್ರಧಾನಿ ಅವರ ಭದ್ರತೆಯ ಮಾರ್ಗಸೂಚಿಯಂತೆಯೇ ನಾನು ಈ ಪತ್ರ ಬರೆದಿದ್ದೇನೆ’ ಎಂದು ಅನುಪಮ್ ಅಗ್ರವಾಲ್ ಪ್ರತಿಕ್ರಿಯಿಸಿದ್ದಾರೆ.

ಪಿಯು ಪರೀಕ್ಷೆ ಸಾಧಕರು



ಹೇಮಶ್ರೀ ಜಿ. 539 (ಶೇ 89.83) ವಾಣಿಜ್ಯ ವಿಭಾಗ, ಜೆ.ಎಸ್‌.ಪಿಯು ಕಾಲೇಜು, ಮಲ್ಲತ್ತಹಳ್ಳಿ



ಮೋನಿಷ್ ಗೌಡ ಎನ್‌.ಡಿ. 565 (ಶೇ 94.16) ವಿಜ್ಞಾನ ವಿಭಾಗ ಜೆ.ಎಸ್‌.ಪಿಯು ಕಾಲೇಜು, ಮಲ್ಲತ್ತಹಳ್ಳಿ



ಮೋಹಿತ್ ಕೃಷ್ಣಪ್ಪ ಪಿ. 574 (ಶೇ 95.50) ವಾಣಿಜ್ಯ ವಿಭಾಗ, ವಿದ್ಯಾಮಂದಿರ ಪಿಯು ಕಾಲೇಜು, ಮಲ್ಲೇಶ್ವರ



ಮನೋಜ್ ಎಸ್‌.ಆರ್ 567 (ಶೇ 94.50) ಬಿಜಿಎಸ್ ಪಿಯು ಕಾಲೇಜು, ಆಗಲಗುರ್ಕಿ, ಚಿಕ್ಕಬಳ್ಳಾಪುರ



ಎಂ.ಪಿ. ಪುನೀತ್ ಗೌಡ 541 (90.16) ನಾಗಾರ್ಜುನ ಪಿಯು ಕಾಲೇಜು, ಯಲಹಂಕ– ಬೆಂಗಳೂರು.



ಗಂಧಂ ಗಿರಿ ವರುಣ್ ಸಂದೇಶ್ 588 (ಶೇ 98) ರಾಮೋಹಳ್ಳಿ ಯೂನಿವರ್ಸಲ್ ಪಿಯು ಕಾಲೇಜು, ಕೆಂಗೇರಿ.

ನಗರದಲ್ಲಿ ಇಂದು

ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ಗರುಡ ವಾಹನ ಉತ್ಸವ, ಅತ್ರಿ–ಅನಸೂಯಾ ಪೂಜಾ, ವೃಷಭವಾಹನ ಉತ್ಸವ, ಸಗೋಪುರ ದರ್ಶನ, ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 9.30

ಕರ್ನಾಟಕ ಸಾಂಸ್ಕೃತಿಕ ನಾಯಕ ಬಸವಣ್ಣ ಹಾಗೂ ಅಕ್ಕಮಹಾದೇವಿ ಜಯಂತಿ: ಉದ್ಘಾಟನೆ: ಗಂಗಾಂಬಿಕೆ ಮಲ್ಲಿಕಾರ್ಜುನ್, ಪ್ರಾಸ್ತಾವಿಕ ನುಡಿ: ಲಲಿತಾ ಪ್ರಕಾಶ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ‘ಅಕ್ಕಮಹಾದೇವಿ’ ಬಗ್ಗೆ ಉಪನ್ಯಾಸ: ಫಾಲನೇತ್ರ, ಮುಖ್ಯ ಅತಿಥಿಗಳು: ಎಂ.ಎನ್. ಪ್ರಸಾದ್, ಎಚ್.ಆರ್.ಮಲ್ಲಿಕಾರ್ಜುನ್, ಆಯೋಜನೆ: ಧಾರಿಣಿ ಮಹಿಳಾ ಸಂಘ ಬಸವೇಶ್ವರನಗರ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ ರಾಜಾಜಿನಗರ ಘಟಕ, ಸ್ಥಳ: ಧಾರಿಣಿ ಮಹಿಳಾ ಸಂಘ, ಬಸವೇಶ್ವರನಗರ, ಮಧ್ಯಾಹ್ನ2

ರಾಮನವಮಿ ಸಂಗೀತೋತ್ಸವ–2024: ವಿಶೇಷ ಕರ್ನಾಟಕ ಸಂಗೀತ ಕಛೇರಿ: ರಾಮಕೃಷ್ಣನ್ ಮೂರ್ತಿ, ಚಾರುಮತಿ ರಘುರಾಂ, ಕೆ.ಯು.ಜಯಚಂದ್ರ ರಾವ್, ಜಿ.ಗುರುಪ್ರಸನ್ನ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 6.30

‘ನೃತ್ಯ ಭಾನು’ ಶಾಸ್ತ್ರಿಯ ನೃತ್ಯ ಉತ್ಸವ: ನೃತ್ಯ: ಮೇಘನಾ ವೆಂಕಟ್, ಮೈತ್ರಿ ಮಧ್ಯಸ್ಥ, ಆಯೋಜನೆ ಹಾಗೂ ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ.ನಗರ, ಸಂಜೆ 6.30

ವಸಂತ ನವರಾತ್ರಿ ಶ್ರೀರಾಮೋತ್ಸವದ ಪ್ರಯುಕ್ತ ಹರಿನಾಮ ಸಂಕೀರ್ತನೆ: ಗಾಯನ: ಸುಶ್ರಾವ್ಯ ಆಚಾರ್ಯ, ಪ್ರಣೀತಾ ಟಿ. ಮಣೂರ್, ಪಿಟೀಲು: ಎಂ.ಎನ್. ಸತ್ಯನಾರಾಯಣ, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಅಂಚೆ ಕಚೇರಿ ಹತ್ತಿರ, ಮಲ್ಲೇಶ್ವರ, ಸಂಜೆ 6.30

‘ನಾವು...’ ನಾಟಕ ಪ್ರದರ್ಶನ: ಆಯೋಜನೆ: ಬೆಂಗಳೂರು ಥಿಯೇಟರ್ ಆನ್‌ಸಂಬಲ್, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ರಾಷ್ಟ್ರಮಟ್ಟದ ‘ತಾಂತ್ರಿಕ ಎಕ್ಸ್ ಪೋ–2024’ ಪ್ರದರ್ಶನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಲ್ಲತ್ತಹಳ್ಳಿಯಲ್ಲಿರುವ ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂಬೇಡ್ಕರ್ ಅವರ 133ನೇ ಜನ್ಮ ದಿನೋತ್ಸವದ ಅಂಗವಾಗಿ ಶುಕ್ರವಾರ (ಏಪ್ರಿಲ್ 13) ರಾಷ್ಟ್ರ ಮಟ್ಟದ ಎಂಟನೇ ‘ತಾಂತ್ರಿಕ ಎಕ್ಸ್ ಪೋ-2024’ ವಸ್ತು ಪ್ರದರ್ಶನ ಆಯೋಜಿಸಲಾಗಿದೆ.

‘ವಸ್ತು ಪ್ರದರ್ಶನದಲ್ಲಿ ಮೂಲಸೌಕರ್ಯ ಅಭಿವೃದ್ಧಿ, ನವೀಕರಿಸಬಹುದಾದ ಇಂಧನ, ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್ ಮತ್ತು ಬ್ಲಾಕ್ ಚೈನ್, ಸ್ಮಾರ್ಟ್ ಟೆಕ್ನಾಲಜಿ, 5ಜಿ ಟೆಕ್ನಾಲಜಿ ಸೇರಿದಂತೆ ಹಲವು ನವೀನ ತಾಂತ್ರಿಕ ಅನ್ವೇಷಣೆಯ ಕಾರ್ಯ ಚಟುವಟಿಕೆಯಲ್ಲಿ ತೊಡಗಿರುವ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು, ಮಾಹಿತಿ ತಂತ್ರಜ್ಞಾನ ಸಂಶೋಧಕರು ಆವಿಷ್ಕರಿಸಿರುವ ತಾಂತ್ರಿಕ ಯೋಜನೆಗಳ ಪ್ರದರ್ಶನ ಮಾಡಲಾಗುವುದು’ ಎಂದು ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದ ಆಡಳಿತ ಮಂಡಳಿ ತಿಳಿಸಿದೆ.

‘ಮಾಹಿತಿ ತಂತ್ರಜ್ಞಾನ ಉದ್ದಿಮೆಗಳು ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗಳಿಗೆ ಸವಾಲಾಗಿರುವ ಹಲವು ಸಮಸ್ಯೆಗಳ ಬಗ್ಗೆ ತಾಂತ್ರಿಕ ತಂತ್ರಜ್ಞಾನ ಪರಿಣಿತರಿಂದ ಮಾರ್ಗದರ್ಶನ ನೀಡಲಾಗುವುದು. ಅಲ್ಲದೆ, ವಿವಿಧ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಆವಿಷ್ಕರಿಸಿರುವ ವಿವಿಧ ತಾಂತ್ರಿಕ ಯೋಜನೆಗಳ ಪ್ರದರ್ಶನ ಏರ್ಪಡಿಸಲಾಗಿದೆ. ಈ ಪ್ರದರ್ಶನದಲ್ಲಿ ಆಯ್ಕೆಯಾದ ಉತ್ತಮ ತಾಂತ್ರಿಕ ಯೋಜನೆಗೆ ₹ 1 ಲಕ್ಷ ಬಹುಮಾನ ನೀಡಲಾಗುವುದು’ ಎಂದೂ ಮಂಡಳಿ ತಿಳಿಸಿದೆ.

ಸುಧಾ, ಮಯೂರ ಓದಿರಿ

ಯಲಹಂಕ ಸರ್ಕಾರಿ ಪಿಯು ಕಾಲೇಜಿಗೆ ಶೇ 83 ಫಲಿತಾಂಶ

ಪ್ರಜಾವಾಣಿ ವಾರ್ತೆ

ಯಲಹಂಕ: ಯಲಹಂಕದ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ 83.6 ಫಲಿತಾಂಶ ಬಂದಿದೆ. ವಾಣಿಜ್ಯ ವಿಭಾಗದಲ್ಲಿ ಗುರುದತ್ ಆರ್‌.ಕೆ. 585 (ಶೇ 97.5) ಹಾಗೂ ಕಲಾ ವಿಭಾಗದಲ್ಲಿ ಗಣೇಶ್ 579 (ಶೇ 96.5) ಅಂಕ ಗಳಿಸಿದ್ದಾರೆ. 121 ವಿದ್ಯಾರ್ಥಿಗಳು ಶೇ 85ರಷ್ಟು ಅಂಕಗಳನ್ನು ಪಡೆದು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಮಳೂರು, ಹೊಂಗನೂರು ಜಿ.ಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಪ್ರಚಾರ

ವೈದ್ಯಕೀಯ ಸೇವೆ ಶ್ರೀರಕ್ಷೆ: ಮಂಜುನಾಥ್

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ’ನನ್ನ ವೈದ್ಯಕೀಯ ವೃತ್ತಿಯಲ್ಲಿ ಮಾಡಿರುವ ಸೇವೆ ಗೆಲುವಿಗೆ ಸಹಕಾರಿ. ಜನರ ಸ್ಪಂದನೆ ನೋಡಿದರೆ ನನ್ನ ಗೆಲುವು ನಿಶ್ಚಿತ’ ಎಂದು ಬಿಜೆಪಿ ಜೆಡಿಎಸ್ ಮೈತ್ರಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ವಿಶ್ವಾಸ ವ್ಯಕ್ತಪಡಿಸಿದರು.


ತಾಲ್ಲೂಕಿನ ಮಳೂರು ಹಾಗೂ ಹೊಂಗನೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಗುರುವಾರ ಪ್ರಚಾರ ನಡೆಸಿ ಮಾತನಾಡಿದ ಅವರು, ಪ್ರಚಾರಕ್ಕೆ ಹೋದ ಕಡೆ ಉತ್ತಮ ಸ್ಪಂದನೆ ಸಿಗುತ್ತಿದೆ. ವೈದ್ಯಕೀಯ ಸೇವೆ ಬಗ್ಗೆ ಜನರು ಮಾತನಾಡುತ್ತಿದ್ದಾರೆ. ಜೆಡಿಎಸ್–ಬಿಜೆಪಿ ಕಾರ್ಯಕರ್ತರು, ಮುಖಂಡರು ಉತ್ಸಾಹದಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಜನರ ಅಭೂತಪೂರ್ವ ಬೆಂಬಲ ನೋಡಿ ವಿಶ್ವಾಸ ದಿನೇ ದಿನೇ ಹೆಚ್ಚಾಗುತ್ತಿದೆ. ಮಂಜುನಾಥ್ ಅಂಥವರು ಸಂಸದರಾಗಬೇಕು ಎಂದು ಜನರೇ ನಿರ್ಧಾರ ಮಾಡುತ್ತಿದ್ದಾರೆ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ ಮಾತನಾಡಿ, ಚನ್ನಪಟ್ಟಣ ಕ್ಷೇತ್ರದಲ್ಲಿ ಶೇ85 ಮಂದಿ ಡಾ.ಮಂಜುನಾಥ್ ಪರವಾಗಿ ಇದ್ದಾರೆ. ಎಲ್ಲೆಡೆ ಜನರ ಬೆಂಬಲ ಉತ್ತಮವಾಗಿದೆ ಎಂದರು.

ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಡಾ.ಮಂಜುನಾಥ್ ಅವರು ಸಂಸದರಾದರೆ ಕ್ಷೇತ್ರ ವೇಗವಾಗಿ ಅಭಿವೃದ್ಧಿಯಾಗುತ್ತದೆ. ಈ ಕ್ಷೇತ್ರದಲ್ಲಿ ಯಾರನ್ನೋ ಸೋಲಿಸಬೇಕು ಎನ್ನುವ ಉದ್ದೇಶ ಇಲ್ಲ. ಮಂಜುನಾಥ್ ಅವರು ಗೆಲ್ಲಿಸಿ ವೈದ್ಯಕೀಯ ಕ್ಷೇತ್ರದ ಸೇವೆ ವಿಸ್ತಾರ ಮಾಡಬೇಕು ಎನ್ನುವುದು ಜನರ ಭಾವನೆಯಾಗಿದೆ ಎಂದರು.

ತಾಲ್ಲೂಕಿನ ಮುದುಗೆರೆ, ಮತ್ತೀಕೆರೆ ಶೆಟ್ಟಿಹಳ್ಳಿ, ಬೈರಾಪಟ್ಟಣ, ಚಕ್ಕೆರೆ, ಮಳೂರುಪಟ್ಟಣ, ಕೂಡ್ಲೂರು, ಎಸ್.ಎಂ.ದೊಡ್ಡಿ, ಎಸ್.ಎಂ.ಹಳ್ಳಿ, ಹೊಂಗನೂರು, ನೀಲಸಂದ್ರ, ಮೋಳೆದೊಡ್ಡಿ, ತಗಚಗೆರೆ, ಬ್ರಹ್ಮಣೀಪುರ, ಮುನಿಯಪ್ಪನದೊಡ್ಡಿ, ನಗರದ ಹಲವೆಡೆ ಸೇರಿದಂತೆ ಹಲವು ಕಡೆ ತೆರೆದ ವಾಹನದಲ್ಲಿ ಪ್ರಚಾರ ನಡೆಸಿದರು. ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಆನಂದಸ್ವಾಮಿ, ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಜಯಮುತ್ತು, ಜೆಡಿಎಸ್ ಹಾಗೂ ಬಿಜೆಪಿ ಮುಖಂಡರು ಭಾಗವಹಿಸಿದ್ದರು.



ಚನ್ನಪಟ್ಟಣ ತಾಲ್ಲೂಕಿನ ಮುದುಗೆರೆ ಗ್ರಾಮದಲ್ಲಿ ಬಿಜೆಪಿ – ಜೆಡಿಎಸ್ ಮೈತ್ರಿ ಅಭ್ಯರ್ಥಿ ಡಾ.ಸಿ.ಎನ್‌.ಮಂಜುನಾಥ್ ಪ್ರಚಾರ ನಡೆಸಿದರು. ವಿಧಾನ ಪರಿಷತ್ ಸದಸ್ಯ ಸಿ.ಪಿ ಯೋಗೇಶ್ವರ ಹಾಜರಿದ್ದರು

₹1.57 ಕೋಟಿ ಮೌಲ್ಯದ ಚಿನ್ನಾಭರಣ ವಶ

ಚಾಮರಾಜನಗರ: ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲ ಚೆಕ್‌ಪೋಸ್ಟ್‌ನಲ್ಲಿ ಗುರುವಾರ ದಾಖಲೆಗಳಿಲ್ಲದೇ ಕಾರಿನಲ್ಲಿ ಸಾಗಿಸುತ್ತಿದ್ದ ₹1,57,87,000 ಮೌಲ್ಯದ 2.170 ಕೆಜಿ ತೂಕದ ಚಿನ್ನಾಭರಣಗಳನ್ನು ಚುನಾವಣಾ ಕರ್ತವ್ಯದಲ್ಲಿದ್ದ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಕಾರು ಬೆಂಗಳೂರಿನಿಂದ ಕೊಳ್ಳೇಗಾಲಕ್ಕೆ ಬರುತ್ತಿತ್ತು. ಕಾರ್ತಿಕ್ ಮತ್ತು ಚಿರಾಂತ್ ಎಂಬುವವರು ಚಿನ್ನಾಭರಣಗಳನ್ನು ಸಾಗಿಸುತ್ತಿದ್ದರು.

‘ಗಂಡಾಂತರದಲ್ಲಿ ಸಂವಿಧಾನ’

ಪ್ರಜಾವಾಣಿ ವಾರ್ತೆ

ವಿಜಯಪುರ(ದೇವನಹಳ್ಳಿ): ದೇಶ ಸಂವಿಧಾನ ಗಂಡಾಂತರದಲ್ಲಿದೆ. ಅದನ್ನು ಉಳಿಸುವ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯನ ಮೇಲಿದೆ ಎಂದು ಚಿಕ್ಕಬಳ್ಳಾಪುರ ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಹೇಳಿದರು.

ಪಟ್ಟಣದ ಪ್ರಗತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ನಡೆದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ, ಅಂಬೇಡ್ಕರ್ ಅವರು ದೇಶಕ್ಕೆ ಕೊಟ್ಟ ಸಂವಿಧಾನ ಬದಲಾವಣೆ ಮಾಡಲು ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ದೂರಿರು.



ರಕ್ಷಾ ರಾಮಯ್ಯ

ದೇಶದಲ್ಲಿ 10 ವರ್ಷಗಳ ಕಾಲ ಆಡಳಿತ ನಡೆಸಿರುವ ಬಿಜೆಪಿ ನೇತೃತ್ವದ ಕಾಂಗ್ರೆಸ್ ಸರ್ಕಾರ, ಕಾಂಗ್ರೆಸ್ ಅವಧಿಯಲ್ಲಿ ಸ್ಥಾಪನೆ ಮಾಡಿದ್ದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಮೂಲಕ ನಿರುದ್ಯೋಗದ ಸಮಸ್ಯೆಯನ್ನು ಹೆಚ್ಚಿಸಿದೆ ಎಂದರು. 25 ಮಂದಿ ಬಿಜೆಪಿ ಸಂಸದರು ಪ್ರಧಾನಿಯ ಮುಂದೆ ತುಟಿ ಬಿಚ್ಚಲಿಲ್ಲ. ರಾಜ್ಯಕ್ಕೆ ಬರಬೇಕಾಗಿರುವ ಅನುದಾನ ತರಲಿಲ್ಲ ಎಂದರು.

‘ಇ.ಡಿ, ಐ.ಟಿ ಮೂಲಕ ಬ್ಲ್ಯಾಕ್‌ಮೇಲ್ ರಾಜಕೀಯ’

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ‘ಚುನಾವಣಾ ಬಾಂಡ್ ಮೂಲಕ ಬಿಜೆಪಿಯು ಭ್ರಷ್ಟಾಚಾರ ವನ್ನು ಕಾನೂನು ಬದ್ಧಗೊಳಿಸಲು ಮುಂದಾಗಿದೆ’ ಎಂದು ಕಾಂಗ್ರೆಸ್ ಪ್ರಚಾರ ಸಮಿತಿ ಉಪಾಧ್ಯಕ್ಷ ಎಲ್. ಹನುಮಂತಯ್ಯ ವಾಗ್ದಾಳಿ ನಡೆಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಆದರೆ ಈ ಅಂಕಿ–ಅಂಶ ತಪ್ಪು ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಇದು ನಾಗರಿಕ ಸರ್ಕಾರದ ಲಕ್ಷಣವಲ್ಲ’ ಎಂದರು.

‘ಕರ್ನಾಟಕವಷ್ಟೇ ಅಲ್ಲ ಬೇರೆ ಬೇರೆ ರಾಜ್ಯಗಳಲ್ಲಿಯೂ ಎದುರಾಳಿ ಪಕ್ಷಗಳ ನಾಯಕರನ್ನು ಐ.ಟಿ, ಇ.ಡಿ ತನಿಖೆ ಹೆಸರಿನಲ್ಲಿ ಬ್ಲಾಕ್‌ಮೇಲ್ ಮಾಡ ಲಾಗುತ್ತಿದೆ. ಈ ಹಿಂದೆ ತತ್ವ, ಸಿದ್ಧಾಂತದ ಪಕ್ಷ ಬಿಜೆಪಿ ಎನ್ನುತ್ತಿದ್ದರು. ಆದರೆ ಈಗ ಬೆದರಿಸುವುದೇ ತಂತ್ರವಾಗಿದೆ’ ಎಂದು ದೂರಿದರು.

‘ಬಿಜೆಪಿ ಕಳೆದ 20 ವರ್ಷದಿಂದ ರಾಜ್ಯದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಆದರೆ ಎಂದಿಗೂ ರಾಜ್ಯದ ಜನರು ಬಹುಮತ ನೀಡಿಲ್ಲ. ಶಾಸಕರಿಗೆ ಆಮಿಷವೊಡ್ಡಿ, ರಾಜೀನಾಮೆ ಕೊಡಿಸಿ ಸರ್ಕಾರ ಮಾಡಿದ್ದಾರೆ. ರಾಜ್ಯದ ಜನರು ಬಿಜೆಪಿಯನ್ನು ಮಾನ್ಯ ಮಾಡಿಲ್ಲ. ಜನಾಭಿಪ್ರಾಯ ಇಲ್ಲದೇ ಇದ್ದರೂ ವಾಮಮಾರ್ಗದ ಮೂಲಕ ಸರ್ಕಾರ ರಚಿಸಿದ್ದಾರೆ’ ಎಂದು ದೂರಿದರು.

‘ಜಿಎಸ್‌ಟಿ ಜಾರಿಗೆ ಮುಂದಾಗಿದ್ದು ಕಾಂಗ್ರೆಸ್. ಆ ಸಮಯದಲ್ಲಿ ಬಿಜೆಪಿ ಆಡಳಿತದ ರಾಜ್ಯ ಸರ್ಕಾರಗಳು ಜಿಎಸ್‌ಟಿ ವಿರೋಧಿಸಿದ್ದವು. ಆದರೆ ನಂತರ ಜಿಎಸ್‌ಟಿ ಹೆಸರಿನಲ್ಲಿ ಬಿಜೆಪಿ ಸರ್ಕಾರ ಜನರ ರಕ್ತ ಹೀರುವ ಕೆಲಸ ಮಾಡುತ್ತಿದೆ. ಅವೈಜ್ಞಾನಿಕವಾಗಿ ತೆರಿಗೆ ವಿಧಿಸಲಾಗುತ್ತಿದೆ. ಇಡ್ಲಿ, ಕಾಫಿ ಮೇಲೂ ತೆರಿಗೆ. ಇದನ್ನು ಪರಾಮರ್ಶಿಸಬೇಕು ಎನ್ನುವುದು ನಮ್ಮ ಒತ್ತಾಯ’ ಎಂದರು.

‘ವಿಶ್ವದಲ್ಲಿಯೇ ಜನರು ಅತಿ ಹೆಚ್ಚು ತೆರಿಗೆ ಪಾವತಿಸುವ ದೇಶ ಭಾರತ. ಇಷ್ಟು ತೆರಿಗೆ ಪಡೆದರು ಕಳೆದ 10 ವರ್ಷಗಳಲ್ಲಿ 3 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಬಡವರ ಸಂಖ್ಯೆ ಕಡಿಮೆ ಆಗಿಲ್ಲ. ಮತ್ತೆ ಬಿಜೆಪಿಗೆ ಅಧಿಕಾರ ಕೊಟ್ಟರೆ ₹ 50 ಲಕ್ಷ ಕೋಟಿ ಸಾಲದ ಹೊರೆ ಹೆಚ್ಚುತ್ತದೆ’ ಎಂದರು.

‘ಬಡಕುಟುಂಬಗಳಿಗೆ ವಾರ್ಷಿಕ ₹ 1 ಲಕ್ಷ ನೆರವು ಸೇರಿದಂತೆ ಜನರ ಬದುಕನ್ನು ಉತ್ತಮಗೊಳಿಸುವ ವಿಚಾರಗಳು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಇವೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳು ಜೀವನಕ್ಕೆ ತೊಂದರೆ ಆಗದ ರೀತಿಯಲ್ಲಿ ಜನರನ್ನು ನೇರವಾಗಿ ತಲುಪುತ್ತಿವೆ. ಯುವಕರಿಗೆ ಉದ್ಯೋಗ, ಮಹಿಳಾ ಸಬಲೀಕರಣ ಸೇರಿದಂತೆ ಪ್ರಮುಖ ವಿಷಯಗಳು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಇವೆ’ ಎಂದು ಹೇಳಿದರು.

ಡ್ರಗ್ಸ್ ಸಾಗಣೆ ಪ್ರಕರಣದಲ್ಲಿ ಸಿಲುಕಿಸುವ ಬೆದರಿಕೆ ● ತೆರಿಗೆ ಅಧಿಕಾರಿಗಳ ಸೋಗಿನಲ್ಲಿ ಬ್ಲ್ಯಾಕ್‌ಮೇಲ್

ವೃದ್ಧ ಸೇರಿ ಮೂವರಿಗೆ ₹3 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಫೆಡೆಕ್ಸ್ ಪ್ರತಿನಿಧಿ ಸೋಗು
- ಕೃತ್ಯಕ್ಕೆ ನಕಲಿ ದಾಖಲೆ ಬಳಕೆ
- ಹೊರ ರಾಜ್ಯದ ತಂಡದಿಂದ ಕೃತ್ಯ ಶಂಕೆ

ಬೆಂಗಳೂರು: 'ಡ್ರಗ್ಸ್ ಸಾಗಣೆ ಹಾಗೂ ಆದಾಯ ತೆರಿಗೆ ವಂಚನೆ ಪ್ರಕರಣದಲ್ಲಿ ಜೈಲಿಗೆ ಕಳುಹಿಸಲಾಗುವುದು' ಎಂದು ಬೆದರಿಸಿ ನಗರದ ಎಂಜಿನಿಯರ್, ವಕೀಲೆ ಹಾಗೂ ವೃದ್ಧರೊಬ್ಬರಿಂದ ₹3.07 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ನಗರದ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

'ಮುಂಬೈ, ದೆಹಲಿ ಪೊಲೀಸರು ಹಾಗೂ ಕಸ್ಟಮ್ಸ್ ಅಧಿಕಾರಿಗಳ ಹೆಸರಿನಲ್ಲಿ ಕರೆ ಮಾಡಿದ್ದ ವಂಚಕರು, ಎಂಜಿನಿಯರ್, ವಕೀಲೆ, ವೃದ್ಧನಿಂದ ಹಣ ಪಡೆದು ನಾಪತ್ತೆಯಾಗಿದ್ದಾರೆ. ವಕೀಲೆಗೆ ಕರೆ ಮಾಡಿದ್ದ ವಂಚಕರು, ಅರೆನಗ್ನ ವಿಡಿಯೊ ಚಿತ್ರೀಕರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡಿರುವುದು ಗೊತ್ತಾಗಿದೆ. ಮೂವರು ನೀಡಿರುವ ದೂರು ಆಧರಿಸಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕಸ್ಟಮ್ಸ್ ಅಧಿಕಾರಿಗಳ ಸೋಗಿನಲ್ಲಿ ಕರೆ: 'ಅಮೃತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಎಂಜಿನಿಯರ್, ಸ್ಥಳೀಯ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕಸ್ಟಮ್ಸ್ ಅಧಿಕಾರಿಗಳ ಸೋಗಿನಲ್ಲಿ ಇತ್ತೀಚೆಗೆ ಕರೆ ಮಾಡಿದ್ದ ವಂಚಕರು, 'ನಿಮ್ಮ ಹೆಸರಿನಲ್ಲಿ ಹೊರ ದೇಶಕ್ಕೆ ಕೊರಿಯರ್ ಸಾಗಿಸಲಾಗುತ್ತಿದೆ. ಇದರಲ್ಲಿ ಡ್ರಗ್ಸ್, ನಕಲಿ ಪಾಸ್‌ಪೋರ್ಟ್ ಹಾಗೂ ನಕಲಿ ಬ್ಯಾಂಕ್ ಎಟಿಎಂ ಕಾರ್ಡ್‌ಗಳು ಇವೆ' ಎಂಬುದಾಗಿ ಬೆದರಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಡ್ರಗ್ಸ್ ಸಾಗಣೆ ಹಾಗೂ ಅಕ್ರಮ ಚಟುವಟಿಕೆ ಸಂಬಂಧ ನಿಮ್ಮ ವಿರುದ್ಧ ಪ್ರಕರಣ ದಾಖಲಿಸಲು ಸಿದ್ಧತೆ ನಡೆಸುತ್ತಿದ್ದೇವೆ. ಕೆಲ ಕಾನೂನು ಪ್ರಕ್ರಿಯೆ ನಡೆಸಬೇಕು. ನಾವು ಕಳುಹಿಸುವ ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳಿ. ಇಲ್ಲದಿದ್ದರೆ, ನಿಮ್ಮ ಮನೆ ಅಥವಾ ಕಚೇರಿಗೆ ಬಂದು ಬಂಧಿಸಿ ಜೈಲಿಗೆ ಕಳುಹಿಸುತ್ತೇವೆ' ಎಂದು ಆರೋಪಿಗಳು ಬೆದರಿಸಿದ್ದರು. ಹೆದರಿದ್ದ ಎಂಜಿನಿಯರ್, ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದರು.'

'ಆ್ಯಪ್ ಮೂಲಕ ಆರೋಪಿಗಳಿಗೆ ವಿಡಿಯೊ ಕರೆ ಮಾಡಿದ್ದರು. ಪೊಲೀಸ್ ಸಮವಸ್ತ್ರದಲ್ಲಿದ್ದ ಆರೋಪಿ, 'ಪ್ರಕರಣ ದಾಖಲಾದರೆ ನೀವು ಜೈಲಿಗೆ ಹೋಗುವುದು ನಿಶ್ಚಿತ. ಹಣ ನೀಡಿದರೆ ಯಾವುದೇ ಪ್ರಕರಣ ದಾಖಲಿಸುವುದಿಲ್ಲ' ಎಂದಿದ್ದ. ಅದನ್ನು ನಂಬಿದ್ದ ಎಂಜಿನಿಯರ್, ಆರೋಪಿ ನೀಡಿದ್ದ 8 ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 2.42 ಕೋಟಿ ಹಾಕಿದ್ದ. ಆರೋಪಿಗಳು ಪುನಃ ಹಣ ಕೇಳಿದಾಗ, ಅನುಮಾನ ಬಂದು ಸ್ನೇಹಿತರ ಜೊತೆ ಚರ್ಚಿಸಿ ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆದಾಯ ತೆರಿಗೆ ಹೆಸರಿನಲ್ಲಿ ವಂಚನೆ: 'ನಗರದ 70 ವರ್ಷದ ವೃದ್ಧನಿಗೆ ಕರೆ ಮಾಡಿದ್ದ ವಂಚಕ, 'ನಾನು ಆದಾಯ ತೆರಿಗೆ ಅಧಿಕಾರಿ. ಆದಾಯ ತೆರಿಗೆ ವಂಚನೆ ಪ್ರಕರಣದಲ್ಲಿ ನಿಮ್ಮ ಹೆಸರಿದೆ. ವಿಚಾರಣೆ ನಡೆಸಬೇಕು' ಎಂದಿದ್ದ. ಹೆದರಿದ್ದ ವೃದ್ಧ, ವೈಯಕ್ತಿಕ ಮಾಹಿತಿ ಹಂಚಿಕೊಂಡಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅಕ್ರಮ ವಹಿವಾಟು ನಡೆದಿದ್ದು, ನಿಮ್ಮ ಮೇಲೆ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುತ್ತೇವೆ. ಪ್ರಕರಣ ದಾಖಲಿಸಬಾರದೆಂದರೆ, ಕೆಲ ಪ್ರಕ್ರಿಯೆ ನಡೆಸಬೇಕು. ಇದಕ್ಕೆ ನೋಂದಣಿ ಹಾಗೂ ಇತರೆ ಶುಲ್ಕ ಪಾವತಿಸಬೇಕು' ಎಂದು ಆರೋಪಿ ಹೇಳಿದ್ದ. ಅದನ್ನು ನಂಬಿ ವೃದ್ಧ, ₹69ಲಕ್ಷ ನೀಡಿದ್ದರು. ಪುನಃ ಹಣ ಕೇಳಿದಾಗ, ಅನುಮಾನದಿಂದ ದೂರು ನೀಡಿದ್ದಾರೆ'

'ಯಾವ ಕರೆಗೂ ಹೆದರಬೇಡಿ: ದೂರು ನೀಡಿ'

'ಫೆಡೆಕ್ಸ್ ಹಾಗೂ ಇತರೆ ಕೊರಿಯರ್ ಕಂಪನಿ ಹೆಸರಿನಲ್ಲಿ ಬರುವ ಕರೆಗಳಿಗೆ ಯಾರೂ ಹೆದರಬೇಡಿ. ಡ್ರಗ್ಸ್ ಹಾಗೂ ಇತರೆ ಯಾವುದೇ ಪ್ರಕರಣಗಳಲ್ಲಿ ನಿಮ್ಮ ಹೆಸರು ಇರುವುದಾಗಿ ಯಾರಾದರೂ ನಿಮಗೆ ಬ್ಲ್ಯಾಕ್‌ಮೇಲ್ ಮಾಡಿದರೆ ಕೂಡಲೇ ಠಾಣೆಗೆ ದೂರು ನೀಡಿ. ಸಹಾಯವಾಣಿ– 1930ಕ್ಕೆ ಕರೆ ಮಾಡಿ ಮಾಹಿತಿಯನ್ನು ದಾಖಲಿಸಿ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸೈಬರ್ ವಂಚನೆಗಳ ಬಗ್ಗೆ ಜನರು ಜಾಗೃತಿ ವಹಿಸಬೇಕು. ಯಾರೊಂದಿಗೂ ವೈಯಕ್ತಿಕ ಮಾಹಿತಿ ಹಂಚಿಕೊಳ್ಳಬಾರದು. ಅಪರಿಚಿತರು ಕಳುಹಿಸುವ ಲಿಂಕ್ ಮೂಲಕ ಯಾವುದೇ ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡಿಕೊಳ್ಳಬಾರದು' ಎಂದು ತಿಳಿಸಿದರು.

'ಅರೆನಗ್ನ ವಿಡಿಯೊ: ವಕೀಲೆಗೆ ಬೆದರಿಕೆ'

'29 ವರ್ಷದ ವಕೀಲೆಗೆ ಫೆಡೆಕ್ಸ್ ಕೊರಿಯರ್ ಕಂಪನಿ ಪ್ರತಿನಿಧಿ ಸೋಗಿನಲ್ಲಿ ಏಪ್ರಿಲ್ 3ರಂದು ವಂಚಕ ಕರೆ ಮಾಡಿದ್ದ. 'ನಿಮ್ಮ ಹೆಸರಿನಲ್ಲಿ ಹೊರದೇಶಕ್ಕೆ ಕೊರಿಯರ್ ಹೊರಟಿದೆ. ಅದರಲ್ಲಿ ಡ್ರಗ್ಸ್ ಹಾಗೂ ಇತರೆ ನಿಷೇಧಿತ ವಸ್ತುಗಳಿವೆ. ನಿಮ್ಮ ವಿರುದ್ಧ ಪ್ರಕರಣ ದಾಖಲಿಸುವ ಪ್ರಕ್ರಿಯೆ ನಡೆದಿದೆ. ಮುಂಬೈ ಸೈಬರ್ ಕ್ರೈಂ ಪೊಲೀಸರ ಜೊತೆ ಮಾತನಾಡಿ' ಎಂಬುದಾಗಿ ಹೇಳಿ ಬೇರೆಯವರಿಗೆ ಕರೆ ವರ್ಗಾಯಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪೊಲೀಸರ ಸೋಗಿನಲ್ಲಿ ಮಾತನಾಡಿದ್ದ ಮತ್ತೊಬ್ಬ ವಂಚಕ, ಆ್ಯಪ್ ಇನ್‌ಸ್ಟಾಲ್ ಮಾಡಿಸಿದ್ದ. ವಿಡಿಯೊ ಕರೆ ಮಾಡುವಂತೆ ವಕೀಲೆಗೆ ಹೇಳಿದ್ದ. ಹೆದರಿದ್ದ ವಕೀಲೆ, ವಿಡಿಯೊ ಕರೆ ಮಾಡಿದ್ದರು. 'ಪ್ರಕರಣದಲ್ಲಿ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಭಾಗಿಯಾಗಿದ್ದಾರೆ. ಇದರಲ್ಲಿ ನಿಮ್ಮ ಹೆಸರು ಇದೆ. ಇಡೀ ದಿನ ವಿಡಿಯೊ ಕರೆ ಆನ್ ಇರಬೇಕು. ನಿಮ್ಮ ಮೇಲೆ ನಿಗಾ ವಹಿಸಲಾಗಿದೆ' ಎಂದಿದ್ದ. ಅದನ್ನೂ ನಂಬಿದ್ದ ವಕೀಲೆ, ವಿಡಿಯೊ ಆನ್ ಇರಿಸಿದ್ದರು' ಎಂದು ತಿಳಿಸಿವೆ.

'ಮರುದಿನ ಆರೋಪಿ ಪುನಃ ಕರೆ ಮಾಡಿದ್ದ. ಪ್ರಕರಣ ಅಂತ್ಯಗೊಳಿಸಲು ಹಣ ಕೇಳಿದ್ದ. ಆದರೆ, ಹಣ ವರ್ಗಾವಣೆ ಆಗಿರಲಿಲ್ಲ. ಪುನಃ ಕರೆ ಮಾಡಿದ್ದ ಆರೋಪಿ, 'ಮಾದಕ ವಸ್ತು ಸೇವನೆ ಪರೀಕ್ಷೆ ನಡೆಸಬೇಕು. ಬಟ್ಟೆ ಬಿಚ್ಚಿ ಅರೆನಗ್ನವಾಗಿ ನಿಲ್ಲಬೇಕು. ಇಲ್ಲದಿದ್ದರೆ, ನಿಮ್ಮ ಮನೆಗೆ ಬಂದು ಬಂಧಿಸುತ್ತೇವೆ' ಎಂದಿದ್ದ. ಹೆದರಿದ್ದ ವಕೀಲೆ, ಆರೋಪಿ ಹೇಳಿದಂತೆ ಮಾಡಿದ್ದರು. ಅದೇ ವಿಡಿಯೊವನ್ನು ಆರೋಪಿ ಚಿತ್ರೀಕರಿಸಿಕೊಂಡಿದ್ದ.'

'ಅರೆನಗ್ನ ವಿಡಿಯೊವನ್ನು ವಕೀಲೆಗೆ ಕಳುಹಿಸಿದ್ದ ಆರೋಪಿ, ಹಣಕ್ಕಾಗಿ ಬೇಡಿಕೆ ಇರಿಸಿದ್ದ. ಹಣ ನೀಡದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಅಪ್‌ಲೋಡ್ ಮಾಡುವುದಾಗಿ ಬೆದರಿಸಿದ್ದ. ಹೆದರಿದ್ದ ವಕೀಲೆ, ಹಂತ ಹಂತವಾಗಿ ₹ 14 ಲಕ್ಷ ನೀಡಿದ್ದರು. ಪುನಃ ಹಣ ಕೇಳಿದಾಗ ಬೇಸತ್ತು ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪತ್ನಿಗೆ 'ಕಾಲ್ ಗರ್ಲ್' ಪಟ್ಟ: ಪತಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಲ್ ಗರ್ಲ್ ಬೇಕಾದರೆ ಸಂಪರ್ಕಿಸಿ' ಎಂಬುದಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಪತ್ನಿ ಫೋಟೊ ಹಾಗೂ ಮೊಬೈಲ್ ನಂಬರ್ ಪೋಸ್ಟ್ ಮಾಡಿ ಪತಿ ಪರಾರಿಯಾಗಿದ್ದು, ಈ ಬಗ್ಗೆ ನಂದಿನಿ ಲೇಔಟ್ ಠಾಣೆಗೆ ದೂರು ಸಲ್ಲಿಕೆಯಾಗಿದೆ.

'ಪತಿ ಕಿರುಕುಳದಿಂದ ನೊಂದ ಪತ್ನಿ ದೂರು ನೀಡಿದ್ದಾರೆ. ಇದೊಂದು ಕೌಟುಂಬಿಕ ಜಗಳ. ಹೀಗಾಗಿ, ಕಾನೂನು ತಜ್ಞರ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಮಹಿಳೆ ಹಾಗೂ ಆರೋಪಿ, 2019ರಲ್ಲಿ ಮದುವೆಯಾಗಿದ್ದಾರೆ. ಕೌಟುಂಬಿಕ ಜಗಳದಿಂದಾಗಿ ವರ್ಷದ ಹಿಂದೆಯಷ್ಟೇ ಅವರಿಬ್ಬರು ಬೇರೆಯಾಗಿದ್ದು, ಪ್ರತ್ಯೇಕವಾಗಿ ವಾಸವಿದ್ದಾರೆ. ಇದರ ನಡುವೆಯೇ ಅವರಿಬ್ಬರ ನಡುವೆ ಆಗಾಗ ಜಗಳವಾಗುತ್ತಿತ್ತು' ಎಂದು ಮೂಲಗಳು ತಿಳಿಸಿವೆ.

'ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ಖಾತೆ ತೆರೆದಿದ್ದ ಆರೋಪಿ, ಪತ್ನಿ ಫೋಟೊ ಅಪ್‌ಲೋಡ್ ಮಾಡಿದ್ದ. ಜೊತೆಗೆ, ಮೊಬೈಲ್ ನಂಬರ್ ಸಹ ನಮೂದಿಸಿದ್ದ. 'ಯಾರಿಗಾದರೂ ಕಾಲ್‌ಗರ್ಲ್ ಬೇಕಾದರೆ ಸಂಪರ್ಕಿಸಿ' ಎಂಬುದಾಗಿ ಪೋಸ್ಟ್ ಪ್ರಕಟಿಸಿದ್ದ. ಇದಾದ ನಂತರ, ಮಹಿಳೆಗೆ ಕರೆಗಳು ಬರಲಾರಂಭಿಸಿದ್ದರು. ಈ ಬಗ್ಗೆ ವಿಚಾರಿಸಿದಾಗ, ಸಾಮಾಜಿಕ ಮಾಧ್ಯಮದಲ್ಲಿ ಮಹಿಳೆ ಮೊಬೈಲ್ ನಂಬರ್ ಇರುವುದು ಗಮನಕ್ಕೆ ಬಂದಿತ್ತು. ಪತಿ ಕಿರುಕುಳದಿಂದ ಬೇಸತ್ತ ಮಹಿಳೆ, ಠಾಣೆಗೆ ದೂರು ನೀಡಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿರುವ ಪೋಸ್ಟ್ ಅಳಿಸಲು ಸಂಬಂಧಪಟ್ಟ ಕಂಪನಿಗಳಿಗೆ ಸೂಚಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ದೂರು ದಾಖಲಾಗುತ್ತಿದ್ದಂತೆ ಪತಿ ಪರಾರಿಯಾಗಿದ್ದಾನೆ. ಈತ, ಹೊರ ದೇಶಕ್ಕೆ ಹೋಗಿರುವ ಮಾಹಿತಿ ಇದೆ. ಸಂಬಂಧಿಕರು ಹಾಗೂ ಸ್ನೇಹಿತರನ್ನು ವಿಚಾರಣೆ ನಡೆಸಲಾಗುತ್ತಿದೆ' ಎಂದು ತಿಳಿಸಿವೆ.

ಕೆರೆವರಗೆರಹಳ್ಳಿ: ಮರವೇರಿದ ಚಿರತೆ

ತುರುವೇಕೆರೆ: ತಾಲ್ಲೂಕಿನ ಮಾಯಸಂದ್ರ ಹೋಬಳಿಯ ಕೆರೆವರಗೆರೆಹಳ್ಳಿ ಗ್ರಾಮದ ತೋಟವೊಂದರಲ್ಲಿ ಕಾಣಿಸಿದ ಚಿರತೆ, ಜನರ ಕೂಗಾಟಕ್ಕೆ ಬೆದರಿ ತೆಂಗಿನ ಮರ ಏರಿದ ಘಟನೆ ಗುರುವಾರ ನಡೆದಿದೆ.

ಗ್ರಾಮದ ಹರೀಶ್, ತೋಟದಲ್ಲಿಹಸು ಮೇಯಿಸುತ್ತಿದ್ದವೇಳೆ ತೆಂಗಿನ ಮರದಿಂದ ಕೆಳಗೆ ಇಳಿಯುತ್ತಿದ್ದ ಚಿರತೆಯನ್ನು ಕಂಡು ಭಯಗೊಂಡು ಕೂಗಾಡಿದ್ದಾರೆ. ಅಕ್ಕಪಕ್ಕದ ತೋಟದವರು ಸ್ಥಳಕ್ಕೆ ಧಾವಿಸಿ ಚಿರತೆ ಓಡಿಸಲು ಗದ್ದಲ ಮಾಡಿದ್ದಾರೆ. ಚಿರತೆ ಆತಂಕಗೊಂಡು ತೆಂಗಿನ ಮರ ಏರಿದೆ. ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿ ಜನರಿಗೆ ಗದ್ದಲ ಮಾಡದಂತೆ ತಿಳಿಸಿದರೂ ಸ್ಥಳದಲ್ಲೇ ಬೀಡು ಬಿಟ್ಟಿದ್ದಾರೆ.


ಮರವೇರಿರುವ ಚಿರತೆ

ವೈವಾಹಿಕ ಜಾಲತಾಣ, ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ಖಾತೆ

10 ಮಹಿಳೆಯರಿಗೆ ವಂಚನೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈವಾಹಿಕ ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ಖಾತೆ ತೆರೆದು ಮಹಿಳೆಯರನ್ನು ಸಂಪರ್ಕಿಸಿ ಮದುವೆ ಹೆಸರಿನಲ್ಲಿ ವಂಚಿಸುತ್ತಿದ್ದ ಆರೋಪಿ ದೀಪಕ್ ಎಂಬುವವರನ್ನು ಜೆ.ಪಿ. ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.


ದೀಪಕ್

'ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಬಳಿಯ ಹುಳಿಯಾರಿನ ದೀಪಕ್ (30) ಬಂಧಿತ. ಜೆ.ಪಿ.ನಗರ ಠಾಣೆ ವ್ಯಾಪ್ತಿಯಲ್ಲಿರುವ ಮಹಿಳೆಯೊಬ್ಬರು ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ. ಈತನಿಂದ ₹90 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಇದುವರೆಗೂ ರಾಜ್ಯದ 10 ಮಹಿಳೆಯರಿಗೆ ವಂಚಿಸಿರುವ ಮಾಹಿತಿ ಲಭ್ಯವಾಗಿದೆ. ಸದ್ಯ ಒಬ್ಬರಷ್ಟೇ ದೂರು ನೀಡಿದ್ದಾರೆ. ಉಳಿದವರಿಂದ ಹೇಳಿಕೆ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಆರೋಪಿಯಿಂದ ಯಾರಿಗಾದರೂ ವಂಚನೆ ಆಗಿದ್ದರೆ ಠಾಣೆಗೆ ಮಾಹಿತಿ ನೀಡಬಹುದು' ಎಂದು ಕೋರಿದರು.

ನಕಲಿ ಹೆಸರಿನಲ್ಲಿ ಖಾತೆ: 'ಪಿಯುಸಿವರೆಗೂ ಓದಿದ್ದ ಆರೋಪಿ ದೀಪಕ್, ಮಹಿಳೆಯರನ್ನು ವಂಚಿಸಿ ಹಣ ಗಳಿಸುವುದನ್ನೇ ವೃತ್ತಿ ಮಾಡಿಕೊಂಡಿದ್ದ. ನಕಲಿ ಹೆಸರಿನಲ್ಲಿ ವೈವಾಹಿಕ ಜಾಲತಾಣ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಖಾತೆ ತೆರೆಯುತ್ತಿದ್ದ. ತಾನೊಬ್ಬ ಬ್ಯಾಂಕ್ ವ್ಯವಸ್ಥಾಪಕ, ಎಂಜಿನಿಯರ್ ಹಾಗೂ ವೈದ್ಯ ಎಂಬುದಾಗಿ ವೈಯಕ್ತಿಕ ವಿವರದಲ್ಲಿ ಬರೆದುಕೊಳ್ಳುತ್ತಿದ್ದ' ಎಂದು ಪೊಲೀಸರು ಹೇಳಿದರು.

'ವರನನ್ನು ಹುಡುಕುತ್ತಿದ್ದ ಮಹಿಳೆಯರು ಹಾಗೂ ವಿಧವೆಯರಿಗೆ ಆರೋಪಿಯೇ ರಿಕ್ವೆಸ್ಟ್ ಕಳುಹಿಸುತ್ತಿದ್ದ. ಅದನ್ನು ಸ್ವೀಕರಿಸುತ್ತಿದ್ದ ಮಹಿಳೆಯರ ಜೊತೆ ಚಾಟಿಂಗ್ ಮಾಡಲಾರಂಭಿಸುತ್ತಿದ್ದ. ಮದುವೆಯಾಗುವುದಾಗಿ ಹೇಳಿ ನಂಬಿಸುತ್ತಿದ್ದ' ಎಂದು ತಿಳಿಸಿದರು.

ಮಹಿಳೆಯರ ಹೆಸರಿನಲ್ಲಿ ಸಿಮ್ ಕಾರ್ಡ್: 'ಆರ್ಥಿಕ ತೊಂದರೆ ಇರುವುದಾಗಿ ಹೇಳಿ ಮಹಿಳೆಯರಿಂದ ಆನ್‌ಲೈನ್ ಮೂಲಕ ಆರೋಪಿ ಹಣ ಪಡೆದುಕೊಳ್ಳುತ್ತಿದ್ದ. ಆತನ ಮಾತು ನಂಬಿ ಹಲವು ಮಹಿಳೆಯರು, ₹30 ಸಾವಿರದಿಂದ ₹1 ಲಕ್ಷದವರೆಗೂ ಹಣ ಕೊಟ್ಟಿದ್ದರು' ಎಂದು ಹೇಳಿದರು.

'ನನ್ನ ಬಳಿ ಕಚೇರಿ ಸಿಮ್ ಕಾರ್ಡ್ ಇದ್ದು, ವೈಯಕ್ತಿಕವಾಗಿ ಮಾತನಾಡಲು ಸಾಧ್ಯವಿಲ್ಲ. ಹೊಸ ಸಿಮ್ ಕಾರ್ಡ್ ಖರೀದಿಸಿ, ನಮ್ಮ ಕಚೇರಿ ಸಹಾಯಕನ ಕೈಗೆ ಕೊಟ್ಟು ಕಳುಹಿಸಿ' ಎಂದು ಆರೋಪಿ ಮಹಿಳೆಯರಿಗೆ ಹೇಳುತ್ತಿದ್ದ. ಆಗಲೂ ಮಹಿಳೆಯರು, ತಮ್ಮ ಹೆಸರಲ್ಲಿ ಸಿಮ್ ಕಾರ್ಡ್ ಖರೀದಿಸುತ್ತಿದ್ದರು. ಕಚೇರಿ ಸಹಾಯಕನ ಸೋಗಿನಲ್ಲಿ ಮಹಿಳೆಯರ ಬಳಿ ಹೋಗುತ್ತಿದ್ದ ಆರೋಪಿ, ಸಿಮ್ ಪಡೆದು ನಾಪತ್ತೆಯಾಗುತ್ತಿದ್ದ. ಅದೇ ಸಿಮ್ ಕಾರ್ಡನ್ನು ಬೇರೆ ಮಹಿಳೆ ಯನ್ನು ವಂಚಿಸಲು ಬಳಸುತ್ತಿದ್ದ' ಎಂದರು.

ಎರಡು ದಿನದಲ್ಲಿ 10 ಸಿಮ್ ಬಳಕೆ

'ಮಹಿಳೆಯರ ಹೆಸರಿನ ಸಿಮ್‌ಕಾರ್ಡ್ ಬಳಸಿಯೇ ಆರೋಪಿ ಕೃತ್ಯ ಎಸಗುತ್ತಿದ್ದ. ಹೀಗಾಗಿ, ಆರಂಭದಲ್ಲಿ ಆರೋಪಿ ಬಗ್ಗೆ ಸುಳಿವು ಪತ್ತೆಯಾಗಲಿಲ್ಲ. ಈತನ ಬಂಧನಕ್ಕೆ ಎರಡು ದಿನ ಕಾರ್ಯಾಚರಣೆ ನಡೆಸಲಾಯಿತು. ಈ ಸಂದರ್ಭದಲ್ಲೂ ಆರೋಪಿ, 10 ಸಿಮ್ ಕಾರ್ಡ್‌ಗಳನ್ನು ಬದಲಾಯಿಸಿದ್ದ. ತಾಂತ್ರಿಕ ಪುರಾವೆಗಳಿಂದ ಆರೋಪಿ ಸಿಕ್ಕಿಬಿದ್ದ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಭಿಕ್ಷಾಟನೆ: 45 ಮಕ್ಕಳ ರಕ್ಷಣೆ, 40 ಮಂದಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಿಕ್ಷಾಟನೆ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, 45 ಮಕ್ಕಳನ್ನು ರಕ್ಷಿಸಿದ್ದಾರೆ. ಮಕ್ಕಳನ್ನು ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿದ್ದ ಆರೋಪದಡಿ 40 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

'ನಗರದ ಪ್ರಮುಖ ವೃತ್ತಗಳು, ರಸ್ತೆಗಳು ಹಾಗೂ ರಂಜಾನ್ ನಿಮಿತ್ತ ಕೆಲ ಮಸೀದಿಗಳ ಮುಂಭಾಗದಲ್ಲಿ ಹಲವರು ಭಿಕ್ಷಾಟನೆ ಮಾಡುತ್ತಿದ್ದರು. ಈ ಬಗ್ಗೆ ಮಾಹಿತಿ ಸಂಗ್ರಹಿಸಿ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು.

'ಮಕ್ಕಳನ್ನು ಬಳಸಿಕೊಂಡು ಹಲವರು ಭಿಕ್ಷೆ ಬೇಡುತ್ತಿದ್ದರು. ಅವರನ್ನು ವಿಚಾರಣೆ ನಡೆಸಿದಾಗ, ಸಮರ್ಪಕ ಉತ್ತರ ನೀಡಲಿಲ್ಲ. ಭಿಕ್ಷಾಟನೆಯಲ್ಲಿ ತೊಡಗಿಸಿದ್ದ ಮಕ್ಕಳನ್ನು ರಕ್ಷಿಸಿ, ಮಕ್ಕಳ ಕಲ್ಯಾಣ ಸಮಿತಿ ಅಧಿಕಾರಿಗಳ ಸುಪರ್ದಿಗೆ ಒಪ್ಪಿಸಲಾಗಿದೆ' ಎಂದರು.

'ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಹಾಗೂ ರಾಜಸ್ಥಾನ, ಉತ್ತರ ಪ್ರದೇಶದವರಾದ 40 ಮಂದಿಯನ್ನು ವಿಚಾರಣೆ ನಡೆಸಲಾಗುತ್ತಿದೆ. ಇವರು ಮಕ್ಕಳ ಪೋಷಕರಾ? ಅಥವಾ ಬೇರೆ ಏನಾದರೂ ಸಂಬಂಧ ಇದೆಯೆ? ಎಂದು ಪರಿಶೀಲಿಸಲಾಗುತ್ತಿದೆ. ಮಕ್ಕಳ ಮಾರಾಟದ ಶಂಕೆಯೂ ಇದ್ದು, ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ತಿಳಿಸಿದರು.


ಕಸದ ರಾಶಿ ನಗರದ ರಾಮಸಂದ್ರ ಮುಖ್ಯರಸ್ತೆಯ ಚಿಕ್ಕಬಸ್ತಿಯಲ್ಲಿ ಕಸದ ರಾಶಿಗೆ ಬೆಂಕಿ ಹಾಕಿರುವ ದೃಶ್ಯ ಕಂಡು ಬಂತು – ಪ್ರಜಾವಾಣಿ ಚಿತ್ರ

ಯುಪಿಐ ಕ್ಯೂಆರ್ ಕೋಡ್ ಅಪ್‌ಡೇಟ್ ಹೆಸರಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್ (ಯುಪಿಐ) ಕ್ಯೂಆರ್ ಕೋಡ್ ಅಪ್‌ಡೇಟ್ ಹೆಸರಿನಲ್ಲಿ ನಗರದ ಹೋಟೆಲ್‌ವೊಂದರ ಮಾಲೀಕನಿಗೆ ವಂಚಿಸಲಾಗಿದ್ದು, ಈ ಬಗ್ಗೆ ಚಂದ್ರಾಲೇಔಟ್ ಠಾಣೆಯಲ್ಲಿ ದೂರು ದಾಖಲಾಗಿದೆ.

'ಕಲ್ಯಾಣನಗರದ ಹೋಟೆಲ್‌ವೊಂದರ ಮಾಲೀಕ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ತನ್ನ ಹೋಟೆಲ್ ಬಿಲ್ ಪಾವತಿಗೆ ಯುಪಿಐ ಕ್ಯೂಆರ್ ಕೋಡ್ ಬಳಸುತ್ತಿದ್ದಾರೆ. ಏಪ್ರಿಲ್ 4ರಂದು ಹೋಟೆಲ್‌ಗೆ ಬಂದಿದ್ದ ಆರೋಪಿ, ಕಂಪನಿಯೊಂದರ ಪ್ರತಿನಿಧಿ ಎಂಬುದಾಗಿ ಹೇಳಿಕೊಂಡಿದ್ದ. ಯುಪಿಐ ಕ್ಯೂಆರ್ ಕೋಡ್ ಅವಧಿ ಮುಗಿದಿದ್ದು, ಅಪ್‌ಡೇಟ್ ಮಾಡಬೇಕೆಂದು ತಿಳಿಸಿದ್ದ. ಇದಕ್ಕಾಗಿ ಮೊಬೈಲ್ ನೀಡುವಂತೆ ಒತ್ತಾಯಿಸಿದ್ದ.'

'ಆರೋಪಿ ಮಾತು ನಂಬಿದ್ದ ದೂರುದಾರ, ಮೊಬೈಲ್ ಕೊಟ್ಟಿದ್ದ. ಬಳಿಕ, ಆರೋಪಿ ಯುಪಿಐ ಮೂಲಕ ತನ್ನ ಖಾತೆಗೆ ₹1 ವರ್ಗಾಯಿಸಿಕೊಂಡಿದ್ದ. ಇದಾದ ನಂತರ, ಕ್ಯೂಆರ್ ಕೋಡ್ ಅಪ್‌ಡೇಟ್ ಆಗಿರುವುದಾಗಿ ಹೇಳಿ ಮೊಬೈಲ್ ವಾಪಸು ಕೊಟ್ಟು ಸ್ಥಳದಿಂದ ಹೊರಟು ಹೋಗಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೆಲ ನಿಮಿಷಗಳ ನಂತರ ದೂರುದಾರರ ಎರಡು ಬ್ಯಾಂಕ್ ಖಾತೆಗಳಲ್ಲಿದ್ದ ₹48 ಸಾವಿರ ಕಡಿತವಾಗಿದೆ. ಆರೋಪಿಯೇ ಯುಪಿಐ ಕ್ಯೂಆರ್ ಕೋಡ್ ಅಪ್‌ಡೇಟ್ ಹೆಸರಿನಲ್ಲಿ ವಂಚನೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆತ ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಹೇಳಿವೆ.

ತಮಿಳುನಾಡಿನಲ್ಲಿ ಅಪಘಾತ: ರಾಜ್ಯದ ಇಬ್ಬರು ಪೊಲೀಸರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ತಿರುವಣ್ಣಾಮಲೈ–ದಿಂಡಿವಣ್ಣಂ ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ಸಂಜೆ ಅಪಘಾತ ಸಂಭವಿಸಿದ್ದು, ಕರ್ನಾಟಕ ಇಬ್ಬರು ಪೊಲೀಸರು ಸೇರಿ ಮೂವರು ಮೃತಪಟ್ಟಿದ್ದಾರೆ.

'ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) 3ನೇ ಬೆಟಾಲಿಯನ್ ಸಹಾಯಕ ಕಮಾಂಡೆಂಟ್ ಟಿ. ಪ್ರಭಾಕರ್, ವಿಜಯಪುರದ ಐಆರ್‌ಬಿ (ಇಂಡಿಯನ್ ರಿಸರ್ವ ಬೆಟಾಲಿಯನ್) ಕಾನ್‌ಸ್ಟೆಬಲ್ ವಿಠ್ಠಲ್ ಗಡಾದರ ಹಾಗೂ ತಮಿಳುನಾಡಿನ ಮೀಸಲು ಪೊಲೀಸ್ ಪಡೆಯ ಕಾನ್‌ಸ್ಟೆಬಲ್ ದಿನೇಶ್ ಮೃತರು' ಎಂದು ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ವಿಜಯಪುರದ ಐಆರ್‌ಬಿ ಉಪ ಕಮಾಂಡೆಂಟ್ ಯು.ಎನ್. ಹೇಮಂತ್ ಕುಮಾರ್ ಹಾಗೂ ತಮಿಳುನಾಡು ಕಾನ್‌ಸ್ಟೆಬಲ್ ಜಯಕುಮಾರ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದರು.


ವಿಠ್ಠಲ್


ಟಿ.ಪ್ರಭಾಕರ್

ಲೋಕಸಭಾ ಚುನಾವಣೆ ಕರ್ತವ್ಯ: 'ಕೆಎಸ್‌ಆರ್‌ಪಿ ತುಕಡಿಯನ್ನು ಲೋಕಸಭಾ ಚುನಾವಣೆ ಭದ್ರತೆಗೆಂದು ತಮಿಳುನಾಡಿಗೆ ಇತ್ತೀಚೆಗೆ ಕಳುಹಿಸಲಾಗಿತ್ತು. ಹೇಮಂತ್‌ಕುಮಾರ್ ಅವರು ತುಕಡಿ ನೇತೃತ್ವ ವಹಿಸಿದ್ದರು. ಟಿ. ಪ್ರಭಾಕರ್, ವಿಠ್ಠಲ್ ಸೇರಿದಂತೆ ಹಲವರು ತಂಡದಲ್ಲಿದ್ದರು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಕೆಎಸ್‌ಆರ್‌ಪಿ ಹಾಗೂ ತಮಿಳುನಾಡಿನ ಪೊಲೀಸರು, ಜೀಪಿನಲ್ಲಿ (ಟಿಎನ್ 19 ಜಿ 0167) ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ಸಂಜೆ ಹೊರಟಿದ್ದರು. ಇದೇ ಸಂದರ್ಭದಲ್ಲಿ ತಮಿಳುನಾಡು ಸಾರಿಗೆ ನಿಗಮದ ಬಸ್ (ಟಿಎನ್ 25 ಎನ್ 0401), ಪೊಲೀಸರ ಜೀಪಿಗೆ ಡಿಕ್ಕಿ ಹೊಡೆದಿತ್ತು.'

'ಅಪಘಾತದಲ್ಲಿ ತೀವ್ರ ಗಾಯಗೊಂಡು ಪ್ರಭಾಕರ್, ವಿಠ್ಠಲ್, ದಿನೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಉಳಿದವರಿಗೆ ತೀವ್ರ ಗಾಯಗಳಾಗಿವೆ' ಎಂದರು.

'ಅಪಘಾತದ ಮಾಹಿತಿ ತಿಳಿಯುತ್ತಿದ್ದಂತೆ ಹಿರಿಯ ಅಧಿಕಾರಿಯೊಬ್ಬರನ್ನು ತಮಿಳುನಾಡಿಗೆ ಕಳುಹಿಸಲಾಗಿದೆ. ಪೊಲೀಸರ ಮೃತದೇಹವನ್ನು ರಾಜ್ಯಕ್ಕೆ ತರಲು ವ್ಯವಸ್ಥೆ ಮಾಡಲಾಗಿದೆ' ಎಂದು ಅಧಿಕಾರಿ ಹೇಳಿದರು.

ಹರಿಯಾಣ: ಬಸ್ ಅಪಘಾತ– 6 ವಿದ್ಯಾರ್ಥಿಗಳ ಸಾವು

ಚಂಡೀಗಡ(ಪಿಟಿಐ): ಹರಿಯಾಣದ ಮಹೇಂದ್ರಗಢದಲ್ಲಿ ಗುರುವಾರ ಬೆಳಿಗ್ಗೆ ಮರಕ್ಕೆ ಶಾಲಾವಾಹನ ಡಿಕ್ಕಿ ಹೊಡೆದ ಪರಿಣಾಮ ಆರು ಮಕ್ಕಳು ಮೃತಪಟ್ಟು, 20 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ.

ಅಪಘಾತದಲ್ಲಿ 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಶಾಲೆಯ ಪ್ರಾಂಶುಪಾಲ ಮತ್ತು ಬಸ್ ಚಾಲಕ ಸೇರಿದಂತೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.


ಚಾಲಕ ಮದ್ಯ ಪಾನ ಮಾಡಿ, ಬಸ್ ಚಲಾಯಿಸುತ್ತಿದ್ದ ಎಂದು ಹೇಳಲಾಗಿದೆ.

ಈದ್ ಉಲ್ ಫಿತ್ರ ರಜೆ ಇದ್ದರೂ ಏಕೆ ಶಾಲೆ ನಡೆಸಲಾಗುತ್ತಿತ್ತು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ರಾಜ್ಯ ಶಿಕ್ಷಣ ಸಚಿವೆ ಸೀಮಾ ತ್ರಿಖಾ ಅವರು ಮಾಹಿತಿ ನೀಡಿದ್ದಾರೆ.

ಅಪಘಾತ: ಶಾಸಕ ಕುಲಕರ್ಣಿ ಪುತ್ರನಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ಸಂಚಾರ ಠಾಣೆ ವ್ಯಾಪ್ತಿಯಲ್ಲಿರುವ ಹೊರವರ್ತುಲ ರಸ್ತೆಯ ಬಳಿ ಗುರುವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರ ಮಗ ಹೇಮಂತ್ (19) ಗಾಯಗೊಂಡಿದ್ದಾರೆ.


ಹೇಮಂತ ಕುಲಕರ್ಣಿ

'ಹೇಮಂತ್ ಅವರು ಬೆಳಿಗ್ಗೆ 5 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಹೊರಟಿದ್ದರು. ಮಾರ್ಗಮಧ್ಯೆ ನಿಯಂತ್ರಣ ತಪ್ಪಿ ಬೈಕ್ ಉರುಳಿ ಬಿದ್ದಿದೆ. ಇದರಿಂದಾಗಿ, ಬೈಕ್ ಸಮೇತ ರಸ್ತೆಯಲ್ಲಿ ಉರುಳಿ ಬಿದ್ದು ಹೇಮಂತ್ ಗಾಯಗೊಂಡಿದ್ದಾರೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ. ಎನ್. ಅನುಚೇತ್ 'ಪ್ರಜಾವಾಣಿ'ಗೆ ತಿಳಿಸಿದರು.

'ಹೇಮಂತ್ ಅವರ ಕಾಲಿಗೆ ಪೆಟ್ಟಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜೀವಕ್ಕೆ ಅಪಾಯವಿಲ್ಲವೆಂದು ವೈದ್ಯರು ಹೇಳಿದ್ದಾರೆ. ಚಿಕಿತ್ಸೆ ಮುಂದುವರಿದಿದೆ' ಎಂದು ಹೇಳಿದರು.

ದೂರು ನೀಡಿದರೆ ಪ್ರಕರಣ ದಾಖಲು: 'ಇದೊಂದು ವೈಯಕ್ತಿಕ ಅಪಘಾತ. ಪ್ರಾಥಮಿಕ ಮಾಹಿತಿ ಸಂಗ್ರಹಿಸಲಾಗಿದೆ. ಸದ್ಯಕ್ಕೆ ಯಾವುದೇ ದೂರು ದಾಖಲಿಸಿಕೊಂಡಿಲ್ಲ' ಎಂದು ಬೆಳ್ಳಂದೂರು ಸಂಚಾರ ಠಾಣೆ ಪೊಲೀಸರು ತಿಳಿಸಿದರು.

ವಿದ್ಯುತ್ ಸ್ಪರ್ಶದಿಂದ 4 ರಾಜಹಂಸ ಸಾವು

ಪ್ರಜಾವಾಣಿ ವಾರ್ತೆ

ಹಗರಿಬೊಮ್ಮನಹಳ್ಳಿ (ಬಳ್ಳಾರಿ ಜಿಲ್ಲೆ): ತಾಲ್ಲೂಕಿನ ಬಾಚಿಗೊಂಡನಹಳ್ಳಿ ಬಳಿ ತುಂಗಭದ್ರಾ ಹಿನ್ನೀರು ಪ್ರದೇಶದಲ್ಲಿ ಹಾದು ಹೋದ ಕೂಡಗಿ ಉಷ್ಣ ವಿದ್ಯುತ್ ಸ್ಥಾವರದ ವಿದ್ಯುತ್ ತಂತಿಗಳ ಸ್ಪರ್ಶದಿಂದ ನಾಲ್ಕು ರಾಜಹಂಸ ಪಕ್ಷಿಗಳು (ಗ್ರೇಟ್ ಫ್ಲೆಮಿಂಗೊ) ಗುರುವಾರ ಸಾವನ್ನಪ್ಪಿವೆ.

ಪ್ರತಿ ವರ್ಷ ಹಕ್ಕಿಗಳ ವಲಸೆ ಸಂದರ್ಭದಲ್ಲಿ ಈ ಅವಘಡ ಸಂಭವಿ ಸುತ್ತದೆ. ಬಾನಾಡಿಗಳು ಆಹಾರ ಅರಸಿ ತುಂಗಭದ್ರಾ ಹಿನ್ನೀರು ಪ್ರದೇಶಕ್ಕೆ ತಂಡೋಪತಂಡವಾಗಿ ಬರುತ್ತಿವೆ. ಬರುವ ಧಾವಂತದಲ್ಲಿ ಹೈಟೆನ್ಷನ್ ಲೈನ್ ಮೂಲಕ ಹಾದು ಹೋಗುವ ಹಕ್ಕಿಗಳು ವಿದ್ಯುತ್ ಆಘಾತದಿಂದಾಗಿ ಪ್ರಾಣಬಿಡುತ್ತಿವೆ.


ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬಾಚಿಗೊಂಡನಹಳ್ಳಿ ವಿದ್ಯುತ್ ತಂತಿಗಳಿಗೆ ತಗುಲಿ ರಾಜಹಂಸ(ಗ್ರೇಟ್ ಫ್ಲೆಮಿಂಗೊ) ಪಕ್ಷಿಗಳು ಸಾವನ್ನಪ್ಪಿರುವುದು

'ಎನ್‌ಸಿಇಆರ್‌ಟಿ ಪಠ್ಯಕ್ರಮ ಮಾತ್ರ ಪಾಲಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) ಸೂಚಿಸಿರುವ ಪಠ್ಯಕ್ರಮವನ್ನು ಮಾತ್ರ ಅನುಸರಿಸುವಂತೆ ದೇಶದಾದ್ಯಂತ ಶಾಲೆಗಳಿಗೆ ಸೂಚಿಸಿದ ವರ್ಷದ ಬಳಿಕ, ಇದರ ಅನುಷ್ಠಾನ ಸರಿಯಾಗಿ ಆಗುತ್ತಿದೆ ಎನ್ನುವುದನ್ನು ಖಚಿತಪಡಿಸುವಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು (ಎನ್‌ಸಿಪಿಸಿಆರ್) ಎಲ್ಲ ಶಾಲೆಗಳಿಗೆ ಮತ್ತೊಮ್ಮೆ ಸೂಚಿಸಿದೆ.

ಇದನ್ನು ಅನುಷ್ಠಾನಗೊಳಿಸುವಲ್ಲಿ ಶಾಲೆಗಳು ವಿಫಲವಾದರೆ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) 2009ರ ಉಲ್ಲಂಘನೆಯಾಗಲಿದೆ ಎಂದೂ ಅದು ಎಚ್ಚರಿಸಿದೆ.

ಕಳೆದ ವರ್ಷದ ಏಪ್ರಿಲ್ ನಲ್ಲಿಯೂ ಎನ್‌ಸಿಪಿಸಿಆರ್, ಮಂಡಳಿ ಶಿಫಾರಸು ಮಾಡಿದ ಪಠ್ಯಕ್ರಮದಿಂದ ಮಾತ್ರ ಕಲಿಸಲು ಶಾಲೆಗಳಿಗೆ ಸೂಚಿಸುವಂತೆ ಇದೇ ರೀತಿಯ ಸಲಹೆ ನೀಡಿತ್ತು. ಖಾಸಗಿ ಪ್ರಕಾಶಕರು ಪ್ರಕಟಿಸಿದ ಪುಸ್ತಕಗಳನ್ನು ಬಳಸುವಂತೆ ಕೆಲ ಶಾಲೆಗಳು ಪದೇಪದೇ ಶಿಫಾರಸು ಮಾಡುತ್ತಿರುವುದು ಗಮನಕ್ಕೆ ಬಂದಿದೆ ಎಂದ ಎನ್‌ಸಿಪಿ ಸಿಆರ್, ಈ ಸಂಬಂಧ ಸೂಚನೆಯ ಪತ್ರವನ್ನು ಇದೇ 9ರಂದು ಎಲ್ಲ ಶಾಲೆಗಳಿಗೆ ರವಾನಿಸಿದೆ.

ಸಿನಿಮಾ ಪುರವಣಿ



ಶಿವರಾಜ್ ಕೆ.ಆರ್. ಪೇಟೆ

‘ಬೆಳಿತಾರೆ, ತುಳಿತಾರೆ ಎನ್ನುವುದೆಲ್ಲ ಸುಳ್ಳು’

ಹಾಸ್ಯ ನಟನಾಗಿ ಗುರುತಿಸಿಕೊಂಡು ಈಗ ಗಂಭೀರವಾದ ಪಾತ್ರಗಳಿಗೂ ಜೀವ ತುಂಬುತ್ತಿರುವ ಕಲಾವಿದ ಶಿವರಾಜ್ ಕೆ.ಆರ್. ಪೇಟೆ ಈತನಕ 50ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಬಣ್ಣ ಹಚ್ಚಿದ್ದಾರೆ. ಪೂರ್ಣ ಪ್ರಮಾಣದ ನಾಯಕನಾಗಿ ದಾಪುಗಾಲಿಡಲು ಸಜ್ಜಾಗಿರುವ ಅವರು ತಮ್ಮ ಸಿನಿಪಯಣ ಕುರಿತು ಮನಸ್ಸು ಬಿಚ್ಚಿ ಮಾತನಾಡಿದ್ದಾರೆ.

ವಿನಾಯಕ ಕೆ.ಎಸ್.

- **ಕಳೆದ ವಾರ ತೆರೆಕಂಡ ‘ಮ್ಯಾಟ್ನಿ’ ಸಿನಿಮಾದಲ್ಲಿ ನವೀನನ ಪಾತ್ರದಲ್ಲಿ ನಗಿಸಿದ್ದೀರಿ. ಹಾಸ್ಯ, ಪೋಷಕ ನಟನಾಗಿ ಎಷ್ಟು ಸಿನಿಮಾಗಳಾಗಿವೆ?**

ನನ್ನ ಸಿನಿಮಾ ಪಯಣ ಪ್ರಾರಂಭವಾಗಿದ್ದೆ ನೀನಾಸಂ ಸತೀಶ್ ಅವರ ‘ಅಯೋಗ್ಯ’ ಸಿನಿಮಾದಿಂದ. ಅವರ ಜೊತೆಗೆ ಎರಡನೇ ಸಿನಿಮಾವಿದು. ‘ರಾಬರ್ಟ್’ ಸಿನಿಮಾದಲ್ಲಿ ಗುರುತಿಸಿಕೊಳ್ಳುವಂತಹ ಪಾತ್ರ ಲಭಿಸಿತು. ‘ನಾನು ಮತ್ತು ಗುಂಡ’ ಚಿತ್ರದ ಪಾತ್ರವನ್ನು ಜನ ಗುರುತಿಸುತ್ತಾರೆ. ಇದರಲ್ಲಿ ಒಂದು ರೀತಿ ನಾಯಕನ ಪಾತ್ರ. ಇಲ್ಲಿತನಕ 50ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಬಣ್ಣ ಹಚ್ಚಿರುವೆ.

- **ಹಾಸ್ಯನಟನಾಗಿ ಗುರುತಿಸಿಕೊಂಡ ನಂತರ ನಾಯಕನಾಗಿ ಬೆಳೆಯುವುದು ಎಷ್ಟು ಸವಾಲು?**

ಮೊದಲು ನಾವು ನಟರಾಗಬೇಕು. ನಟ ಎಂಬ ಪದದಲ್ಲಿಯೇ ನವರಸಗಳಿವೆ. ಅವೆಲ್ಲವೂ ಗೊತ್ತಿರಬೇಕು. ಒಳ್ಳೆ ನಟ ಎನ್ನಿಸಿಕೊಂಡರೆ ಯಾವುದೇ ರೀತಿಯ ಪಾತ್ರದಲ್ಲಿ ‘ಸೈ’ ಎನ್ನಿಸಿಕೊಳ್ಳಬಹುದು. ಸಾಧು ಕೋಕಿಲ, ರಂಗಾಯಣ ರಘು ಅವರಂಥವರು ಹಾಸ್ಯನಟರಾಗಿದ್ದುಕೊಂಡೇ ನಾಯಕರಾದವರು. ಸಿನಿಮಾ ಹೀರೊ ಎಂಬುದಕ್ಕಿಂತ ಕಥೆಗೆ ಹೀರೊ ಆಗುತ್ತಾರೆ. ಯಾವುದೇ ಸಿನಿಮಾವಿರಲಿ, ಮಾಡಿದ ಸಣ್ಣ ಪಾತ್ರವೂ ಕಾಡಬೇಕು. ಚಿತ್ರಮಂದಿರದಿಂದ ಹೊರಗೆ ಬಂದ ನಂತರವೂ ನೆನಪಿನಲ್ಲಿ ಉಳಿಯಬೇಕು. ಎಷ್ಟೋ ಸಲ ಯಾವುದೋ ಒಂದು ಸನ್ನಿವೇಶವನ್ನು ಹಾಸ್ಯವಾಗಿ ಏಕೆ ನಟಿಸಬೇಕು ಎಂದು ಚಿತ್ರತಂಡದೊಂದಿಗೆ ಚರ್ಚಿಸಿ ಬದಲಿಸಿಕೊಂಡಿದ್ದೂ ಇದೆ.

- **ನಿಮ್ಮ ಈತನಕದ ಸಿನಿಪಯಣ ಹೇಗಿತ್ತು?**

ನನ್ನ ತಂದೆ ಡ್ರಾಮಾ ರಾಮೇಗೌಡರು ನನ್ನ ಮೊದಲ ಗುರು. ಅವರು ಹವ್ಯಾಸಿ ರಂಗಭೂಮಿ ಕಲಾವಿದ. ಹಾಸನದ ಗೊರೂರಿನಲ್ಲಿ ನಾಟಕದ ತಂಡ ಕಟ್ಟಿದ್ದರು. ಅಲ್ಲಿ ಮೊದಲು ಬಣ್ಣ ಹಚ್ಚಿದೆ. ಬೆಂಗಳೂರಿಗೆ ಬಂದ ನಂತರವೂ ರಂಗಭೂಮಿಯಲ್ಲಿ ಸಕ್ರಿಯನಾಗಿದ್ದೆ. ನನ್ನ ಬದುಕು ಬದಲಿಸಿದ್ದು ‘ಕಾಮಿಡಿ ಕಿಲಾಡಿ’ಗಳು ರಿಯಾಲಿಟಿ ಶೋ. ಅಲ್ಲಿ ಗುರುತಿಸಿಕೊಂಡ ನಂತರವೇ ಇಷ್ಟೆಲ್ಲ ಸಿನಿಮಾಗಳನ್ನು ಮಾಡಲು ಸಾಧ್ಯವಾಗಿದ್ದು.

- **ನಿಮ್ಮ ಮುಂದಿನ ಸಿನಿಮಾಗಳು ಯಾವುವು?**

ಪ್ರಜ್ವಲ್ ದೇವರಾಜ್ ಅವರ ‘ಚೀತಾ’ದಲ್ಲಿ ಒಳ್ಳೆ ಪಾತ್ರದಲ್ಲಿ ಕಾಣಿಸಿಕೊಂಡಿರುವೆ. ಅವರದ್ದೇ ಮತ್ತೊಂದು ಚಿತ್ರ ‘ಗಣ’ದಲ್ಲಿಯೂ ಉತ್ತಮ ಪಾತ್ರ ನಿರ್ವಹಿಸಿರುವೆ. ‘ಊರಿನ ಗ್ರಾಮಸ್ಥರಲ್ಲಿ ವಿನಂತಿ’ ಎಂಬ ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದೇನೆ. ಕೃಷ್ಣ ಎಂಬ ಹೊಸ ನಿರ್ದೇಶಕನ ಸಿನಿಮಾ. ಶೇಕಡ 70ರಷ್ಟು ಚಿತ್ರೀಕರಣಗೊಂಡಿದೆ. ಇನ್ನೂ ಹೆಸರಿಡದ ಮತ್ತೊಂದು ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿರುವೆ. ಇನ್ನೊಂದಷ್ಟು ಚಿತ್ರಗಳು ಚಿತ್ರೀಕರಣದ ಹಂತದಲ್ಲಿವೆ.

ಚಿತ್ರರಂಗದಲ್ಲಿ ಹಾಸ್ಯ ಕಲಾವಿದರು ಹೆಚ್ಚಿರುವಾಗ ಸುಲಭವಾಗಿ ಅವಕಾಶ ಸಿಗುತ್ತಿದೆಯಾ?

ಒಬ್ಬ ಹಾಸ್ಯ ಕಲಾವಿದ ಹುಟ್ಟಿಕೊಂಡಾಗ ಚಾಲ್ತಿಯಲ್ಲಿರುವ ಮತ್ತೊಬ್ಬ ಹಾಸ್ಯ ಕಲಾವಿದನ ಜಾಗಕ್ಕೆ ಕುತ್ತು ಬಂತು ಎಂಬಂತಹ ಮಾತುಗಳು ಕೇಳಿಬರುತ್ತವೆ. ವರ್ಷಕ್ಕೆ 200ಕ್ಕೂ ಹೆಚ್ಚು ಸಿನಿಮಾಗಳು ನಿರ್ಮಾಣವಾಗುತ್ತವೆ. ಎಲ್ಲದರಲ್ಲಿಯೂ ನಮಗೆ ನಟಿಸಲು ಸಾಧ್ಯವೇ? ಎಲ್ಲ ಸಿನಿಮಾದಲ್ಲಿಯೂ ನಾವೇ ಇರೋಕೆ ಸಾಧ್ಯವಿಲ್ಲ. ಹೆಚ್ಚೆಂದರೆ 10–12 ಸಿನಿಮಾ ಒಪ್ಪಿಕೊಳ್ಳಬಹುದು. ಯಾರೋ ಬೆಳಿತಾರೆ, ಯಾರೋ ತುಳಿತಾರೆ ಎಂಬುದೆಲ್ಲ ಸುಳ್ಳು. ನಮಗೆ ಸಿಗಬೇಕು ಎಂದಿರುವಷ್ಟು ಅವಕಾಶ ಸಿಕ್ಕೇ ಸಿಗುತ್ತದೆ. ಅದನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ನಾವು ಎಷ್ಟು ವಿಭಿನ್ನವಾಗಿ ನಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತೇವೋ ಅಷ್ಟು ಉತ್ತಮ ಅವಕಾಶಗಳು ಬರುತ್ತವೆ. ದಯವಿಟ್ಟು ಸಾಮಾಜಿಕ ಜಾಲತಾಣಗಳಲ್ಲಿ ಯಾರಿಗೋ ಹೋಲಿಕೆ ಮಾಡಿ, ಪೈಪೋಟಿಗಿಳಿದು ಪ್ರತಿಕ್ರಿಯಿಸಬೇಡಿ. ಈ ವಿಷಯಕ್ಕೆ ಎಂದಲ್ಲ, ಸಾಕಷ್ಟು ವಿಚಾರಗಳಲ್ಲಿ ಹಿನ್ನೆಲೆ ಗೊತ್ತಿಲ್ಲದೆ ಪ್ರತಿಕ್ರಿಯಿಸಬಾರದು.

ಮಾಲಾಶ್ರೀ, ರಂಜನಿ ಅಭಿನಯದ ‘ನೈಟ್ ಕರ್ಫ್ಯೂ’ ಚಿತ್ರ ಇಂದು (ಏ.12) ತೆರೆ ಕಾಣುತ್ತಿದೆ. ಚಿತ್ರ ಹಾಗೂ ತಮ್ಮ ಪಾತ್ರದ ಕುರಿತು ರಂಜನಿ ಹೇಳಿದ್ದಿಷ್ಟು:



ರಂಜನಿ ರಾಘವನ್

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

‘ವಿಭಿನ್ನ ಅನುಭವ ನೀಡಿದ ಪಾತ್ರವಿದು’

‘**ಈ ಚಿತ್ರದಲ್ಲಿ** ನನ್ನದು ವೈದ್ಯೆ ಪಾತ್ರ. ಮಾಲಾಶ್ರೀ ಅವರದ್ದು ಇದೇ ಪಾತ್ರ. ಅವರ ಪಾತ್ರ ಶಕ್ತಿಗಾಗಿದ್ದರೆ, ನನ್ನ ಪಾತ್ರ ಯುಕ್ತಿಗೆ ಎಂಬಂತೆ ಟ್ರೀಟ್ ಮಾಡಲಾಗಿದೆ. ಕೋವಿಡ್ ಸಮಯದಲ್ಲಿ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಕಥೆ. ಒಂದು ರಾತ್ರಿಯಲ್ಲಿ, ಒಂದೇ ಜಾಗದಲ್ಲಿ ನಡೆಯುವ ಕಥೆ. ನಿರ್ದೇಶಕರು ಈ ಕಥೆಯನ್ನು ಹೇಳಿದಾಗ ಬಹಳ ಇಂಪ್ರೆಸ್ ಆಯ್ತು’ ಎಂದು ತಮ್ಮ ಪಾತ್ರವನ್ನು ವಿವರಿಸಿದರು ರಂಜನಿ ರಾಘವನ್.

‘ಪುಟ್ಟಗೌರಿ ಮದುವೆ’ ಮೂಲಕ ಕಿರುತೆರೆ ಬಂದ ರಂಜನಿ ಹಿರಿತೆರೆ ಕುರಿತು ದೊಡ್ಡ ಕನಸು ಹೊಂದಿದ್ದಾರೆ. ಸಾಹಿತ್ಯ, ಬರವಣಿಗೆಯಲ್ಲಿಯೂ ಛಾಪು ಮೂಡಿಸುತ್ತಿರುವ ಅವರು ಸದ್ಯ ತಮ್ಮದೇ ಒಂದು ಕಥೆಯನ್ನು ಸಿನಿಮಾವಾಗಿಸುವ ಪ್ರಕ್ರಿಯೆಯಲ್ಲಿ ಮಗ್ನರಾಗಿದ್ದಾರೆ. ತಮ್ಮ ಸ್ನೇಹವಲಯದಿಂದ ಈ ಸಿನಿಮಾವನ್ನು ನಿರ್ಮಿಸುವ ಇರಾದೆಯೂ ಅವರಲ್ಲಿದೆ. ‘ಎಲ್ಲವೂ ಅಂತಿಮವಾದ ಬಳಿಕ ಈ ಬಗ್ಗೆ ಇನ್ನಷ್ಟು ಮಾಹಿತಿ ನೀಡುತ್ತೇನೆ’ ಎನ್ನುತ್ತಾರೆ ಅವರು.

‘ಈ ಸಿನಿಮಾ ಮುಗಿದು ವರ್ಷ ಕಳೆದಿದೆ. ಈಗ ಬಿಡುಗಡೆಯಾಗುತ್ತಿರುವುದು ಖುಷಿಯ ವಿಷಯ. ಸಸ್ಪೆನ್ಸ್, ಥ್ರಿಲ್ಲರ್ ಸಿನಿಮಾದಲ್ಲಿ ನಟಿಸಿರಲಿಲ್ಲ. ಹೀಗಾಗಿ ಇದೊಂದು ರೀತಿಯ ಭಿನ್ನ ಅನುಭವ. ರಾತ್ರಿ ವೇಳೆ ಚಿತ್ರೀಕರಣಗೊಂಡಿದ್ದೇ ಹೆಚ್ಚು. ನನ್ನ ಪಾತ್ರಕ್ಕೂ ಎಳೆದಾಟ, ಹೊಡೆದಾಟದಂತಹ ಸಣ್ಣಮಟ್ಟದ ಆ್ಯಕ್ಷನ್ ಇದೆ’ ಎಂದು ಪಾತ್ರದ ಕುರಿತು ಇನ್ನಷ್ಟು ತಿಳಿಸಿದರು.

ಇವರು ಆದಿತ್ಯ ಜೊತೆಗೆ ನಟಿಸಿರುವ ‘ಕಾಂಗರೂ’ ಚಿತ್ರ ಬಿಡುಗಡೆಗೆ ಸಿದ್ಧವಿದೆ. ‘ಸತ್ಯಂ’ ಚಿತ್ರದಲ್ಲಿಯೂ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಬರಗೂರು ರಾಮಚಂದ್ರಪ್ಪ ನಿರ್ದೇಶನದ ‘ಸ್ವಪ್ನ ಮಂಟಪ’ ಚಿತ್ರದಲ್ಲಿ ವಿಜಯ ರಾಘವೇಂದ್ರಗೆ ಜೋಡಿಯಾಗಿದ್ದಾರೆ.

‘ಸ್ವಪ್ನ ಮಂಟಪ’ದಿಂದಾಗಿ ಒಂದೆರಡು ಕಲಾತ್ಮಕ ಚಿತ್ರಗಳ ಆಫರ್ ಬಂತು. ಆದರೆ ಒಪ್ಪಿಕೊಂಡಿಲ್ಲ. ಬರಗೂರು ಅವರ ಜೊತೆ ಕೆಲಸ ಮಾಡಬೇಕೆಂಬ ಕಾರಣಕ್ಕೆ ಆ ಚಿತ್ರ ಒಪ್ಪಿಕೊಂಡಿದ್ದೆ. ಧಾರಾವಾಹಿಗಳಲ್ಲಿ ದಿನವೂ ಜನಕ್ಕೆ ಕಾಣಿಸುತ್ತೇವೆ, ಒಳ್ಳೆಯ ಆದಾಯ ಬರುತ್ತದೆ ಎಂಬುದು ನಿಜ. ಆದರೆ ದಿನ ಪಾತ್ರವಾಗಿ ಅದದೇ ಪುನರಾವರ್ತನೆಯಾಗುತ್ತದೆ. ಹೊಸತೇನೋ ಹುಡುಕಬೇಕೆಂಬ ಕಾರಣಕ್ಕೆ ಹಿರಿತೆರೆ ಆಯ್ದುಕೊಂಡಿದ್ದು. ಹೀಗಾಗಿ ಮತ್ತೆ ಧಾರಾವಾಹಿಗೆ ಮರಳುವ ಆಲೋಚನೆಯಿಲ್ಲ. ಹೊಸತಾಗಿರುವ, ಸವಾಲಿನ ಪಾತ್ರ ಬಂದರೆ ಅದರತ್ತ ಆಲೋಚಿಸುವೆ. ಸಿನಿಮಾದಲ್ಲಿಯೇ ಇನ್ನಷ್ಟು ಹೊಸತನ್ನು ಹುಡುಕುವ ಹಂಬಲವಿದೆ. ಸದ್ಯಕ್ಕೆ ನನ್ನದೇ ಸ್ಕ್ರಿಪ್ಟ್ ಕೆಲಸದಲ್ಲಿ ಮಗ್ನಳಾಗಿರುವೆ’ ಎಂದು ಚಿತ್ರರಂಗದ ಕುರಿತಾದ ಕನಸು ಬಿಚ್ಚಿಟ್ಟರು.

ಸೆಟ್ಟೇರಿತು ‘ಬಡವ್ರ ಮಕ್ಳೂ ಬೆಳಿಬೇಕು’



ಸುಚೇಂದ್ರ ಪ್ರಸಾದ್, ಸಂಗೀತ, ರಾಜವರ್ಧನ್, ಲಾವಣ್ಯ ವೈಭವಿ

ನಟ ಡಾಲಿ ಧನಂಜಯ ಅವರ ‘ಬಡವ್ರ ಮಕ್ಳೂ ಬೆಳಿಬೇಕು ಕಣ್ರಯ್ಯ’ ಎಂಬ ಹೇಳಿಕೆ ಸಾಕಷ್ಟು ಜನಪ್ರಿಯವಾಗಿತ್ತು. ಈ ಹೇಳಿಕೆಯನ್ನೇ ಶೀರ್ಷಿಕೆಯಾಗಿಸಿಕೊಂಡಿರುವ ಚಿತ್ರವೊಂದು ಸೆಟ್ಟೇರಿದೆ. ಶ್ರೀರಾಮ ಪ್ರೊಡಕ್ಷನ್ಸ್ ಲಾಂಛನದಲ್ಲಿ ಸಿ.ಎಸ್.ವೆಂಕಟೇಶ್ ನಿರ್ಮಿಸುತ್ತಿರುವ ಈ ಚಿತ್ರವನ್ನು ಮಂಜುಕವಿ ನಿರ್ದೇಶಿಸುತ್ತಿದ್ದಾರೆ.

‘ಡಾಲಿ ಅವರು ಹೇಳಿದ ಮಾತನ್ನು ಸ್ಫೂರ್ತಿಯಾಗಿಟ್ಟುಕೊಂಡು ಈ ಚಿತ್ರದ ಕಥೆ ಬರೆದಿದ್ದೇನೆ. ಬಡ ಕುಟುಂಬದಲ್ಲಿ ಹುಟ್ಟಿದ ಮಕ್ಕಳಿಗೆ ಎಷ್ಟೇ ಕಲೆ ಇದ್ದರೂ, ಚೆನ್ನಾಗಿ ಓದುವ ಹಂಬಲವಿದ್ದರೂ ಅವರನ್ನು ಬೆಳೆಸಲು ಯಾರು ಮುಂದೆ ಬರುವುದಿಲ್ಲ. ಅವರಲ್ಲಿರುವ ಪ್ರತಿಭೆ ನಶಿಸಿ ಹೋಗುತ್ತದೆ. ಪ್ರತಿಭೆಯುಳ್ಳ ಬಡಮಕ್ಕಳ ಕೀರ್ತಿ ಬೆಳಗಬೇಕು ಎಂಬುದು ಚಿತ್ರದ ಕಥಾಹಂದರ’ ಎಂದರು ನಿರ್ದೇಶಕರು.

ಸುಚೇಂದ್ರ ಪ್ರಸಾದ್ ಹಾಗೂ ಸಂಗೀತ ಅವರು ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ಇವರ ಮಕ್ಕಳ ಪಾತ್ರದಲ್ಲಿ ರಾಜವರ್ಧನ್, ಲಾವಣ್ಯ ವೈಭವಿ ಅಭಿನಯಿಸುತ್ತಿದ್ದಾರೆ. ನಾಲ್ಕು ಹಾಡುಗಳಿದ್ದು ನಿರ್ದೇಶಕರೇ ಸಂಗೀತ ನೀಡುತ್ತಿದ್ದಾರೆ. ವಿನುಮನಸು ಹಿನ್ನೆಲೆ ಸಂಗೀತ, ರೇಣುಕುಮಾರ್ ಛಾಯಾಚಿತ್ರಗ್ರಹಣ, ವೆಂಕಿ ಯುಡಿವಿ ಸಂಕಲನವಿದೆ.

‘ಕೃಷ್ಣಾವತಾರ’ದ ಯುಗಾದಿ ಹಾಡು

ಚಿತ್ರ ಸಾಹಿತಿ, ನಟ, ನಿರ್ದೇಶಕ ನಾಗೇಂದ್ರ ಪ್ರಸಾದ್ ಮುಖ್ಯಭೂಮಿಕೆಯಲ್ಲಿರುವ ‘ಕೃಷ್ಣಾವತಾರ’ ಚಿತ್ರದ ಯುಗಾದಿ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿ. ನಾಗೇಂದ್ರಪ್ರಸಾದ್ ಅವರದ್ದೇ ಸಾಹಿತ್ಯವಿರುವ ‘ಯಗಗಳ ಆದಿ ಯುಗಾದಿ’ ಎಂಬ ಯುಗಾದಿ ಮಹತ್ವ ಸಾರುವ ಹಾಡನ್ನು ಮೈಸೂರು ಮಹಾರಾಜರಾದ ಯದುವೀರ್ ಒಡೆಯರ್ ಅವರು ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

ಸಿರಿ ವೈ.ಎಸ್.ಆರ್. ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರಕ್ಕೆ ಮಾಯಾಬಜಾರ್ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಗುರುಪ್ರಸಾದ್ ಕೆ. ಬಂಡವಾಳ ಹೂಡಿದ್ದಾರೆ. ಶುಭ ರಕ್ಷಾ, ತ್ರಿವೇಣಿ ರಾಜ್ ಚಿತ್ರದ ನಾಯಕಿಯರು.

ಎಬಿಎಂ ಸಂಗೀತ ಸಂಯೋಜನೆ ಮಾಡಿದ್ದು,‘ಕಹಿಬೇವು ಸಿಹಿಬೆಲ್ಲ ಒಂದಾಗಿ ಸೇರುವ ಸರದಿ’ ಎಂಬ ಸುಮಧುರ ಸಾಹಿತ್ಯದ ಈ ಗೀತೆಗೆ ಅನುರಾಧ ಭಟ್ ಧ್ವನಿಯಾಗಿದ್ದಾರೆ. ಈ ಚಿತ್ರಕ್ಕೆ ರಾಜ ಶಿವಶಂಕರ್ ಛಾಯಾಚಿತ್ರಗ್ರಹಣವಿದ್ದು, ವಿಶ್ವನಾಥ್, ಮಾನಸಿ ಸುಧೀರ್, ರಘು ರಾಮನಕೊಪ್ಪ, ಪ್ರಕಾಶ್ ತುಮ್ಮಿನಾಡ್ ಮುಂತಾದವರು ತಾರಾಗಣದಲ್ಲಿದ್ದಾರೆ.



ತ್ರಿವೇಣಿ

ದುನಿಯಾ ವಿಜಯ್‌ಗೆ ಮತ್ತೆ ಜೋಡಿಯಾದ ರಚಿತಾ ರಾಮ್

‘ಸಲಗ’ದ ಯಶಸ್ಸಿನ ಬಳಿಕ ದುನಿಯಾ ವಿಜಯ್ ನಟಿಸಿ, ನಿರ್ದೇಶಿಸಿರುವ ‘ಭೀಮ’ ಚಿತ್ರ ತೆರೆಗೆ ಬರಲು ಇನ್ನೂ ಮುಹೂರ್ತ ಕೂಡಿಬಂದಿಲ್ಲ. ಅದಕ್ಕೂ ಮೊದಲೇ ವಿಜಯ್ ಅವರ 29ನೇ ಸಿನಿಮಾ ಸೆಟ್ಟೇರಿದೆ. ‘ಕಾಟೇರ’ ಚಿತ್ರದ ಬರಹಗಾರ ಹಾಗೂ ನಿರ್ದೇಶಕ ಜಡೇಶ್ ಹಂಪಿ ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ.

‘ಜಂಟಲ್‌ಮ್ಯಾನ್’, ‘ಗುರು ಶಿಷ್ಯರು’ ಚಿತ್ರಗಳ ಮೂಲಕ ಗಮನ ಸೆಳೆದಿದ್ದ ಜಡೇಶ್ ಮತ್ತೊಂದು ಕಂಟೆಂಟ್ ಸಿನಿಮಾದೊಂದಿಗೆ ಬಂದಿದ್ದಾರೆ. ‘ಇದು ಆಳಿದವರ ಕಥೆಯಲ್ಲ, ಅಳಿದು ಉಳಿದವರ ಕಥೆ’ ಎಂಬ ಟ್ಯಾಗ್‌ಲೈನ್ ಚಿತ್ರಕ್ಕಿದೆ. ಮೊದಲ ಪೋಸ್ಟರ್ ಬಿಡುಗಡೆಗೊಂಡಿದ್ದು, ಕತ್ತಿ ಹಾಗೂ ಕೊಡಲಿ ಹಿಡಿದು ದುನಿಯಾ ವಿಜಯ್ ನಿಂತಿದ್ದಾರೆ. ಎದುರು ಭಾಗದಲ್ಲಿರುವ ದೇವರ ರಥವೊಂದು ಬೆಂಕಿಯಿಂದ ಹತ್ತಿ ಉರಿಯುತ್ತಿದೆ.

‘ಈ ತಿಂಗಳ ಅಂತ್ಯದಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ. ಇದು ನಮ್ಮ ನೆಲದ ಕಥೆ. ಶಿವರಾಮ ಕಾರಂತರ ‘ಚೋಮನದುಡಿ’ಯ ಪಾತ್ರವೊಂದರಿಂದ ಪ್ರೇರಿತವಾಗಿದೆ. ದೇವರನ್ನು ಮುಂದಿಟ್ಟುಕೊಂಡು ಒಳ್ಳೆಯದು ಮಾಡುವ ಕೆಲವರಿದ್ದಾರೆ. ಕೆಡುಕು ಮಾಡುವವರಿದ್ದಾರೆ. ಅವರಿಬ್ಬರ ನಡುವಿನ ಸಂಘರ್ಷ ಇಲ್ಲಿದೆ. ಬೆಂಗಳೂರಿನಲ್ಲಿ ಹಳ್ಳಿಯ ಸೆಟ್ ಹಾಕುತ್ತಿದ್ದೇವೆ. ಬಹುಭಾಗ ಇಲ್ಲಿಯೇ ಚಿತ್ರೀಕರಣಗೊಳ್ಳಲಿದೆ. ಮಿಕ್ಕಿದ್ದು ಕೋಲಾರ, ಮೈಸೂರು ಸುತ್ತಮುತ್ತ ಚಿತ್ರೀಕರಣವಾಗಲಿದೆ. ಸ್ವಾಮಿ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನವಿದೆ. ಸಂಗೀತ ನಿರ್ದೇಶಕರು ಇನ್ನೂ ಅಂತಿಮವಾಗಿಲ್ಲ’ ಎಂದರು ಜಡೇಶ್.

‘ಸಾರಥಿ’ ಸಿನಿಮಾದ ನಿರ್ಮಾಪಕ ಕೆ.ವಿ. ಸತ್ಯಪ್ರಕಾಶ್ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ದುನಿಯಾ ವಿಜಯ್ ಅವರ ಮಗಳು ಮೋನಿಕಾ ಈ ಸಿನಿಮಾದೊಂದಿಗೆ ಕನ್ನಡ ಚಿತ್ರರಂಗಕ್ಕೆ ಕಾಲಿಡುತ್ತಿದ್ದಾರೆ. ಅಂದಹಾಗೆ ಮೋನಿಕಾ ಸಿನಿಮಾದಲ್ಲಿಯೂ ವಿಜಯ್ ಮಗಳಾಗಿಯೇ ಕಾಣಿಸಿಕೊಳ್ಳುತ್ತಿದ್ದಾರೆ ಎನ್ನುತ್ತಿದೆ ಚಿತ್ರತಂಡ. ಇವರು ನಟನೆಯಲ್ಲಿ ತರಬೇತಿ ಪಡೆದು ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

‘ಜಾನಿ ಜಾನಿ ಯೆಸ್ ಪಪ್ಪಾ’ ಚಿತ್ರದಲ್ಲಿ ಜೊತೆಯಾಗಿದ್ದ ರಚಿತಾ ರಾಮ್, ಈ ಚಿತ್ರದಲ್ಲಿ ಮತ್ತೆ ದುನಿಯಾ ವಿಜಯ್‌ಗೆ ಜೋಡಿಯಾಗುತ್ತಿದ್ದಾರೆ.



ದುನಿಯಾ ವಿಜಯ್



ಚಿತ್ರದ ಪೋಸ್ಟರ್

ನಾಲ್ಕು ಚಿತ್ರಗಳು ತೆರೆಗೆ



ಪ್ರೇಮ್, ಮಾನ್ವಿತಾ

ಸ್ಯಾಂಡಲ್‌ವುಡ್‌ಗೆ ಈ ಯುಗಾದಿ ಅಷ್ಟೇನು ಸಿಹಿಯಾಗಿಲ್ಲ. ರಜ, ಹಬ್ಬದ ನಡುವೆಯೂ ಯಾವ ದೊಡ್ಡ ಸ್ಟಾರ್‌ಗಳ ಸಿನಿಮಾವೂ ಈ ವಾರ ತೆರೆ ಕಾಣುತ್ತಿಲ್ಲ. ಪ್ರತಿ ವಾರ ಚಿತ್ರಮಂದಿರಗಳು ಸರಿಯಾಗಿ ಸಿಗದಷ್ಟು ಚಿತ್ರಗಳು ತೆರೆ ಕಾಣುತ್ತಿದ್ದವು. ಈ ವಾರ ಹೆಚ್ಚು ಪರಭಾಷಾ ಚಿತ್ರಗಳೂ ಇಲ್ಲದೆ, ಚಿತ್ರಮಂದಿರಗಳ ಲಭ್ಯತೆ ಹೇರಳವಾಗಿದ್ದರೂ ತೆರೆಗೆ ಬರುತ್ತಿರುವುದು ನಾಲ್ಕು ಸಿನಿಮಾಗಳು ಮಾತ್ರ...

ನೈಟ್ ಕರ್ಫ್ಯೂ: ವಿರಾಮದ ನಂತರ ಚಿತ್ರರಂಗವನ್ನು ಮರು ಪ್ರವೇಶಿಸಿರುವ ಮಾಲಾಶ್ರೀ ಮುಖ್ಯಭೂಮಿಕೆಯಲ್ಲಿರುವ ‘ನೈಟ್ ಕರ್ಫ್ಯೂ’ ಇಂದು (ಏ.12) ತೆರೆ ಕಾಣುತ್ತಿದೆ. ಚಿತ್ರದಲ್ಲಿ ಸೇನಾ ವೈದ್ಯೆಯಾಗಿ ಮಾಲಾಶ್ರೀ ಕಾಣಿಸಿಕೊಂಡಿದ್ದಾರೆ. ರವೀಂದ್ರ ವೆಂಶಿ ನಿರ್ದೇಶನದ ಚಿತ್ರಕ್ಕೆ ಬಿ.ಎಸ್.ಚಂದ್ರಶೇಖರ್ ಬಂಡವಾಳ ಹೂಡಿದ್ದಾರೆ.

‘ಕೋವಿಡ್ 19 ಸಂದರ್ಭದಲ್ಲಿ ನಡೆದ ಸತ್ಯ ಘಟನೆಗಳನ್ನು ಆಧರಿಸಿದ ಚಿತ್ರ. ಶಕ್ತಿಗಾಗಿ ಮಾಲಾಶ್ರೀ, ಯುಕ್ತಿಗಾಗಿ ರಂಜನಿ ರಾಘವನ್ ಕೂಡ ವೈದ್ಯೆಯಾಗಿ ನಟಿಸಿದ್ದಾರೆ. ಪ್ರಮೋದ್ ಶೆಟ್ಟಿ, ರಂಗಾಯಣ ರಘು, ಸಾಧು ಕೋಕಿಲ ಮೊದಲಾದವರು ಚಿತ್ರದಲ್ಲಿದ್ದಾರೆ’ ಎಂದರು ನಿರ್ದೇಶಕರು.

ಎಂ.ಎಸ್.ಮಾರುತಿ ಸಂಗೀತ, ಪ್ರಮೋದ್‌ಭಾರತೀಯ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಅಪ್ಪಾ ಐ ಲವ್ ಯೂ: ನಟ ನೆನಪಿರಲಿ ಪ್ರೇಮ್ ‘ಪ್ರೇಮಂ ಪೂಜ್ಯಂ’ ಸಿನಿಮಾದ ಬಳಿಕ ಮತ್ತೆ ತೆರೆ ಮೇಲೆ ಕಾಣಿಸಿಕೊಂಡಿರಲಿಲ್ಲ. ಮೂರು ವರ್ಷಗಳ ಬಳಿಕ ಅವರು ಪ್ರಮುಖ ಪಾತ್ರದಲ್ಲಿ ನಟಿಸಿರುವ ‘ಅಪ್ಪಾ ಐ ಲವ್ ಯೂ’ ಚಿತ್ರ ತೆರೆ ಕಾಣುತ್ತಿದೆ. ‘ಟಗರು’ ಖ್ಯಾತಿಯ ನಟಿ ಮಾನ್ವಿತಾ ಹರೀಶ್ ಪ್ರೇಮ್‌ಗೆ ಜೋಡಿ ಆಗಿದ್ದಾರೆ.

ಅಥರ್ವ್ ಆರ್ಯ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ‘ಸಾಮಾನ್ಯವಾಗಿ ಎಲ್ಲರ ಬದುಕಿನಲ್ಲಿಯೂ ಅಪ್ಪ ಹೀರೊ. ನನ್ನ ತಂದೆ ನನಗೆ ಹೀರೊ. ನಾನು ಚಿಕ್ಕವನಿದ್ದಾಗ ಎಲ್ಲಾ ರೀತಿ ಹುಡುಗರ ಸಹವಾಸ ಮಾಡುತ್ತಿದ್ದೆ. ಆದರೆ ನಮ್ಮ ಅಪ್ಪ ಯಾವತ್ತೂ ಅನುಮಾನಪಡಲಿಲ್ಲ. ನನ್ನ ಮಗ ಏನು ಅಂತ ಗೊತ್ತು ಎಂದಿದ್ದರು. ಹೀಗಾಗಿ ನಾನು ಕೆಟ್ಟ ದಾರಿ ತುಳಿಯಲಿಲ್ಲ. ನನಗೋಸ್ಕರ ಹುಡುಕಿ ಬಂದ ಪಾತ್ರ. ಹೀಗಾಗಿ ಸಿನಿಮಾ ಒಪ್ಪಿಕೊಂಡೆ’ ಎನ್ನುತ್ತಾರೆ ಪ್ರೇಮ್.

ಸಂಜಯ್, ಜೀವಿತಾ, ಅರವಿಂದ್, ವಿಜಯ್ ಚೆಂಡೂರ್, ಬಲ ರಾಜವಾಡಿ, ಮಿಮಿಕ್ರಿ ಗೋಪಿ, ಅರುಣ ಬಾಲರಾಜ್ ಸೇರಿದಂತೆ ಹಲವರು ಚಿತ್ರದಲ್ಲಿದ್ದಾರೆ. ಆಕಾಶ್ ಪರ್ವ ಸಂಗೀತ ಒದಗಿಸಿದ್ದಾರೆ. ನಾಗಾರ್ಜುನ್ ಆರ್.ಡಿ. ಛಾಯಾಚಿತ್ರಗ್ರಹಣ ಮಾಡಿದ್ದಾರೆ. ಕೆ.ಆರ್.ಎಸ್ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣಗೊಂಡಿದೆ.

ಮುಕ್ತ ಮನಸು: ಬಹುತೇಕ ಹೊಸಬರೇ ನಿರ್ಮಿಸಿರುವ ‘ಮುಕ್ತ ಮನಸು’ ಇಂದು ತೆರೆ ಕಾಣುತ್ತಿರುವ ಮತ್ತೊಂದು ಚಿತ್ರ. ಚಿತ್ರದ ಶೀರ್ಷಿಕೆಯೊಂದಿಗೆ ‘ಕೇಳದೆ ನಿಮಗೀಗ’ ಎಂಬ ಅಡಿಬರಹವಿದೆ. ಎಸ್.ಎಲ್.ಜೆ. ಪ್ರೊಡಕ್ಷನ್ ಅಡಿಯಲ್ಲಿ ಮೈಸೂರು ಮೂಲದ ವೆಂಕಟೇಶ್ ಬಂಡವಾಳ ಹೂಡಿದ್ದಾರೆ. ಆರ್.ಸಿ.ರಂಗಶೇಖರ್ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿದ್ದಾರೆ.

ವಾಹಿನಿಯೊಂದರ ರಿಯಾಲಿಟಿ ಶೋನಲ್ಲಿ ಸ್ಪರ್ಧಿಯಾಗಿದ್ದ ಮೋಹನ್ ರಂಗನಾಥ್ ಚಿತ್ರದ ನಾಯಕ. ಕ್ಲಾಸಿಕಲ್ ಡ್ಯಾನ್ಸರ್ ಆಗಿರುವ ಮಾನ್ಯಗೆ ನಾಯಕಿಯಾಗಿ ಮೂರನೇ ಚಿತ್ರವಿದು.

‘ಮುಕ್ತವಾಗಿ, ಯಾವುದೇ ತರಹದ ಕಲ್ಮಶ ಇಲ್ಲದ ಪ್ರೀತಿಯು ಹೇಗೆ ಕೊನೆ ತನಕ ಉಳಿದುಕೊಳ್ಳುತ್ತದೆ ಎಂಬುದು ಚಿತ್ರಕಥೆ. ಹಳ್ಳಿಯಿಂದ ಪಟ್ಟಣಕ್ಕೆ ಓದಲು ಬರುವ ಹುಡುಗ, ಹುಡುಗಿ ನಡುವೆ ಪ್ರೇಮವಾಗುತ್ತದೆ. ಮನೆಯಲ್ಲಿ ವಿರೋಧ ಎದುರಾದಾಗ ಮುಕ್ತ ಮನಸುಗಳ ಪ್ರೀತಿ ಯಾವ ಹಂತಕ್ಕೆ ತಲುಪುತ್ತದೆ. ಕೊನೆಗೆ ಇಬ್ಬರು ಒಂದಾಗುತ್ತಾರಾ? ಎಂಬುದನ್ನು ಕಮರ್ಷಿಯಲ್ ರೀತಿಯಲ್ಲಿ ತೋರಿಸಲಾಗಿದೆ’ ಎಂದರು ನಿರ್ದೇಶಕರು.

ಮೈಸೂರು, ಮಂಡ್ಯದಲ್ಲಿ ಚಿತ್ರೀಕರಣಗೊಂಡಿದೆ. ಶೋಭರಾಜ್, ರಮೇಶ್ ಪಂಡಿತ್, ಅಪರ್ಣ ಮುಂತಾದವರು ಚಿತ್ರದಲ್ಲಿದ್ದಾರೆ. ಐದು ಹಾಡುಗಳಿಗೆ ವಿನುಮನಸು ಸಂಗೀತ ಸಂಯೋಜಿಸಿದ್ದಾರೆ. ರವಿ ಛಾಯಾಚಿತ್ರಗ್ರಹಣವಿದೆ.

SCAM 1770: ಡಿ.ಕ್ರಿಯೇಷನ್ಸ್ ಲಾಂಛನದಲ್ಲಿ ದೇವರಾಜ್ ಆರ್ ನಿರ್ಮಿಸಿರುವ, ವಿಕಾಸ್ ಪುಷ್ಪಗಿರಿ ನಿರ್ದೇಶಿಸಿರುವ ‘SCAM 1770’ ಚಿತ್ರ ಕೂಡ ಇಂದು ರಾಜ್ಯದಾದ್ಯಂತ ಬಿಡುಗಡೆಯಾಗುತ್ತಿದೆ. ‘ಇದೊಂದು ಪ್ರಸ್ತುತ ಶಿಕ್ಷಣ ವ್ಯವಸ್ಥೆ ಆಧಾರಿತ ಚಿತ್ರ. ಸತ್ಯ ಘಟನೆಗಳನ್ನು ಕಟ್ಟಿಕೊಂಡು ವಾಸ್ತವದಲ್ಲಿ ಏನೆಲ್ಲ ನಡೆಯುತ್ತಿದೆ ಎಂಬ ವಿಚಾರವನ್ನು ಹೇಳಲಾಗಿದೆ’ ಎಂದಿದೆ ಚಿತ್ರತಂಡ.

ಸತೀಶ್ ಆರ್ಯನ್ ಸಂಗೀತ , ಶೋಯೆಬ್ ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಸಂಕಲನ ಚಿತ್ರಕ್ಕಿದೆ.

‘ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ’ ಚಿತ್ರದಲ್ಲಿ ದಡ್ಡ ಪ್ರವೀಣನಾಗಿ ಗಮನ ಸೆಳೆದಿದ್ದ ರಂಜನ್, ನಿಶ್ವಿತ, ಬಿ.ಸುರೇಶ್, ಅವಿನಾಶ್, ಶ್ರೀನಿವಾಸಪ್ರಭು, ರಮೇಶ್ ಪಂಡಿತ್, ರಾಘು ಶಿವಮೊಗ್ಗ, ನಾರಾಯಣ ಸ್ವಾಮಿ, ಉಗ್ರಂ ಸಂದೀಪ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಆದಿಚುಂಚನಗಿರಿ ಮಠಕ್ಕೆ ಪ್ರತಿಯಾಗಿ ಮತ್ತೊಂದು ಮಠ ಹುಟ್ಟುಹಾಕಿದ್ದು ಯಾರು: ಚಲುವರಾಯಸ್ವಾಮಿ ಪ್ರಶ್ನೆ

‘ಎಚ್‌ಡಿಕೆ ಸರ್ಕಾರದಲ್ಲಿ ಶ್ರೀಗಳ ಫೋನ್ ಕದ್ದಾಲಿಕೆ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಎಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದ ಸ್ವಾಮೀಜಿಯ ಫೋನ್ ಕದ್ದಾಲಿಕೆಯಾಗಿತ್ತು’ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಗುರುವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿ, ‘ಒಂದು ಧರ್ಮಪೀಠಕ್ಕೆ ಅವಮಾನ ಮಾಡಿದ್ದನ್ನು ಯಾರೂ ಮರೆಯುವುದಿಲ್ಲ. ಈಗ ಚುನಾವಣೆ ಸಂದರ್ಭದಲ್ಲಿ ಮೈತ್ರಿ ಅಭ್ಯರ್ಥಿಯಾಗಿ ಮಠದ ಬಾಗಿಲು ತಟ್ಟುತ್ತಿದ್ದಾರೆ. ವಿರೋಧಿಗಳನ್ನೂ ಭೇಟಿಯಾಗುತ್ತಿದ್ದಾರೆ. ಆದಿಚುಂಚನಗಿರಿ ಮಠಕ್ಕೆ ಪ್ರತಿಯಾಗಿ, ಬಾಲಗಂಗಾಧರನಾಥ ಸ್ವಾಮೀಜಿ ವಿರುದ್ಧವಾಗಿ ಇನ್ನೊಂದು ಮಠ, ಮತ್ತೊಬ್ಬರು ಸ್ವಾಮೀಜಿಯನ್ನು ಹುಟ್ಟುಹಾಕಿದ್ದು ಯಾರು’ ಎಂದು ಪ್ರಶ್ನಿಸಿದರು.

‘ಮೈತ್ರಿ ನಾಯಕರಿಗಿಂತ ಮೊದಲೇ ನಾವು ನಮ್ಮ ಅಭ್ಯರ್ಥಿ ಸ್ಟಾರ್ ಚಂದ್ರು ಅವರೊಂದಿಗೆ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿ ನೀಡಿದ್ದೇವೆ. ಒಳ್ಳೆಯದಾಗಲಿ ಎಂದು ಶ್ರೀಗಳು ಆಶೀರ್ವದಿಸಿದ್ದಾರೆ. ಮಠಗಳಿಗೆ ಭೇಟಿ ನೀಡಿ ಸ್ವಾಮೀಜಿ ಆಶೀರ್ವಾದ ಪಡೆಯುವುದು ಸಾಮಾನ್ಯ’ ಎಂದರು.

‘2004ರಲ್ಲಿ ಯಾವ ಪಕ್ಷಕ್ಕೂ ಬಹುಮತ ಬಾರದಿದ್ದಾಗ ಎಸ್.ಎಂ.ಕೃಷ್ಣ ಜೆಡಿಎಸ್ ಬೆಂಬಲ ಕೋರಿದ್ದರು. ಒಕ್ಕಲಿಗ ನಾಯಕರಾದ ಎಸ್.ಎಂ.ಕೃಷ್ಣ ಅವರನ್ನು ಇನ್ನೊಂದು ಅವಧಿಗೆ ಮುಖ್ಯಮಂತ್ರಿ ಮಾಡುವ ಅವಕಾಶ ಜೆಡಿಎಸ್‌ಗೆ ಇತ್ತು. ಆದರೆ ಬೆಂಬಲ ನೀಡಲಿಲ್ಲ’ ಎಂದರು.

‘ಮಲ್ಲಿಕಾರ್ಜುನ ಖರ್ಗೆ ಅವರನ್ನಾದರೂ ಸಿ.ಎಂ ಮಾಡುವ ಆಯ್ಕೆ ಇತ್ತು. ಆಗ ನಾನು ಜೆಡಿಎಸ್‌ನಲ್ಲೇ ಇದ್ದೆ. ತಾವು ಹೇಳಿದಂತೆ ಕೇಳಬೇಕು ಎನ್ನುವ ಕಾರಣಕ್ಕೆ ದೇವೇಗೌಡರು ಧರಂ ಸಿಂಗ್ ಅವರನ್ನು ಮುಖ್ಯಮಂತ್ರಿ ಮಾಡಿದರು. ಚುನಾವಣೆ ಕಾರಣಕ್ಕೆ ಈಗ ಮೈತ್ರಿ ಮುಖಂಡರು ಕೃಷ್ಣ ಅವರ ಮನೆಗೆ ಹೋಗಿದ್ದಾರೆ’ ಎಂದರು.

‘ಸಂಸದೆ ಸುಮಲತಾ ಅವರನ್ನು ಅಕ್ಕಾ ಎನ್ನುತ್ತಿರುವ ಕುಮಾರಸ್ವಾಮಿ ಕಳೆದ ಚುನಾವಣೆ ವೇಳೆ ಏನೆಲ್ಲಾ ಮಾಡಿದ್ದರು ನೆನಪಿಸಿಕೊಳ್ಳಿ. ಅವರು ಕಣ್ಣೀರಲ್ಲಿ ಕೈತೊಳೆಯುವಂತೆ ಮಾಡಿದ್ದರು, ಸುಮಲತಾ ಅವರನ್ನು ಕೆಆರ್‌ಎಸ್‌ಗೆ ಅಡ್ಡಡ್ಡ ಮಲಗಿಸಿ ಎಂದಿದ್ದರು’ ಎಂದರು.

‘ವಿಶ್ವದಲ್ಲೇ ಮೊದಲು ಎನಿಸಿಕೊಂಡಿರುವ ಗ್ಯಾರಂಟಿ ಯೋಜನೆ ನಿಲ್ಲಿಸಿ ಎಂದು ಕೋರಿ ಬಿಜೆಪಿ ಮುಖಂಡರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ. ಇಂಥವರಿಗೆ ಮತ ಹಾಕಬೇಕಾ’ ಎಂದು ಪ್ರಶ್ನಿಸಿದರು.

‘ಒಕ್ಕಲಿಗ ಸಿ.ಎಂ ತೆಗೆದವರ ಜೊತೆ ಶ್ರೀಗಳ ಬಳಿ ಹೋದರೆ ಹೇಗೆ?’

ಬೆಂಗಳೂರು: ‘ಆದಿಚುಂಚನಗಿರಿ ಶ್ರೀಗಳ ಆಶೀರ್ವಾದ ಎಚ್.ಡಿ. ಕುಮಾರಸ್ವಾಮಿ, ಡಾ.ಸಿ.ಎನ್. ಮಂಜುನಾಥ್ ಕೇಳಿದ್ದರಲ್ಲಿ ತಪ್ಪೇನಿಲ್ಲ. ಆದರೆ, ಒಕ್ಕಲಿಗ ಮುಖ್ಯಮಂತ್ರಿಯನ್ನು ತೆಗೆದವರನ್ನೇ ಅವರು ಜತೆಗೆ ಕರೆದುಕೊಂಡು ಹೋದರೆ ಹೇಗೆ ಎನ್ನುವುದಷ್ಟೆ ನನ್ನ ಪ್ರಶ್ನೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

‘ಒಕ್ಕಲಿಗ ಸರ್ಕಾರ ಬೀಳಿಸಿದ ವಿಚಾರವಾಗಿ ಸ್ವಾಮೀಜಿ ಉತ್ತರ ಕೊಡಬೇಕು’ ಎಂದು ಡಿ.ಕೆ. ಶಿವಕುಮಾರ್ ಬುಧವಾರ ನೀಡಿದ್ದ ಹೇಳಿಕೆ ಚರ್ಚೆಗೆ ಗ್ರಾಸವಾಗಿರುವ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿದ ಅವರು, ‘ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಮತ್ತು ಕೆಲವು ಸಚಿವರು ಸ್ವಾಮೀಜಿಗಳ ಕಾರ್ಯಕ್ರಮಕ್ಕೆ ಹೋಗಿ ವಾಪಸ್ ಬರುವ ವೇಳೆಗೆ ‘ಆಪರೇಷನ್ ಕಮಲ’ ನಡೆದಿತ್ತು. ಒಕ್ಕಲಿಗ ವ್ಯಕ್ತಿ ಮುಖ್ಯಮಂತ್ರಿ ಆಗಿರುವ ಬಗ್ಗೆ ಸ್ವಾಮೀಜಿಗೂ ಅಭಿಮಾನ ಇರುತ್ತದೆ. ಆದರೆ, ಸರ್ಕಾರ ತೆಗೆದವರ ಜೊತೆಯಲ್ಲಿ ಹೋಗಿರುವುದರಿಂದ ಸಮಾಜಕ್ಕೆ ಅವರು ಏನು ಉತ್ತರ ನೀಡುತ್ತಾರೆ’ ಎಂದು ಪ್ರಶ್ನಿಸಿದರು.

‘ವಿಧಾನಸಭೆ ಚುನಾವಣೆ ವೇಳೆ ಶೇ 5ರಷ್ಟು ಒಕ್ಕಲಿಗ ಮತ ಕಾಂಗ್ರೆಸ್ ಕಡೆ ವಾಲಿದ್ದವು. ಈ ಬಾರಿ ಒಕ್ಕಲಿಗರು ಯಾರನ್ನು ಬೆಂಬಲಿಸಲಿದ್ದಾರೆ’ ಎಂಬ ಪ್ರಶ್ನೆಗೆ, ‘ಜನರು ದಡ್ಡರಲ್ಲ, ತಮ್ಮ ಬದುಕು ಕಟ್ಟಿಕೊಡುವವರಿಗೆ ಅವರು ಬೆಂಬಲ ನೀಡುತ್ತಾರೆ. ಕಾಂಗ್ರೆಸ್ ಜನರ ಬದುಕು ಕಟ್ಟಿಕೊಡುವ ಕೆಲಸ ಮಾಡುತ್ತಿದೆ’ ಎಂದರು.

ಜೆಡಿಎಸ್‌ಗೆ ಅವರೇ ಮುಕ್ತಿ ಕೊಟ್ಟಿದ್ದಾರೆ: ‘ಸ್ವಾಮೀಜಿಗಳು ಕೃಷ್ಣನಂತೆ, ಪಾಂಡವರಂತೆ ಇರುವ ಜೆಡಿಎಸ್ ಪರವಾಗಿ ಸ್ವಾಮೀಜಿ ನಿಲ್ಲಲಿದ್ದಾರೆ’ ಎಂಬ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಜೆಡಿಎಸ್ ಎಲ್ಲಿದೆ? ಜೆಡಿಎಸ್‌ಗೆ ಅವರೇ ಮುಕ್ತಿ ಕೊಟ್ಟಿದ್ದಾರೆ. ತಮ್ಮ ಅಳಿಯನನ್ನೇ ಬಿಜೆಪಿಗೆ ಕಳುಹಿಸಿ ಜೆಡಿಎಸ್ ವಿಸರ್ಜನೆ ಮಾಡುವ ಸ್ಥಿತಿಗೆ ದೇವೇಗೌಡರು ಹೋಗಿದ್ದಾರೆ’ ಎಂದು ಲೇವಡಿ ಮಾಡಿದರು.

ನಿರ್ಮಲಾನಂದನಾಥ ಸ್ವಾಮೀಜಿಯ ಕರೆ ಕದ್ದಾಲಿಕೆ ಗೊತ್ತಿರುವ ವಿಚಾರ. ಈ ಬಗ್ಗೆ ದಾಖಲೆಗಳಿವೆ. ಈ ಬಗ್ಗೆ ಮಾತನಾಡಲು ನೋವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಎಲ್ಲ ದಾಖಲೆಗಳಿದ್ದರೂ ಈ ವಿಚಾರವನ್ನು ಈಗ ಮಾತನಾಡುವುದು ಸೂಕ್ತವಲ್ಲ

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಕಾಂಗ್ರೆಸ್ ಶಕ್ತಿ ಕುಸಿಯುತ್ತಿರುವ ಕಾರಣಕ್ಕೆ ಡಿ.ಕೆ. ಶಿವಕುಮಾರ್ ಈ ರೀತಿ ಹತಾಶೆ ಹೇಳಿಕೆ ನೀಡುತ್ತಿದ್ದಾರೆ. ಪ್ರತಿ ಚುನಾವಣೆ ಬಂದಾಗ ಎಲ್ಲ ರಾಜಕೀಯ ಪಕ್ಷಗಳ ಮುಖಂಡರಿಂದ ಮಠಾಧೀಶರ ಭೇಟಿ ಪದ್ಧತಿಯಾಗಿದೆ. ಅದಕ್ಕೆ ಬೇರೆ ಅರ್ಥ ಕಲ್ಪಿಸಬೇಕಿಲ್ಲ

ಬಿ.ವೈ. ವಿಜಯೇಂದ್ರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಪರ್ಯಾಯ ಮಠ ಸ್ಥಾಪನೆಗೆ ಎಚ್‌ಡಿಡಿ, ಎಚ್‌ಡಿಕೆ ಕಾರಣ’

‘ಬಾಲಗಂಗಾಧರನಾಥ ಶ್ರೀಗಳು ಇದ್ದಂತಹ ಸಂದರ್ಭದಲ್ಲಿ ನಮ್ಮನ್ನೆಲ್ಲ ಮುಂದೆ ಬಿಟ್ಟು ಚಂದ್ರಶೇಖರನಾಥ ಸ್ವಾಮೀಜಿ ಮೂಲಕ ಪರ್ಯಾಯ ಮಠ ಹುಟ್ಟುಹಾಕಲು ದೇವೇಗೌಡರು ಮತ್ತು ಕುಮಾರಸ್ವಾಮಿ ಕಾರಣ. ನಾವು ಮಾಡಿದ್ದು ತಪ್ಪು ಎಂದು ಗೊತ್ತಾದ ಬಳಿಕ ಮಠದಲ್ಲಿ ದೊಡ್ಡವರ ಬಳಿ ಕ್ಷಮೆ ಕೇಳಿದ್ದೇವೆ’ ಎಂದು ಕಾಂಗ್ರೆಸ್ ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪರ್ಯಾಯ ಮಠ ಸ್ಥಾಪನೆಗೆ ಈಗ ಪಶ್ಚಾತ್ತಾಪ ಪಡುತ್ತಿದ್ದೇವೆ. ಅಂದು ಬಾಲಗಂಗಾಧರನಾಥ ಸ್ವಾಮೀಜಿ ಮತ್ತು ದೇವೇಗೌಡರ ಮಧ್ಯೆ ಮುಸುಕಿನ ಗುದ್ದಾಟ ಇತ್ತು. ಪರ್ಯಾಯ ಮಠ ಸ್ಥಾಪನೆಗೆ ಕ್ಷಮೆ ಕೇಳಿದ ಬಳಿಕ ಮಠದ ಶ್ರೀಗಳ ಅಣತಿಯಂತೆ ನಡೆಯುತ್ತಿದ್ದೇವೆ’ ಎಂದರು.

‘ದೇವೇಗೌಡರು, ಕುಮಾರಸ್ವಾಮಿಗೆ ಒಕ್ಕಲಿಗರು ಶೇ 60ರಷ್ಟು ಸಹಕಾರ ಕೊಟ್ಟಿದ್ದರು. ಅದನ್ನು ಬಳಸಿಕೊಂಡು ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿ ಆಗಿದ್ದರು. ಈಗ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದಾರೆ. ಅಲ್ಲಿ ಒಕ್ಕಲಿಗರಿಗೆ ಪ್ರಾಧಾನ್ಯತೆ ಸಿಕ್ಕಿಲ್ಲ. ಬಿಜೆಪಿಯವರು ಕುಮಾರಸ್ವಾಮಿಯನ್ನು ಮುಖ್ಯಮಂತ್ರಿ ಅಭ್ಯರ್ಥಿಯೆಂದು ಘೋಷಿಸುತ್ತಾರೆಯೇ’ ಎಂದು ಪ್ರಶ್ನಿಸಿದರು.

ಪರ್ಯಾಯ ಮಠ ಕಟ್ಟಿಲ್ಲ: ಎಚ್‌.ಡಿ. ಕುಮಾರಸ್ವಾಮಿ

ಹಾಸನ: ‘ದೊಡ್ಡ ಸಮಾಜವಿದೆ. ಇನ್ನೊಬ್ಬ ಸ್ವಾಮೀಜಿಯ ಆಶೀರ್ವಾದ ಸಿಗಲೆಂಬ ಉದ್ದೇಶದಿಂದ ಇನ್ನೊಂದು ಮಠಕ್ಕೆ ಸಹಕಾರ ನೀಡಿದ್ದೇವೆ. ಪರ್ಯಾಯ ಮಠ ಮಾಡಿಲ್ಲ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಜಿಲ್ಲೆಯ ರಾಮನಾಥಪುರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ವಿಶ್ವ ಒಕ್ಕಲಿಗರ ಸಂಘದ ಕೆ.ಆರ್. ಪೇಟೆ ಕೃಷ್ಣ ಸೇರಿದಂತೆ ಹಲವರು, ಮತ್ತೊಂದು ಮಠ ಇರಲಿ ಎಂದು ಬಂದರು. ಬೇರೆ ಸಮಾಜದ ಎಷ್ಟು ಮಠಗಳಿಲ್ಲ? ನಮ್ಮ ಸಮಾಜವೂ ವಿಸ್ತಾರಗೊಳ್ಳಲಿ ಎಂಬ ಉದ್ದೇಶದಿಂದ, ಇನ್ನೊಂದು ಮಠ ಬೆಳೆಯಲಿ ಎಂದು ಸಹಕಾರ ನೀಡಿದ್ದೇವೆ. ಅದು ತಪ್ಪಾ’ ಎಂದು ಪ್ರಶ್ನಿಸಿದರು.

‘ನಾನು ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದಾಗ, 140 ಸಣ್ಣ ಮಠಾಧೀಶರಿಗೆ ₹130 ಕೋಟಿ ಆರ್ಥಿಕ ನೆರವು ನೀಡಿದ್ದೇನೆ. ನನಗೆ ಇದೇನು ಹೊಸದಲ್ಲ’ ಎಂದರು.

‘ರಾಜಕೀಯದಲ್ಲಿ ಇನ್ನೊಂದು ವರ್ಷದಲ್ಲಿ ಸಾಕಷ್ಟು ಬದಲಾವಣೆಯಾಗಲಿವೆ. ದೇವರ ಆಶೀರ್ವಾದವಿದ್ದರೆ, ನಿಮ್ಮ ಸೇವೆ ಮಾಡಲು ಅವಕಾಶ ಸಿಗುತ್ತದೆ. ಮೂರು ಬಾರಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿ, ನಿಮ್ಮೆಲ್ಲರ ಆಶೀರ್ವಾದದಿಂದ ಮೂರನೇ ಜನ್ಮ ಪಡೆದಿದ್ದೇನೆ’ ಎಂದರು.

‘ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿರುವ ಬಗ್ಗೆ ಅಸೂಯೆ ಇಲ್ಲ. ಆದರೆ ರಾಜ್ಯವನ್ನು ಯಾವ ಕಡೆಗೆ ಕೊಂಡೊಯುತ್ತಾರೆಂಬ ಆತಂಕವಿದೆ. ಗ್ಯಾರಂಟಿ ಯೋಜನೆಗೆ ಅವರೇನು ದುಡಿದು ಕೊಡುತ್ತಿಲ್ಲ. ನಿಮ್ಮ ದುಡ್ಡನ್ನು ನಿಮಗೆ ಕೊಡುತ್ತಿದ್ದಾರಷ್ಟೆ. ₹1.05 ಲಕ್ಷ ಕೋಟಿ ಸಾಲ ಮಾಡಿದ್ದು, ಅದರಲ್ಲಿ ₹58 ಸಾವಿರ ಕೋಟಿ ನಿಮಗೆ ಕೊಡುತ್ತಿದ್ದಾರೆ. ₹6.87 ಲಕ್ಷ ಕೋಟಿ ಸಾಲ ತೀರಿಸೋರು ಯಾರು? ಇವತ್ತು ಇರುತ್ತಾರೆ, ನಾಳೆ ಹೋಗುತ್ತಾರೆ. ಆಮೇಲೆ ನೀವೇ ತೀರಿಸಬೇಕು’ ಎಂದರು.

‘ಕಾಂಗ್ರೆಸ್‌ನಿಂದ ಒಕ್ಕಲಿಗರಿಗೆ ಅನ್ಯಾಯ’

ಕೋಲಾರ: ಕಾಂಗ್ರೆಸ್‌ನಿಂದಲೇ ಒಕ್ಕಲಿಗರಿಗೆ ಹೆಚ್ಚು ಅನ್ಯಾಯವಾಗಿದೆ. ಹಾಗಾಗಿ ಒಕ್ಕಲಿಗರ ಮತ ಕೇಳುವ ನೈತಿಕತೆ ಕಾಂಗ್ರೆಸ್‌ಗೆ ಇಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹರಿಹಾಯ್ದಿದ್ದಾರೆ.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಡಿ.ಕೆ. ಶಿವಕುಮಾರ್ ಒಕ್ಕಲಿಗ ಸಮುದಾಯದ ಮುಖಂಡ ಅಲ್ಲ. ಕುಕ್ಕರ್ ಬಾಂಬರ್‌ನನ್ನು ಬ್ರದರ್ ಎಂದಿರುವ ಶಿವಕುಮಾರ್, ನಮ್ಮನ್ನು ಬ್ರದರ್ ಎನ್ನುವ ನೈತಿಕತೆ ಕಳೆದುಕೊಂಡಿದ್ದಾರೆ’ ಎಂದರು.

ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರ ಉರುಳಿಸಿದ್ದು ಬಿಜೆಪಿಯವರು ಎಂದು ಶಿವಕುಮಾರ್ ಹೇಳಿದ್ದಾರೆ. ಕುಮಾರಸ್ವಾಮಿ ಸರ್ಕಾರ ಉರುಳಿಸಿದ್ದು ಮತ್ತು ಮಂಡ್ಯದಲ್ಲಿ ನಿಖಿಲ್ ಕುಮಾರಸ್ವಾಮಿ ಅವರನ್ನು ಸೋಲಿಸಿದ್ದು ಕಾಂಗ್ರೆಸ್ಸಿನವರೇ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ ಎಂದರು.

‘ಎಲ್ಲ ಸಮುದಾಯವನ್ನು ಪ್ರೀತಿ ಮಾಡುವ ಮಠ ಆದಿಚುಂಚನಗಿರಿ. ಮಠಕ್ಕೆ ನಾವು ಭೇಟಿ ನೀಡಿದ್ದನ್ನು ಸಹಿಸದೆ, ಹೊಟ್ಟೆ ಉರಿಗೆ ಏನೇನೋ ಹೇಳುತ್ತಿರುವ ಡಿಕೆಶಿ ಅವರಿಗೆ ಬುದ್ಧಿ ಭ್ರಮಣೆಯಾಗಿದೆ’ ಎಂದರು.



ಚನ್ನಪಟ್ಟಣ ತಾಲ್ಲೂಕಿನ ಮತ್ತೀಕೆರೆ ಶೆಟ್ಟಿಹಳ್ಳಿ ಗ್ರಾಮದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಅವರು ಗುರುವಾರ ಮಹಿಳೆಯರಿಗೆ ಕೈ ಮುಗಿದು ಮತ ಯಾಚಿಸಿದರು

ಡಾಕ್ಟ್ರೇ... ಮಗಳ ಹಾರ್ಟ್ ಆಪರೇಷನ್ ಮಾಡಿದ ನಿಮಗೇ ನನ್ನ ವೋಟು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ‘ನನ್ನ ಮಗಳಿಗೆ ಹಾರ್ಟ್ ಆಪರೇಷನ್ ಮಾಡಿದ ಡಾಕ್ಟ್ರು ನೀವೇ. ಚಿಂತೆ ಬಿಡಿ, ನಿಮಗೇ ನನ್ನ ವೋಟು’

ತಾಲ್ಲೂಕಿನ ಮತ್ತೀಕೆರೆ ಶೆಟ್ಟಿಹಳ್ಳಿಯಲ್ಲಿ ಬಿಜೆಪಿ- ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಗುರುವಾರ ಪ್ರಚಾರಕ್ಕೆ ತೆರಳಿದಾಗ ಮಹಿಳೆಯೊಬ್ಬರು ಹೇಳಿದ ಮಾತಿದು...

ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ, ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಸ್ಥಳೀಯ ಮುಖಂಡರೊಂದಿಗೆ ಮತ ಯಾಚಿಸುತ್ತಿದ್ದ ಮಂಜುನಾಥ್, ವಾಹನದಿಂದ ಕೆಳಗಿಳಿದು ರಸ್ತೆ ಬದಿ ಜಮಾಯಿಸಿದ್ದ ಮಹಿಳೆಯರತ್ತ ತೆರಳಿ ಮತ ಹಾಕುವಂತೆ ಮನವಿ ಮಾಡಿದರು.

ಆಗ ಗುಂಪಿನಲ್ಲಿದ್ದ ಮಹಿಳೆಯೊಬ್ಬರು ಮಂಜುನಾಥ್ ಅವರನ್ನು ಉದ್ದೇಶಿಸಿ, ‘ಡಾಕ್ಟ್ರೆ ಮೂರು ವರ್ಷದ ಹಿಂದೆ ನನ್ನ ಮಗಳು ಅಶ್ವಿನಿಗೆ ಆಪರೇಷನ್ ಮಾಡಿದ್ರಲ್ಲಾ ಅವರ ತಾಯಿ ನಾನು. ನನ್ನ ಮಗಳ ಜೀವ ಉಳಿಸಿದ ನಿಮಗೇ ನನ್ನ ವೋಟು’ ಎಂದು ಕೈ ಮುಗಿದು ಹೇಳಿದರು.

ಅದಕ್ಕೆ ಮುಗುಳ್ನಕ್ಕ ಮಂಜುನಾಥ್, ‘ಒಳ್ಳೆಯದಾಗಲಿ ತಾಯಿ. ಚುನಾವಣೆಯಲ್ಲಿ ನನಗೆ ವೋಟು ಹಾಕಿ. ಮುಂದೆ ನಿಮಗೆ ಮತ್ತಷ್ಟು ಅನುಕೂಲವಾಗಲಿದೆ’ ಎಂದು ಭರವಸೆ ನೀಡಿದರು.

ವೈಯಕ್ತಿಕ ಮಾತು ಬೇಡ: ನಿರಾಣಿ ಎಚ್ಚರಿಕೆ



ಬಾಗಲಕೋಟೆ: ‘ನನ್ನ ಬಗ್ಗೆ ವೈಯಕ್ತಿಕವಾಗಿ ಮಾತನಾಡಿದರೆ, ನಿಮ್ಮವು ನೂರಾರು ವಿಷಯ ನನ್ನಲ್ಲಿವೆ. ಸಮಾಜದವರು ಮಾತನಾಡಬಾರದು ಎಂದು ಸುಮ್ಮನಿರುವೆ. ಅದನ್ನೇ ದೌರ್ಬಲ್ಯ ಎಂದುಕೊಳ್ಳಬೇಡಿ’ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಅವರು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿಗೆ ಎಚ್ಚರಿಕೆ ನೀಡಿದರು.

ತಾಲ್ಲೂಕಿನ ಕಲಾದಗಿಯಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಜಗದೀಶ ಶೆಟ್ಟರ್, ಮೃಣಾಲ್ ಹೆಬ್ಬಾಳಕರ ಇಬ್ಬರೂ ಒಂದೇ ಸಮಾಜದವರು. ನೀವೇಕೆ ಅಲ್ಲಿ ಪ್ರಚಾರ ಮಾಡುತ್ತೀರಿ? ನಿಮ್ಮ ಸಮಾಜದವರು ಇದ್ದಲ್ಲಿ ಪ್ರಚಾರ ಮಾಡಿ. ಸುಳ್ಳು ಹೇಳಿ ಬೆಂಬಲಿಸುವುದು ಯಾವ ನ್ಯಾಯ’ ಎಂದು ಪ್ರಶ್ನಿಸಿದರು.

‘ಪಕ್ಷದ ಪರ ಪ್ರಚಾರ ಮಾಡುವುದನ್ನು ಬಿಟ್ಟು ಸಮಾಜಕ್ಕೆ ಮೀಸಲಾತಿ ಕೊಡಿಸುವತ್ತ ಗಮನ ಹರಿಸಿ. ಬಿಜೆಪಿ ಸರ್ಕಾರ ಇದ್ದಾಗ ಜಾತಿ ಕಾಲಂನಲ್ಲಿ ಸೇರಿಸಲಾಗಿದೆ. 2ಡಿ ನೀಡಲಾಗಿದೆ. ಆಗ ಕಾಂಗ್ರೆಸ್ ಏಜೆಂಟ್‌ರಾಗಿ ಕೆಲಸ ಮಾಡಿದ ನೀವು ಎಷ್ಟು ಪ್ರತಿಭಟನೆ ಮಾಡಿದ್ದೀರಿ? ಅಧಿಕಾರಕ್ಕೆ ಬಂದ ಮೂರೇ ತಿಂಗಳಲ್ಲಿ 2ಎ ಮೀಸಲಾತಿ ನೀಡುವುದಾಗಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದ್ದರು. ಸರ್ಕಾರ ಬಂದು 6 ತಿಂಗಳಾದರೂ ಕ್ರಮ ಕೈಗೊಂಡಿಲ್ಲ’ ಎಂದರು.

ಬಿಜೆಪಿಯಲ್ಲಿ ಭುಗಿಲೆದ್ದ ಬಣ ರಾಜಕೀಯ

ಹೊನ್ನಾಳಿ: ಸಂಸದ ಸಿದ್ದೇಶ್ವರ, ಅಭ್ಯರ್ಥಿ ಗಾಯತ್ರಿ ಎದುರೇ ಅಸಮಾಧಾನ

ಪ್ರಜಾವಾಣಿ ವಾರ್ತೆ

ಹೊನ್ನಾಳಿ: ತಾಲ್ಲೂಕಿನಲ್ಲಿ ಬಿಜೆಪಿಯಲ್ಲಿನ ಬಣ ರಾಜಕೀಯ ಮತ್ತೆ ಸ್ಫೋಟಗೊಂಡಿದೆ. ಪಟ್ಟಣದಲ್ಲಿ ಗುರುವಾರ ನಡೆದ ಪಕ್ಷದ ಕಾರ್ಯಾಲಯದ ಉದ್ಘಾಟನೆ ವೇಳೆ ಸಂಸದ ಜಿ.ಎಂ. ಸಿದ್ದೇಶ್ವರ, ಬಿಜೆಪಿಯ ಲೋಕಸಭೆ ಚುನಾವಣೆಯ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಎದುರೇ ಕಾರ್ಯಕರ್ತರು ಪರಸ್ಪರ ಆಕ್ರೋಶ ವ್ಯಕ್ತಪಡಿಸಿ, ಬಣ ರಾಜಕೀಯದ ಬಗ್ಗೆ ಅಸಮಾಧಾನ ಹೊರಹಾಕಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಅವರ ಆಪ್ತರ ಕುರಿತು ರೇಣುಕಾಚಾರ್ಯ ಪರವಾಗಿದ್ದ ಕಾರ್ಯಕರ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರೆ, ಸಿದ್ದೇಶ್ವರ ಪರ ಕಾರ್ಯಕರ್ತರು ವಾಗ್ವಾದ ನಡೆಸಿದರು.

‘ತಾಲ್ಲೂಕಿನಲ್ಲಿ ರೇಣುಕಾಚಾರ್ಯರ ವಿರುದ್ಧ ಪಕ್ಷದ ಒಂದು ಬಣ ಕೆಲಸ ಮಾಡುತ್ತಿದೆ. ಅದರ ಹಿಂದೆ ಯಾರಿದ್ದಾರೆ?’ ಎಂದು ಕೆಲವು ಕಾರ್ಯಕರ್ತರು ಮುಖಂಡರನ್ನು ಪ್ರಶ್ನಿಸಿದರು.

‘ತಾಲ್ಲೂಕಿನ ಕುಂದೂರಿನಲ್ಲಿ ಕೆಲವರು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರು ಹಾಗೂ ಕ್ಷೇತ್ರದ ಮಾಜಿ ಸಚಿವರಾದ ರೇಣುಕಾಚಾರ್ಯ ಗಮನಕ್ಕೆ ತಾರದೇ ಅಭ್ಯರ್ಥಿ ಪರ ಪ್ರಚಾರ ನಡೆಸಿದ್ದಾರೆ. ಸಂಸದರ ಸೂಚನೆ ಇಲ್ಲದೇ, ಅವರ ಬೆಂಬಲ ಇಲ್ಲದೇ ಅವರ ಆಪ್ತ ಬಣ ತಾಲ್ಲೂಕಿನಲ್ಲಿ ಹೇಗೆ ಪ್ರಚಾರ ನಡೆಸಲು ಸಾಧ್ಯ? ಎಂದೂ ಕೆಲವರು ಪ್ರಶ್ನಿಸಿದರು.

‘ಪಕ್ಷದಲ್ಲೇ ಇರುವವರು ಪ್ರತ್ಯೇಕವಾಗಿ ಪ್ರಚಾರ ನಡೆಸುವಂತೆ ಯಾರು ಸೂಚಿಸಿದರು’ ಎಂದು ಅವರು ಏರುದನಿಯಲ್ಲೇ ಪ್ರಶ್ನಿಸಿದರು.

ಈ ವೇಳೆ ಎಲ್ಲರನ್ನೂ ಸಮಾಧಾನಪಡಿಸಲು ಯತ್ನಿಸಿದ ರೇಣುಕಾಚಾರ್ಯ, ‘ನಮ್ಮಲ್ಲಿ ಬಣ ರಾಜಕೀಯ ಇಲ್ಲ. ವೇದಿಕೆಯಲ್ಲಿ ಪಕ್ಷದ ತಾಲ್ಲೂಕು ಘಟಕ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷರು ಇದ್ದಾರೆ. ಹಲವು ಪದಾಧಿಕಾರಿಗಳು ಇದ್ದಾರೆ. ನಮ್ಮದೇ ನಿಜವಾದ ಬಿಜೆಪಿ. ವಿಧಾನಸಭಾ ಚುನಾವಣೆಯಲ್ಲೂ ನನ್ನ ವಿರುದ್ಧ ಒಂದು ಗುಂಪು ಕೆಲಸ ಮಾಡಿತ್ತು. ಆ ಗುಂಪು ಹಗಲು ಒಂದು ಪಕ್ಷಕ್ಕೂ, ರಾತ್ರಿ ಇನ್ನೊಂದು ಪಕ್ಷಕ್ಕೂ ಕೆಲಸ ಮಾಡುತ್ತದೆ. ಇದೆಲ್ಲಾ ನಮ್ಮ ಹತ್ತಿರ ನಡೆಯುವುದಿಲ್ಲ’ ಎಂದು ಹೇಳಿದರು.

‘ನಿಮಗೂ ಮೋದಿ ಬೇಕು. ಅವರಿಗೂ ಮೋದಿ ಬೇಕು. ಇಬ್ಬರೂ ಪ್ರಚಾರ ಮಾಡಿ’ ಎಂದು ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹೇಳಿದಾಗ ಕಾರ್ಯಕರ್ತರು ಒಪ್ಪಲಿಲ್ಲ.

‘ಆ ಗುಂಪಿನಲ್ಲಿ ಇರುವವರನ್ನು ಕರೆದು ಚರ್ಚಿಸಲಾಗುವುದು’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ರಾಜಶೇಖರ್ ನಾಗಪ್ಪ ಮನವೊಲಿಸಲು ಯತ್ನಿಸಿದರು. ಬಳಿಕ ರೇಣುಕಾಚಾರ್ಯ ಮಾತನಾಡಿ, ‘ಕಾರ್ಯಕರ್ತರು ತಲೆಕೆಡಿಸಿಕೊಳ್ಳಬೇಡಿ. ಅಭ್ಯರ್ಥಿ ಪರ ಪ್ರಚಾರಕ್ಕೆ ಸಹಕಾರ ಕೊಡಿ’ ಎಂದು ಸಮಾಧಾನ ಪಡಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಈ ವೇಳೆ ಮೂಕ ಪ್ರೇಕ್ಷಕರಾಗಿದ್ದರು. ಗಾಯತ್ರಿ ಸಿದ್ದೇಶ್ವರ ಅವರಿಗೆ ಟಿಕೆಟ್ ನೀಡಿದ್ದರಿಂದ ಅಸಮಾಧಾನಗೊಂಡಿದ್ದ ರೇಣುಕಾಚಾರ್ಯ ಬಂಡಾಯದ ಮುನ್ಸೂಚನೆ ನೀಡಿದ್ದರು. ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತಿತರರು ಬಂಡಾಯ ಶಮನಗೊಳಿಸಿದ್ದರು. ನಂತರ ಗುರುವಾರವಷ್ಟೇ ಮೊದಲ ಬಾರಿಗೆ ರೇಣುಕಾಚಾರ್ಯ ಬಿಜೆಪಿ ಅಭ್ಯರ್ಥಿ ಪರ ಕಾಣಿಸಿಕೊಂಡಿದ್ದಾರೆ.



ಹೊನ್ನಾಳಿಯಲ್ಲಿ ಗುರುವಾರ ಬಿಜೆಪಿ ಕಾರ್ಯಾಲಯ ಉದ್ಘಾಟನೆ ಸಮಾರಂಭದಲ್ಲಿ ಬಣ ರಾಜಕೀಯ ಕುರಿತು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರ ಪರ ಕಾರ್ಯಕರ್ತರು ವಾಗ್ವಾದ ನಡೆಸಿದರು

ಕೇಂದ್ರದ ನಾಯಕರಿಂದ ಪಂಚಮಸಾಲಿ ಗುರುಪೀಠದ ವಚನಾನಂದಶ್ರೀ ಭೇಟಿ

ಸಿಗದ ಪ್ರಾತಿನಿಧ್ಯ: ಮುನಿಸು ತಣಿಸಲು ಯತ್ನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಲೋಕಸಭಾ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿ ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಿಲ್ಲ ಎಂಬ ಕಾರಣದಿಂದ ಅಸಮಾಧಾನಗೊಂಡಿರುವ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಅವರ ಮನವೊಲಿಸಲು ಬಿಜೆಪಿ ಕೇಂದ್ರ ನಾಯಕರು ಮುಂದಾಗಿದ್ದಾರೆ.


ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಬಿಜೆಪಿ ಅಗತ್ಯ ಸಂಖ್ಯೆಯ ಟಿಕೆಟ್ ನೀಡದ ಕಾರಣ ಸ್ವಾಮೀಜಿ ಮುನಿಸಿಕೊಂಡಿದ್ದು, ಇದರಿಂದ ಚುನಾವಣೆಯ ಮೇಲೆ ಪರಿಣಾಮ ಬೀರಬಹುದು ಎಂಬ ಕಾರಣಕ್ಕೆ ಬಿಜೆಪಿಯ ಪ್ರಮುಖ ನಾಯಕರೊಬ್ಬರ ಸೂಚನೆಯ ಮೇರೆಗೆ ಕೇಂದ್ರದ ಮುಖಂಡರೊಬ್ಬರು ಬುಧವಾರ ವಚನಾನಂದ ಸ್ವಾಮೀಜಿ ಅವರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು. ಇದನ್ನು ಸ್ವಾಮೀಜಿ ಖಚಿತಪಡಿಸಿದ್ದಾರೆ.

ಬಿಜೆಪಿಯು ಪಂಚಮಸಾಲಿ ಸಮುದಾಯವನ್ನು ಮತ ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿದೆ. ಸಮುದಾಯಕ್ಕೆ ಪ್ರಾತಿನಿಧ್ಯ ನೀಡುತ್ತಿಲ್ಲ ಎಂದು ಸ್ವಾಮೀಜಿ ಬಿಜೆಪಿ ನಾಯಕರ ವಿರುದ್ಧ ಅಸಮಾಧಾನಗೊಂಡಿದ್ದು, ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಬಿಜೆಪಿಯ ಅಭ್ಯರ್ಥಿಗಳು ಮಠಕ್ಕೆ ಬರುವುದನ್ನು ನಿರ್ಬಂಧಿಸಿದ್ದಾರೆ. ಇದು ಚುನಾವಣೆಯ ಮೇಲೆ ಪರಿಣಾಮ ಬೀರಬಹುದು ಎಂದು ರಾಜ್ಯ ನಾಯಕರು ಈ ಮೊದಲೇ ಸ್ವಾಮೀಜಿ ಅವರ ಮನವೊಲಿಸುವ ಯತ್ನ ನಡೆಸಿದ್ದರು. ಅದು ಸಫಲ ಆಗದ್ದರಿಂದ ಇದೀಗ ಪಕ್ಷದ ವರಿಷ್ಠರು ಮತ್ತೊಬ್ಬ ಮುಖಂಡರ ಮೂಲಕ ಸ್ವಾಮೀಜಿ ಜೊತೆ ಚರ್ಚಿಸಿ ಮನವೊಲಿಸಲು ಯತ್ನಿಸಿದ್ದಾರೆ.

‘ದಶಕಗಳಿಂದ ಪಂಚಮಸಾಲಿ ಸಮುದಾಯ ಬೆಂಬಲ ನೀಡಿದ್ದರಿಂದ ರಾಜ್ಯದಲ್ಲಿ ಬಿಜೆಪಿ ನೆಲೆಯೂರಿದೆ. ಉತ್ತರ ಕರ್ನಾಟಕದಲ್ಲಿ ಪಕ್ಷ ಬಲಿಷ್ಠವಾಗಿ ಬೆಳೆಯಲು, ಎರಡು ಬಾರಿ ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬರಲು ಸಮುದಾಯವೇ ಕಾರಣ. ಆದರೂ ಸಮುದಾಯವನ್ನು ನಿರ್ಲಕ್ಷಿಸಲಾಗಿದೆ. ಅಧಿಕಾರಕ್ಕೆ ಮಾತ್ರ ನಾವು ಬೇಕಾ?’ ಎಂದೂ ಸ್ವಾಮೀಜಿ ಚರ್ಚೆಯ ವೇಳೆ ಪ್ರಶ್ನಿಸಿದರು ಎಂದು ತಿಳಿದುಬಂದಿದೆ.

‘ಸಮುದಾಯದವರನ್ನು ಮುಖ್ಯಮಂತ್ರಿ, ವಿಧಾನಸಭೆ ಅಧ್ಯಕ್ಷ, ಪರಿಷತ್ ಸಭಾಧ್ಯಕ್ಷ ಸೇರಿದಂತೆ ಯಾವುದೇ ಸ್ಥಾನಕ್ಕೆ ಪರಿಗಣಿಸಲಿಲ್ಲ. ವಿರೋಧ ಪಕ್ಷದ ನಾಯಕ ಸ್ಥಾನವನ್ನೂ ನೀಡಲಿಲ್ಲ. ಕಡೆ ಪಕ್ಷ ಕೋರ್ ಕಮಿಟಿಯಲ್ಲೂ ಸ್ಥಾನ ನೀಡಲಿಲ್ಲ. ಕೇವಲ ಮತ ಬ್ಯಾಂಕ್ ಆಗಿ ನೋಡಲಾಗುತ್ತಿದೆ’ ಎಂದು ಸ್ವಾಮೀಜಿ ಹೇಳಿದರು ಎನ್ನಲಾಗಿದೆ.

‘ಸಬ್ ಕಾ ವಿಕಾಸ್ ಸಬ್ ಕಾ ಸಾಥ್ ಎನ್ನುವ ಬಿಜೆಪಿಯು, ಪ್ರಮುಖ ಸಮುದಾಯವನ್ನು ಕಡೆಗಣಿಸಿದೆ. ಸಮುದಾಯಕ್ಕೆ ಒಂದೇ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ರಾಜ್ಯದ 17 ಕ್ಷೇತ್ರಗಳಲ್ಲಿ ಸಮುದಾಯ ಪ್ರಬಲವಾಗಿದೆ. ಶೇ 10ರಷ್ಟು ಇರುವ ಲಿಂಗಾಯತದ ಇತರೆ ಸಮುದಾಯದವರಿಗೆ ನಾಲ್ಕೈದು ಕಡೆ ಟಿಕೆಟ್ ನೀಡಲಾಗಿದೆ. ಹಾಗಾದರೆ ಸಾಮಾಜಿಕ ನ್ಯಾಯದ ಬಗ್ಗೆ ಹೇಗೆ ಮಾತನಾಡುತ್ತಾರೆ. ಅದಕ್ಕೆ ಸಮುದಾಯದಲ್ಲಿ ಆಕ್ರೋಶ ಇದೆ. ಅನೇಕರು ನ್ಯಾಯ ಕೇಳುತ್ತಿದ್ದಾರೆ’ ಎಂದು ಸ್ವಾಮೀಜಿ ‘ಪ್ರಜಾವಾಣಿ’ಗೆ ತಿಳಿಸಿದರು.



ವಚನಾನಂದ ಸ್ವಾಮೀಜಿ

ಸಮುದಾಯದಲ್ಲಿ ಜಾಗೃತಿ

‘ಪಂಚಮಸಾಲಿ ಸಮುದಾಯಕ್ಕೆ ಆದ ಅನ್ಯಾಯದ ಬಗ್ಗೆ ಜಾಗೃತಿ ಮೂಡಿಸಲು ಮುಂದಾಗಿದ್ದೇವೆ. ಈಗಾಗಲೇ ನಾಲ್ಕಾರು ಜಿಲ್ಲೆಗಳಲ್ಲಿ ಸಭೆ ನಡೆಸಿದ್ದು, ಉಳಿದ ಜಿಲ್ಲೆಗಳ ಸಭೆ ಮಾಡಿ ಸಮುದಾಯಗಳಲ್ಲಿ ಜಾಗೃತಿ ಮೂಡಿಸಲಾಗುವುದು. ಬಳಿಕ ಚರ್ಚೆ ಮಾಡಿ ನಿರ್ಧಾರ ಘೋಷಿಸುತ್ತೇವೆ’ ಎಂದು ಸ್ವಾಮೀಜಿ ಹೇಳಿದರು.

‘ಸಮುದಾಯದವರು ಸಂಸತ್‌ಗೆ ಹೋಗಬಾರದಾ ಎಂಬ ಪ್ರಶ್ನೆ ಎತ್ತಿದ್ದೆವು. ಇದರಿಂದ ಹಲವರು ಮನವೊಲಿಸುವ ಯತ್ನ ಮಾಡುತ್ತಿದ್ದಾರೆ. ಹಲವು ಕೇಂದ್ರ ನಾಯಕರು ನಿರಂತರವಾಗಿ ಸಂಪರ್ಕ ಮಾಡುತ್ತಿದ್ದಾರೆ. ಅದಕ್ಕೆ ಉದಾಸೀನವೇ ಮದ್ದು ಎಂದು ಸುಮ್ಮನಿದ್ದೇವೆ. ಚುನಾವಣೆ ನಂತರ ನಮ್ಮ ನಿರ್ಧಾರ ಹೇಳುವುದಾಗಿ ತಿಳಿಸಿದ್ದೇವೆ’ ಎಂದು ಸ್ವಾಮೀಜಿ ವಿವರಿಸಿದರು.

‘ದೇಶದ ಉಳಿವಿಗೆ 4 ಮಕ್ಕಳನ್ನು ಹೆರಬೇಕು’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಆರತಿಗೊಂದು ಕೀರ್ತಿಗೊಂದು ಎಂದು ಎರಡೇ ಮಕ್ಕಳನ್ನು ಹೆರುತ್ತಿರುವ ಕಾರಣ ಭಾರತೀಯತೆ ನಾಶವಾಗಿ, ದೇಶ ಹಾಳಾಗುತ್ತಿದೆ. ದೇಶ ಉಳಿಸಲು 4 ಮಕ್ಕಳಿಗೆ ಜನ್ಮ ನೀಡುವುದು ಅನಿವಾರ್ಯ’ ಎಂದು ಶಿರಶ್ಯಾಡದ ಅಭಿನವ ಮುರುಗೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸುಕ್ಷೇತ್ರ ಕತಕನಹಳ್ಳಿಯಲ್ಲಿ ಗುರು ಚಕ್ರವರ್ತಿ ಸದಾಶಿವ ಮುತ್ತ್ಯಾರ ಜಾತ್ರಾ ಮಹೋತ್ಸವದಲ್ಲಿ ಗುರುವಾರ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ‘ದೇಶಕ್ಕೆ, ಪರಿವಾರಕ್ಕೆ, ಧರ್ಮಕ್ಕೆ ಮತ್ತು ಸಮಾಜಕ್ಕೆ ಹೀಗೆ ಪ್ರತಿ ಮಾತೆಯರು ನಾಲ್ಕು ಮಕ್ಕಳಿಗೆ ಜನ್ಮ ನೀಡಬೇಕು’ ಎಂದರು.

‘ದೇಶದ ಭದ್ರತೆ ಹಾಗೂ ಸಮಾಜದ ಸುಧಾರಣೆ ಅತೀ ಮುಖ್ಯ ವಿಷಯಗಳು. ಜೊತೆಗೆ ಧರ್ಮದ ಕಾರ್ಯ ನಡೆಯಬೇಕು. ನವದಂಪತಿಗಳು ಸನಾತನ ಪರಂಪರೆ ತಿಳಿಯಬೇಕು. ಹೆಚ್ಚು ಮಕ್ಕಳನ್ನು ಹೆರಬೇಕು’ ಎಂದು ಅವರು ಹೇಳಿದರು.

ಮತದಾರರಿಗೆ ಹಣ ತಲುಪದ ಕಾರಣ ಸೋತೆ: ಎಂ.ಟಿ.ಬಿ

ಪ್ರಜಾವಾಣಿ ವಾರ್ತೆ

ಹೊಸಕೋಟೆ: ‘ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ನನ್ನ ಸೋಲಿಗೆ ಹಲವು ಕಾರಣಗಳಿರಬಹುದು. ಆದರೆ, ಮತದಾರರಿಗೆ ಹಂಚಲು ಕೊಟ್ಟಿದ್ದ ಹಣ ಸರಿಯಾಗಿ ಹಂಚಿಕೆಯಾಗಲಿಲ್ಲ. ಹಾಗಾಗಿ ನಾನು ಸೋಲಬೇಕಾಯಿತು’ ಎಂದು ವಿಧಾನ ಪರಿಷತ್ ಸದಸ್ಯ ಎಂ.ಟಿ.ಬಿ ನಾಗರಾಜ್ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಗುರುವಾರ ನಡೆದ ಬೂತ್ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಮತದಾರರಿಗೆ ಹಂಚಿಕೆಯಾಗಬೇಕಿದ್ದ ಹಣ ಅವರನ್ನು ತಲುಪಿಲ್ಲ ಎಂಬ ಕುರಿತು ನನಗೆ ಹಲವು ದೂರು ಬಂದಿದ್ದವು. ಈ ಲೋಕಸಭಾ ಚುನಾವಣೆಯಲ್ಲಿ ಹಾಗೇ ಆಗುವುದು ಬೇಡ’ ಎಂದರು.

‘ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಪಕ್ಷದ ಹಲವು ಮುಖಂಡರ ಸ್ವಯಂಕೃತ ಅಪರಾಧವೂ ನನ್ನ ಸೋಲಿಗೆ ಕಾರಣ. ಸಮಯದ ಕೊರತೆಯಿಂದ ಪ್ರಚಾರ ಕೈಗೊಳ್ಳಲು ಸಾಧ್ಯವಾಗಲಿಲ್ಲ’ ಎಂದು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದರು.

ನಾಗರಾಜ ಅವರ ಈ ಭಾಷಣವನ್ನು ಮಾಧ್ಯಮ ಪ್ರತಿನಿಧಿಗಳು ಮೊಬೈಲ್‌ಗಳಲ್ಲಿ ಸೆರೆ ಹಿಡಿದಿದ್ದರು. ಪಕ್ಷದ ಕಾರ್ಯಕರ್ತರು ಪತ್ರಕರ್ತರ ಮೊಬೈಲ್ ಫೋನ್‌ಗಳನ್ನು ಕಿತ್ತುಕೊಂಡು ವಿಡಿಯೊ ಡಿಲೀಟ್ ಮಾಡಿಸಿದರು.

ರಾಹುಲ್ ಹೆಸರಲ್ಲಿ ಮತ ಕೇಳಲು ಭಯವೇ?

ಬಿ.ಎಸ್‌.ಯಡಿಯೂರಪ್ಪ ಪ್ರಶ್ನೆ • ‘ಕೇಂದ್ರದಿಂದ 7 ಕೋಟಿ ಉದ್ಯೋಗ ಸೃಷ್ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಪಕ್ಷ ರಾಹುಲ್ ಗಾಂಧಿ ಹೆಸರಲ್ಲಿ ಏಕೆ ಮತ ಕೇಳುತ್ತಿಲ್ಲ? ಅದರ ಬದಲಿಗೆ ರಾಷ್ಟ್ರ ಮಟ್ಟದ ಚುನಾವಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರಿನಲ್ಲಿ ಮತ ಕೇಳುವ ವಿಚಿತ್ರ ಸ್ಥಿತಿಗೆ ಏಕೆ ತಲುಪಿದೆ. ಅವರಲ್ಲಿ ವಿಶ್ವಾಸಾರ್ಹ ನಾಯಕರಿಲ್ಲವೇ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಪ್ರಶ್ನಿಸಿದರು.

‘ಕಾಂಗ್ರೆಸ್‌ಗೆ ಮತ ಹಾಕುವುದು ಎಂದರೆ ದೇಶದ ಅಭದ್ರತೆಗೆ, ಅಸ್ಥಿರತೆಗೆ ಮತ್ತು ಅರಾಜಕತೆಗೆ ಮತ ಹಾಕಿದಂತೆ ಎಂಬುದನ್ನು ಮತದಾರರು ಗಮನದಲ್ಲಿಟ್ಟುಕೊಳ್ಳಬೇಕು’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಕುಟುಕಿದರು.

ಕಾಂಗ್ರೆಸ್‌ಗೆ ವಿಶ್ವಾಸಾರ್ಹ ನಾಯಕತ್ವವೇ ಇಲ್ಲ ಎಂಬುದು ಈ ಚುನಾವಣೆಯಲ್ಲಿ ಸ್ಪಷ್ಟವಾಗಿದೆ. ರಾಜ್ಯದಲ್ಲಿ ಸರ್ಕಾರದ ಸಾಧನೆಯ ಬೆಂಬಲವೂ ಇಲ್ಲದೇ ಕೇವಲ ಕೇಂದ್ರ ಸರ್ಕಾರದ ಅನುದಾನದ ಬಗ್ಗೆ ಜನರ ದಾರಿ ತಪ್ಪಿಸಿ, ವಿವಾದ ಸೃಷ್ಟಿಸಿ ಆ ಮೂಲಕ ಬೆಂಬಲಗಳಿಸಬಹುದು ಎಂಬ ಭ್ರಮೆಯಲ್ಲಿದ್ದಾರೆ ಎಂದು ಯಡಿಯೂರಪ್ಪ ಹರಿಹಾಯ್ದರು.

‘ನಾವು ನರೇಂದ್ರ ಮೋದಿಯವರ ಸರ್ಕಾರದ 10 ವರ್ಷಗಳ ಸಾಧನೆಯ ಆಧಾರದ ಮೇಲೆ ಚುನಾವಣೆ ಎದುರಿಸುತ್ತಿದ್ದೇವೆ. ಲೋಕಸಭಾ ಚುನಾವಣೆ ನಡೆಯುತ್ತಿದೆ ಎಂಬುದನ್ನು ಕಾಂಗ್ರೆಸ್ ಪಕ್ಷ ಸಂಪೂರ್ಣವಾಗಿ ಮರೆತಂತಿದೆ. ವಿಫಲ ನಾಯಕ ರಾಹುಲ್ ಹೆಸರು ಪ್ರಸ್ತಾಪಿಸಲೂ ಕಾಂಗ್ರೆಸ್ ಹಿಂಜರಿಯುತ್ತಿದೆ’ ಎಂದರು.

‘ಮಾತು ಮಾತಿಗೂ 2 ಕೋಟಿ ಉದ್ಯೋಗ ಕೊಟ್ಟಿದ್ದೀರಾ ಎಂದು ಕಾಂಗ್ರೆಸ್‌ನವರು ಪದೇ ಪದೇ ಪ್ರಶ್ನೆ ಮಾಡುತ್ತಿದ್ದಾರೆ. 2014ರಲ್ಲಿ 15.54 ಕೋಟಿ ಭವಿಷ್ಯನಿಧಿ ಖಾತೆ ಇತ್ತು. 2022ರಲ್ಲಿ ಇದರ ಸಂಖ್ಯೆ 22.5 ಕೋಟಿ ದಾಟಿದೆ. 7 ಕೋಟಿ ಹೊಸ ಉದ್ಯೋಗ ಸೇರ್ಪಡೆ ಆಗಿದೆ. 2014ರಲ್ಲಿ ಎಂಎಸ್‌ಎಂಇ 5 ಕೋಟಿ ಉದ್ಯೋಗ ನೀಡಿದ್ದವು. 2022ರಲ್ಲಿ ಅದರ ಸಂಖ್ಯೆ 6.3 ಕೋಟಿ ದಾಟಿದೆ ಎಂದರು.

ಬೆಂಗಳೂರಿನ ಎಚ್‌ಎಎಲ್ ಮುಚ್ಚುತ್ತಾರೆ ಎಂದು ರಾಹುಲ್‌ಗಾಂಧಿ ಕಳೆದ ಚುನಾವಣೆ ವೇಳೆ ಸುಳ್ಳು ಪ್ರಚಾರ ಮಾಡಿದ್ದರು. ಆದರೆ, ಇಂದು ಎಚ್‌ಎಎಲ್ ₹84 ಸಾವಿರ ಕೋಟಿ ಕಾರ್ಯಾದೇಶ ಪಡೆದಿದೆ. ಇನ್ನೂ ₹50 ಸಾವಿರ ಕೋಟಿ ಕಾರ್ಯಾದೇಶ ಪಡೆಯಲು ಮಾತುಕತೆಗಳು ನಡೆಯುತ್ತಿವೆ. 2023–24ರಲ್ಲಿ ₹29 ಸಾವಿರ ಕೋಟಿ ಆದಾಯಗಳಿಸಿದೆ. ಎಚ್‌ಎಎಲ್ ಬಗ್ಗೆ ಅಪಪ್ರಚಾರ ಮಾಡಿದ ರಾಹುಲ್‌ಗಾಂಧಿ ಕ್ಷಮೆ ಕೇಳುತ್ತಾರಾ? ಅವರಿಂದ ಡಿ.ಕೆ. ಶಿವಕುಮಾರ್ ಕ್ಷಮೆ ಕೇಳಿಸುತ್ತಾರಾ ಎಂದು ಯಡಿಯೂರಪ್ಪ ಪ್ರಶ್ನಿಸಿದರು.

ಶಾಸಕ ಬೈರತಿ ಬಸವರಾಜು ಮತ್ತು ವಿ.ಸುನಿಲ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಇದ್ದರು.

‘10 ತಿಂಗಳಲ್ಲಿ ಎಷ್ಟು ಉದ್ಯೋಗ ನೀಡಿದ್ದೀರಿ?’

ಸಿದ್ದರಾಮಯ್ಯ ಸರ್ಕಾರ ಕಳೆದ 10 ತಿಂಗಳಲ್ಲಿ ರಾಜ್ಯದಲ್ಲಿ ಎಷ್ಟು ಉದ್ಯೋಗ ಸೃಷ್ಟಿ ಮಾಡಿದೆ ಎಂದು ಯಡಿಯೂರಪ್ಪ ಪ್ರಶ್ನಿಸಿದರು.

ಸಚಿವರಾದ ಎಂ.ಬಿ.ಪಾಟೀಲ ಮತ್ತು ಪ್ರಿಯಾಂಕ ಖರ್ಗೆ ಅವರ ‘ಎಕ್ಸ್’ ಖಾತೆಗಳಲ್ಲಿ ಮಾತ್ರ ಉದ್ದಿಮೆ ಸ್ಥಾಪನೆ ಆಗಿದೆ. ಕಳೆದ 10 ತಿಂಗಳಿನಲ್ಲಿ ಒಂದೇ ಒಂದು ಉದ್ಯೋಗ ನೀಡದೆ ದಾಖಲೆ ಮಾಡಿರುವುದು ಕಾಂಗ್ರೆಸ್ ಸರ್ಕಾರದ ಸಾಧನೆ ಎಂದು ಅವರು ವ್ಯಂಗ್ಯವಾಡಿದರು.

2ನೇ ಹಂತ: ನಾಮಪತ್ರಕ್ಕೆ ತೆರೆದ ಪಥ

ಒಂದನೇ ಪುಟದಿಂದ

ಬಿಜೆಪಿ–ಜೆಡಿಎಸ್ ನಡುವೆ ಲೋಕಸಭಾ ಚುನಾವಣಾ ಮೈತ್ರಿಯಾಗಿ ಕ್ಷೇತ್ರಗಳ ಹಂಚಿಕೆ ಮಾಡಿಕೊಂಡಿವೆ. ಜೆಡಿಎಸ್‌ಗೆ ಬಿಟ್ಟುಕೊಟ್ಟ ಯಾವ ಕ್ಷೇತ್ರಗಳೂ ಎರಡನೇ ಹಂತದಲ್ಲಿ ಇಲ್ಲ. ಹೀಗಾಗಿ, ಎಲ್ಲ 14 ಕ್ಷೇತ್ರಗಳಲ್ಲೂ ಕಾಂಗ್ರೆಸ್–ಬಿಜೆಪಿ ಮಧ್ಯೆ ನೇರ ಹಣಾಹಣಿ ಇದೆ. ಆದರೆ, ನಾಲ್ಕು ಕ್ಷೇತ್ರಗಳಲ್ಲಿ ಬಂಡಾಯದ ಕಹಳೆ ಮೊಳಗಿಸಿರುವ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರೆ ತ್ರಿಕೋನ ಸ್ಪರ್ಧೆ ಏರ್ಪಡುವ ಸಾಧ್ಯತೆ ಇದೆ.

ರಾಜ್ಯದಲ್ಲಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಹಾಗೂ ಕೇಂದ್ರದಲ್ಲಿನ ಆಡಳಿತಾರೂಢ ಬಿಜೆಪಿ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ಶಿವಮೊಗ್ಗ ಹಾಗೂ ಧಾರವಾಡ ಕ್ಷೇತ್ರಗಳಲ್ಲಿ ಬಿಜೆಪಿಗೆ, ಬಾಗಲಕೋಟೆ ಹಾಗೂ ದಾವಣಗೆರೆಯಲ್ಲಿ ಕಾಂಗ್ರೆಸ್‌ಗೆ ಬಂಡಾಯದ ಕಾವು ಎದುರಾಗಿದೆ.

ದಾವಣಗೆರೆಯಲ್ಲಿ ಟಿಕೆಟ್ ಆಕಾಂಕ್ಷಿ ಆಗಿದ್ದ ವಿನಯ್‌ಕುಮಾರ್ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯುವ ಘೋಷಣೆ ಮಾಡಿದ್ದಾರೆ. ಕೆಪಿಸಿಸಿ ಖಜಾಂಚಿಯೂ ಆದ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಸೊಸೆ, ತೋಟಗಾರಿಕಾ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಅವರು ಕಾಂಗ್ರೆಸ್ ಅಭ್ಯರ್ಥಿ. ಬಿಜೆಪಿಯ ಗಾಯತ್ರಿ ಸಿದ್ದೇಶ್ವರ ಅವರ ಎದುರು ಸೆಣಸುತ್ತಿರುವ ಅವರು ವಿನಯ್ ಅವರ ಬಂಡಾಯದ ಬಿಸಿ ಎದುರಿಸುತ್ತಿದ್ದಾರೆ. ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ವಿರುದ್ಧ ಜಿಲ್ಲೆಯ ಹಲವು ಮಾಜಿ ಶಾಸಕರು ಮುನಿಸಿಕೊಂಡಿದ್ದಾರೆ. ಯಡಿಯೂರಪ್ಪ–ವಿಜಯೇಂದ್ರ ಅವರು ಬಂಡಾಯ ಶಮನ ಮಾಡಿದ್ದರೂ, ಭಿನ್ನಮತ ಸಂಪೂರ್ಣ ಹತೋಟಿಗೆ ಬಂದಿಲ್ಲ.

ಹಾಗೆಯೇ, ಬಾಗಲಕೋಟೆಯಲ್ಲಿ ಕಾಂಗ್ರೆಸ್ ನಾಯಕಿ ವೀಣಾ ಕಾಶಪ್ಪನವರ್ ತಮ್ಮ ಸ್ಪಷ್ಟ ನಿರ್ಧಾರ ಪ್ರಕಟಿಸದೇ ಇರುವುದು ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲರ ತಲೆಬಿಸಿ ಹೆಚ್ಚಿಸಿದೆ. ಹಾಲಿ ಸಂಸದ, ಬಿಜೆಪಿಯ ಪಿ.ಸಿ. ಗದ್ದಿಗೌಡರ್ ಅವರು ಕಾಂಗ್ರೆಸ್ ಎದುರಾಳಿ.

ಬಿಎಸ್‌ವೈ ತವರಿನಲ್ಲೇ ಬಂಡಾಯದ ಬೇಗೆ

ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹಾಗೂ ಅವರ ಮಗ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಎಲ್ಲ 28 ಕ್ಷೇತ್ರಗಳ ಗೆಲುವು ಪ್ರತಿಷ್ಠೆಯಾಗಿದ್ದರೂ, ತವರು ಕ್ಷೇತ್ರ ಶಿವಮೊಗ್ಗ ಗೆಲ್ಲುವುದು ಇಬ್ಬರಿಗೂ ಸವಾಲಾಗಿದೆ.

ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಯಡಿಯೂರಪ್ಪ ಅವರ ಇನ್ನೊಬ್ಬ ಪುತ್ರ, ಹಾಲಿ ಸಂಸದ ಬಿ.ವೈ. ರಾಘವೇಂದ್ರ ಅಭ್ಯರ್ಥಿ. ಯಡಿಯೂರಪ್ಪ ಕುಟುಂಬದ ವಿರುದ್ಧ ಮುನಿಸಿಕೊಂಡಿರುವ ಬಿಜೆಪಿ ನಾಯಕರೂ ಆದ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಕ್ಷೇತ್ರದಲ್ಲಿ ಬಂಡಾಯದ ಕಹಳೆ ಮೊಳಗಿಸಿದ್ದಾರೆ. ರಾಘವೇಂದ್ರ ವಿರುದ್ಧ ಕಣಕ್ಕೆ ಇಳಿಯುವುದಾಗಿ ಘೋಷಿಸಿದ್ದು, ಬಿರುಸಿನ ಪ್ರಚಾರವನ್ನೂ ಕೈಗೊಂಡಿದ್ದಾರೆ. ಮೊದಲ ದಿನವೇ (ಏ.12) ನಾಮಪತ್ರ ಸಲ್ಲಿಸುವುದಾಗಿಯೂ ಹೇಳಿದ್ದಾರೆ. ಪಕ್ಷದ ವರಿಷ್ಠರು ಇದುವರೆಗೂ ನಡೆಸಿದ ಮನವೊಲಿಕೆಗೆ ಅವರು ಬಗ್ಗಿಲ್ಲ. ಇದರಿಂದ ಯಡಿಯೂರಪ್ಪ ಕುಟುಂಬ ಸಾಕಷ್ಟು ಮುಜುಗರಕ್ಕೆ ಒಳಗಾಗಿದೆ.

ಸಚಿವ ಜೋಶಿಗೆ ದಿಂಗಾಲೇಶ್ವರ ದಿಗಿಲು!

ಧಾರವಾಡ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಶಿರಹಟ್ಟಿ ಭಾವೈಕ್ಯ ಪೀಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ನಡೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಸವಾಲಾಗಿದೆ. ಗೆಲುವಿಗಾಗಿ ಲಿಂಗಾಯತ ಮತ ಬ್ಯಾಂಕ್ ನೆಚ್ಚಿಕೊಂಡಿರುವ ಬಿಜೆಪಿ ದಿಂಗಾಲೇಶ್ವರರ ಮನವೊಲಿಕೆಯ ಪ್ರಯತ್ನ ಮುಂದುವರಿಸಿದೆ.

ಬಿ.ಎಸ್.ಯಡಿಯೂರಪ್ಪ, ವಿಜಯೇಂದ್ರ ಸೇರಿದಂತೆ ಹಲವು ನಾಯಕರು ಶ್ರೀಗಳು ತಮ್ಮ ನಿರ್ಧಾರ ಬದಲಿಸುವವರು ಎನ್ನುವ ನಂಬಿಕೆ ಇಟ್ಟುಕೊಂಡಿದ್ದಾರೆ. ಆದರೆ, ಶ್ರೀಗಳ ಹಟ ಮುಂದುವರಿದಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ಎದ್ದುನಿಂತು ಮಾತನಾಡಲು ಧೈರ್ಯ ಹೇಗೆ ಬೇಕೋ ಹಾಗೆಯೇ ಕುಳಿತು ಆಲಿಸಲು ಸಹ ಧೈರ್ಯ ಇರಬೇಕಾಗುತ್ತದೆ.

-ವಿನ್‌ಸ್ಟನ್ ಚರ್ಚಿಲ್

ಡೋಪಿಂಗ್ ಪಿಡುಗು ತಡೆಗೆ ತ್ವರಿತ ಕ್ರಮ ಅಗತ್ಯ

ಪ್ಯಾರಿಸ್ ಒಲಿಂಪಿಕ್ಸ್ ಆರಂಭಕ್ಕೆ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಅದರಲ್ಲಿ ಭಾರತಕ್ಕೆ ಎಷ್ಟು ಪದಕಗಳು ಒಲಿಯಬಹುದು ಎಂಬ ಲೆಕ್ಕಾಚಾರಗಳೂ ನಡೆದಿವೆ. ಆದರೆ ಇದೇ ಹೊತ್ತಿನಲ್ಲಿ ಬಂದಿರುವ ಕಹಿಸುದ್ದಿಯೊಂದು ದೇಶದ ಕ್ರೀಡಾ ವಲಯವನ್ನು ತಲ್ಲಣಗೊಳಿಸಿದೆ. ಉದ್ದೀಪನ ಮದ್ದು ಸೇವನೆ (ಡೋಪಿಂಗ್) ನಿಯಮ ಉಲ್ಲಂಘಿಸಿದ ಅತಿ ಹೆಚ್ಚು ಪ್ರಕರಣಗಳು ಭಾರತದಲ್ಲಿ ದಾಖಲಾಗಿವೆ. 2,000 ಹಾಗೂ ಅದಕ್ಕಿಂತ ಹೆಚ್ಚು ಮಾದರಿಗಳ ಪರೀಕ್ಷೆಗಳನ್ನು ನಡೆಸಿದ ದೇಶಗಳಲ್ಲಿ ಅತಿ ಹೆಚ್ಚು ಪಾಸಿಟಿವ್ ಪ್ರಕರಣಗಳು ಭಾರತದಲ್ಲಿವೆ ಎಂದು ವಿಶ್ವ ಉದ್ದೀಪನ ಮದ್ದು ತಡೆ ಘಟಕ (ವಾಡಾ) ಬಹಿರಂಗಪಡಿಸಿದೆ. ಇದು ದೇಶವು ತಲೆತಗ್ಗಿಸುವ ಸಂಗತಿಯಾಗಿದೆ. ಅಷ್ಟೇ ಅಲ್ಲ, ಕಳೆದ ಒಂದು ದಶಕದಲ್ಲಿ ನಡೆದ ಪ್ರಕರಣಗಳ ಅಧ್ಯಯನದ ವರದಿಯೊಂದನ್ನು ಜನವರಿಯಲ್ಲಿ ವಾಡಾ ಪ್ರಕಟಿಸಿತ್ತು. ಅದರ ಅನ್ವಯ ಭಾರತದಲ್ಲಿ ಜೂನಿಯರ್ ಅಥ್ಲೀಟ್‌ಗಳಲ್ಲಿ ಡೋಪಿಂಗ್ ಪ್ರಮಾಣ ಹೆಚ್ಚಿದೆ. ಉದ್ದೀಪನ ಮದ್ದು ಪಿಡುಗು ತಡೆಗಟ್ಟುವಲ್ಲಿ ಸಂಬಂಧಿಸಿದ ಆಡಳಿತ ವ್ಯವಸ್ಥೆಗಳು ವಿಫಲವಾಗಿರುವುದು ಬಹಿರಂಗವಾಗಿದೆ. ಇಂತಹ ಬೆಳವಣಿಗೆಯು 2036ರ ಒಲಿಂಪಿಕ್ಸ್ ಆತಿಥ್ಯಕ್ಕಾಗಿ ಬಿಡ್ ಸಲ್ಲಿಸಿರುವ ಭಾರತಕ್ಕೆ ಶೋಭೆ ತರುವುದಿಲ್ಲ. ಈ ಪಿಡುಗು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದು ಆತಂಕಕಾರಿ ಆಗಿದೆ. ಒಂದೆಡೆ, ಕ್ರೀಡೆಯ ಉತ್ತೇಜನಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು ಸರ್ಕಾರ ಮತ್ತು ಸಂಸ್ಥೆಗಳು ವಿನಿಯೋಗಿಸುತ್ತಿವೆ. ಆದರೆ ಈ ಅಭಿಯಾನಕ್ಕೆ ಡೋಪಿಂಗ್ ಪಿಡುಗು ಅಡ್ಡಿಯಾಗುತ್ತಿರುವುದು ಸುಳ್ಳಲ್ಲ. ಈ ವಿಷಯದಲ್ಲಿ ಅಮೆರಿಕವನ್ನೂ ಭಾರತ ಹಿಂದಿಕ್ಕಿದೆ. 2020ರ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಭಾರತವು ಒಂದು ಚಿನ್ನ, ಎರಡು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳನ್ನು ಜಯಿಸಿ 48ನೇ ಸ್ಥಾನ ಪಡೆದಿತ್ತು. 113 ಪದಕಗಳನ್ನು ಗೆದ್ದಿದ್ದ ಅಮೆರಿಕ ಮೊದಲ ಸ್ಥಾನ ಗಳಿಸಿತ್ತು. ಬಾಕ್ಸಿಂಗ್, ಕುಸ್ತಿ ಮತ್ತು ವೇಟ್‌ಲಿಫ್ಟಿಂಗ್ ಕ್ರೀಡೆಗಳಲ್ಲಿ ಅತಿ ಹೆಚ್ಚು ಡೋಪಿಂಗ್ ಪ್ರಕರಣಗಳು ಖಚಿತಪಟ್ಟಿವೆ. ಎರಡು ದಶಕಗಳ ಹಿಂದೆ ಭಾರತ ವೇಟ್‌ಲಿಫ್ಟಿಂಗ್ ಸಂಸ್ಥೆಯನ್ನು ವಿಶ್ವ ವೇಟ್‌ಲಿಫ್ಟಿಂಗ್ ಫೆಡರೇಷನ್ ನಿಷೇಧಿಸಿತ್ತು. ಆಗ ಒಂದೇ ವರ್ಷದಲ್ಲಿ ಮೂರಕ್ಕಿಂತ ಹೆಚ್ಚು ವೇಟ್‌ಲಿಫ್ಟರ್‌ಗಳು ನಿಷೇಧಿತ ಮದ್ದು ಸೇವನೆ ಮಾಡಿ ಸಿಕ್ಕಿಬಿದ್ದಿದ್ದರು. ಇತ್ತೀಚಿನ ದಿನಗಳಲ್ಲಿ ಬೇರೆ ಕ್ರೀಡೆಗಳಿಗೂ ಈ ಪಿಡುಗು ವ್ಯಾಪಿಸಿದೆ.



ಉದ್ದೀಪನ ಮದ್ದು ಸೇವನೆಯ ಅಡ್ಡಪರಿಣಾಮಗಳ ಕುರಿತು ಕ್ರೀಡಾಪಟುಗಳು, ಪಾಲಕರು ಮತ್ತು ತರಬೇತುದಾರರಲ್ಲಿ ಜಾಗೃತಿ ಮೂಡಿಸಬೇಕು

ಎರಡು ದಿನಗಳ ಹಿಂದಷ್ಟೇ ಕ್ರಾಸ್‌ಕಂಟ್ರಿ ಹಾಗೂ ಸ್ಟೀಪಲ್‌ಚೇಸ್ ಕ್ರೀಡೆಯ ನಾಲ್ಕು ಅಥ್ಲೀಟ್‌ಗಳ ಮೇಲೆ ನಾಡಾ (ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ) ನಿಷೇಧ ಹೇರಿದೆ. ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿಯೇ ಇಂತಹ ಪ್ರಕರಣಗಳು ಹೆಚ್ಚುತ್ತಿವೆ. ಹೋದ ವರ್ಷ ಒಂದು ಹಾಸ್ಯಾಸ್ಪದ ಘಟನೆ ನಡೆದಿತ್ತು. ದೆಹಲಿಯಲ್ಲಿ ನಡೆದಿದ್ದ ಅಥ್ಲೆಟಿಕ್ ಕೂಟದಲ್ಲಿ 100 ಮೀಟರ್ ಓಟದಲ್ಲಿ ಅಥ್ಲೀಟ್‌ವೊಬ್ಬ ಅಂತಿಮ ಗೆರೆ ಮೀರಿಯೂ ಓಡುತ್ತಿದ್ದ. ಆತನನ್ನು ಬೆನ್ನಟ್ಟಿ ಹಿಡಿದಿದ್ದ ನಾಡಾ ಅಧಿಕಾರಿಗಳು ಮೂತ್ರದ ಸ್ಯಾಂಪಲ್ ಸಂಗ್ರಹಿಸಿದ್ದರು. ಪರೀಕ್ಷೆಯ ನಂತರ ಆ ಅಥ್ಲೀಟ್ ನಿಷೇಧಿತ ಉದ್ದೀಪನ ಮದ್ದು ಸೇವಿಸಿದ್ದುದು ಖಚಿತವಾಗಿತ್ತು. ಕೆಲವು ತಿಂಗಳುಗಳ ಹಿಂದೆ ಕರ್ನಾಟಕದಲ್ಲಿ ನಡೆದಿದ್ದ ಕುಸ್ತಿ ಸ್ಪರ್ಧೆಯೊಂದರಲ್ಲಿ ನಿಷೇಧಿತ ಮದ್ದು ಬಳಸಿದ್ದ ಸಿರಿಂಜ್‌ಗಳು ಪತ್ತೆಯಾಗಿದ್ದವು. ದಿಢೀರ್ ಯಶಸ್ಸು ಗಳಿಸುವ ದುರಾಲೋಚನೆಯಿಂದ ಕೆಲವು ಕ್ರೀಡಾಪಟುಗಳು ಡೋಪಿಂಗ್ ಪಿಡುಗಿಗೆ ಬಲಿಯಾಗುತ್ತಿದ್ದಾರೆ. ಖೇಲೋ ಇಂಡಿಯಾ ಪದಕ ವಿಜೇತರಿಗೆ ಸರ್ಕಾರಿ ಉದ್ಯೋಗ ನೀಡುವುದಾಗಿ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಈಚೆಗೆ ಘೋಷಿಸಿರುವುದು ಸ್ವಾಗತಾರ್ಹ. ಆದರೆ ಈ ಕೂಟಗಳಲ್ಲಿ 5 ಸಾವಿರದಿಂದ 6 ಸಾವಿರ ಕ್ರೀಡಾಪಟುಗಳು ಭಾಗವಹಿಸುತ್ತಾರೆ. ಎಲ್ಲರನ್ನೂ ಪರೀಕ್ಷೆಗೆ ಒಳಪಡಿಸುವ ಸಾಮರ್ಥ್ಯ ಹಾಗೂ ಸಂಪನ್ಮೂಲಗಳು ನಾಡಾದಲ್ಲಿ ಇಲ್ಲ. ಹೀಗಾಗಿ, ಇದರ ದುರ್ಲಾಭ ಪಡೆಯಲು ಕೆಲವರು ಮುಂದಾಗುವ ಸಾಧ್ಯತೆ ಇದೆ. ಕ್ರೀಡಾ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಯುರೋಪ್ ದೇಶಗಳಲ್ಲಿ ಇರುವಂತಹ ಸೌಲಭ್ಯ ನಾಡಾದಲ್ಲಿ ಇಲ್ಲ. ಪ್ರಯೋಗಾಲಯಗಳ ಸಂಖ್ಯೆಯೂ ಕಡಿಮೆ. ಭಾರತವು 2022–23ನೇ ಸಾಲಿನಲ್ಲಿ 3,865 ಮಾದರಿಗಳ ಪರೀಕ್ಷೆ ನಡೆಸಿದೆ. ಆದರೆ ಚೀನಾ (19,228) ಮತ್ತು ಜರ್ಮನಿ (13,653) ದೇಶಗಳು ನಡೆಸುವ ಪರೀಕ್ಷೆಗಳ ಮಟ್ಟಕ್ಕೆ ಏರಲು ಇನ್ನೂ ಬಹಳಷ್ಟು ಕಾಲ ಬೇಕಾಗಬಹುದು. ನಾಡಾದ ಕಾರ್ಯಯೋಜನೆಗಳಿಗಾಗಿ 2025ರ ಕೇಂದ್ರ ಬಜೆಟ್‌ನಲ್ಲಿ ₹ 22.3 ಕೋಟಿ ಮೀಸಲಿಡಲಾಗಿದೆ. ಇದು ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿದೆ. ಆಧುನಿಕ ಕ್ರೀಡಾ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಳವಡಿಸುವುದು ತುರ್ತು ಅಗತ್ಯವಾಗಿದೆ. ನಾಡಾ ಮತ್ತು ಕ್ರೀಡಾ ಫೆಡರೇಷನ್‌ಗಳಲ್ಲಿ ಪರಿಣತ ವೈದ್ಯರು ಮತ್ತು ತಂತ್ರಜ್ಞರನ್ನು ನೇಮಿಸಬೇಕು. ಕ್ರೀಡಾಪಟುಗಳು, ಪಾಲಕರು ಮತ್ತು ತರಬೇತುದಾರರಲ್ಲಿ ಉದ್ದೀಪನ ಮದ್ದು ಸೇವನೆಯ ಅಡ್ಡಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು ಆದ್ಯತೆ ನೀಡಬೇಕು.

ದಿನದ ಟ್ವೀಟ್


ಇಂಥವರೂ ಇರುತ್ತಾರೆ!



ನನ್ನ ಮಗುವಿನ ಶಾಲೆಯ ಫೀಸ್ ಕಟ್ಟಲು ನನ್ನ ಬಳಿ ಹಣ ಇರಲಿಲ್ಲ; ಆದರೆ, ಧೋನಿ ಅವರನ್ನು ನೋಡುವ ಸಲುವಾಗಿ ಬ್ಲ್ಯಾಕ್‌ನಲ್ಲಿ ಟಿಕೆಟ್ ಖರೀದಿಸಲು ₹ 64,000 ವ್ಯಯಿಸಿದೆ ಎಂದು ತಂದೆಯೊಬ್ಬ ಹೇಳಿಕೊಂಡಿದ್ದಾನೆ. ಈ ಬಗೆಯ ಮೂರ್ಖತನವನ್ನು ವಿವರಿಸಲು ನನಗೆ ಪದಗಳೇ ಸಿಗುತ್ತಿಲ್ಲ.

ಡಾ. ಜೈಸನ್ ಫಿಲಿಪ್, ಮೂತ್ರಶಾಸ್ತ್ರಜ್ಞ

ಕಿಡಿನುಡಿ



ಲೋಕಸಭಾ ಚುನಾವಣೆ– ದೇಶಕ್ಕೆ ಮುಖ್ಯವಾದ ಸಂಗತಿಗಳು: ನಿರುದ್ಯೋಗ, ಭ್ರಷ್ಟಾಚಾರ, ಬೆಲೆ ಏರಿಕೆ, ಮಾಲಿನ್ಯರಹಿತ ಅಭಿವೃದ್ಧಿ, ಜೀವನದ ಗುಣಮಟ್ಟ, ಉತ್ಪಾದನೆಗೆ ಉತ್ತೇಜನ, ರಾಜಕೀಯ ಸೋಂಕಿಲ್ಲದ ಗುಣಮಟ್ಟದ ಶಿಕ್ಷಣ, ಮಾಲಿನ್ಯ ಮತ್ತು ಕೊಳಕು. ಪಕ್ಷಗಳು ಎತ್ತುತ್ತಿರುವ ವಿಷಯಗಳು: ಮಂದಿರ, ಮೀಸಲಾತಿ, ಕಚ್ಚತೀವು, ಜಾತ್ಯತೀತ ಶಕ್ತಿಗಳು, ಇತರರಿಗಿಂತ ಹೆಚ್ಚು ಉಚಿತ ಕೊಡುಗೆಗಳ ನೀಡಿಕೆ, ಇ.ಡಿ., ಸಿಬಿಐನ ಹೆಚ್ಚು ಬಳಕೆ.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಸೋಮವಾರ, 12-4-1999

● ಅಗ್ನಿ-2 ಮಧ್ಯಂತರಗಾಮಿ ಕ್ಷಿಪಣಿ ಉಡಾವಣೆ

ನವದೆಹಲಿ, ಏ. 11 (ಯುಎನ್‌ಐ, ಪಿಟಿಐ)– ಪೋಖ್ರಾನ್‌ನಲ್ಲಿ ಅಣ್ವಸ್ತ್ರ ಸಾಧನಗಳ ಪರೀಕ್ಷೆ ನಡೆಸಿದ ನಂತರ ಭಾರತ ಇಂದು ಒರಿಸ್ಸಾದ ಬಾಲಸ್ಸೋರಿ ಜಿಲ್ಲೆಯ ಇನ್ನರ್‌ವೀಲರ್ ದ್ವೀಪದಲ್ಲಿ ಅತ್ಯಾಧುನಿಕ ಅಗ್ನಿ-2 ದೇಶಾಂತರಗಾಮಿ ಕ್ಷಿಪಣಿಯ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿ 'ವಿಶೇಷರ ಸಾಲಿಗೆ' ಸೇರಿತು.

ರಾತ್ರಿ ರಾಷ್ಟ್ರವನ್ನು ಉದ್ದೇಶಿಸಿ ಭಾಷಣ ಮಾಡಿದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು, ದೇಶದ ಈ ಸಾಧನೆಯ ವಿಷಯವನ್ನು ಪ್ರಕಟಿಸಿ, ದೇಶದ ಸಾಮರ್ಥ್ಯ ಹಾಗೂ ರಕ್ಷಣೆಗಾಗಿ ಈ ಪ್ರಯೋಗ ಮಾಡಲಾಗಿದೆ ಎಂದರು. ಅದಕ್ಕಾಗಿ ವಿಜ್ಞಾನಿಗಳನ್ನು ಅವರು ಅಭಿನಂದಿಸಿದರು.

● ಹುಬ್ಬಳ್ಳಿ: ಶಾಂತ ಸ್ಥಿತಿ ಬಸ್ ಸಂಚಾರ ಆರಂಭ

ಹುಬ್ಬಳ್ಳಿ, ಏ. 11– ಹೈಕೋರ್ಟ್ ಪೀಠ ಸ್ಥಾಪನೆಗಾಗಿ ನಡೆಯುತ್ತಿರುವ ಚಳವಳಿಯ ಸಂದರ್ಭದಲ್ಲಿ ಉಂಟಾದ ಹಿಂಸಾಚಾರದಿಂದ ತತ್ತರಿಸಿದ್ದ ಅವಳಿ ನಗರದಲ್ಲಿ ಜನಜೀವನ ಇಂದು ಮಾಮೂಲಿಗೆ ಹಿಂದಿರುಗಿತು.

ಬಸ್ಸುಗಳ ಮೇಲೆ ನಡೆದ ನಿರಂತರ ದಾಳಿ ಪ್ರತಿಭಟಿಸಿ ಶುಕ್ರವಾರ ಪ್ರತಿಮುಷ್ಕರ ಆರಂಭಿಸಿದ್ದ ಸಾರಿಗೆ ಸಂಸ್ಥೆ ಸಿಬ್ಬಂದಿ ಕೂಡಾ ತಮ್ಮ ಮುಷ್ಕರ ಹಿಂತೆಗೆದುಕೊಂಡಿದ್ದು, ಅವಳಿ ನಗರದಲ್ಲಿ ಸಾರಿಗೆ ಸಂಸ್ಥೆ ಬಸ್ಸುಗಳು ಎಂದಿನಂತೆ ಸಂಚರಿಸಿದವು.

50 ವರ್ಷಗಳ ಹಿಂದೆ

ಶುಕ್ರವಾರ, 12-4-1974

● ಹಾಸ್ಟೆಲ್ ಸಿಮೆಂಟು, ಉಕ್ಕು ತಮ್ಮ ಕಟ್ಟಡ ನಿರ್ಮಾಣಕ್ಕೆ ಬಳಸಿಲ್ಲ: ಎಚ್.ಎಂ.ಸಿ.

ಬೆಂಗಳೂರು, ಏ. 11– 'ಹರಿಜನ ಹಾಸ್ಟೆಲ್‌ಗಳಿಗಾಗಿ ಇಟ್ಟಿದ್ದ ಸಿಮೆಂಟ್ ಮತ್ತು ಉಕ್ಕು, ಜಯನಗರದ ತಮ್ಮ ಕಟ್ಟಡದ ನಿರ್ಮಾಣಕ್ಕೆ ವರ್ಗಾವಣೆ ಆಗಿದೆ ಎಂಬ ಆಪಾದನೆ ಆಧಾರ ರಹಿತ' ಎಂದು ಲೋಕೋಪಯೋಗಿ ಮಂತ್ರಿ ಎಚ್.ಎಂ. ಚನ್ನಬಸಪ್ಪ ಅವರು ಇಂದು ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

'ಕಟ್ಟಡದ ನಿರ್ಮಾಣಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳ ಹೇಳಿಕೆಯನ್ನು ನಾನು ಈಗಾಗಲೇ ಸಭೆಯ ಮುಂದೆ ಮಂಡಿಸಿದ್ದೇನೆ. ಅದರಲ್ಲಿ ರಶೀದಿ ನಂಬರುಗಳು, ಪೂರೈಕೆ ದಿನ, ಪೂರೈಕೆದಾರರ ವಿಳಾಸ, ಪ್ರಮಾಣ, ಮೌಲ್ಯ ಹಾಗೂ ಹಣ ಪಾವತಿಯ ವಿವರಗಳಿವೆ' ಎಂದು ಸಚಿವರು ಹೇಳಿಕೆಯೊಂದರಲ್ಲಿ ತಿಳಿಸಿದರು.

● ಲೋಕಸಭೆ ಪ್ರೇಕ್ಷಕರ ಗ್ಯಾಲರಿಗೆ ನುಗ್ಗಿ ಕೂಗಿದ ಪಿಸ್ತೂಲುಧಾರಿ

ನವದೆಹಲಿ, ಏ. 11– ತುಂಬಿದ ಎರಡು ಪಿಸ್ತೂಲುಗಳನ್ನು ಹೊಂದಿದ್ದ ಯುವಕನೊಬ್ಬ ಪ್ರೇಕ್ಷಕರ ಗ್ಯಾಲರಿಗೆ ಇಂದು ಘೋಷಣೆಗಳನ್ನು ಕೂಗುತ್ತಾ ನುಗ್ಗಲು ಯತ್ನಿಸಿದ್ದು, ಸಭೆಯಲ್ಲಿ ಕೋಲಾಹಲಕ್ಕೆ ಕಾರಣವಾಯಿತು.

ಸಶಸ್ತ್ರ ವ್ಯಕ್ತಿಯೊಬ್ಬ ಲೋಕಸಭೆ ಗ್ಯಾಲರಿಗೆ ಪ್ರವೇಶಿಸಲು ಪ್ರಯತ್ನಿಸಿರುವುದು ಸ್ವಾತಂತ್ರ್ಯೋತ್ತರದಲ್ಲಿ ಇದೇ ಮೊದಲು. ಪ್ರೇಕ್ಷಕರ ಗ್ಯಾಲರಿಯಿಂದ ಹಸ್ತಪ್ರತಿಗಳನ್ನು ಎಸೆದ, ಘೋಷಣೆಗಳನ್ನು ಕೂಗಿದ ಪ್ರಕರಣಗಳು ನಡೆದಿವೆ.

ಚುನಾವಣೆ ಸಂದರ್ಭದಲ್ಲಿ ನಡೆದಿರುವ ಈ ನಾಯಕನ ಬಂಧನ ದೊಡ್ಡ ಮಟ್ಟದ ಚರ್ಚೆಯನ್ನೇ ಹುಟ್ಟುಹಾಕಿದೆ

ಕೇಜ್ರಿವಾಲ್ ಬಂಧನ: ಪ್ರಶ್ನೆ ಹಲವು



ವಿಶ್ಲೇಷಣೆ

ಬಿ.ಎಸ್.ಅರುಣ್

ದೆಹಲಿಯ ಅಬಕಾರಿ ನೀತಿ ಪ್ರಕರಣದಲ್ಲಿ ಎಎಪಿ ನಾಯಕ ಹಾಗೂ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನದಿಂದ ಯಾವ ರೀತಿಯ ಪರಿಣಾಮಗಳು ಉಂಟಾಗಬಹುದು? ಇದು, ಲೋಕಸಭಾ ಚುನಾವಣೆಯ ಮೇಲೆ ಯಾವ ರೀತಿಯ ಪ್ರಭಾವ ಬೀರಬಹುದು– ಮುಖ್ಯವಾಗಿ, ಎಎಪಿ ಅಧಿಕಾರದಲ್ಲಿರುವ ದೆಹಲಿ ಹಾಗೂ ಪಂಜಾಬ್‌ನಲ್ಲಿ? ಇದರಿಂದ 'ಇಂಡಿಯಾ' ಮೈತ್ರಿಕೂಟದ ಮೇಲಾಗುವ ಪರಿಣಾಮಗಳೇನು? ಈ ಪ್ರಕರಣವು ಚುನಾವಣೆಯಲ್ಲಿ ಕೇಜ್ರಿವಾಲ್ ಹಾಗೂ ಎಎಪಿ ಪರ ಸಹಾನುಭೂತಿಯ ಅಲೆ ಎಬ್ಬಿಸುವುದೇ ಅಥವಾ ಜಾರಿ ನಿರ್ದೇಶನಾಲಯವು (ಇ.ಡಿ) ನ್ಯಾಯಾಲಯಕ್ಕೆ ತಿಳಿಸಿರುವಂತೆ, ಈ ನಾಯಕ ಅಬಕಾರಿ ಹಗರಣದಲ್ಲಿ ಕೋಟ್ಯಂತರ ರೂಪಾಯಿ ಕಬಳಿಸಿದ್ದಾರೆ ಎಂದು ಜನ ನಂಬುವರೋ? ಅಥವಾ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯನ್ನು ಮೊದಲಿನಿಂದಲೂ ವಿರೋಧಿಸುತ್ತಾ ಬಂದಿರುವುದರಿಂದ ಕೇಜ್ರಿವಾಲ್ ಅವರನ್ನು ಈ ರೀತಿ ಬಲಿಪಶು ಮಾಡಲಾಗಿದೆ ಎನ್ನುವ ವಿರೋಧ ಪಕ್ಷಗಳ ಮಾತನ್ನು ನಂಬುವರೋ? ಈ ಬಂಧನದ ನಂತರ ಎಎಪಿಯ ಭವಿಷ್ಯ ಏನಾಗಬಹುದು? ಅಕಸ್ಮಾತ್ ಕೇಜ್ರಿವಾಲ್ ಅವರ ಸೆರೆವಾಸ ಬಹಳ ಕಾಲ ಮುಂದುವರಿದರೆ ಪಕ್ಷವನ್ನು, ದೆಹಲಿ ಸರ್ಕಾರವನ್ನು ಮುನ್ನಡೆಸುವವರು ಯಾರು? ಈ ಬೆಳವಣಿಗೆಯಿಂದ ಯಾವ ಪಕ್ಷಕ್ಕೆ ಲಾಭ? ಈ ಹಗರಣ ಈ ನಾಯಕನ ವ್ಯಕ್ತಿತ್ವಕ್ಕೆ ಮಸಿ ಬಳಿದಿದೆಯೇ?

ಪ್ರಕರಣ ಒಂದು, ಪ್ರಶ್ನೆಗಳು ಹಲವಾರು. ಯಾವುದಕ್ಕೂ ಉತ್ತರವಿಲ್ಲ. ಸ್ಪಷ್ಟತೆ ಇಲ್ಲ. ಚುನಾವಣೆ ಸಂದರ್ಭದಲ್ಲಿ ನಡೆದಿರುವ ವಿರೋಧಿ ಬಣದ ಈ ನಾಯಕನ ಬಂಧನ ದೊಡ್ಡ ಮಟ್ಟದ ಚರ್ಚೆಯನ್ನೇ ಹುಟ್ಟುಹಾಕಿದೆ. ಆದರೆ ಅದೇ ವೇಳೆ ಕೇಜ್ರಿವಾಲ್ ಅವರ ಬೆಂಬಲಿಗರಲ್ಲಿ ಎಎಪಿಯ ಭವಿಷ್ಯದ ಬಗ್ಗೆ ಗೊಂದಲ ಮೂಡಿಸಿದೆ.

ಕೇಜ್ರಿವಾಲ್ ಬಂಧನ ಅವರ ಪಕ್ಷಕ್ಕೆ ಸ್ವಲ್ಪ ಮಟ್ಟಿನ ಸಹಾನುಭೂತಿಯನ್ನೇನೊ ತಂದುಕೊಡಬಲ್ಲದು. ಆದರೆ ಅದು ಮತವಾಗಿ ಪರಿವರ್ತನೆ ಹೊಂದುವುದೇ? ಎದುರಾಳಿ ಬಿಜೆಪಿ ಸುಮ್ಮನೆ ಕೂರುವ ಪಕ್ಷವಲ್ಲ. ಈ ಪ್ರಕರಣದಲ್ಲಿ, ತಾನು ಭ್ರಷ್ಟಾಚಾರ ವಿರೋಧಿ ಎಂದು ಹೇಳಿಕೊಳ್ಳುವ ನಾಯಕನೊಬ್ಬ ಅಬಕಾರಿ ಗುತ್ತಿಗೆಯನ್ನು ಬಳಸಿಕೊಂಡು ಹೇಗೆ ಹಣ ಮಾಡಿದ ಎಂದು ಪ್ರಚಾರ ಮಾಡಬಹುದು. ಕೇಜ್ರಿವಾಲ್ ಅವರೇ ಇಡೀ ಹಗರಣದ 'ಕಿಂಗ್‌ಪಿನ್' ಎಂದು ಇ.ಡಿ. ಈಗಾಗಲೇ ನ್ಯಾಯಾಲಯದ ಮುಂದೆ ಹೇಳಿದೆ. ಕೇಜ್ರಿವಾಲ್ ಅವರ ಕಟ್ಟಾ ಹಿಂಬಾಲಕರು ಇದನ್ನು ನಂಬದಿರಬಹುದು. ಆದರೆ ಈ ಪ್ರಕರಣದಿಂದ ಕೇಜ್ರಿವಾಲ್ ಅವರ 'ಇಮೇಜ್'ಗೆ ಸ್ವಲ್ಪವಾದರೂ ಏಟು ಬಿದ್ದಿದೆ ಎಂದು ಹೇಳಬಹುದು.

ಇನ್ನು ಪಕ್ಷದ ನಾಯಕತ್ವದ ಬಗ್ಗೆ ಹೇಳುವುದಾದರೆ, ಕೇಜ್ರಿವಾಲ್ ಹಾಗೂ ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯ ಇಬ್ಬರೂ ಈಗ ಜೈಲಿನಲ್ಲಿದ್ದಾರೆ. ಮೊದಲಿನಿಂದಲೂ ಪಕ್ಷದ ಎಲ್ಲಾ ಆಗುಹೋಗುಗಳನ್ನು ನೋಡಿಕೊಳ್ಳುತ್ತಿದ್ದುದು ಕೇಜ್ರಿವಾಲ್. ಹಾಗಾಗಿ, ಅವರಿಲ್ಲದೆ ಈಗ ಎಎಪಿಯಲ್ಲಿ ತೀರ್ಮಾನ ತೆಗೆದುಕೊಳ್ಳುವವರು ಯಾರೂ ಇಲ್ಲ. ಅವರು ಪಕ್ಷದ ಏಕೈಕ 'ಮಾಸ್ ಲೀಡರ್' ಆಗಿದ್ದರು. ಪಕ್ಷಕ್ಕೆ ವೋಟು ಬರುತ್ತಿದ್ದುದು ಅವರಿಂದ. ಅವರಿಲ್ಲದೆ ಈಗ ಚುನಾವಣಾ ತಂತ್ರ, ಪ್ರಚಾರ, ಸಂಪನ್ಮೂಲ ಕ್ರೋಡೀಕರಣದಂತಹ ಅನೇಕ ವಿಷಯಗಳಲ್ಲಿ ಎಎಪಿ ಭಾರಿ ಹಿನ್ನಡೆ ಅನುಭವಿಸಬೇಕಾಗುತ್ತದೆ. ಅವರ ಬಗ್ಗೆ ಜನರಿಗೆ ಸಹಾನುಭೂತಿ ಇದ್ದರೂ ದೆಹಲಿ ಹಾಗೂ ಪಂಜಾಬ್‌ನ ಹೊರಗೆ ಅದನ್ನು ಮತವಾಗಿ ಪರಿವರ್ತನೆ ಮಾಡಲು ಬೇಕಾದ ಸಂಪನ್ಮೂಲ ಹಾಗೂ ತಳಮಟ್ಟದಲ್ಲಿನ ಕಾರ್ಯಕರ್ತರ 'ನೆಟ್‌ವರ್ಕ್' ಸಾಮರ್ಥ್ಯ ಪಕ್ಷಕ್ಕಿಲ್ಲ.

ಸದ್ಯದ ಪ್ರಶ್ನೆ ಇರುವುದು, ಕೇಜ್ರಿವಾಲ್ ಮುಂದೆಯೂ ತಿಹಾರ್ ಜೈಲಿನಲ್ಲಿ ಇದ್ದುಕೊಂಡೇ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುವರೇ ಎಂಬುದು. ಇದಕ್ಕೆ ನ್ಯಾಯಾಲಯ ತನ್ನ ಒಪ್ಪಿಗೆ ಸೂಚಿಸಿದೆ. ಆದರೆ ಈ ಬಗ್ಗೆ ಬಿಜೆಪಿಯ ಕಾರ್ಯತಂತ್ರವೇನು? ಈಗಾಗಲೇ ಕೇಸರಿ ಪಕ್ಷ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದೆ. ಈ ಸಂಬಂಧ ಪಕ್ಷದ ಮುಂದಿನ ನಡೆಯೇನು ಎನ್ನುವುದು ಕುತೂಹಲಕಾರಿ ಅಂಶ. ದೆಹಲಿಯಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬಹುದೇ? ಇದು ಈಗ ಬರೀ ಊಹಾಪೋಹ. ಬಿಜೆಪಿ ಕೂಡ ಈ ಬಗ್ಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಆದರೆ, ಈ ತಂತ್ರ ತನಗೇ ತಿರುಗುಬಾಣವಾಗಿ ಎಎಪಿಗೆ ಹೆಚ್ಚು ಅನುಕೂಲಕರವಾಗಬಹುದು ಎಂಬುದು ಆ ಪಕ್ಷಕ್ಕೂ ಚೆನ್ನಾಗಿ ಗೊತ್ತಿದೆ. ಇನ್ನೂ ಒಂದು ಊಹಾಪೋಹ ಇದೆ– ದೆಹಲಿಯನ್ನು ಜಮ್ಮು ಮತ್ತು ಕಾಶ್ಮೀರದ ರೀತಿ ಈಗಿರುವ ರಾಜ್ಯ ಸ್ಥಾನಮಾನ ತೆಗೆದು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡುವುದು. ಹೀಗಾದರೆ ದೆಹಲಿಯಲ್ಲಿ ಅಸೆಂಬ್ಲಿಯೂ ಇರುವುದಿಲ್ಲ, ಮುಖ್ಯಮಂತ್ರಿಯೂ ಇರುವುದಿಲ್ಲ. ಇದರ ಬಗ್ಗೆ ಕೂಡ ಬಿಜೆಪಿ ಯಾವುದೇ ಹೇಳಿಕೆ ಕೊಟ್ಟಿಲ್ಲ.

ಇನ್ನು ಎಎಪಿ ಒಳಗೊಂಡಿರುವ 'ಇಂಡಿಯಾ' ಮೈತ್ರಿಕೂಟದ ಬಗ್ಗೆ ಹೇಳಬೇಕೆಂದರೆ, ಬಂಧನ ಈ ಮಿತ್ರಪಕ್ಷಗಳನ್ನು ಒಟ್ಟುಗೂಡಿಸಿದೆ. ಈಗಾಗಲೇ ದೆಹಲಿಯಲ್ಲಿ ಈ ಪಕ್ಷಗಳ ನಾಯಕರು ಬೃಹತ್ ಬಹಿರಂಗ ಸಭೆ ಏರ್ಪಡಿಸಿ ಕೇಜ್ರಿವಾಲ್ ಅವರ ಬಂಧನವನ್ನು ಖಂಡಿಸಿದ್ದಾರೆ. ದೆಹಲಿ ಹಾಗೂ ಪಂಜಾಬ್‌ನಲ್ಲಿನ ಚುನಾವಣಾ ಪ್ರಚಾರ ಸಭೆಗಳಲ್ಲಿ ಈ ಮಿತ್ರಪಕ್ಷಗಳು ಮತ್ತೆ ಬಂಧನ ಹಾಗೂ ಬಿಜೆಪಿಯ 'ಸೇಡು ತೀರಿಸಿಕೊಳ್ಳುವ ಮನೋಭಾವ'ದ ಬಗ್ಗೆ ಹೆಚ್ಚು ಒತ್ತು ಕೊಡಬಹುದೇ? ಮುಂಬರುವ ದಿನಗಳಲ್ಲೂ ಈ ರೀತಿಯ ಒಗ್ಗಟ್ಟಿನ ಪ್ರದರ್ಶನವನ್ನು ನೋಡಬಹುದೇ? ಈ ಬಗ್ಗೆ ಈಗಲೇ ಹೇಳುವುದು ಕಷ್ಟವಾಗಬಹುದು. ಏಕೆಂದರೆ, ಈ ಒಂದು ವರ್ಷದಲ್ಲಿ ಇಂಡಿಯಾ ಮೈತ್ರಿಕೂಟದ ನಾಯಕರು ಒಟ್ಟಾಗಿ ಸೇರಿದ್ದೇ ಕಡಿಮೆ. ಪರಸ್ಪರ ಭಾರಿ ಭಿನ್ನಾಭಿಪ್ರಾಯ (ಅಹಂ?) ಹೊಂದಿರುವ ಈ ನಾಯಕರು ಒಟ್ಟಾಗಿ ಸೇರುವುದೇ ಅಪರೂಪ. ಹಿಂದಿನ ಜೂನ್ ತಿಂಗಳಲ್ಲಿ ಪಟ್ನಾದಲ್ಲಿ ಈ ಎಲ್ಲಾ ನಾಯಕರು ಒಟ್ಟುಗೂಡಿ ಇಂಡಿಯಾ ಕೂಟವನ್ನು ಸ್ಥಾಪಿಸಿದ ನಂತರ ಅದೇ ರೀತಿ ಒಟ್ಟಾದದ್ದು ಮೊನ್ನೆ ರಾಮಲೀಲಾ ಮೈದಾನದಲ್ಲಿ ಮಾತ್ರ.


ಪಟ್ನಾ ಸಭೆಯ ಮುಖ್ಯ ರೂವಾರಿ, ಬಿಹಾರದ ಮುಖ್ಯಮಂತ್ರಿ ಹಾಗೂ ಜೆಡಿಯು ನಾಯಕ ನಿತೀಶ್ ಕುಮಾರ್ ಈಗ ಈ ಕೂಟದಲ್ಲಿಲ್ಲ. ಇತ್ತೀಚೆಗೆ ನಿತೀಶ್ ಇಂಡಿಯಾ ಕೂಟದ ಪ್ರತಿಸ್ಪರ್ಧಿಯಾದ, ಬಿಜೆಪಿ ನಾಯಕತ್ವದ ಎನ್‌ಡಿಎ ಸೇರಿದರು. ಇದರಿಂದ ಬಿಜೆಪಿ ವಿರೋಧಿ ಒಕ್ಕೂಟಕ್ಕೆ ಭಾರಿ ಮುಖಭಂಗವಾಯಿತು. ಬಿಜೆಪಿಗೆ ತಾನು ಉತ್ತಮ ಪ್ರತಿಸ್ಪರ್ಧಿ ಎಂದು ತೋರಿಸಬೇಕಿದ್ದ ವಿರೋಧಿ ಗುಂಪು, ಪ್ರತಿ ಹಂತದಲ್ಲೂ ತಾನು 'ಸೀರಿಯಸ್' ಆಟಗಾರ ಅಲ್ಲ ಎಂದು ಪದೇ ಪದೇ ತೋರಿಸಿದೆ. ಚುನಾವಣೆ ಸಮಯದಲ್ಲಿ ಒಕ್ಕೂಟದ ಪಕ್ಷಗಳ ನಡುವೆ ಕ್ಷೇತ್ರ ಹಂಚಿಕೆ ಬಹಳ ಮಹತ್ವದ ಕಾರ್ಯ. ಇದು ಪಟ್ನಾ ಸಭೆ ಮುಗಿದ ಕೂಡಲೇ ಪ್ರಾರಂಭವಾಗಬೇಕಿತ್ತು. ಆದರೆ ಇಂಡಿಯಾ ಮೈತ್ರಿಕೂಟದ ಮುಖ್ಯ ಪಕ್ಷ ಕಾಂಗ್ರೆಸ್ ಇದನ್ನು ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ. ಈ ಕಾರಣದಿಂದ, ಕಾಂಗ್ರೆಸ್- ತೃಣಮೂಲ (ಪಶ್ಚಿಮ ಬಂಗಾಳ) ಹಾಗೂ ಕಾಂಗ್ರೆಸ್- ಎಎಪಿ (ಪಂಜಾಬ್) ನಡುವೆ ಆಗಬೇಕಿದ್ದ ಕ್ಷೇತ್ರ ಹೊಂದಾಣಿಕೆ ಆಗಲೇ ಇಲ್ಲ. ಕೊನೆಗಾಲದಲ್ಲಿ ಆದ ಮಾತುಕತೆ ಫಲ ತರಲಿಲ್ಲ. ಮೈತ್ರಿಕೂಟದಲ್ಲಿದ್ದೂ ಅವು ಈಗ ಎದುರಾಳಿಗಳು. ಉಳಿದ ಕಡೆ, ಅಂದರೆ ಬಿಹಾರ, ಮಹಾರಾಷ್ಟ್ರ, ಉತ್ತರಪ್ರದೇಶ ಮತ್ತು ದೆಹಲಿಯಲ್ಲಿ ಒಂದು ರೀತಿಯ ಮೈತ್ರಿ ಏರ್ಪಟ್ಟಿದೆ.

ಇತ್ತೀಚಿನ ದೆಹಲಿ ಬಹಿರಂಗ ಸಭೆ ಮತ್ತೆ ಒಂದಾಗಲು ಈ ಕೂಟಕ್ಕೆ ಒಂದು ಅವಕಾಶ ಒದಗಿಸಿತ್ತು. ಕೇಜ್ರಿವಾಲ್ ಬಂಧನದ ವಿಷಯವನ್ನು ಜನರ ಹತ್ತಿರಕ್ಕೆ ಕೊಂಡೊಯ್ಯಲು ಇನ್ನೂ ಸಮಯ ಇದೆ– ಅದರಲ್ಲೂ ದೆಹಲಿ ಮತ್ತು ಪಂಜಾಬ್‌ನಲ್ಲಿ. ದೆಹಲಿಯಲ್ಲಿ ಮೇ 25 ಹಾಗೂ ಪಂಜಾಬ್‌ನಲ್ಲಿ ಜೂನ್ 1ರಂದು ಚುನಾವಣೆ ನಡೆಯಲಿದೆ. ಅದಾದ ಮೂರು ದಿನಗಳ ನಂತರ ದೇಶಕ್ಕೆ ಗೊತ್ತಾಗಲಿದೆ, ಕೇಜ್ರಿವಾಲ್ ಬಂಧನದ ಬಗ್ಗೆ ಜನತಾ ನ್ಯಾಯಾಲಯ ಯಾವ ತೀರ್ಪು ಕೊಟ್ಟಿದೆ ಎಂಬುದು.

ಲೇಖಕ: ಹಿರಿಯ ಪತ್ರಕರ್ತ



ಚುರುಮುರಿ



ಕುಕ್ಕರು-ಲಿಕ್ಕರು!

• ಬಿ.ಎನ್.ಮಲ್ಲೇಶ್

'ಏನ್ರಲೆ, ಉಗಾದಿ ಎಲ್ಲ ಮುಗೀತ? ಚಂದ್ರದರ್ಶನ ಆತಾ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಚಂದ್ರ ನಮ್ ಕಡಿ ಕಾಣ್ಲೇ ಇಲ್ಲಪ, ಈ ಗುಡ್ಡೆ ಮನಿ ಕಡಿ ಸ್ವಲ್ಪ ಕಾಣುಸ್ತಂತೆ' ತೆಪರೇಸಿ ಹೇಳಿದ.

'ಈ ಚಂದ್ರನೂ ರಾಜಕೀಯದೋರ ತರ ಆಗೋಗೇತೆ. ಪದೇ ಪದೇ ಪಕ್ಷ ಬದಲಿಸ್ತಾ ಇರುತ್ತೆ, ಬೇಕಾದೋರಿಗಷ್ಟೇ ಕಾಣುಸ್ತೆ' ದುಬ್ಬೀರ ನಕ್ಕ.

'ಅಲ್ಲ, ಈ ಹಾಸನ, ಮಂಡ್ಯ ಕಡಿ ಉಗಾದಿಗೆ ಅದೆಂಥದೋ ವರ್ಷದ ತೊಡಕು ಅಂತ ಮಾಡ್ತಾರಂತಪ, ಭರ್ಜರಿ ಬಾಡೂಟನಂತೆ, ಯಾರಾದ್ರೂ ಕರೆದಿದ್ರೆ ಹೋಗಬೋದಿತ್ತು...' ಗುಡ್ಡೆಗೆ ಆಸೆ.

'ಥೂ ನಿನ್ನ, ನಮಗೆಲ್ಲ ಗಾಡ್ ಈಸ್ ಗ್ರೇಟ್ ಆದ್ರೆ ಈ ಗುಡ್ಡೆಗೆ 'ಬಾಡ್ ಈಸ್ ಗ್ರೇಟ್' ಅಲ್ವೇನೋ?' ಮಂಜಮ್ಮ ನಕ್ಕಳು.

'ಇದು ಎಲೆಕ್ಷನ್ ಟೈಮು, ಎಲ್ಲಾದ್ರು ನಾನ್‌ವೆಜ್ 'ಘಂ' ಅಂದ್ರೆ ಸಾಕು ಪೊಲೀಸ್ರು ಕೇಸ್ ಹಾಕ್ತಾರಂತೆ. ಅವ್ರೂ ತಿನ್ನಲ್ಲ, ತಿನ್ನೋರಿಗೂ ಬಿಡಲ್ಲ' ತೆಪರೇಸಿಗೆ ಕೋಪ.

'ಈಗ ಅದೆಲ್ಲ ಬಿಡಲೆ, ಹೆಂಗೈತಿ ರಾಜಕೀಯ? ಯಾರು ಎಷ್ಟು ಗೆಲ್ಲಬೋದು?' ಕೊಟ್ರೇಶಿ ಕೇಳಿದ.

'ಈ ರಾಜಕೀಯ ಅನ್ನಾದೇ ತಲಿ ಕೆಟ್ ಸಂತಿ, ಯಾರು ಯಾವಾಗ ಎಲ್ಲಿರ್ತಾರೆ ಅನ್ನಾದೇ ಗೊತ್ತಾಗಲ್ಲ. ಜಾಸ್ತಿ ತಲೆ ಕೆಡಿಸ್ಕಾಬ್ಯಾಡ, ಮೆಂಟ್ಲ್ ಆಗ್ತೀಯ' ಗುಡ್ಡೆ ನಕ್ಕ.

'ಕರೆಕ್ಟ್' ಎಂದ ದುಬ್ಬೀರ, 'ಅಲ್ಲೋ ಗುಡ್ಡೆ, ನಿಮ್ ಕಡಿ ಕುಕ್ಕರ್ ಹಂಚಿದಾರಂತೆ? ನಮ್ ಕಡಿ ಲಿಕ್ಕರ್‌ಗೆ ಟೋಕನ್ ಕೊಟ್ಟದಾರೆ. ಬಾರ್‌ಗೆ ಹೋಗಿ ಟೋಕನ್ ಕೊಟ್ರೆ ಪಟ್ ಅಂತ ಎಣ್ಣೆ, ಸೈಡ್ಸು ಎಲ್ಲ ಕೊಡ್ತಾರೆ' ಎಂದ.

'ಅಲ್ಲ, ಈಗ ಎರಡೂ ಪಕ್ಷದೋರು ಕುಕ್ಕರ್ ಕೊಟ್ರೆ ಯಾರಿಗೆ ವೋಟ್ ಹಾಕೋದು?' ಕೊಟ್ರೇಶಿ ಕೊಕ್ಕೆ.

'ಯಾವುದು ಚೆನ್ನಾಗಿ ಸೀಟಿ ಹೊಡೀತತಿ ಅವ್ರಿಗೆ ಹಾಕೋದು' ತೆಪರೇಸಿ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಮತವ್ಯೂಹಕ್ಕೆ ಸಿಲುಕಿ ಹೈರಾಣಾಗುವುದೇಕೆ?

ಅಧಿಕಾರಕ್ಕಾಗಿ ಹಪಹಪಿಸುವ ರಾಜಕಾರಣಿಗಳಿಗಾಗಿ ನಾವು ಸಂಬಂಧಗಳನ್ನೆಲ್ಲಾ ಬದಿಗಿಟ್ಟು, ನಮ್ಮ ನಡುವೆ ಕಂದಕ ಸೃಷ್ಟಿಸಿಕೊಂಡು ಪರಸ್ಪರ ಬಡಿದಾಡಿಕೊಳ್ಳುವುದು ಅನಗತ್ಯ

• ವೀರಕಪುತ್ರ ಶ್ರೀನಿವಾಸ

ಲೋಕಸಭಾ ಚುನಾವಣೆಯು ದೇಶದಲ್ಲಿ ದೊಡ್ಡ ಮಟ್ಟದಲ್ಲಿಯೇ ಸದ್ದು ಮಾಡುತ್ತಿದೆ. ವಿಶ್ವದ ಮುಂದುವರಿದ ರಾಷ್ಟ್ರಗಳೆಲ್ಲ ಭಾರತದ ಚುನಾವಣೆಯನ್ನು ತೀಕ್ಷ್ಣ ಕಣ್ಣುಗಳಿಂದ ನೋಡುತ್ತಿವೆ. ಮೌಲ್ಯಾಧಾರಿತ ಚುನಾವಣೆಯನ್ನು ಒಂದು ರೀತಿಯಲ್ಲಿ ಹಬ್ಬದಂತೆ ಕಟ್ಟಿಕೊಡಲಾಗುತ್ತಿದೆ. ಹಬ್ಬಗಳೆಂದರೆ ಮೌಲ್ಯಗಳ ಎತ್ತಿಹಿಡಿಯುವಿಕೆ, ನಂಬಿಕೆಗಳ ಮೆರವಣಿಗೆ, ಒಗ್ಗಟ್ಟಿನ ಪ್ರಜ್ಞೆಯ ಸಂಕೇತ ವಾಗಿರುತ್ತವೆ. ವಾಸ್ತವದಲ್ಲಿ ನಮ್ಮ ಚುನಾವಣೆಗಳೂ ಹಾಗೇ ಆಗಬೇಕಿತ್ತು. ಆದರೆ ಅವು ಮೌಲ್ಯಗಳ ಕುಸಿತಕ್ಕೆ ಕಾರಣವಾಗಿವೆ, ಅಪನಂಬಿಕೆಗಳನ್ನು ಮೂಡಿಸುತ್ತಿವೆ ಮತ್ತು ಜನರ ನಡುವಿನ ಒಗ್ಗಟ್ಟನ್ನು ಮುರಿಯಲು ಶಕ್ತವಾಗಿವೆ ಎಂಬುದು ಮಾತ್ರ ದುರಂತ.

ಅವು ನನ್ನ ಬಾಲ್ಯದ ದಿನಗಳು. ನಮ್ಮೂರಿನ ಮನೆಗಳ ಗೋಡೆಗಳ ಮೇಲೆ ಕೆಲವು ಪಕ್ಷಗಳ ಚಿಹ್ನೆಗಳು ರಾರಾಜಿಸುತ್ತಿದ್ದವು. ನಾವು ಮಕ್ಕಳಿಗೆ ಊರಿನವರ ಜಾತಿಗಳು ಗೊತ್ತಿರಲಿಲ್ಲ. ಆದರೆ ಅವರು ಇಂತಹ ಪಕ್ಷದವರು ಅನ್ನುವುದು ಮಾತ್ರ ಚಿಹ್ನೆಗಳ ಕಾರಣದಿಂದ ನಿಕ್ಕಿಯಾಗಿರುತ್ತಿತ್ತು. ಅಷ್ಟರಮಟ್ಟಿಗೆ ಚುನಾವಣೆಗಳು ಸಿದ್ಧಾಂತಗಳ ಆಧಾರದ ಮೇಲೆ ನಡೆಯುತ್ತಿದ್ದವು. ಒಗ್ಗಟ್ಟು ಒಡೆಯುವ, ಜಾತಿಯ ವಾಸನೆ ಹರಡುವ, ಹಣದ ವ್ಯವಹಾರಕ್ಕೆ ಆಸ್ಪದ ಕೊಡದಂತಹ ಚುನಾವಣೆಯ ದಿನಗಳವು. ಆದರೆ ಈಗಿನ ಚುನಾವಣೆಗಳು ಏನಾಗಿವೆ? ಸಮುದಾಯದ ಒಗ್ಗಟ್ಟು ಕೆಡಿಸುತ್ತಿವೆ ಮತ್ತು ಸಾಮರಸ್ಯದ ವಿಘಟನೆಗೆ ಕಾರಣವಾಗುತ್ತಿವೆ.

ನಾವು ಹಳ್ಳಿಗಳ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತೇವೆ. ಆದರೆ ಅಲ್ಲಿರುವಷ್ಟು ಒಡಕು ಮತ್ತೆಲ್ಲೂ ಸಿಗದಂತೆ ಆಗಿಬಿಟ್ಟಿದೆ. ಸಹೋದರತ್ವವನ್ನು ಸಾರುತ್ತಿದ್ದ, ಪರಸ್ಪರ ಕೊಡುಕೊಳ್ಳುವಿಕೆಯಲ್ಲಿ ನಂಬಿಕೆ ಇಟ್ಟಿದ್ದ ಹಳ್ಳಿಗಳಲ್ಲಿ ಚುನಾವಣೆ ಕಾರಣದಿಂದಾಗಿ ಪರಸ್ಪರ ಗೋಡೆ ಕಟ್ಟಿಕೊಂಡು ಬದುಕುವಂತಾಗಿದೆ. ರಾಜಕಾರಣದ ಕಾರಣದಿಂದಾಗಿ ಮನಸ್ಸುಗಳು ಒಡೆದಿವೆ. ಕುಟುಂಬಗಳಲ್ಲೇ ಬಿರುಕು ಕಾಣಿಸಿಕೊಂಡಿದೆ. ಜಾತಿಯ ವಿಷಸರ್ಪಗಳು ಹೆಡೆ ಎತ್ತಿವೆ. ಕೊಳಕು ಸೈದ್ಧಾಂತಿಕ ನಿಲುವುಗಳು ಮನುಷ್ಯ ಮನುಷ್ಯರ ನಡುವೆ ಕಂದಕ ಸೃಷ್ಟಿ ಮಾಡಿವೆ. ದಣಿದು ನೆಮ್ಮದಿಯಾಗಿ ಮಲಗುತ್ತಿದ್ದವನು ಇಂದು ರಾಜಕೀಯ ಚರ್ಚೆಗಳಲ್ಲಿ ಮುಳುಗಿ ನೆಮ್ಮದಿ ಕಳೆದುಕೊಂಡಿದ್ದಾನೆ.

ಸಾಮಾಜಿಕ ಜಾಲತಾಣಗಳ ಅವಘಡಗಳನ್ನು ಕೇಳಲೇಬೇಕಿಲ್ಲ. ಅಸಹ್ಯದ ಪರಮಾವಧಿಯನ್ನು ಮೀರಿ ನಿಂತಿವೆ. ಅಣ್ಣ-ತಮ್ಮ, ಅಕ್ಕ-ತಮ್ಮ, ಚಿಕ್ಕಪ್ಪ-ದೊಡ್ಡಪ್ಪ ಎಂದು ಪರಸ್ಪರ ಗೌರವಿಸುತ್ತಿದ್ದವರು ಕೆಟ್ಟಾಕೊಳಕು ಭಾಷೆಯಲ್ಲಿ ನಿಂದಿಸಿಕೊಳ್ಳುವ ಮಟ್ಟ ತಲುಪಿದ್ದೇವೆ. ಎಲ್ಲರಿಗೂ ಗೊತ್ತಿರುವಂತೆ, ಪ್ರತಿ ಪಕ್ಷಕ್ಕೂ ಡಿಜಿಟಲ್ ವಿಭಾಗ ಇದ್ದೇ ಇದೆ. ಪಕ್ಷಗಳು ಕೆಲವು ಒಳ್ಳೆಯ ಬರಹಗಾರರನ್ನು ವೇತನ ನೀಡಿ ನೇಮಿಸಿಕೊಳ್ಳುತ್ತವೆ. ಅವರ ಮೂಲಕ ಪ್ರಚೋದನಕಾರಿ ವಿಷಯಗಳನ್ನು ಹರಿಯಬಿಡುತ್ತವೆ. ಇದನ್ನು ಅರಿಯದ ಜನಸಾಮಾನ್ಯರು ಅವರ ವಿಷವ್ಯೂಹಕ್ಕೆ ಸಿಲುಕಿ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಯಾವುದೋ ಒಬ್ಬ ರಾಜಕಾರಣಿ ಕುರಿತಂತೆ ಅವಹೇಳನಕಾರಿ ಪೋಸ್ಟ್ ಹಾಕಿದ್ದರು ಎಂಬ ಕಾರಣಕ್ಕೆ ಒಬ್ಬ ಯುಟ್ಯೂಬರ್ ಮೇಲೆ ಎರಡು ಕೋಟಿಯಷ್ಟು ಮಾನನಷ್ಟ ಮೊಕದ್ದಮೆಯನ್ನು ಹೂಡಲಾಗಿದೆ. ಅಷ್ಟಕ್ಕೂ ಆ ವಿಷಯದ ಕುರಿತು ಆ ಯುಟ್ಯೂಬರ್‌ಗೆ ಯಾವುದೇ ಮಾಹಿತಿ ಇರಲಿಲ್ಲ. ಯಾವುದೋ ವಾಟ್ಸ್‌ಆ್ಯಪ್ ಗ್ರೂಪಿನಲ್ಲಿ ಅನಾಮಿಕವಾಗಿ ಬಂದ ಸುದ್ದಿಯನ್ನು ಆತ ತನ್ನ ಯುಟ್ಯೂಬ್ ಚಾನೆಲ್ಲಿನಲ್ಲಿ ಪ್ರಸಾರ ಮಾಡಿದ್ದ ಅಷ್ಟೇ. ಹಿಂದಿನ ಒಂದು ವರ್ಷದಿಂದ ಪಡಬಾರದ ಪಾಡು ಆತನದು. ಪೊಲೀಸು, ಕೋರ್ಟು ಎಂದೆಲ್ಲ ಅಲೆದಲೆದು ಸುಸ್ತಾಗಿ ಹೋಗಿದ್ದಾನೆ. ಇದು ಬರೀ ಒಂದು ಉದಾಹರಣೆ. ಇಂತಹ ಅದೆಷ್ಟೋ ಜನರು ಪಕ್ಷಗಳ ಮತವ್ಯೂಹಕ್ಕೆ ಸಿಲುಕಿ ಹೈರಾಣಾಗಿದ್ದಾರೆ. ಯಾಕಿದು ಹೀಗೆ?

ಅಷ್ಟಕ್ಕೂ ಚುನಾವಣೆ ಅಂದರೆ ಹೀಗೆಲ್ಲಾ ಆಗಬೇಕು ಅನ್ನುವ ನಿಯಮವೇನಾದರೂ ಇದೆಯೇ? ನಾವೇಕೆ ನಮ್ಮ ನಮ್ಮಲ್ಲೇ ಬಡಿದಾಡಿಕೊಳ್ಳುತ್ತಿದ್ದೇವೆ? ಈ ರಾಜಕಾರಣಿಗಳಿಂದ ನಮಗೇನು ಪ್ರಯೋಜನ? ಅವರು ಎಂದಾದರೂ ಪರಿಚಿತರಂತೆ ನಮ್ಮ ಮನೆಗೆ ಬಂದು ಒಂದು ಲೋಟ ಕಾಫಿ ಕುಡಿದಿದ್ದಾರೆಯೇ? ಗೆಳೆಯನಂತೆ ನಮ್ಮ ಕಷ್ಟ ಸುಖದಲ್ಲಿ ಕೈ ಹಿಡಿದಿದ್ದಾರೆಯೇ? ಇಲ್ಲವಲ್ಲ. ಮತ್ತೆ ನಾವ್ಯಾಕೆ ಅವರಿಗಾಗಿ ಪರಿಚಿತರು, ಗೆಳೆಯರು, ಸಂಬಂಧಿಕರು, ಹಳ್ಳಿಯವರನ್ನು ಕಳೆದುಕೊಳ್ಳಬೇಕು? ರಾಜಕಾರಣಿಗಳ ಕೆಲಸ ನಮ್ಮ ಮನೆಗೆ ಬಂದು ಹೋಗುವುದಲ್ಲ ಎಂಬುದು ನಮಗೆ ಹೇಗೆ ಗೊತ್ತಿರಬೇಕೋ ಹಾಗೆಯೇ ಉತ್ತಮ ರಾಜಕಾರಣಿಗಳಿಗೆ ಮತ ಹಾಕುವುದು ನಮ್ಮ ಕರ್ತವ್ಯವೇ ವಿನಾ ಅವರಿಗಾಗಿ ಒದ್ದಾಡಿ, ಗುದ್ದಾಡಿ ಸಂಬಂಧಗಳನ್ನು ಕಳೆದುಕೊಂಡು ಹೈರಾಣಾಗುವುದಲ್ಲ ಎಂಬುದು ಸಹ ನಮಗೆ ತಿಳಿದಿರಬೇಕು.



ಈ ನಾಡು, ದೇಶ ನಮ್ಮಿಂದಲೇ ಉಳಿದಿರುವುದು ಎಂಬ ರಾಜಕಾರಣಿಯ ಮಾತಿನಲ್ಲಿ ಅದೆಷ್ಟು ಸತ್ಯವಿದೆ ಎಂದು ಎಂದಾದರೂ ಯೋಚಿಸಿದ್ದೇವೆಯೇ? ಈ ಚುನಾವಣೆ ಕಳೆದರೆ ರಾಜಕಾರಣಿಗೆ ನಾವು ನೆನಪಾಗುವುದು ಮುಂದಿನ ಐದು ವರ್ಷಕ್ಕೆ. ಸದಾ ನಮ್ಮ ಜೊತೆಗೆ ಇರಬೇಕಾದವರು ಇದೇ ನಮ್ಮ ನಡುವಿನ ಸ್ನೇಹಿತರು, ಸಂಬಂಧಿಕರು, ಪರಿಚಿತರು. ಹಾಗಾಗಿ, ರಾಜಕಾರಣಿಗಳ ಪ್ರಚೋದನಕಾರಿ ಮಾತುಗಳಿಗೆ ಮರುಳಾಗಿ ಸುತ್ತಮುತ್ತಲಿನ ವಾತಾವರಣವನ್ನು ಹಾಳುಗೆಡಿಸಿಕೊಳ್ಳದಿರುವಷ್ಟು ಕನಿಷ್ಠ ಬುದ್ಧಿಯಾದರೂ ನಮಗಿರಬೇಕು. ಆದ್ದರಿಂದ ಈ ಚುನಾವಣೆ ಮುಗಿಯುವತನಕ ಹಳ್ಳಿಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಸಂಯಮ ಪ್ರದರ್ಶನ ನಮ್ಮ ನಿಮ್ಮ ಆದ್ಯತೆಯಾಗಿರಲಿ.

ವಾಚಕರ ವಾಣಿ

ಅನ್ಯರ ಹೆಸರಲ್ಲಿ ಮತ ಕೇಳುವುದೇಕೆ?

ಲೋಕಸಭಾ ಚುನಾವಣೆಗಾಗಿ ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ನಡೆಸುತ್ತಿರುವ ಪ್ರಚಾರದ ವೈಖರಿಯು ನಾವು ಮತ ಚಲಾಯಿಸುತ್ತಿರುವುದು ಅಧ್ಯಕ್ಷೀಯ ಪದ್ಧತಿಯಡಿಯೋ ಅಥವಾ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳನ್ನು ಆರಿಸುವ ಸಲುವಾಗಿಯೋ ಎಂಬ ಸಂಶಯಕ್ಕೆ ಎಡೆಮಾಡಿಕೊಡುತ್ತಿದೆ. ಎಲ್ಲರಿಗೂ ತಿಳಿದಿರುವಂತೆ, ನಮ್ಮ ಸಂಸದೀಯ ಪದ್ಧತಿಯಲ್ಲಿ, ಬಹುಮತ ಪಡೆದ ಪಕ್ಷದ ಜನಪ್ರತಿನಿಧಿಗಳು ತಮ್ಮ ಮುಖಂಡನನ್ನು ಆರಿಸುತ್ತಾರೆ. ಅವರು ಪ್ರಧಾನಮಂತ್ರಿ ಹುದ್ದೆಯನ್ನು ಅಲಂಕರಿಸುತ್ತಾರೆ. ಆ ಮುಖಂಡ ಆಡಳಿತ ನಡೆಸಲು, ಚುನಾಯಿತ ಸದಸ್ಯರಲ್ಲಿ ಕೆಲವರನ್ನು ಆರಿಸಿ ಮಂತ್ರಿಮಂಡಲವನ್ನು ರಚಿಸಿ, ಆಡಳಿತವನ್ನು ನಡೆಸುತ್ತಾರೆ. ಅಧ್ಯಕ್ಷೀಯ ಪದ್ಧತಿಯಂತೆ ಪ್ರಧಾನ ಮಂತ್ರಿಗೆ ಯಾವುದೇ ವಿಶೇಷ ಅಧಿಕಾರ ಇರುವುದಿಲ್ಲ. ಆತ ತನ್ನ ಮಂತ್ರಿಮಂಡಲದ ನಿರ್ಣಯಕ್ಕೆ ಬಾಧ್ಯನಾಗಿರುತ್ತಾನೆ. ಆದ್ದರಿಂದ ಅಭ್ಯರ್ಥಿಗಳು ಯಾರದೋ ಹೆಸರಿನಲ್ಲಿ ಮತ ಕೇಳುವ ಬದಲು, ತನಗೆ ಮತ ನೀಡಿ ಆರಿಸಿದರೆ, ತಾನು ತನ್ನ ಕ್ಷೇತ್ರಕ್ಕೆ ಯಾವ ರೀತಿಯಲ್ಲಿ ಕೆಲಸ ಮಾಡುತ್ತೇನೆ ಎಂದು ತಿಳಿಸುವುದು ಸಮಂಜಸ.

ಮಂಜುನಾಥ ಭಟ್, ಶಿರಸಿ

ಸುಂದರ ಚಂದಿರ

ಯುಗಾದಿಗೂ ರಂಜಾನ್‌ಗೂ
ಸುಂದರ ಚಂದಿರ
ಬೇಕು...
ಭಾವೈಕ್ಯಕ್ಕೂ
ಬಂಧುತ್ವಕ್ಕೂ
ಸುಮಧುರ ಭಾವನೆಗಳು
ಬೇಕು...

ಪಾಲಾಕ್ಷಪ್ಪ ಎಸ್.ಎನ್., ಸಾಗರ

ರೈಲು ಪ್ರಯಾಣ: ಸಾಮಾನ್ಯರಿಗೂ ಸಿಗಲಿ ಸೌಲಭ್ಯ

'ಆಳುವವರಿಗೆ ಬೇಡವೇ ಬಡವರ ಬೋಗಿ?' ಎಂಬ ಲೇಖನದಲ್ಲಿ (ಪ್ರ.ವಾ., ಏ. 11) ತಿಳಿಸಿರುವಂತೆ, ಜನಸಾಮಾನ್ಯರು ಅತಿ ಹೆಚ್ಚಾಗಿ ಪ್ರಯಾಣಿಸುವಂತಹ ರೈಲುಗಳಲ್ಲೇ ಕಾಲಕ್ರಮೇಣ ಬೋಗಿಗಳ ಸಂಖ್ಯೆ ಕಡಿಮೆ ಆಗುತ್ತಿರುವುದು ದುರದೃಷ್ಟಕರ. ಜೊತೆಗೆ ಈ ರೈಲುಗಳಲ್ಲಿ ಪ್ರಯಾಣಿಕರಿಗೆ ಸೂಕ್ತ ಮೂಲ ಸೌಲಭ್ಯಗಳು ಸಹ ಇಲ್ಲದೇ ಇರುವುದು ಎದ್ದು ಕಾಣುತ್ತದೆ. ಇತ್ತೀಚೆಗೆ ಸರ್ಕಾರ ಪರಿಚಯಿಸಿದ ವಂದೇಭಾರತ್ ಎಕ್ಸ್‌ಪ್ರೆಸ್ ರೈಲುಗಳಲ್ಲಿಯೂ ಜನಸಾಮಾನ್ಯರಿಗೆ ಸಾಮಾನ್ಯ ಬೋಗಿಗಳಿಲ್ಲ.

ದೂರದ ಊರುಗಳಿಂದ ಪಟ್ಟಣದೆಡೆಗೆ ಪ್ರಯಾಣಿಸುವಂತಹ ಜನರಿಗೆ ಸೂಕ್ತವಾದ ಸಾರಿಗೆ ವ್ಯವಸ್ಥೆ ಎಂದರೆ ರೈಲು. ಆದರೆ ರೈಲುಗಳಲ್ಲಿ ಇರುವ ಅವ್ಯವಸ್ಥೆ, ಮಹಿಳೆಯರಿಗೆ ಇಲ್ಲದ ಸುರಕ್ಷತೆಯನ್ನು ನೋಡಿದರೆ ನಿಜಕ್ಕೂ ಬೇಸರ ಆಗುತ್ತದೆ. ರೈಲ್ವೆ ಸಚಿವರು ಹಾಗೂ ಅಧಿಕಾರಿಗಳು ಒಮ್ಮೆ ಸಾಮಾನ್ಯ ಜನ ಪ್ರಯಾಣಿಸುವ ಬೋಗಿಯಲ್ಲಿ ಪ್ರಯಾಣಿಸಿದರೆ ಅವರಿಗೆ ವಸ್ತುಸ್ಥಿತಿಯ ಅರಿವಾಗುತ್ತದೆ.

ಅಂಬಿಕಾ ಬಿ.ಟಿ., ಹಾಸನ

ಚುನಾವಣಾ ಸಿಬ್ಬಂದಿಯ ನಿರ್ಲಕ್ಷ್ಯ ಸಲ್ಲ

ಈ 30 ವರ್ಷಗಳಲ್ಲಿ ನಾನು ಬಹಳಷ್ಟು ಚುನಾವಣೆಗಳಲ್ಲಿ ಚುನಾವಣಾ ಕರ್ತವ್ಯ ನಿರ್ವಹಿಸಿದ್ದೇನೆ. ಅದರ ಅನುಭವದ ಆಧಾರದ ಮೇಲೆ ಹೇಳುವುದಾದರೆ, ಚುನಾವಣೆಯ ಹಿಂದಿನ ದಿನ ಎಲ್ಲ ಸಿಬ್ಬಂದಿಗೂ ಸಂಬಂಧಿಸಿದ ಚುನಾವಣಾ ಸಾಮಗ್ರಿಗಳನ್ನು ಸಕಾಲಕ್ಕೆ ವಿತರಿಸಿ, ನಿಯೋಜಿಸಿದ ಸ್ಥಳಕ್ಕೆ ನಿಗದಿತ ಸಮಯಕ್ಕೆ ತಲುಪಿಸಲಾಗುತ್ತದೆ. ಆದರೆ ಚುನಾವಣೆಗೆ ನಿಗದಿಯಾಗಿರುವ ಮತಗಟ್ಟೆಗಳ ಸ್ವಚ್ಛತೆ ಬಗ್ಗೆ ಈಗಲೂ ನಿರ್ಲಕ್ಷ್ಯ ಕಂಡುಬರುತ್ತದೆ. ರಾತ್ರಿ ವೇಳೆ ಚುನಾವಣಾ ಸಿಬ್ಬಂದಿ ಅಲ್ಲೇ ಮಲಗಬೇಕಾಗುತ್ತದೆ. ಅನೇಕ ಕಡೆ ಇಲಿ, ಹೆಗ್ಗಣ, ಹಾವು, ಸೊಳ್ಳೆಗಳ ಕಾಟದ ಭಯದಲ್ಲೇ ರಾತ್ರಿಯನ್ನು ದೂಡಬೇಕಾಗುತ್ತದೆ. ಮರುದಿನ ಬೆಳಿಗ್ಗೆ 5ಕ್ಕೆ ಚುನಾವಣಾ ಕರ್ತವ್ಯಕ್ಕೆ ಅಣಿಯಾದರೆ, ಚುನಾವಣಾ ಸಾಮಗ್ರಿಗಳನ್ನು ಹಿಂದಿರುಗಿಸುವ ವೇಳೆಗೆ ಕನಿಷ್ಠವೆಂದರೂ ರಾತ್ರಿ 8 ಆಗುತ್ತದೆ. ಒಮ್ಮೊಮ್ಮೆ ರಾತ್ರಿ 11 ಕಳೆದರೂ ಈ ಕಾರ್ಯ ಮುಗಿದಿರುವುದಿಲ್ಲ. ಇಷ್ಟೆಲ್ಲಾ ಪರಿಶ್ರಮವಹಿಸಿ ಕರ್ತವ್ಯ ನಿರ್ವಹಿಸಿದ್ದರೂ ಚುನಾವಣಾ ಸಾಮಗ್ರಿಗಳನ್ನು ಸ್ವೀಕರಿಸುವ ಸಂದರ್ಭದಲ್ಲಿ ಪ್ರತಿ ಬಾರಿಯೂ ಗೊಂದಲ ಉಂಟು ಮಾಡುವುದು ಸಾಮಾನ್ಯವಾಗಿದೆ.

ನಿಗದಿತ ನಮೂನೆಯಂತೆ ಕ್ರಮಬದ್ಧವಾಗಿ ಎಲ್ಲ ಲಕೋಟೆಗಳನ್ನು ಸಿದ್ಧಪಡಿಸಿಕೊಂಡು ಹೋದರೂ ನಮೂನೆಯಲ್ಲಿ ಇಲ್ಲದೇ ಇರುವ ಇನ್ಯಾವುದೋ ಲಕೋಟೆ ಬೇಕೆಂದು ಹೇಳಿ, ದಣಿದ ಸಿಬ್ಬಂದಿಯನ್ನು ಗೋಳುಹೊಯ್ದುಕೊಳ್ಳಲಾಗುತ್ತದೆ.ಅಧಿಕಾರಿಗಳು ಈ ಬಾರಿಯಾದರೂ ನಿರ್ದಿಷ್ಟ ನಮೂನೆಯನ್ನು ಚುನಾವಣಾ ಪೂರ್ವದಲ್ಲಿಯೇ ಅಂತಿಮಗೊಳಿಸಿ, ಅದರಂತೆಯೇ ಚುನಾವಣಾ ಸಾಮಗ್ರಿಗಳನ್ನು ಸ್ವೀಕರಿಸುವಂತೆ ಸಂಬಂಧಿಸಿದವರಿಗೆ ನಿರ್ದೇಶನ ನೀಡಬೇಕು. ಮತಗಟ್ಟೆಗಳನ್ನು ಸ್ವಚ್ಛಗೊಳಿಸುವಂತೆ ಸ್ಥಳೀಯ ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಸೂಚಿಸಬೇಕು. ಸುಮಾರು 15 ಗಂಟೆಗಳಿಗೂ ಹೆಚ್ಚು ಕಾಲ ದಣಿದು ಬಂದ ಸಿಬ್ಬಂದಿಯೊಂದಿಗೆ ಸೌಜನ್ಯಯುತವಾಗಿ ವರ್ತಿಸುವಂತೆ ಚುನಾವಣಾ ಸಾಮಗ್ರಿಗಳನ್ನು ಸ್ವೀಕರಿಸುವವರಿಗೆ ತಿಳಿಹೇಳಬೇಕು. ಸಾಧ್ಯವಾದರೆ ಶುದ್ಧ ಕುಡಿಯುವ ನೀರು ಒದಗಿಸಲಿ. ನೂರಾರು ಕಿಲೊಮೀಟರ್ ದೂರದಿಂದ ಬರುವವರು ಊಟ ಸರಿ ಇಲ್ಲವೆಂದು ದೂರುತ್ತಾ ಜಗಳಕ್ಕೆ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗದಿರಲಿ.

ಪುಟ್ಟದಾಸು, ಮಂಡ್ಯ

ಸ್ವಯಂಚಾಲಿತ ಧ್ವನಿ ನಿಯಂತ್ರಕ ಇರಲಿ

ಕೋಲಾರ ತಾಲ್ಲೂಕಿನ ಅಂತರಗಂಗೆ ಬೆಟ್ಟದ ಪಾಪರಾಜನಹಳ್ಳಿ ಗ್ರಾಮದ ದೇವಾಲಯದಲ್ಲಿ ಹಾಕಿದ್ದ ಧ್ವನಿವರ್ಧಕದ ಶಬ್ದವನ್ನು, ಓದಲು ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ತಗ್ಗಿಸುವಂತೆ ಮನವಿ ಮಾಡಿದ್ದಕ್ಕಾಗಿ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಮತ್ತು ಅವರ ಪುತ್ರನ ಮೇಲೆ ಹಲ್ಲೆ ನಡೆದಿರುವ ಆರೋಪ ಕೇಳಿಬಂದಿರುವುದು ದುರದೃಷ್ಟಕರ. ಬೇರೆ ರಾಷ್ಟ್ರಗಳಲ್ಲಿ ಇರುವಂತೆ ನಮ್ಮ ದೇಶದಲ್ಲಿ ಈ ರೀತಿ ಶಬ್ದಮಾಲಿನ್ಯ ಉಂಟು ಮಾಡಿ ಇತರರ ಖಾಸಗಿತನಕ್ಕೆ ಧಕ್ಕೆ ತರುವುದನ್ನು ನಿಯಂತ್ರಿಸುವ ಕಠಿಣ ಕಾನೂನು ಇಲ್ಲದಿರುವುದು ನಾನಾ ಬಗೆಯ ತೊಡಕುಗಳಿಗೆ ಕಾರಣವಾಗಿದೆ. ಡಿ.ಜೆ ಹಾಗೂ ಪಟಾಕಿಗಳ ಅಬ್ಬರವು ಪ್ರಾಣಿ- ಪಕ್ಷಿಗಳು, ವೃದ್ಧರು ಹಾಗೂ ಅಧ್ಯಯನನಿರತರ ಮೇಲೆ ಗಂಭೀರ ಪರಿಣಾಮ ಬೀರುವುದು ಸ್ಪಷ್ಟ. ಸರ್ಕಾರ ಈ ಬಗೆಗೆ ಕಠಿಣ ಕ್ರಮ ಕೈಗೊಳ್ಳಬೇಕು.

ಸರ್ಕಾರಿ ಬಸ್ಸುಗಳಲ್ಲಿ ವೇಗನಿಯಂತ್ರಕ ಅಳವಡಿಸಿರುವ ಹಾಗೆ ದೇವಸ್ಥಾನ ಹಾಗೂ ಮಸೀದಿಗಳಲ್ಲಿ ಬಳಸುವ ಧ್ವನಿವರ್ಧಕಗಳಲ್ಲೂ ಜನಜೀವನಕ್ಕೆ ತೊಂದರೆಯಾಗದಷ್ಟು ಶಬ್ದ ಮಾತ್ರ ಪ್ರಸಾರವಾಗುವ ಸ್ವಯಂಚಾಲಿತ ಧ್ವನಿನಿಯಂತ್ರಕ ಹೊಂದಿರುವ ಧ್ವನಿವರ್ಧಕಗಳನ್ನು ಬಳಸುವಂತೆ ಕಾನೂನು ರೂಪಿಸಬೇಕು. ನ್ಯಾಯಾಲಯ ಈ ದಿಸೆಯಲ್ಲಿ ಸೂಕ್ತ ನಿರ್ದೇಶನ ನೀಡಲಿ.

ಭೀಮಾನಂದ ಮೌರ್ಯ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮಧ್ಯಪ್ರದೇಶ: 'ಕಮಲ'ದ ಮುಂದೆ 'ಕೈ' ಪೇಲವ

ಪ್ರಜಾ ಮತ — ಜನತಂತ್ರದ ಹಬ್ಬ — ಲೋಕಸಭಾ ಚುನಾವಣೆ - 2024

ರಾಜ್ಯವನ್ನು ಹಲವು ದಶಕ ಕಾಂಗ್ರೆಸ್ ಆಳಿದೆ. ಹಲವು ವರ್ಷ ಬಿಜೆಪಿ ಆಳಿದೆ. ಕಳೆದ 10 ವರ್ಷಗಳಿಂದಲಂತೂ ಮಧ್ಯಪ್ರದೇಶದಲ್ಲಿ 'ಡಬಲ್ ಎಂಜಿನ್' ಸರ್ಕಾರವಿದೆ. ಆದರೂ, ರಾಜ್ಯಕ್ಕೆ ಅಂಟಿದ 'ಬಿಮಾರು' ಹಣೆಪಟ್ಟಿಯನ್ನು ತೆಗೆಯಲು ಸಾಧ್ಯವಾಗಿಲ್ಲ. ಕಾಂಗ್ರೆಸ್‌ನ ಹೀನಾಯ ಸೋಲುಗಳಿಗೆ, ಬಿಜೆಪಿಯ ಗೆಲುವಿಗೆ ಹಲವು ಕಾರಣಗಳಿವೆ

ಪ್ರಜಾವಾಣಿ ವಾರ್ತೆ





ಮಧ್ಯ ಪ್ರದೇಶವು ದೇಶದ ಅತ್ಯಂತ ಹಿಂದುಳಿದ ರಾಜ್ಯಗಳಲ್ಲಿ ಒಂದು. ಕೇಂದ್ರ ಸರ್ಕಾರವೇ ಬಿಡುಗಡೆ ಮಾಡುವ ಎಲ್ಲ ಸೂಚ್ಯಂಕಗಳಲ್ಲೂ ಈ ರಾಜ್ಯದ್ದು ಕಳಪೆ ಪ್ರದರ್ಶನವೇ. ಆದರೆ, ಹಿಂದುತ್ವ ರಾಜಕಾರಣದ ಕೇಂದ್ರ ಬಿಂದು. ಬಿಜೆಪಿಯ ಭದ್ರನೆಲೆ. ಹಿಂದೆ, ಇದು ಕಾಂಗ್ರೆಸ್‌ನ ಕೋಟೆಯಾಗಿತ್ತು. ಆದರೆ, ಕಾಂಗ್ರೆಸ್‌ನ ದಿಗ್ವಿಜಯ ಸಿಂಗ್ ಅವರು ಮುಖ್ಯ-ಮಂತ್ರಿಯಾಗಿ, ಅಧಿಕಾರಾವಧಿ ಮುಗಿದ ಬಳಿಕ, ಇಲ್ಲಿ ಮತ್ತೆ ಕಾಂಗ್ರೆಸ್ ಮೇಲೇಳಲೇ ಇಲ್ಲ. 2018ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಉತ್ತಮ ಫಲಿತಾಂಶ ಬಂತಾದರೂ, ಕೆಲವೇ ತಿಂಗಳಲ್ಲಿ 'ಆಪರೇಷನ್ ಕಮಲ'ದ ಕಾರಣ ಸರ್ಕಾರ ಬಿದ್ದು ಹೋಯಿತು. ಕಾಂಗ್ರೆಸ್ ಬಳಿ ಇದ್ದ ಕೆಲವೇ ಯುವ ಮುಖಗಳಲ್ಲಿ ಒಬ್ಬರಾಗಿದ್ದ, ಜ್ಯೋತಿರಾದಿತ್ಯ ಸಿಂಧಿಯಾ ಅವರು ಬಿಜೆಪಿ ಸೇರಿಕೊಂಡರು. ಅಲ್ಲಿಂದ ಮತ್ತೆ ಕಾಂಗ್ರೆಸ್‌ನದ್ದು ಹಿಂದಣ ಪಯಣವೇ ಆಗಿದೆ.

ಕಳೆದ ಕೆಲವು ಲೋಕಸಭೆ ಚುನಾವಣೆಗಳ ಫಲಿತಾಂಶಗಳನ್ನು ಗಮನಿಸಿದರೆ, ಯಾವ ಪಕ್ಷವೂ ಸರಿಸಾಟಿಯೇ ಇಲ್ಲ ಎನ್ನುವಂತೆ ಬಿಜೆಪಿ ಗೆಲ್ಲುತ್ತಲೇ ಬಂದಿದೆ. 2019ರ ಲೋಕಸಭಾ ಚುನಾವಣೆಯಲ್ಲಂತು ಬಿಜೆಪಿ ಶೇ 58.53ರಷ್ಟು ಮತಗಳನ್ನು ಪಡೆದುಕೊಂಡಿದೆ. 2009ರಲ್ಲಿ ಕಾಂಗ್ರೆಸ್ ಶೇ 40.14ರಷ್ಟು ಮತಗಳನ್ನು ಪಡೆದುಕೊಂಡಿತ್ತು. ನಂತರದ ಚುನಾವಣೆಗಳಲ್ಲಿ ಈ ಪ್ರಮಾಣವು ಇಳಿಮುಖವಾಗಿದೆ. ಮತಪ್ರಮಾಣವು ತೀರ ಕಳಪೆ ಆಗದಿದ್ದರೂ ಅವು ಕಾಂಗ್ರೆಸ್‌ಗೆ ಗೆಲುವು ತಂದುಕೊಡುವಲ್ಲಿ ಸಫಲವಾಗಿಲ್ಲ. 2019ರ ಚುನಾವಣೆಯಲ್ಲಿ ಕಾಂಗ್ರೆಸ್ ಪಡೆದ ಮತಪ್ರಮಾಣವು ಶೇ 34.81ರಷ್ಟು. ಆದರೆ, ಗೆದ್ದ ಸ್ಥಾನ ಒಂದು ಮಾತ್ರ. ಅದೂ ಕಾಂಗ್ರೆಸ್ ನಾಯಕ ಕಮಲ್‌ನಾಥ್ ಅವರ ಭದ್ರಕೋಟೆ ಛಿಂದವಾಡದಲ್ಲಿ. ಗೆದ್ದದ್ದು, ಕಮಲ್‌ನಾಥ್ ಅವರ ಮಗ ನಕುಲ್ ನಾಥ್.


ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ತನ್ನ 11 ಸಂಸದರನ್ನು ಕೈಬಿಟ್ಟು, ಹೊಸ ಮುಖಗಳಿಗೆ ಮಣೆಹಾಕಿದೆ. ಆಡಳಿತ ವಿರೋಧಿ ಅಲೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೇ ಹೊಸಬರಿಗೆ ಈ ಬಾರಿ ಟಿಕೆಟ್ ನೀಡಲಾಗಿದೆ ಎನ್ನಲಾಗಿದೆ. ಜೊತೆಗೆ, ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲೇ ಬೇಕು ಎನ್ನುವ ಕಾರಣಕ್ಕೆ, ಇತ್ತೀಚಿನ ವಿಧಾನಸಭೆ-ಯಲ್ಲಿ ಚುನಾಯಿತರಾಗಿದ್ದ ತನ್ನ ಶಾಸಕರಲ್ಲಿ ಹಲವರನ್ನೇ ಲೋಕಸಭಾ ಚುನಾವಣೆಗೆ ನಿಲ್ಲಿಸಿದೆ. ರಾಜ್ಯವನ್ನು ಹಲವು ದಶಕ ಕಾಂಗ್ರೆಸ್ ಆಳಿದೆ. ಹಲವು ವರ್ಷ ಬಿಜೆಪಿ ಆಳಿದೆ. ಕಳೆದ 10 ವರ್ಷಗಳಿಂದಲಂತೂ ಮಧ್ಯಪ್ರದೇಶದಲ್ಲಿ 'ಡಬಲ್ ಎಂಜಿನ್' ಸರ್ಕಾರವಿದೆ. ಆದರೂ, ರಾಜ್ಯಕ್ಕೆ ಅಂಟಿದ 'ಬಿಮಾರು' ಹಣೆಪಟ್ಟಿಯನ್ನು ತೆಗೆಯಲು ಸಾಧ್ಯವಾಗಿಲ್ಲ. ಕಾಂಗ್ರೆಸ್‌ನ ಹೀನಾಯ ಸೋಲುಗಳಿಗೆ, ಬಿಜೆಪಿಯ ಭಾರಿ ಗೆಲುವಿಗೆ ಹಲವು ಕಾರಣಗಳಿವೆ. ಹಿಂದುತ್ವ ರಾಜಕಾರಣವೇ ಬಿಜೆಪಿ ಗೆಲುವಿನ ಮುಖ್ಯ ಕಾರಣ. ತನ್ನ ಹಿಂದುಳಿದ ವರ್ಗದ (ಒಬಿಸಿ) ಮತಬ್ಯಾಂಕ್ ಅನ್ನು ಕಳೆದುಕೊಂಡದ್ದು ಕಾಂಗ್ರೆಸ್ ಸೋಲಿನ ಮುಖ್ಯ ಕಾರಣ.

ರಾಜ್ಯದಲ್ಲಿ ಒಬಿಸಿ ಮತದಾರರ ಪ್ರಮಾಣ ಸುಮಾರು ಶೇ 48ರಷ್ಟಿದೆ. ಮಂಡಲ್ ಆಯೋಗ ರಚನೆಯಾಗುವುದಕ್ಕೂ ಮೊದಲೇ ಕಾಂಗ್ರೆಸ್‌ನ ಅರ್ಜುನ್ ಸಿಂಗ್ ಅವರು ಮುಖ್ಯಮಂತ್ರಿ ಆಗಿದ್ದ ಕಾಲದಲ್ಲಿ ರಾಜ್ಯ-ದಲ್ಲಿರುವ ಒಬಿಸಿ ಸಮುದಾಯಕ್ಕೆ ಮೀಸಲಾತಿ ನೀಡುವುದಕ್ಕಾಗಿ ಸಮಿತಿಯೊಂದನ್ನು ರಚಿಸಿದ್ದರು. ಶೇ 25ರಷ್ಟು ಮೀಸಲಾತಿ ನೀಡಬೇಕು ಎಂದು ಸಮಿತಿಯು ಶಿಫಾರಸು ಮಾಡಿತ್ತು. ಆದರೆ, ಅರ್ಜುನ್ ಸಿಂಗ್ ಅವರಿಗೆ ಶಿಫಾರಸು ಜಾರಿ ಮಾಡಲಾಗಲಿಲ್ಲ. ಮೀಸಲಾತಿ ವ್ಯಾಪ್ತಿಗೆ ಬರದ ಸಮುದಾಯದ ಮತ ತಪ್ಪುವ ಭೀತಿಯಿಂದ ಮುಂದೆ ಬಂದ ಮುಖ್ಯಮಂತ್ರಿಗಳು ಇದನ್ನು ಜಾರಿಗೊಳಿಸಲಿಲ್ಲ. ಆದರೆ, ದಿಗ್ವಿಜಯ ಸಿಂಗ್ ಅವರು ಯುಪಿಎ ಅವಧಿಯಲ್ಲಿ ಕೇಂದ್ರದ ಸಚಿವರಾಗಿದ್ದಾಗ ಒಬಿಸಿ ಸಮುದಾಯಕ್ಕೆ ಶೇ 27ರಷ್ಟು ಮೀಸಲಾತಿ ದೊರೆಯುವಂತೆ ಮಾಡಿ-ದರು.'ಬಿಜೆಪಿಯು ರಾಜ್ಯದಲ್ಲಿ ಉಗಮವಾಗುತ್ತಾ ಸಾಗಿದಂತೆ, ಅದರ ಹಿಂದುತ್ವ ರಾಜಕಾರಣವು ಬೆಳೆಯುತ್ತಾ ಸಾಗಿದಂತೆ, ಕಾಂಗ್ರೆಸ್ ಕೂಡ ಹಿಂದುತ್ವದ ಮೊರೆ ಹೋಯಿತು. ತಾವೂ ಹಿಂದೂ ಎನ್ನುವ ಸಂದೇಶ ರವಾನಿಸಲು ಆರಂಭಿಸಿತು. ಒಬಿಸಿಗಳಿಂದ ಕಳಚಿಕೊಂಡ ಕಾಂಗ್ರೆಸ್, 'ಹಿಂದೂ' ಅಡಿಯಲ್ಲಿ ಮತ ಪಡೆಯಲು ಮುಂದಾಯಿತು. ಒಬಿಸಿ ನಾಯಕರನ್ನೂ ಕಾಂಗ್ರೆಸ್ ಬೆಳೆಸಲಿಲ್ಲ. ಇದು ಕಾಂಗ್ರೆಸ್‌ನ ದೊಡ್ಡ ಹಿನ್ನಡೆ' ಎನ್ನುವುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯ.

ಒಬಿಸಿ ಮತಬ್ಯಾಂಕ್ ಅನ್ನು ಕಳೆದುಕೊಂಡ ಅರಿವು ಕಾಂಗ್ರೆಸ್‌ಗೆ ಬಂದಿದ್ದು, 2023ರ ವಿಧಾನಸಭಾ ಚುನಾವಣೆಯಲ್ಲಿ. ಅದಾಗಲೇ ಜಾತಿ ಗಣತಿಯ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹೇಳುತ್ತಲೇ ಬಂದಿದ್ದರು. ಚುನಾವಣೆ ವೇಳೆಯಲ್ಲೂ ಇದೇ ವಿಷಯವನ್ನು ಮುನ್ನೆಲೆಗೆ ತರಲಾಯಿತು. ಆದರೂ, ಮತಗಳನ್ನು ಪಡೆಯಲಾಗಲಿಲ್ಲ. ಸೋಲಿನ ನಂತರ, ಕಮಲ್ ನಾಥ್ ಅವರನ್ನು ಕೆಳಗಿಳಿಸಿ, ಒಬಿಸಿ ನಾಯಕ ಜಿತು ಪಟ್ವಾರಿ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಯಿತು.

ಇತ್ತ, ಬಿಜೆಪಿಯು ಒಬಿಸಿ ಮತಗಳಿಕೆಯಲ್ಲಿ ಮೇಲುಗೈ ಸಾಧಿಸಿತು. ಒಬಿಸಿ ಸಮುದಾಯಕ್ಕೆ ಸೇರಿದವರಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ನೀಡಲಾಯಿತು. ಬಿಜೆಪಿಯ ರಾಜ್ಯದ ನಾಯಕರು ಕೇಂದ್ರ ಮಟ್ಟದಲ್ಲಿ ದೊಡ್ಡ ಹುದ್ದೆಗಳನ್ನು ಪಡೆದುಕೊಂಡರು. ಅಲ್ಲಿಂದೀಚೆಗೆ ಒಬಿಸಿ ಮತಗಳು ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿಗೇ ಬೀಳುತ್ತಿವೆ. ಇದರೊಂದಿಗೆ ಬಿಜೆಪಿಯ ಹಿಂದುತ್ವ ರಾಜಕಾರಣವೂ ನೆರವಾಗುತ್ತಿದೆ. ಈ ಚುನಾವಣೆಯಲ್ಲಿಯೂ ಬಿಜೆಪಿಗೆ ಇದೇ ಕೈಹಿಡಿಯಲಿದೆ ಎನ್ನಲಾಗಿದೆ. 'ಜಾತಿ ಗಣತಿ ವಿಚಾರಗಳನ್ನು ವೇದಿಕೆಗಳಲ್ಲಿ ಹೇಳಿದರೆ ಸಾಲದು. ಈ ಸಮುದಾಯದ ನಾಯಕರನ್ನು ಬೆಳೆಸಬೇಕು. ಜೊತೆಗೆ, ಜಾತಿ ಗಣತಿಯ ಲಾಭದ ಕುರಿತು ಜನರಿಗೆ ತಿಳಿಹೇಳದ ಹೊರತು ಕಾಂಗ್ರೆಸ್‌ನ ಜಾತಿ ಗಣತಿ ವಿಚಾರವು ಈ ಸಮುದಾಯದ ಜನರಿಗೆ ತಲುಪುವುದೇ ಇಲ್ಲ' ಎನ್ನುತ್ತಾರೆ ವಿಶ್ಲೇಷಕರು.

ಆಧಾರ: ಪಿಟಿಐ



ಸಿರಿವಂತ ಅಭ್ಯರ್ಥಿಗೆ ಹಲವು ಸವಾಲು

ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಕಣದಲ್ಲಿರುವ ಅಭ್ಯರ್ಥಿಗಳಲ್ಲಿ ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಪುತ್ರ ನಕುಲ್‌ನಾಥ್ (₹719 ಕೋಟಿ) ಅತ್ಯಂತ ಸಿರಿವಂತ ಅಭ್ಯರ್ಥಿ. ಮಧ್ಯಪ್ರದೇಶದ ಛಿಂದವಾಡ ಕ್ಷೇತ್ರವು ಕಮಲ್‌ನಾಥ್ ಕುಟುಂಬದ ಭದ್ರಕೋಟೆ. ಈ ಕ್ಷೇತ್ರದಿಂದ ಕಮಲನಾಥ್ ಒಂಬತ್ತು ಬಾರಿ ಗೆದ್ದಿದ್ದರೆ, ನಕುಲ್ ಒಮ್ಮೆ ಗೆದ್ದಿದ್ದಾರೆ. ಹೀಗಾಗಿ ನಕುಲ್ ಗೆಲುವು ಇಲ್ಲಿ ಸುಲಭ ಎಂದು ನಿರೀಕ್ಷಿಸಲಾಗಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ.


ಕಮಲ್‌ನಾಥ್ ಕುಟುಂಬದ ಭದ್ರಕೋಟೆಯೊಳಗೆ ಬಿಜೆಪಿ ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಂಡಿದೆ. 2014ರ ಚುನಾವಣೆಯಲ್ಲಿ ಕಮಲ್‌ನಾಥ್ ಶೇ 50ರಷ್ಟು ಮತಗಳನ್ನು ಪಡೆದಿದ್ದರೆ, ಬಿಜೆಪಿ ಅಭ್ಯರ್ಥಿ ಶೇ 40ರಷ್ಟು ಮತಗಳನ್ನು ಪಡೆದುಕೊಂಡಿದ್ದರು. 2019ರ ಚುನಾವಣೆಯಲ್ಲಿ ಈ ಅಂತರ ತೀರಾ ಕಡಿಮೆ ಎನ್ನುವಷ್ಟರಮಟ್ಟಿಗೆ ಕುಸಿದಿತ್ತು. ನಕುಲ್ ಶೇ 47ರಷ್ಟು ಮತಗಳನ್ನು ಪಡೆದಿದ್ದರೆ, ಬಿಜೆಪಿ ಅಭ್ಯರ್ಥಿ ಶೇ 44ರಷ್ಟು ಮತಗಳನ್ನು ಪಡೆದುಕೊಂಡಿದ್ದರು. ಈ ಬಾರಿ ಈ ಅಂತರ ಅದಲುಬದಲಾಗುವ ಸಾಧ್ಯತೆ ಇದೆ.

ಛಿಂದವಾಢ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಮಟ್ಟದ ಕಾಂಗ್ರೆಸ್‌ನ ಸುಮಾರು 2,000 ಮುಖಂಡರನ್ನು ಬಿಜೆಪಿ ತನ್ನಲ್ಲಿಗೆ ಸೇರಿಸಿಕೊಂಡಿದೆ. ಕಮಲ್‌ನಾಥ್ ಮತ್ತು ನಕುಲ್‌ನಾಥ್ ಬಿಜೆಪಿ ಸೇರುವ ಯತ್ನದ ಸಲುವಾಗಿಯೇ ಅಷ್ಟು ಮಂದಿ ಬಿಜೆಪಿ ಸೇರಿದ್ದಾರೆ ಎನ್ನಲಾಗಿದೆ. ಆದರೆ ಇಬ್ಬರೂ ನಾಯಕರು ಕಾಂಗ್ರೆಸ್‌ನಲ್ಲಿಯೇ ಉಳಿದರು. ಈಗ ನಕುಲ್ ಕಾಂಗ್ರೆಸ್ ಅಭ್ಯರ್ಥಿಯಾಗಿಯೇ ಕಣಕ್ಕೆ ಇಳಿದಿದ್ದಾರೆ. ಕಾರ್ಯಕರ್ತರ ಕೊರತೆ ಅವರಿಗೆ ಮತದಾನದಲ್ಲಿ ತೊಡಕಾಗಲಿದೆ ಎಂದು ಅಂದಾಜಿಸಲಾಗಿದೆ. ಶಿಕಾರ್‌ಪುರ ನಿವಾಸಿಯಾದ ನಕುಲ್‌ನಾಥ್ ಅವರು ಛಿಂದವಾಢಕ್ಕೆ ಹೊರಗಿನವರು ಎಂದು ಬಿಜೆಪಿ ಬಿಂಬಿಸುತ್ತಿದೆ. ಜತೆಗೆ ಸ್ಥಳೀಯ ವಿವೇಕ್ ಬಂಟಿಯನ್ನು ಕಣಕ್ಕೆ ಇಳಿಸಿದೆ. ಇದು ಸಹ ನಕುಲ್ ಅವರಿಗೆ ಹಿನ್ನಡೆ ತರಲಿದೆ ಎಂದು ಅಂದಾಜಿಸಲಾಗುತ್ತಿದೆ.

2019ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿದ್ದು ಈ ಒಂದು ಕ್ಷೇತ್ರದಲ್ಲಿ ಮಾತ್ರ. ಆ ಕ್ಷೇತ್ರವನ್ನು ಕಾಂಗ್ರೆಸ್ ಉಳಿಸಿಕೊಳ್ಳಲಿದೆಯೇ ಎಂಬುದನ್ನು ಫಲಿತಾಂಶದವರೆಗೆ ಕಾದು ನೋಡಬೇಕಿದೆ.

ಸಿನಿ ಬಿಟ್ಸ್

ಏನಾಗಿದ್ದ ಈ 'ಭೈರತಿ ರಣಗಲ್'?



ಶಿವರಾಜ್‌ಕುಮಾರ್

ನರ್ತನ್ ನಿರ್ದೇಶನದ 'ಮಫ್ತಿ' ಚಿತ್ರದಲ್ಲಿನ ಭೈರತಿ ರಣಗಲ್ ಪಾತ್ರ ಇಂದಿಗೂ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಆ ಪಾತ್ರ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅವರಿಗೆ ಹೊಸ ಗತ್ತು ತಂದುಕೊಟ್ಟಿತ್ತು. ಇದೀಗ 'ಮಫ್ತಿ'ಯ ಪ್ರೀಕ್ವೆಲ್ 'ಭೈರತಿ ರಣಗಲ್' ಸಿದ್ಧವಾಗುತ್ತಿದ್ದು, ಶಿವರಾಜ್‌ಕುಮಾರ್ ವಕೀಲರೊಬ್ಬರ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನುವ ಸುಳಿವು ದೊರಕಿದೆ.

ಯುಗಾದಿಗೆ ಚಿತ್ರತಂಡ ಪೋಸ್ಟರ್ ಒಂದನ್ನು ಬಿಡುಗಡೆ ಮಾಡಿದೆ. 'ಭೈರತಿ ರಣಗಲ್' ಗ್ಯಾಂಗ್‌ಸ್ಟರ್ ಆಗಿದ್ದು ಹೇಗೆ? ಆ ಕಪ್ಪುಬಣ್ಣದ ಬಟ್ಟೆಯನ್ನು ಯಾಕೆ ಹಾಕುತ್ತಾರೆ ಎನ್ನುವುದೇ ಚಿತ್ರದ ಕಥೆ' ಎಂದು ಈ ಹಿಂದೆ ನರ್ತನ್ ಸುಳಿವು ನೀಡಿದ್ದರು. ಇದಕ್ಕೆ ಪೂರಕವಾಗಿ ಇದೀಗ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಶಿವರಾಜ್‌ಕುಮಾರ್, 'ಈ ಸ್ವಾತಂತ್ರ್ಯ ದಿನ, ನ್ಯಾಯದ ಬಣ್ಣ ಕಪ್ಪು ಆಗಿರಲಿದೆ' ಎಂದಿದ್ದಾರೆ. 'ಭೈರತಿ ರಣಗಲ್' ಸಿನಿಮಾ ಆಗಸ್ಟ್ 15ರಂದು ಬಿಡುಗಡೆಯಾ-ಗುತ್ತಿದೆ. 'ಭೈರತಿ ರಣಗಲ್' ಎಂಬ ಪಾತ್ರದ ಹಿನ್ನೋಟ ಈ ಪ್ರೀಕ್ವೆಲ್‌ನಲ್ಲಿದೆ. ಚಿತ್ರದಲ್ಲಿ ರುಕ್ಮಿಣಿ ವಸಂತ್, ರಾಹುಲ್ ಬೋಸ್, ಅವಿನಾಶ್ , ದೇವರಾಜ್, ಮಧು ಗುರುಸ್ವಾಮಿ, ಛಾಯಾ ಸಿಂಗ್, ಬಾಬು ಹಿರಣ್ಣಯ್ಯ ಮುಂತಾದ ಕಲಾವಿದರಿದ್ದಾರೆ.

'ಕರಾವಳಿ'ಯಲ್ಲಿ ಪ್ರಜ್ವಲ್ ಯಕ್ಷರೂಪ



ಸ್ಯಾಂಡಲ್‌ವುಡ್‌ನ ಡೈನಾಮಿಕ್ ಪ್ರಿನ್ಸ್ ಹೊಸ ಅವತಾರದಲ್ಲಿ ಕಾಣಿ-ಸಿಕೊಂಡಿದ್ದಾರೆ. ಇತ್ತೀಚೆಗಷ್ಟೇ 'ಕರಾವಳಿ' ಪ್ರವೇಶಿಸಿದ್ದ ಪ್ರಜ್ವಲ್ ದೇವರಾಜ್ ಇದೀಗ ಗಂಡುಕಲೆ ಯಕ್ಷಗಾನದ ವೇಷ ಧರಿಸಿ ಮಿಂಚಿದ್ದಾರೆ.

ಗುರುದತ್ ಗಾಣಿಗ ಆ್ಯಕ್ಷನ್ ಕಟ್ ಹೇಳಿರುವ 'ಕರಾವಳಿ' ಸಿನಿಮಾದ ಚಿತ್ರೀಕರಣ ಭರದಿಂದ ಸಾಗುತ್ತಿದ್ದು, ಯುಗಾದಿ ಸಂದರ್ಭದಲ್ಲಿ ಸಿನಿಮಾದ ವಿಶೇಷ ಪೋಸ್ಟರ್ ಅನ್ನು ಚಿತ್ರತಂಡ ಬಿಡುಗಡೆಗೊಳಿಸಿ-ದೆ. ಇದರಲ್ಲಿ ಪ್ರಜ್ವಲ್ ಅವರ ಹೊಸ ಲುಕ್ ರಿವೀಲ್ ಆಗಿದೆ. 'ಕರಾವಳಿ' ಸಿನಿಮಾದಲ್ಲಿ ಪ್ರಜ್ವಲ್ ವಿಭಿನ್ನವಾದ ಪಾತ್ರದಲ್ಲಿ ಕಾಣಿಸಿ-ಕೊಳ್ಳುತ್ತಿದ್ದು, ಕಂಬಳದ ಜೊತೆಗೆ ಯಕ್ಷಗಾನ ಕೂಡ ಈ ಸಿನಿಮಾದ ಪ್ರಮುಖ ಭಾಗಗಳಲ್ಲಿ ಒಂದಾಗಿದೆ. ಯಕ್ಷಗಾನ ಭಾಗವತರಾದ ಪಲ್ಲವ ಗಾಣಿಗ ಪ್ರಜ್ವಲ್ ಅವರಿಗೆ ಈ ಲುಕ್ ವಿನ್ಯಾಸ ಮಾಡಿರುವುದು ಮತ್ತೊಂದು ವಿಶೇಷ. ಗಾಣಿಗ ಫಿಲ್ಮ್ಸ್ ಹಾಗೂ ವಿಕೆ ಫಿಲ್ಮ್ಸ್ ಅಸೋಸಿಯೇಷನ್‌ನಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ಸದ್ಯ ಶೇ 40ರಷ್ಟು ಚಿತ್ರೀಕರಣ ಮುಗಿಸಿದ್ದು 2ನೇ ಹಂತದ ಚಿತ್ರೀಕರಣ ಇದೇ ವಾರದಲ್ಲಿ ಆರಂಭವಾಗಲಿದೆ. ಮಂಗಳೂರಿನ ಸುತ್ತಮುತ್ತ ಸಿನಿಮಾದ ಚಿತ್ರೀಕರಣ ನಡೆಯುತ್ತಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ www.prajavani.net

ಬಿಜೆಪಿ ಸೇರ್ಪಡೆಗೆ ರಾಜ್ಯದಾದ್ಯಂತ ಸಮಿತಿಗಳು

ಬಿಜೆಪಿಯು ತನ್ನತ್ತ ಇತರ ಪಕ್ಷದ ನಾಯಕರನ್ನು, ವಿವಿಧ ಸಂಘ ಸಂಸ್ಥೆಗಳ ಜನರನ್ನು ಸೇರಿಸಿಕೊಳ್ಳಲು 'ಪಕ್ಷ ಸೇರ್ಪಡೆ ಸಮಿತಿ'ಯೊಂದನ್ನು ರಚಿಸಿಕೊಂಡಿದೆ. 'ರಾಜ್ಯದಲ್ಲಿ ಬಿಜೆಪಿ ಅಧಿಕಾರ ಹಿಡಿದ ಬಳಿಕದಿಂದ ಮಾರ್ಚ್‌ವರೆಗೂ ಪಕ್ಷಕ್ಕೆ ಸುಮಾರು 1.26 ಲಕ್ಷ ಮಂದಿ ಸೇರಿದ್ದಾರೆ. ಇದರಲ್ಲಿ ಶೇ 90ರಷ್ಟು ಜನರು ಕಾಂಗ್ರೆಸ್ ಪಕ್ಷದವರು' ಎನ್ನುತ್ತಾರೆ ಈ ಸಮಿತಿಯ ಮುಖ್ಯಸ್ಥ ನರೋತ್ತಮ ಮಿಶ್ರಾ.

'ನಾನು ಪಕ್ಷ ಸೇರ್ಪಡೆ ಸಮಿತಿಯ ಸದಸ್ಯ. ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಳ್ಳುವ ಕಾಂಗ್ರೆಸ್ ನಾಯಕರಲ್ಲಿ ಯಾರು ನಿಜವಾದ 'ರಾಮ ಭಕ್ತರು' ಎಂದು ನಿರ್ಧರಿಸುವುದು ನನ್ನ ಕೆಲಸ. ಪ್ರತಿ ಜಿಲ್ಲೆಯಲ್ಲಿಯೂ ಇಂಥ ಸಮಿತಿಗಳಿವೆ. ಸಣ್ಣ ಪುಟ್ಟ ಮುಖಂಡರ ಸೇರ್ಪಡೆಯನ್ನು ಸಮಿತಿಯೇ ಮಾಡುತ್ತದೆ. ಪ್ರಮುಖರ ಕುರಿತ ನಿರ್ಧಾರಗಳನ್ನು ರಾಜ್ಯದ ನಾಯಕರು, ಮುಖ್ಯಮಂತ್ರಿ ಮಾಡುತ್ತಾರೆ. ಇನ್ನೂ ದೊಡ್ಡ ನಾಯಕರ ಸೇರ್ಪಡೆ ವಿಚಾರವನ್ನು ಕೇಂದ್ರದ ನಾಯಕರು ಮಾಡುತ್ತಾರೆ' ಎನ್ನುತ್ತಾರೆ ಬಿಜೆಪಿ ಮುಖಂಡ ಸಂಜಯ್ ವರ್ಮಾ, ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನವೊಂದರಲ್ಲಿ.

ಸುಮಾರು 16 ಸಾವಿರ ಕಾಂಗ್ರೆಸ್‌ನವರು ಬಿಜೆಪಿ ಸೇರಿದ್ದಾರೆ ಎಂದು ಸಂಜಯ್ ಅವರು ಹೇಳುತ್ತಾರೆ. ಕಾಂಗ್ರೆಸ್ ಇದನ್ನು ಅಲ್ಲಗಳೆದಿದೆ. ಸುಮಾರು 600 ಮಂದಿ ಬಿಜೆಪಿಗೆ ಹೋಗಿದ್ದಾರೆ ಎನ್ನುತ್ತಿದೆ ಕಾಂಗ್ರೆಸ್. ಆದರೆ, ಇಷ್ಟೊಂದು ದೊಡ್ಡ ನೆಲೆಯಿದ್ದೂ, ಹೀಗೆ ಪ್ರತಿ ಜಿಲ್ಲೆಯಲ್ಲೂ ಸಮಿತಿ ರಚಿಸಿಕೊಂಡು 'ರಾಮ ಭಕ್ತ'ರನ್ನು ಸೆಳೆದುಕೊಳ್ಳುವುದು ಯಾಕಾಗಿ ಎನ್ನುವ ಕುತೂಹಲ ಸಹಜವೆ. ಕಾಂಗ್ರೆಸ್ ಅನ್ನು ಸಾಂಸ್ಥಿಕವಾಗಿಯೂ ಹೊಡೆದು ಹಾಕುವುದು ಬಿಜೆಪಿ ಲೆಕ್ಕಾಚಾರ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.


ಗುಂಡಣ್ಣ



ಕಾರು, ಮನೆ, ಒಡವೆ, ವಸ್ತು ಇತ್ಯಾದಿ

ನುಡಿ ಬೆಳಗು





ಪ್ರೊ.ಎಂ.ಕೃಷ್ಣೇಗೌಡ

ನನ್ನ ಸಹಪಾಠಿ ಗೆಳೆಯನೊಬ್ಬ ಈಗ ಭಾರಿ ಶ್ರೀಮಂತ. ಹೇಗೆ, ಏನು ಅಂತ ಕೇಳಬೇಡಿ, ನನಗೂ ಗೊತ್ತಿಲ್ಲ. ಅಂತೂ ಭಾರಿ ಶ್ರೀಮಂತ ಅವನು. ಒಮ್ಮೆ ಅವನು ನಮ್ಮ ಗುರುಗಳ ಹತ್ತಿರ ಮಾತಾಡುವಾಗ, 'ನಾನು ಒಂದು ಲೇಟೆಸ್ಟ್ ಮಾಡೆಲ್ ಮರ್ಸಿಡಿಸ್ ಕಾರು ಕೊಂಡುಕೊಳ್ತಾ ಇದೀನಿ ಸರ್, ನಿಮಗೆ ಹೇಳೋಣ ಅಂತ ಬಂದೆ' ಅಂದ.

ಆಗ ಗುರುಗಳು ಹೇಳಿದರು- 'ತುಂಬಾ ಸಂತೋಷ. ಆದರೆ ಈಗ ಒಂದು ಮಾತು ಹೇಳಬೇಕು ನಾನು. ಏನೆಂದರೆ ನಾವೊಂದು ಹೊಸ ಕಾರು ಕೊಂಡುಕೊಳ್ಳುತ್ತೇವೆ ಅನ್ನಿ. ಅದೂ ಸಾಧಾರಣ ಕಾರಲ್ಲ, ಮರ್ಸಿಡಿಸ್ಸೋ, ಬಿ.ಎಂ.ಡಬ್ಲ್ಯುನೋ ಅಥವಾ ಅಂಥ ಇನ್ನೆಂಥದೋ ಅಂದುಕೊಳ್ಳಿ. ಅಷ್ಟು ದೊಡ್ಡ (ದುಡ್ಡಿನ) ಕಾರು ಕೊಂಡ ಖುಷಿ ನಮಗೆ ಆಗುವುದು ಯಾವಾಗ? ಅದರಲ್ಲಿ ಕುಳಿತು ಎಲ್ಲಿಗಾದರೂ ಹೋಗುವಾಗ, ಅನ್ನುತ್ತೀರಾ? ಬಹುಶಃ ಅಲ್ಲ. ಆ ಕಾರಿನಲ್ಲಿ ಕೂತು ನಾವು ಓಡಾಡುವಾಗ ನಮ್ಮ ನೆಂಟರೋ, ಇಷ್ಟರೋ, ಸ್ನೇಹಿತರೋ (ಅಥವಾ ನಮಗೆ ಆಗದವರೋ) ಅದನ್ನು ನೋಡಿದಾಗ. ಅದಕ್ಕಿಂತಲೂ ಇನ್ನೂ ಹೆಚ್ಚು ಸಂತೋಷವಾಗುವುದು ಇಂಥದೊಂದು ಕಾರನ್ನು ಕೊಳ್ಳಲು ಚೈತನ್ಯವಿಲ್ಲದ ನಮ್ಮ ಸ್ನೇಹಿತರೋ, ಬಂಧುಗಳೋ ಬಂದು 'ಅಹಾ, ಎಂಥಾ ಕಾರು ತೊಗೊಂಡಿದ್ದೀರಿ? ನೋಡೋಕೆ ಎರಡು ಕಣ್ಣು ಸಾಲದು, ನಮ್ಮಂಥವರು ಕನಸಿನಲ್ಲೂ ಆಸೆ ಪಡೋಕೆ ಸಾಧ್ಯ ಇಲ್ಲ ಬಿಡಿ' ಅಂದಾಗ.

'ಅಂದರೆ ಅರ್ಥ ಇಷ್ಟೆ, ನಮ್ಮ ಕಾರು, ಮನೆ, ಒಡವೆ, ವಸ್ತು ಇವು ನಮ್ಮ ಅಗತ್ಯವನ್ನು ಪೂರೈಸುವು-ದಕ್ಕಷ್ಟೇ ಅಲ್ಲ, ನಮ್ಮ ಅಹಂಕಾರ ತೃಪ್ತಿಗೂ ಬರುತ್ತವೆ. ಅಗತ್ಯಕ್ಕಾಗಿ ಬಂದರೆ ನಮಗೆ ಹೆಚ್ಚು ಸಂತೋಷ-ವಾಗುವುದಿಲ್ಲ, ನಮ್ಮ ಅಹಂಕಾರ ತೃಪ್ತಿಗೆ ಬಂದಾಗ ನಮ್ಮಖುಷಿ ಹೆಚ್ಚಾಗುತ್ತದೆ. ಹೊಸ ಹೊಸದನ್ನು ಕೊಂಡು ಅಹಂಕಾರ ತೃಪ್ತಿ ಹೊಂದುವ ಮನಸ್ಸು ಅದಕ್ಕಿಂತಲೂ ಒಳ್ಳೆಯ ಕಾರು, ಮನೆ, ಬಂಗಲೆ ಬೇರೆಯವರ ಹತ್ತಿರ ಇರುವಾಗ ಅದನ್ನು ನೋಡಿ ಖಿನ್ನತೆಗೆ ಬೀಳುತ್ತದೆ...

'ಎಳೆ ಮಕ್ಕಳನ್ನು ನೋಡಿ, ಅವು ಯಾವಾಗಲೂ ಯಾಕೆ ಸಂತೋಷವಾಗಿರುತ್ತವೆ ಗೊತ್ತಾ? ನೀವು ಹತ್ತು ಸಾವಿರ ರೂಪಾಯಿ ಕೊಟ್ಟು ಒಂದು ಆಟದ ಸಾಮಾನು ತಂದುಕೊಡುತ್ತೀರಿ ಅಂತಿಟ್ಟುಕೊಳ್ಳಿ. ಅದರ ಬೆಲೆ ಹತ್ತು ಸಾವಿರ ಅಂತ ನಿಮಗೆ ಗೊತ್ತು. ಆದರೆ ಆ ಮಗುವಿಗೆ ಗೊತ್ತಿಲ್ಲ. ಮಗುವಿಗೆ ಹತ್ತು ಸಾವಿರ ಬೆಲೆಯ ಆಟದ ಸಾಮಾನು ಕೊಡಿಸುವಷ್ಟು ನಿಮಗೆ ಶಕ್ತಿಯಿದೆ ಅನ್ನುವುದು ನಿಮ್ಮ ಹೆಮ್ಮೆ. ಆದರೆ ಮಗುವಿಗೆ ಅದು ಗೊತ್ತಿಲ್ಲ. ಆದ್ದರಿಂದ ಮಗು ನಿಮ್ಮ ಹತ್ತು ಸಾವಿರ ಬೆಲೆಯ ಆಟದ ಸಾಮಾನನ್ನು ಬಿಟ್ಟು ಯಾವುದೋ ಒಂದು ಹಳೆಯ ತಗಡಿನ ಡಬ್ಬ, ಖಾಲಿ ಬಾಟಲಿ, ಅದರ ಮುಚ್ಚಳ, ಒಡೆದ ಬುಗುರಿ, ಇಂಥದೇನನ್ನೋ ಹಿಡಿದುಕೊಂಡು ಆನಂದವಾಗಿ ಆಟ ಆಡುತ್ತಿರುತ್ತದೆ. ಬದುಕಿನಲ್ಲಿ ಬೆಲೆಚೀಟಿಯನ್ನು ನೋಡದೆ ಬದುಕಿದರಷ್ಟೇ ಆನಂದ ಸಿಗುವುದು. ಆ ಎಳೆಯ ಕಂದಮ್ಮಗಳ ಮನಸ್ಸನ್ನು ನಾವು ಒಂದಿಷ್ಟಾದರೂ ರೂಢಿಸಿಕೊಳ್ಳದಿದ್ದರೆ ಆನಂದ, ಸಂತೋಷ ನಮಗೆ ಸಾಧ್ಯವಾಗುವುದೇ ಇಲ್ಲ...'

ಮಾತು ಮುಗಿಸಿ ನಾವು ಹೊರಗಡೆ ಬಂದಾಗ, 'ನಮ್ಮ ಗುರುಗಳಿಗೆ ನಾನು ಮರ್ಸಿಡಿಸ್ ತೆಗೆದು-ಕೊಳ್ಳೋದನ್ನ ಕೇಳಿ ಒಳಗೊಳಗೇ ಉರಿ. ಅದಕ್ಕೇ ಇಷ್ಟೊಂದು ತತ್ತ್ವ ಹೊಡೀತಾರೆ' ಅಂದ ಆ ನನ್ನ ಶ್ರೀಮಂತ ಗೆಳೆಯ.

ನಿಮಗೇನನ್ನಿಸುತ್ತದೆ? ಹೇಳಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಏಪ್ರಿಲ್ 12, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಚತುರ್ಥಿ ಗಂ. 13-22 ನಕ್ಷತ್ರ: ರೋಹಿಣಿ ಗಂ. 24-51 ಯೋಗ: ಸೌಭಾಗ್ಯ ಗಂ. 26-13 ಕರಣ: ವಿಷ್ಟಿ ಗಂ. 13-12, ಮೀನ ಮಾಸದ 28 ನೇ ದಿನ, ಮಳೆನಕ್ಷತ್ರ: ರೇವತಿ 4.

ರಾಹುಕಾಲ : ಬೆಳಿಗ್ಗೆ 10-30 - 12-00

ಸೂರ್ಯೋದಯ : 06-22 ಸೂರ್ಯಾಸ್ತ : 06-40

ಮುಸ್ಲಿಂ ದಿನಾಂಕ : 02 ಶವ್ವಾಲ್

ಅದೃಷ್ಟ ಸಂಖ್ಯೆ : 8, 11

ಮೇಷ : ಅವಿವಾಹಿತರಿಗೆ ಮಾತೃವರ್ಗದ ಕಡೆಯಿಂದ ಅಪೇಕ್ಷಿಸಿದ ರೀತಿಯಲ್ಲಿಯೇ ಸಂಬಂಧ ಅರಸಿ ಬರುವುದು. ಪರಿಶ್ರಮಕ್ಕೆ ತಕ್ಕ ಫಲವನ್ನು ನಿರೀಕ್ಷಿಸಬಹುದು. ಸಾಧು-ಸಂತರ ದರ್ಶನದಿಂದ ಶುಭವಾಗುವುದು.

ವೃಷಭ: ರಾಜಕೀಯದಲ್ಲಿ ಯಾವುದೇ ರೀತಿಯ ಬದಲಾವಣೆ ಈ ದಿನದಲ್ಲಿ ಸರಿಯಲ್ಲ. ಗೃಹದಲ್ಲಿ ಶುಭ, ಮಂಗಳ ಕಾರ್ಯಗಳ ಚಟುವಟಿಕೆಗಳು ತೋರಿ ಬರುವವು. ದಿನದ ಖರ್ಚು-ವೆಚ್ಚಗಳು ಹೆಚ್ಚಿರುವ ಸಂಭವನೀಯತೆ ಇದೆ.

ಮಿಥುನ: ಮನೆಯವರ ಆರೋಗ್ಯದಲ್ಲಿ ಹಂತ ಹಂತದ ಸುಧಾರಣೆ ಕಂಡು ನೆಮ್ಮದಿ ಇರುವುದು. ಮನೆ ಹುಡುಕುವ ಕೆಲಸದಲ್ಲಿ ಸಹೋದ್ಯೋಗಿಯೊಬ್ಬರು ನೆರವಿಗೆ ಬರುವರು. ಕೋರ್ಟ್ ಕಚೇರಿ ಕೆಲಸಗಳಿಗಾಗಿ ಅಲೆದಾಟ ಇರುವುದು.

ಕರ್ಕಾಟಕ: ಬದುಕಿನ ಮೇಲೆ ನಿಯಂತ್ರಣ ಸಾಧಿಸುವಲ್ಲಿ ದುಡಿದು, ಯಶಸ್ಸನ್ನು ಹೊಂದುವಿರಿ. ಜೀವನದ ಮುಂದಿನ ದಿನಗಳಿಗಾಗಿ ದೀರ್ಘಕಾಲೀನ ಯೋಜನೆಗಳನ್ನು ಮಾಡುವಿರಿ. ವಾಹನ ಚಾಲಕರು ಎಚ್ಚರವಿರಿ.

ಸಿಂಹ: ಕಾರ್ಯಕ್ಷೇತ್ರದಲ್ಲಿ ಪರಿಣಿತರಿಂದ ಸುಲಭವಾದ ಉಪಾಯವನ್ನು ಪಡೆದು ಸಂತೋಷವಾಗಲಿದೆ. ಬೇರೆಯವರ ಮನಸ್ಸಿಗೆ ನೋವು ಉಂಟು ಮಾಡುವ ಮಾತುಗಳನ್ನು ಹೇಳಬೇಡಿ.

ಕನ್ಯಾ: ಎಷ್ಟೇ ಪರಿಶ್ರಮವಿದ್ದರೂ, ಅನುಭವವಿದ್ದರೂ ರಾಜಕೀಯ ಭವಿಷ್ಯಕ್ಕೆ ತೊಂದರೆಯಾಗುತ್ತದೆ. ಕಾರ್ಯಕ್ಷೇತ್ರದಲ್ಲಿ ಮೆಚ್ಚುಗೆಯ ಮಾತು ಬರಲಿದೆ. ಆಸ್ತಿಗೆ ಸಂಬಂಧಿಸಿದ ನಿರ್ಧಾರ ಸರಿಯಾಗಿ ತೆಗೆದುಕೊಳ್ಳಿ.

ತುಲಾ: ಸರ್ಕಾರಿ ನೌಕರರಿಗೆ ವೈಯಕ್ತಿಕ ವಿಚಾರಕ್ಕೆ ನಾನಾ ರೀತಿಯಲ್ಲಿ ಅಡ್ಡಿ-ಆತಂಕಗಳು ಕಾಡಬಹುದು. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಅನೇಕ ತರಹದ ಅವಕಾಶಗಳು ಒದಗಿ ಬರುತ್ತದೆ. ಶನೈಶ್ಚರನ ಆರಾಧನೆ ಮಾಡಿ.

ವೃಶ್ಚಿಕ: ಹೆಸರಾಂತ ವ್ಯಕ್ತಿಗಳ ಜತೆ ಭೇಟಿ ಮಾಡುವ ಅವಶ್ಯಕತೆ ಇದ್ದಲ್ಲಿ ಪ್ರಯತ್ನ ಪಟ್ಟರೆ ಈ ದಿನ ಫಲಿಸುವ ಸಾಧ್ಯತೆಗಳಿವೆ. ಚಿನ್ನ ಬೆಳ್ಳಿ ಮಾರಾಟಗಾರರಿಗೆ ಹೆಚ್ಚಿನ ಲಾಭ ಇರುತ್ತದೆ. ಲಲಿತಕಲಾ ಕ್ಷೇತ್ರದಲ್ಲಿರುವವರಿಗೆ ಸಾಧನೆಗೆ ಅವಕಾಶವಿದೆ.

ಧನು: ಅತ್ತೆ-ಸೊಸೆ, ತಾಯಿ-ಮಗಳು ಸಣ್ಣಪುಟ್ಟ ವಿಚಾರಗಳಿಗೆ ಮನಸ್ತಾಪ ಮಾಡಿಕೊಳ್ಳದೆ ಸಾಮರಸ್ಯದ ಜೀವನ ನಡೆಸುವುದು ಒಳ್ಳೆಯದು. ಮಹಿಳೆಯರಿಗೆ ಮನ್ನಣೆ ಹೆಚ್ಚಲಿದ್ದು, ಲಾಭ ಪಡೆದುಕೊಳ್ಳುವಿರಿ.

ಮಕರ: ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದರೂ, ಅದು ಅಷ್ಟು ಸುಲಭವಾಗಿ ನಡೆಯುವುದಿಲ್ಲ. ಪೊಲೀಸ್ ಅಧಿಕಾರಿಗಳಿಗೆ ತುರ್ತು ಕೆಲಸ ಒದಗುವ ಸಂದರ್ಭ ಬರುವುದು. ಮಂಗಳ ಕಾರ್ಯದ ಸುದ್ದಿ ಕೇಳುವಿರಿ.

ಕುಂಭ: ಬ್ಯಾಂಕ್ ಮತ್ತು ನ್ಯಾಯಾಂಗ ಕ್ಷೇತ್ರದಲ್ಲಿರುವ ವ್ಯಕ್ತಿಗಳಿಗೆ ನಿಮ್ಮ ಚಾಣಾಕ್ಷತನದಿಂದ ಹೆಗ್ಗಳಿಕೆಗೆ ಪಾತ್ರರಾಗುತ್ತೀರಿ. ಕೆಲಸದ ನಿಮಿತ್ತವಾಗಿ ಅನಿರೀಕ್ಷಿತ ದೂರದ ಪ್ರಯಾಣ ಮಾಡುವ ಸಾಧ್ಯತೆಗಳಿವೆ.

ಮೀನ: ಕೌಟುಂಬಿಕ ಸಮಸ್ಯೆಗೆ ಧಾರ್ಮಿಕವಾಗಿ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ನಡೆಸಿ. ಜೀವನ ಶೈಲಿಯಲ್ಲಿ ಮಹತ್ತರ ಬದಲಾವಣೆಗಳನ್ನು ತಂದುಕೊಳ್ಳುವ ಸನ್ನಿವೇಶ ಬರಲಿದೆ. ಕೆಂಪು ಉಡುಪು ಶುಭದಾಯಕ.

ಪದಬಂಧ 5648


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಪ್ಪಟ ಬಂಗಾರವಿದು (4)
3.ಆಗಮಗಳನ್ನು ತಿಳಿದವನು (4)
5.ಮೂಲೆ ಮನೆಯ ಮಾದರಿ ಇಲ್ಲಿದೆ (3)
7.ಹರಸುತಲಿದ್ದಾಗ ಕಾಣಿಸಿರುವ ಮಗ (2)
8.ಮಿತ್ರ ಬರೆದ ಓಲೆ (2)
11.ಮತ ಹಾಕುವಾಗ ಆವರಿಸಿದ ಕತ್ತಲು (2)
13.ಭಿನ್ನರಾಶಿ ಕಲಿತವನ ಮುಂದಿರುವ ಒಟ್ಟಿಲು (2)
14.ಹತ್ತು ನೂರಿದು (3)
16.ವರನಿಗೆ ಕಾಣಿಸಿರುವ ಕೊಳ (4)
17.ರಾತ್ರಿವೇಳೆ ಸಂಚರಿಸುವ ಕಳ್ಳ ಪಿಶಾಚಿ ಇತ್ಯಾದಿ (4)

ಮೇಲಿಂದ ಕೆಳಕ್ಕೆ

1.ಅಪ್ಪನ ರೂಪ ಹೀಗೆ ಬಲು ವಿರಳ! (4)
2.ಜಿಪುಣನ ಹತ್ತಿರ ಅರ್ಹಂತನಿದ್ದಾನೆ (2)
3.ಆ ಮನೆ ಮುಂದಿರುವ ಗಜ (2)
4.ಕನ್ನಡಿಗ ಮಾಡಿದ ಡಿಸ್ಕೌಂಟ್ (3)
6.ಮೂಡಿನಲ್ಲಿರುವ ಸಂಕೋಚ ಸ್ವಭಾವದ ವ್ಯಕ್ತಿ! (3)
7.ಸಂಸ್ಕೃತಿ ಹೊಂದಿರುವ ಸಭ್ಯ (4)
9.ದ್ವಾದಶಿ ನಂತರದ ತಿಥಿ (4)
10.ಕೂಸು ಹುಟ್ಟುವ ಮುನ್ನವೇ ಈ ಟೊಪ್ಪಿಗೆಯೇ? (3)
12.ಪರಿವರ್ತನೆಯ ಕಾಲವಿದು (4)
13.ರಾಯರಿಂದ ಬಂದಿರುವ ನಿರೂಪ (3)
14.ಸಾಕ್ಷರನಲ್ಲಿರುವ ಸತ್ವ (2)
15.ಈ ಮನುಷ್ಯ ಏಕೋ ತಿರುಗಿದ್ದಾನಲ್ಲಾ? (2)



5647ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವರ್ಣ 3.ಶ್ರಮ
5.ಹಸ್ತಲಾಘವ 6.ಗಡವ
7.ಜಗಳ 8.ದಳ್ಳಾಳಿತನ
9.ದುಮ್ಮಾನ 10.ನಾಪಿತ
13.ಜಲಜನಕ 14.ಹಣ್ಣು
15.ಹಾನಿ

ಮೇಲಿಂದ ಕೆಳಕ್ಕೆ:
1.ವನ್ಯಮೃಗ 2.ಸಲಾಕೆ
4.ಮಡಿವಾಳ 5.ಹಯವದನ
7.ಜನನಾಯಕ
9.ದುರಾಗ್ರಹ 11.ತತ್ವಜ್ಞಾನಿ
12.ಗಂಜಳ

ಸುಡೊಕು 6033

4			9		1		3	2
	9			8			7	4
8			4		5	9		
7								8
	8		1	6	2		9	
		9	7			2		
		8		1				
9		4	8		7		2	5
	1			9			8	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6032 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ವ್ಯಾನ್‌ಗೆ ಬಸ್ ಡಿಕ್ಕಿ: ಮೂವರ ಸಾವು

ಪ್ರಜಾವಾಣಿ ವಾರ್ತೆ

ನ್ಯಾಮತಿ (ದಾವಣಗೆರೆ ಜಿಲ್ಲೆ): ತಾಲ್ಲೂಕಿನ ಚಿನ್ನಿಕಟ್ಟೆ ಬಳಿ, ಶಿವಮೊಗ್ಗ-ಶಿಕಾರಿಪುರ ರಸ್ತೆಯಲ್ಲಿ ಗುರುವಾರ ಬೆಳಿಗ್ಗೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಬಸ್ ಹಾಗೂ ಒಮಿನಿ ವ್ಯಾನ್ ನಡುವೆ ಡಿಕ್ಕಿ ಸಂಭವಿಸಿ ವ್ಯಾನ್‌ನಲ್ಲಿದ್ದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಹರಮಘಟ್ಟ ಗ್ರಾಮದ ನಂಜುಂಡಪ್ಪ (83), ವ್ಯಾನ್ ಚಾಲಕ ದೇವರಾಜ (27) ಹಾಗೂ ಸೂರಗೊಂಡನಕೊಪ್ಪ ಗ್ರಾಮದ ರಾಕೇಶ (30) ಮೃತರು.

ಒಮಿನಿ ವ್ಯಾನ್ ಹರಮಘಟ್ಟದಿಂದ ಸವಳಂಗ ಮಾರ್ಗವಾಗಿ ಶಿಕಾರಿಪುರದತ್ತ ಹೊರಟಿತ್ತು. ಸಾರಿಗೆ ಸಂಸ್ಥೆ ಬಸ್ ಶಿಕಾರಿಪುರದಿಂದ ಶಿವಮೊಗ್ಗ ಕಡೆ ಹೊರಟಿತ್ತು. ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಬಸ್ ರಸ್ತೆ ಪಕ್ಕದ ತಡೆಗೋಡೆಗೆ ಗುದ್ದಿದೆ.

ಒಮಿನಿ ಹಾಗೂ ಬಸ್‌ನಲ್ಲಿದ್ದ ಕೆಲವು ಪ್ರಯಾಣಿಕರಿಗೆ ಗಾಯಗಳಾಗಿವೆ. ಈ ಕುರಿತು ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾವೇರಿ: ಬೇಸಿಗೆಯಲ್ಲಿ ಪ್ರಾಣಿ ಪಕ್ಷಿಗಳ ನೀರಿನ ದಾಹ ತಣಿಸಲು ನೆರವು

ಬತ್ತಿದ ವರದಾ ನದಿಗೆ ರೈತರಿಂದ ನೀರು

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಬೇಸಿಗೆಯಲ್ಲಿ ಪ್ರಾಣಿ- ಪಕ್ಷಿಗಳ ನೀರಿನ ದಾಹ ತಣಿಸಲು ಜಿಲ್ಲೆಯ ರೈತರಾದ ಭುವನೇಶ್ವರ ಶಿಡ್ಲಾಪುರ ಮತ್ತು ಪುಟ್ಟಪ್ಪ ಸೊಪ್ಪಿನ ತಮ್ಮ ಹೊಲದ ಕೊಳವೆಬಾವಿಯ ನೀರನ್ನು ವರದಾ ನದಿಗೆ ಉಚಿತವಾಗಿ ಹರಿಸುತ್ತಿದ್ದಾರೆ.

ತಾಲ್ಲೂಕಿನ ಸಂಗೂರು ಗ್ರಾಮದ ಭುವನೇಶ್ವರ ಶಿಡ್ಲಾಪುರ ಅವರು ತಮ್ಮ ಜಮೀನಿನಲ್ಲಿ ಮಾರ್ಚ್ 5ರಂದು ಹೊಸ ಕೊಳವೆಬಾವಿ ಕೊರೆಸಿ, ಅದರಲ್ಲಿ ಸಿಕ್ಕ ನೀರನ್ನು ವರದಾ ನದಿಗೆ ಬಿಡುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಜಿಲ್ಲೆಯ 'ವರದಾ' ನದಿ ಜೂನ್‌ನಿಂದ ಜನವರಿಯವರೆಗೆ ಮಾತ್ರ ಹರಿಯುತ್ತದೆ. ಮಳೆ ಕೊರತೆಯಿಂದ ನದಿಯ ಒಡಲು ಮೂರು ತಿಂಗಳಿನಿಂದ ಬರಿದಾಗಿದೆ. ಸಂಗೂರು ಗ್ರಾಮದಲ್ಲಿನ ಬ್ಯಾರೇಜ್ ಬಳಿಯೂ ನೀರು ಖಾಲಿಯಾಗಿದೆ. ಅದಕ್ಕೆ ಭುವನೇಶ್ವರ ಅವರು ಒಂದು ತಿಂಗಳಿನಿಂದ ನಿತ್ಯ 6 ಗಂಟೆ ನದಿಗೆ ನೀರು ಹರಿಸುತ್ತಾರೆ.



ಹಾವೇರಿ ಜಿಲ್ಲೆಯ ವರದಾ ನದಿಗೆ ನೀರು ಹರಿಸುತ್ತಿರುವ ಕೂಡಲ ಗ್ರಾಮದ ರೈತ ಪುಟ್ಟಪ್ಪ ಸೊಪ್ಪಿನ

'ಹೊಳೆದಂಡೆಯಲ್ಲಿ ನನಗೆ 20 ಎಕರೆ ಜಮೀನಿದೆ. ಕಬ್ಬು, ಅಡಿಕೆ, ಮೆಕ್ಕೆಜೋಳ ಬೆಳೆಯಲು ಎರಡು ಕೊಳವೆಬಾವಿಗಳ ನೀರು ಬಳಸುತ್ತಿದ್ದೆ. ಬೇಸಿಗೆಯಲ್ಲಿ ನೀರು ಕಡಿಮೆ ಆಗಬಹುದೆಂದು ಹೊಸ ಕೊಳವೆಬಾವಿ ಕೊರೆಸಿದೆ. 5 ಇಂಚು ನೀರು ಸಿಕ್ಕಿತು. ಹೊಲಕ್ಕೆ ಬರುತ್ತಿದ್ದ ಕೃಷ್ಣಮೃಗ, ನವಿಲು, ಕೋತಿ, ನರಿ, ಪಕ್ಷಿಗಳ ಬಾಯಾರಿಕೆ ತಣಿಯಿತು. ಪಶು-ಪಕ್ಷಿಗಳ ನೀರಿನ ದಾಹ ತೀರಿಸಲು ವರದಾ ನದಿಗೆ ನೀರು ಹರಿಸುತ್ತಿರುವೆ' ಎಂದು ಭುವನೇಶ್ವರ ಶಿಡ್ಲಾಪುರ ತಿಳಿಸಿದರು.

> **ವರದಾ ನದಿಗೆ ಈಗ 6 ಗಂಟೆ ನೀರು ಬಿಡುತ್ತಿರುವೆ. ನನ್ನ ಕೊಳವೆಬಾವಿಗೆ 'ನಿರಂತರ ಜ್ಯೋತಿ' ವಿದ್ಯುತ್ ಸಂಪರ್ಕ ಕಲ್ಪಿಸಿದರೆ ದಿನದ 24 ಗಂಟೆ ನದಿಗೆ ನೀರು ಹರಿಸುವೆ**
> **ಭುವನೇಶ್ವರ ಶಿಡ್ಲಾಪುರ,** ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ, ಸಂಗೂರು

> **ಬರಗಾಲದಲ್ಲಿ ಕೆರೆಕಟ್ಟೆ, ನದಿ, ಹಳ್ಳ-ಕೊಳ್ಳಗಳು ಬತ್ತಿವೆ. ಈ ಸಂದರ್ಭದಲ್ಲಿ ತಮ್ಮ ಕೊಳವೆಬಾವಿಗಳಿಂದ ನದಿಗೆ ನೀರು ಹರಿಸುತ್ತಿರುವುದು ಶ್ಲಾಘನೀಯ**
> **ಮಲ್ಲಿಕಾರ್ಜುನ ಬಳ್ಳಾರಿ,** ಪ್ರಧಾನ ಕಾರ್ಯದರ್ಶಿ, ಜಿಲ್ಲಾ ರೈತ ಸಂಘ

12 ವರ್ಷಗಳಿಂದ ನೀರಿನ ಸೇವೆ: ಹಾನಗಲ್ ತಾಲ್ಲೂಕಿನ ಕೂಡಲ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ಪುಟ್ಟಪ್ಪ ಸೊಪ್ಪಿನ 12 ವರ್ಷಗಳಿಂದ ಬೇಸಿಗೆ ವೇಳೆ ತಮ್ಮ ಕೊಳವೆಬಾವಿಯಿಂದ ವರದಾ ನದಿಗೆ ನೀರು ಹರಿಸುತ್ತಾರೆ.

'2012ರ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಂಟಾಗಿತ್ತು. ಆಗ ಹೊಳೆ-ದಂಡೆಯಲ್ಲಿನ ನಮ್ಮ ಹೊಲದ ಕೊಳವೆಬಾವಿಯಿಂದ ವರದಾ ನದಿಗೆ ನೀರು ಹರಿಸಿದೆ. ದನ ಕರು, ಪಶು-ಪಕ್ಷಿಗಳು ಬಾಯಾರಿಕೆ ನೀಗಿಸಿಕೊಳ್ಳಲು ನದಿ ಬಳಿ ಬರತೊಡಗಿದವು. ಆದ್ದರಿಂದ ನಾನು ಪ್ರತಿ ಬೇಸಿಗೆಯಲ್ಲೂ ನೀರು ಹರಿಸುತ್ತಿರುವೆ' ಎಂದು ರೈತ ಪುಟ್ಟಪ್ಪ ಸೊಪ್ಪಿನ ತಿಳಿಸಿದರು.

'ವರದಾ ನದಿಯ ಗುಂಡಿಗಳಲ್ಲಿ ನೀರು ತುಂಬಿದ್ದರಿಂದ ಹೊಳೆ ದಂಡೆಯಲ್ಲಿರುವ ಗ್ರಾಮಸ್ಥರು ದನ ಕರುಗಳಿಗೆ ಕುಡಿಯಲು, ಮೈ ತೊಳೆಯಲು, ಬಟ್ಟೆ ಒಗೆಯಲು, ವಾಹನಗಳನ್ನು ತೊಳೆಯಲು ನೀರು ಬಳಸುತ್ತಿದ್ದಾರೆ' ಎಂದರು.

ಸುದ್ದಿ 2 ನಿಮಿಷ

₹18 ಕೋಟಿ ವೆಚ್ಚದಲ್ಲಿ ಸುವರ್ಣ ರಥ

ಉಡುಪಿ: ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಶ್ರೀಗಳು ಸನ್ಯಾಸ ಸ್ವೀಕರಿಸಿ 50 ವರ್ಷ ತುಂಬಿರುವುದರಿಂದ ಕೃಷ್ಣನಿಗೆ 'ಪಾರ್ಥಸಾರಥಿ ಸುವರ್ಣ ರಥ' ಸಮರ್ಪಿಸಲು ಸಂಕಲ್ಪಿಸಲಾಗಿದ್ದು, ಯೋಜನೆಯ ಮುಹೂರ್ತ ಏ.14ರಂದು ನೆರವೇರಲಿದೆ ಎಂದು ಪುತ್ತಿಗೆ ಮಠ ತಿಳಿಸಿದೆ.



₹18 ಕೋಟಿ ವೆಚ್ಚದಲ್ಲಿ ಸುವರ್ಣ ರಥವನ್ನು ಸಮರ್ಪಿಸಲು ಶ್ರೀಗಳು ಸಂಕಲ್ಪಿಸಿದ್ದಾರೆ. ಏ.14ರ ಸೌರಮಾನ ಯುಗಾದಿಯ ಶುಭ ಸಂದರ್ಭದಲ್ಲಿ ಶ್ರೀಗಳ ಶಿಷ್ಯರು ಹಾಗೂ ಅಭಿಮಾನಿಗಳು ವಿಶೇಷ ಕಾರ್ಯಕ್ರಮಗಳ ಮೂಲಕ ಶ್ರೀಗಳಿಗೆ ಗೌರವಾರ್ಪಣೆ ಮಾಡಲಿದ್ದಾರೆ. ಗಣ್ಯರಿಂದ 108 ಚಿನ್ನದ ನಾಣ್ಯಗಳ ಸಮರ್ಪಣೆ ನಡೆಯಲಿದೆ.

ಅಂದು ಸಂಜೆ 5ಕ್ಕೆ ಮೆರವಣಿಗೆಯಲ್ಲಿ ಪುತ್ತಿಗೆ ಶ್ರೀಗಳನ್ನು ರಾಜಾಂಗಣಕ್ಕೆ ಕರೆತರಲಾಗುವುದು. ಬಳಿಕ ಶ್ರೀಗಳು ಕೃಷ್ಣನಿಗೆ ಸುವರ್ಣ ನಾಣ್ಯಗಳಿಂದ ಅಭಿಷೇಕ ಮಾಡಲಿದ್ದಾರೆ. ನಂತರ ಹಲವು ಕಾರ್ಯಕ್ರಮಗಳು ನಡೆಯಲಿವೆ.

'ಮೈದಾನ್' ಪ್ರದರ್ಶನ ನಿರ್ಬಂಧ ಆದೇಶಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಕೃತಿಚೌರ್ಯದ ಆರೋಪದಡಿ, ಬಾಲಿವುಡ್ ನಟ ಅಜಯ್ ದೇವಗನ್ ಪ್ರಧಾನ ಭೂಮಿಕೆಯಲ್ಲಿರುವ 'ಮೈದಾನ್' ಚಿತ್ರ ಬಿಡುಗಡೆಗೆ ನಿರ್ಬಂಧ ವಿಧಿಸಿದ್ದ ಮೈಸೂರು ನ್ಯಾಯಾಲಯದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಇದರಿಂದ ಸಿನಿಮಾ ಬಿಡುಗಡೆಗೆ ಇದ್ದ ವಿಘ್ನ ನಿವಾರಣೆಯಾದಂತಾಗಿದೆ. ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಬಾಲಿವುಡ್ ನಿರ್ಮಾಪಕ ಬೋನಿ ಕಪೂರ್ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ವಿಶೇಷ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಪುರಸ್ಕರಿಸಿದೆ.

ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಸಜನ್ ಪೂವಯ್ಯ, 'ಚಿತ್ರದ ನಿರ್ಮಾಣ ಕಾರ್ಯ 2019ರಲ್ಲೇ ಆರಂಭವಾಗಿತ್ತು. ಆದರೆ, ಕೋವಿಡ್ ಪರಿಣಾಮ ವಿಳಂಬವಾಗಿತ್ತು. ಆದರೆ, ಈಗ ಪ್ರತಿಬಂಧಕ ಆದೇಶ ನೀಡಿರುವ ಕಾರಣ, ಜಗತ್ತಿನಾದ್ಯಂತ ಮತ್ತು ಒಟಿಟಿ ವೇದಿಕೆಗಳಲ್ಲಿ 'ಮೈದಾನ್' ಸಿನಿಮಾ ಬಿಡುಗಡೆಯಾಗಲು ತೊಡಕುಂಟಾಗಿದೆ. ಅರ್ಜಿದಾರರಿಗೆ ಅಪಾರ ಹಾನಿಯಾಗಿದೆ' ಎಂದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಸೆಷನ್ಸ್ ನ್ಯಾಯಾಲಯದ ಆದೇಶಕ್ಕೆ ತಡೆ ನೀಡಿತು. ಪ್ರತಿವಾದಿ ಸಿ.ಆರ್.ಅನಿಲ್ ಕುಮಾರ್ ಮತ್ತು ಇತರರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿತು.

ರಾಜ್ಯದ ಕೆಲವೆಡೆ ಮಳೆ, ತಂಪಾದ ಇಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ/ಶಿವಮೊಗ್ಗ: ರಾಜ್ಯದ ಕೆಲವೆಡೆ ಗುರುವಾರ ಮಳೆಯಾಗಿದ್ದು ಸುಡು ಬಿಸಿಲಿನಿಂದ ಕಾದಿದ್ದ ಇಳೆ ಕೊಂಚ ತಂಪಾಗಿದೆ.

ಕಲಬುರಗಿ ಹಾಗೂ ಬೀದರ್ ಜಿಲ್ಲೆಯ ಹಲವೆಡೆ ಗುರುವಾರ ಗುಡುಗು, ಮಿಂಚು ಸಹಿತ ಜೋರು ಮಳೆಯಾಯಿತು. ಕಲಬುರಗಿ ನಗರದಲ್ಲಿ ಸುಮಾರು 45 ನಿಮಿಷ ಬಿರುಸಿನ ಮಳೆ ಸುರಿದು ನಗರವನ್ನು ತಂಪಾಗಿಸಿತು. ಜಿಲ್ಲೆ ಆಳಂದ ಪಟ್ಟಣ, ಮಾದನ ಹಿಪ್ಪರಗಿ, ಝಳಕಿ, ದರ್ಗಾ ಶಿರೂರು, ಕೆರೂರು, ನಿಂಗದಳ್ಳಿ, ಹಳ್ಳಿ ಸಲಗರ, ಕಾಮನಳ್ಳಿ, ನಿಂಗದಳ್ಳಿ ಸೇರಿ ಇತರೆ ಗ್ರಾಮಗಳಲ್ಲಿ ಅರ್ಧ ಗಂಟೆ ಕಾಲ ಬಿರುಗಾಳಿಯೊಂದಿಗೆ ಮಳೆ ಸುರಿಯಿತು. ಅಫಜಲಪುರ ತಾಲ್ಲೂಕಿನ ಆನೂರು ಗ್ರಾಮದಲ್ಲಿ ಮನೋಹರ್ ಕಲ್ಲಸಿದ್ದನೂರು ಎಂಬುವವರಿಗೆ ಸೇರಿದ ಎಮ್ಮೆಗೆ ಸಿಡಿಲು ಬಡಿದು ಮೃತಪಟ್ಟಿದೆ.

ಮಳೆಯಿಂದಾಗಿ ಆಳಂದ ಪಟ್ಟಣದ ಶ್ರೀರಾಮ ಮಾರುಕಟ್ಟೆಯ ವಾರದ ಸಂತೆಗೆ ಅಡಚಣೆಯಾಯಿತು. ಬೀದರ್, ಹುಮನಾಬಾದ್, ಹುಲಸೂರ, ಬಸವಕಲ್ಯಾಣ ಹಾಗೂ ಭಾಲ್ಕಿ ತಾಲ್ಲೂಕಿನ ಹಲವು ಕಡೆಗಳಲ್ಲಿ ಗುರುವಾರ ಗುಡುಗು ಸಹಿತ ಜಿಟಿಜಿಟಿ ಮಳೆಯಾಗಿದೆ.



ಕಲಬುರಗಿ ಜಿಲ್ಲೆಯ ಆಳಂದ ಪಟ್ಟಣದಲ್ಲಿ ಗುರುವಾರ ಬಿರುಸಿನ ಮಳೆ ಸುರಿಯಿತು

ಬುಧವಾರ ತಡರಾತ್ರಿ ಕೂಡ ಮಳೆಯಾಗಿತ್ತು. ಗುರುವಾರ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣ ಇತ್ತು. ಸಂಜೆ 4ಗಂಟೆ ಸುಮಾರಿಗೆ ಆರಂಭಗೊಂಡ ಜಿಟಿಜಿಟಿ ಮಳೆ ಸಂಜೆ 6.30ರವರೆಗೆ ಸುರಿದಿದೆ. ತಾಪಮಾನದಲ್ಲಿ ಭಾರಿ ಇಳಿಕೆಯಾಗಿದ್ದು, ವಾತಾವರಣ ತಂಪಾಗಿದೆ. ಕೆಂಡದ ಬಿಸಿಲಿನಿಂದ ಬಸವಳಿದವರು ಮಳೆಯಿಂದ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಮೊದಲ ಮಳೆಯ ಸ್ಪರ್ಶ: ಶಿವಮೊಗ್ಗದಲ್ಲಿ ಗುರುವಾರ ಸಂಜೆ 20 ನಿಮಿಷಕ್ಕೂ ಅಧಿಕ ಕಾಲ ಸುರಿದ ಪ್ರಸಕ್ತ ವರ್ಷದ ಮೊದಲ ಮಳೆ ಯುಗಾದಿ, ಈದ್-ಉಲ್ ಫಿತ್ರ್ ಸಂಭ್ರಮವನ್ನು ಇಮ್ಮಡಿಗೊಳಿಸಿತು. ಮಲೆನಾಡ ಹೆಗ್ಗಳಿಕೆಯನ್ನು ಮರೆಮಾಚುವಂತಹ ಬೇಸಿಗೆಯ ಬಿಸಿಲಿಗೆ ಶಿವಮೊಗ್ಗ ನಗರ ಕಾದ ಕಾವಲಿಯಂತಾಗಿತ್ತು. ಸಂಜೆ ಸುರಿದ ಮಳೆ ಇಳೆಗೆ ತಂಪೆರೆಯಿತು. ಬಿಸಿಲ ತಾಪಕ್ಕೆ ಕಂಗೆಟ್ಟಿದ್ದ ಜನರು ಮಳೆರಾಯನ ದರ್ಶನದಿಂದ ಪುಳಕಗೊಂಡರು.

ಸಿಡಿಲಿಗೆ ಮೂವರ ಸಾವು

ಹುಬ್ಬಳ್ಳಿ: ವಿಜಯಪುರ ಜಿಲ್ಲೆಯ ವಿವಿಧೆಡೆ ಸಿಡಿಲು ಬಡಿದು ಮೂವರು ಮೃತಪಟ್ಟಿದ್ದಾರೆ.ವಿಜಯಪುರ ಜಿಲ್ಲೆ ಇಂಡಿ ಪಟ್ಟಣದ ಹೊರವಲಯದಲ್ಲಿ ಬೀರಪ್ಪ ನಿಂಗಪ್ಪ ಅವರಾದಿ (15), ಮಸಳಿ ಬಿ.ಕೆ.ಗ್ರಾಮದ ಸೋಮಶೇಖರ ಪಟ್ಟಣಶೆಟ್ಟಿ (45) ಮತ್ತು ಚಡಚಣ ತಾಲ್ಲೂಕಿನ ಹಾವನಾಳ ಗ್ರಾಮ ಸುನಂದಾ ಶ್ರೀಮಂತ ಡೋಳ್ಳಿ (50) ಎಂಬುವರು ಮೃತಪಟ್ಟಿದ್ದಾರೆ. ಒಂದು ಎಮ್ಮೆ ಮತ್ತು ಎರಡು ಆಕಳು ಸಿಡಲಿಗೆ ಬಲಿಯಾಗಿವೆ.

ಬಾಗಲಕೋಟೆ, ವಿಜಯಪುರ ಮತ್ತು ಬೆಳಗಾವಿ ಜಿಲ್ಲೆ ವಿವಿಧೆಡೆ ಗುರುವಾರ ಗುಡುಗು ಸಹಿತ ಮಳೆಯಾಯಿತು.ವಿಜಯಪುರ ಜಿಲ್ಲೆ ತಿಕೋಟಾ,ಆಲಮಟ್ಟಿ, ಮುದ್ದೇಬಿಹಾಳ, ಸಿಂದಗಿ ತಾಲ್ಲೂಕು ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗಿದೆ. ತಾಳಿಕೋಟೆ ಪಟ್ಟಣದಲ್ಲಿ ಗುಡುಗು, ಸಿಡಿಲು ಸಹಿತ ಆಲಿಕಲ್ಲು ಮಳೆಯಾಗಿದೆ. ಚಡಚಣ ತಾಲ್ಲೂಕು ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ಬಿರುಗಾಳಿ ಅಬ್ಬರಕ್ಕೆ 20ಕ್ಕೂ ಮನೆಯ ಮೇಲಿನ ಪತ್ರಾಸ್‌ಗಳು ಹಾರಿಹೋಗಿವೆ.ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪಟ್ಟಣ ಸೇರಿ ತಾಲ್ಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿ ಗುಡುಗು, ಜೋರಾದ ಗಾಳಿಯೊಂದಿಗೆ ಮಳೆ ಸುರಿಯಿತು. ಬೈಲಹೊಂಗಲ- ಹಾರೂಗೊಪ್ಪ ಮುಖ್ಯ ರಸ್ತೆಯಲ್ಲಿ ಮರ ನೆಲಕ್ಕುರುಳಿತು. ಮರಕುಂಬಿ, ಮಲ್ಲೂರ, ದುಂಡನಕೊಪ್ಪ ಗ್ರಾಮದಲ್ಲಿ ಹಳ್ಳಗಳು ತುಂಬಿ ಹರಿದವು. ಬಾಗಲಕೋಟೆ ನಗರ ಸೇರಿ ಜಿಲ್ಲೆಯ ಕಮತಗಿ, ಸೂಳೇಭಾವಿ, ಐಹೊಳೆ, ರಕ್ಕಸಗಿ ಸೇರಿ ವಿವಿಧೆಡೆ ಅರ್ಧ ಗಂಟೆಗೂ ಹೆಚ್ಚು ಹೊತ್ತು ಮಳೆಯಾಯಿತು. ಹುನಗುಂದದಲ್ಲಿ ಕೆಲ ನಿಮಿಷ ಮಳೆಯಾಯಿತು.

ಬಹುತೇಕ ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಹೊರತುಪಡಿಸಿ ಉತ್ತರ ಹಾಗೂ ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಶುಕ್ರವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಾಗಲಕೋಟೆ, ಬೀದರ್, ಗದಗ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ರಾಮನಗರ, ಶಿವಮೊಗ್ಗ, ವಿಜಯನಗರ ಹಾಗೂ ಮೈಸೂರಿನಲ್ಲಿ ಮಳೆಯಾಗುವ ಸಂಭವವಿದೆ. ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿಯಲ್ಲಿ ಉಷ್ಣ ವಾತಾವರಣ ಇರಲಿದೆ. ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ಶನಿವಾರದಿಂದ, ಉತ್ತರ ಕನ್ನಡದಲ್ಲಿ ಸೋಮವಾರದಿಂದ ಮಳೆಯಾಗುವ ಸಾಧ್ಯತೆ ಇದೆ.

ಕರಾವಳಿ, ಉತ್ತರ ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ಇದೇ 17ರವರೆಗೂ ಮಳೆಯಾಗಬಹುದು ಎಂದು ಇಲಾಖೆ ತಿಳಿಸಿದೆ. ಗುರುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕಲಬುರಗಿಯಲ್ಲಿ ಗರಿಷ್ಠ (40.1 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ವರದಿಯಾಗಿದೆ.

ಶಂಕಿತ ಮುಜಮೀಲ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿಸಲಾಗಿರುವ ಶಂಕಿತ ಮುಜಮೀಲ್ ಶರೀಫ್‌ನನ್ನು (31) ಐದು ದಿನಗಳವರೆಗೆ ಕಸ್ಟಡಿಗೆ ಪಡೆದಿದ್ದ ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳು, ಹಲವು ಸ್ಥಳಗಳಿಗೆ ಕರೆದೊಯ್ದು ಮಾಹಿತಿ ಕಲೆ ಹಾಕಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಕಳಸದ ಮುಜಮೀಲ್‌ನನ್ನು ಮಾರ್ಚ್ 23ರಂದು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದರು. ಏಪ್ರಿಲ್ 3ರವರೆಗೆ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದರು. ಮುಜಮೀಲ್ ನೀಡಿದ್ದ ಮಾಹಿತಿ ಆಧರಿಸಿ ತನಿಖೆ ಮುಂದುವರಿಸಿದ್ದ ಅಧಿಕಾರಿಗಳು, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಶಂಕಿತ ಮಾಝ್ ಮುನೀರ್ ಅಹಮದ್‌ನನ್ನೂ ಸೆರೆ ಹಿಡಿದಿದ್ದರು.

'ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಇರಿಸಿದ್ದು ತೀರ್ಥಹಳ್ಳಿಯ ಮುಸಾವೀರ್ ಹುಸೇನ್ ಶಾಜೀಬ್ ಎಂಬುದಕ್ಕೆ ಹಲವು ಪುರಾವೆಗಳು ಸಿಕ್ಕಿವೆ. ಜೊತೆಗೆ, ಅಬ್ದುಲ್ ಮಥೀನ್ ಅಹ್ಮದ್ ತಾಹಾ ಸಹ ಕೃತ್ಯದಲ್ಲಿ ಭಾಗಿಯಾಗಿದ್ದು ಗೊತ್ತಾಗಿದೆ. ಇವರಿಬ್ಬರ ಜೊತೆ ಮುಜಮೀಲ್ ಶರೀಫ್, ಹಲವು ವರ್ಷಗಳ ಒಡನಾಟ ಹೊಂದಿದ್ದ. ಮುಸಾವೀರ್ ಹಾಗೂ ಅಬ್ದುಲ್ ಸದ್ಯ ತಲೆಮರೆಸಿಕೊಂಡಿದ್ದಾರೆ. ಅವರಿಬ್ಬರನ್ನು ಪತ್ತೆ ಮಾಡಲು ಮುಜಮೀಲ್‌ನನ್ನು ವಿಚಾರಣೆ ನಡೆಸಲಾಗುತ್ತಿದೆ' ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

'ಬಾಂಬ್ ಸ್ಫೋಟಕ್ಕೆ ನಡೆಸಿದ್ದ ಸಂಚು, ಬಾಂಬ್ ತಯಾರಿಕೆಗೆ ಕಚ್ಚಾ ಸಾಮಗ್ರಿ ಸಂಗ್ರಹ ಹಾಗೂ ಶಂಕಿತರ ಭೇಟಿಯಾಗಿದ್ದ ಸ್ಥಳಗಳ ಬಗ್ಗೆ ಮುಜಮೀಲ್‌ಗೆ ಮಾಹಿತಿ ಇದೆ. ಹೀಗಾಗಿ, ಏಪ್ರಿಲ್ 6ರಂದು ಎರಡನೇ ಬಾರಿ ಮುಜಮೀಲ್‌ನನ್ನು ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿತ್ತು. ಐದು ದಿನ ವಿಚಾರಣೆ ನಡೆಸಿ, ಈತನನ್ನು ಏಪ್ರಿಲ್ 10ರಂದು ವಾಪಸು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ' ಎಂದು ತಿಳಿಸಿವೆ.

'ಮುಜಮೀಲ್‌ನನ್ನು ಕೆಲ ಸ್ಥಳಗಳಿಗೆ ಕರೆದೊಯ್ದು ಮಹಜರು ನಡೆಸಲಾಗಿದೆ. ಜೊತೆಗೆ, ಪ್ರಕರಣದಲ್ಲಿ ಭಾಗಿಯಾಗಿರುವ ಮತ್ತಷ್ಟು ಮಂದಿಯ ಮಾಹಿತಿ ಕಲೆಹಾಕಲಾಗಿದೆ. ಕರ್ನಾಟಕ, ತಮಿಳುನಾಡು ಹಾಗೂ ಉತ್ತರ ಪ್ರದೇಶದ ಹಲವರು, ಶಂಕಿತರ ಜೊತೆ ಸಂಪರ್ಕವಿಟ್ಟುಕೊಂಡಿರುವ ಮಾಹಿತಿ ಲಭ್ಯವಾಗಿದೆ' ಎಂದು ಹೇಳಿವೆ.

ದೇವಸ್ಥಾನದ ಧ್ವನಿವರ್ಧಕ ಸದ್ದು ಕಡಿಮೆ ಮಾಡಲು ಹೇಳಿದ್ದಕ್ಕೆ ತಗಾದೆ • ಇಬ್ಬರ ಬಂಧನ

ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಕೋಲಾರ: ಓದಲು ತೊಂದರೆಯಾಗುವ ಕಾರಣ ದೇವಸ್ಥಾನದ ಧ್ವನಿವರ್ಧಕದ ಸದ್ದು ಕಡಿಮೆ ಮಾಡಿ ಎಂದು ಹೇಳಿದ ಸಾಹಿತಿ, ದಲಿತ ಹೋರಾಟಗಾರ ಕೋಟಿಗಾನಹಳ್ಳಿ ರಾಮಯ್ಯ ಹಾಗೂ ಅವರ ಪುತ್ರ ಮೇಘವರ್ಷ ಮೇಲೆ ತಾಲ್ಲೂಕಿನ ತೇರಹಳ್ಳಿ ಬೆಟ್ಟದ ಪಾಪರಾಜನಹಳ್ಳಿ ಗ್ರಾಮದಲ್ಲಿ ಗುರುವಾರ ಹಲ್ಲೆ ನಡೆದಿದೆ.

ಗ್ರಾಮದ ಮುನೇಶ್ವರ ದೇವಸ್ಥಾನದಲ್ಲಿ ಗ್ರಾಮದ ಕೆಲವರು ಧ್ವನಿವರ್ಧಕ (ಮೈಕ್) ಹಾಕಿದ್ದರು. ಅತಿಯಾದ ಶಬ್ದದಿಂದ ಓದಲು, ಬರೆಯಲು ತೊಂದರೆ ಆಗುತ್ತಿದೆ. ಸೌಂಡ್ ಕಡಿಮೆ ಮಾಡುವಂತೆ ರಾಮಯ್ಯ ಮನವಿ ಮಾಡಲು ಹೋಗಿದ್ದಾರೆ. ಈ ಸಂದರ್ಭದಲ್ಲಿ ತಗಾದೆ ತೆಗೆದ ಗ್ರಾಮದ ಕೆಲವರು ರಾಮಯ್ಯ ಹಾಗೂ ಮೇಘವರ್ಷ ಮೇಲೆ ಹಲ್ಲೆ ನಡೆಸಿದ್ದಾರೆ.

ರಾಮಯ್ಯ ಅವರ ಎಡಗಣ್ಣಿಗೆ ಗಾಯವಾಗಿದ್ದು ನಗರದ ಎಸ್‌ಎನ್‌ಆರ್ ಜಿಲ್ಲಾಸ್ಪತ್ರೆ ಸೇರಿಸಿ ಚಿಕಿತ್ಸೆ ಕೊಡಿಸಿದ ಬಳಿಕ ನೇತ್ರದೀಪ ಕಣ್ಣಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ಚಿಕಿತ್ಸೆ ಪಡೆಯುತ್ತಿದ್ದು, ಅಪಾಯದಿಂದ ಪಾರಾಗಿದ್ದಾರೆ. ಮೇಘವರ್ಷ ಅವರ ಕಾಲು ಉಳುಕಿದೆ. ಆಸ್ಪತ್ರೆಗೆ ಜಿಲ್ಲಾಧಿಕಾರಿ ಅಕ್ರಂ ಪಾಷಾ, ಎಸ್ಪಿ ನಾರಾಯಣ ಭೇಟಿ ನೀಡಿದ್ದರು.

ಮುಖ್ಯಾಂಶಗಳು
- ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಮಯ್ಯ
- ಪುತ್ರ ಮೇಘವರ್ಷ ಕಾಲಿಗೆ ಏಟು
- ಪ್ರಕರಣ ದಾಖಲು, ಆಸ್ಪತ್ರೆಗೆ ಎಸ್ಪಿ ನಾರಾಯಣ ಭೇಟಿ

ಜಾನಪದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ್, ದಲಿತ ಹೋರಾಟಗಾರ ಮಾವಳ್ಳಿ ಶಂಕರ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು, ಸಾಹಿತಿಗಳು, ಪ್ರಗತಿಪರರು, ರಾಜಕಾರಣಿಗಳು, ದಲಿತ ಹಾಗೂ ರೈತ ಹೋರಾಟಗಾರರು ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.



ಕೋಟಿಗಾನಹಳ್ಳಿ ರಾಮಯ್ಯ ಅವರ ಕಣ್ಣಿಗೆ ಗಾಯ

'ಹಲ್ಲೆಗೆ ಸಂಬಂಧಿಸಿದಂತೆ ಪಾಪರಾಜನಹಳ್ಳಿ ಗ್ರಾಮದ ಮಂಜುನಾಥ್ ಹಾಗೂ ಗೋವಿಂದಪ್ಪ ಎಂಬುವರನ್ನು ಬಂಧಿಸಲಾಗಿದೆ. ರಾಮಯ್ಯ ಅವರನ್ನು ಆಸ್ಪತ್ರೆಗೆ ದಾಖಲಿಸಿ ಭದ್ರತೆ ಸಂಬಂಧ ಕ್ರಮ ವಹಿಸಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ 'ಪ್ರಜಾವಾಣಿ'ಗೆ ತಿಳಿಸಿದರು.

> **ಕೋಟಿಗಾನಹಳ್ಳಿ ರಾಮಯ್ಯ ಅವರ ಆರೋಗ್ಯದ ಮೇಲೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ ನಿಗಾ ಇಟ್ಟಿವೆ. ಹಲ್ಲೆ ನಡೆಸಿದ ಇಬ್ಬರನ್ನು ಬಂಧಿಸಲಾಗಿದೆ**
> **ಎಂ.ನಾರಾಯಣ**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ, ತನಿಖೆ ಕೈಗೊಂಡಿದ್ದಾರೆ.

ಕೋಲಾರ ಬಳಿಯ ಪಾಪರಾಜನಹಳ್ಳಿ ಸಮೀಪದ 'ಬುಡ್ಡಿದೀಪ' ನಿವಾಸಿಯಾಗಿರುವ ಕೋಟಿಗಾನಹಳ್ಳಿ ರಾಮಯ್ಯ ಅವರು ವಿವಿಧ ಕಾರಣಗಳಿಂದ ಬೇಸತ್ತು ಕೋಲಾರ ಜಿಲ್ಲೆಯಿಂದ ದೂರವೇ ಉಳಿದಿದ್ದರು. ಮಂಡ್ಯ, ಮೈಸೂರಿನಲ್ಲಿ ರಂಗಭೂಮಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಅವರ ಮೇಲಿನ ಹಲ್ಲೆಗೆ ಭಾರಿ ಖಂಡನೆ ವ್ಯಕ್ತವಾಗಿದೆ. ಸಾಮಾಜಿಕ ಜಾಲತಾಣಗಳಲ್ಲೂ ಜನರು ತೀವ್ರವಾಗಿ ಖಂಡಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಂಡು ರಾಮಯ್ಯ ಅವರಿಗೆ ರಕ್ಷಣೆ ನೀಡುವಂತೆ ಒತ್ತಾಯಿಸಿದ್ದಾರೆ.

ವರ್ಷದಿಂದ ಸಮಸ್ಯೆ: 'ಬೆಳಗ್ಗೆ ಎರಡು ಗಂಟೆ ಮೈಕ್ ಹಾಕುತ್ತಾರೆ. ವರ್ಷದಿಂದ ಇದೇ ಸಮಸ್ಯೆಯಾಗಿದೆ. ಬೆಟ್ಟದಲ್ಲಿ ಬಯಲು ಪ್ರದೇಶ ಹಾಗೂ ಬಂಡೆಗಲ್ಲು ಇರುವುದರಿಂದ ಹೆಚ್ಚು ಸದ್ದು ಹಾಗೂ ಪ್ರತಿಧ್ವನಿ ಹೊರಹೊಮ್ಮುತ್ತದೆ. ಸೌಂಡ್ ಕಡಿಮೆ ಮಾಡುವಂತೆ ಹಲವಾರು ಬಾರಿ ಮನವಿ ಮಾಡಿದರೂ ಸ್ಪಂದಿಸಿಲ್ಲ' ಎಂದು ಮೇಘವರ್ಷ ತಿಳಿಸಿದರು.

'ಗುರುವಾರ ಬೆಳಗ್ಗೆ ಇದೇ ವಿಚಾರವಾಗಿ ಮನವಿ ಮಾಡಲು ಹೋದಾಗ ಹಲ್ಲೆ ನಡೆಸಿದರು. ನಾಲ್ಕೈದು ಮಂದಿ ಸೇರಿ ಅಪ್ಪನನ್ನು ತಳ್ಳಿ ಕಣ್ಣಿಗೆ ಗುದ್ದಿದರು. ಬದಿಯಲ್ಲಿ ನಿಂತಿದ್ದ ನನ್ನನ್ನೂ ತಳ್ಳಿ ಕಲ್ಲಿನಲ್ಲಿ ಹೊಡೆಯಲು ಬಂದರು. ನಮ್ಮ ನಿವಾಸ 'ಬುಡ್ಡಿದೀಪ'ದ ಬಳಿ ಬಂದು ಜಗಳ ಮಾಡಿದರು. ಬೆಟ್ಟದಲ್ಲಿ ಇರುವಂತಿಲ್ಲ ಎಂದು ಬೆದರಿಸಿದರು. ಮತ್ತೆ ಬೈಕ್‌ನಲ್ಲಿ ಬಂದು ಹೆದರಿಸಿದರು. ಹಲ್ಲೆ ನಡೆಸಿದವರ ವಿರುದ್ಧ ದೂರು ನೀಡಿದ್ದೇವೆ' ಎಂದರು.

ಹೊಸ ವಿದ್ಯುತ್ ಸಂಪರ್ಕಕ್ಕೆ ನಿಗದಿಪಡಿಸಿದ್ದ ಗರಿಷ್ಠ ಅವಧಿ


ಗಡುವು ಇಳಿಸಿದ ಕೆಇಆರ್‌ಸಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವಿದ್ಯುತ್ ಸಂಪರ್ಕ ನೀಡಲು ನಿಗದಿಪಡಿಸಿದ್ದ ಗರಿಷ್ಠ ಅವಧಿಯನ್ನು ಏಳು ದಿನಗಳಿಂದ ಮೂರು ದಿನಗಳಿಗೆ ಕಡಿತಗೊಳಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಪ್ರಾಧಿಕಾರ (ಕೆಇಆರ್‌ಸಿ) ಆದೇಶ ಹೊರಡಿಸಿದೆ.

ಈಆದೇಶದಿಂದಾಗಿ,ಹೊಸವಿದ್ಯುತ್ ಸಂಪರ್ಕಕ್ಕಾಗಿ ಕಾಯುತ್ತಿದ್ದ ಹಲವು ಗ್ರಾಹಕರಿಗೆ ಪರಿಹಾರ ಸಿಕ್ಕಂತಾಗಿದೆ.

'ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಗ್ರಾಹಕರ ಹಕ್ಕುಗಳ ಕಾರ್ಯಕ್ಷಮತೆಯ ಗುಣಮಟ್ಟ(ಎಸ್‌ಒಪಿ) ಮತ್ತು ಸಂಬಂಧಿತ ವಿಷಯಗಳು) ನಿಯಮಗಳು 2022' ಅನ್ನು ತಿದ್ದುಪಡಿ ಮಾಡಿ ಈ ಅವಕಾಶ ಕಲ್ಪಿಸುವಂತೆ ಕೆಇಆರ್‌ಸಿ ಸೂಚಿಸಿದೆ.



ಹೊಸ ಆದೇಶದ ಅನ್ವಯ, ವಿದ್ಯುತ್ ಪೂರೈಕೆ ಕಂಪನಿಗಳು (ಎಸ್ಕಾಂಗಳು) ಮೆಟ್ರೊ ನಗರಗಳಲ್ಲಿ ಅರ್ಜಿ ಸ್ವೀಕರಿಸಿದ ಮೂರು ದಿನಗಳಲ್ಲಿ, ಪುರಸಭೆ ವ್ಯಾಪ್ತಿಯಲ್ಲಿ ಏಳು ದಿನ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 15 ದಿನಗಳ ಒಳಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು.

'ಈ ಹೊಸ ಸಂಪರ್ಕಗಳಿಗೆ ವಿದ್ಯುತ್ ಸರಬರಾಜು ಮಾರ್ಗಗಳ ವಿಸ್ತರಣೆ ಅಥವಾ ಹೊಸ ಸಬ್‌ಸ್ಟೇಷನ್‌ಗಳ ಸ್ಥಾಪನೆಯ ಅಗತ್ಯವಿದ್ದರೆ, ವಿದ್ಯುತ್ ವಿತರಣಾ ಪರವಾನಗಿದಾರರು, 90 ದಿನಗಳೊಳಗೆ ವಿಸ್ತರಣೆ ಅಥವಾ ಸಬ್‌ಸ್ಟೇಷನ್ ಆರಂಭಿಸಿ ವಿದ್ಯುತ್ ಪೂರೈಕೆಗೆ ಕ್ರಮ ತೆಗೆದುಕೊಳ್ಳಬೇಕು' ಎಂದು ಆದೇಶದಲ್ಲಿ ತಿಳಿಸಿದೆ.

ಕೇಂದ್ರ ಇಂಧನ ಸಚಿವಾಲಯ ಕಳೆದ ಫೆಬ್ರವರಿ 22ರಂದು ಹೊರಡಿಸಿದ್ದ ಅಧಿಸೂಚನೆಯ ಅನ್ವಯ, ವಿದ್ಯುತ್ (ಗ್ರಾಹಕರ ಹಕ್ಕುಗಳು) ನಿಯಮಗಳು 2020ಕ್ಕೆ ತಿದ್ದುಪಡಿ ಮಾಡಬೇಕಿದೆ ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಈ ಹಿಂದಿನ ನಿಯಮದ ಪ್ರಕಾರ, ಹೊಸ ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿದ ಮೆಟ್ರೊ ನಗರಗಳ ಗ್ರಾಹಕರು ಏಳು ದಿನಗಳು, ಪುರಸಭೆ ವ್ಯಾಪ್ತಿಯವರು 15 ದಿನಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವವರು 30 ದಿನಗಳವರೆಗೂ ಕಾಯಬೇಕಿತ್ತು.

'ಬೌದ್ಧ ಮತವು ಪ್ರತ್ಯೇಕ ಧರ್ಮ'

ಒಂದನೇ ಪುಟದಿಂದ...

'ಇದಲ್ಲದೆ, ಅನೇಕ ಸಂದರ್ಭಗಳಲ್ಲಿ ಅರ್ಜಿದಾರರು ಮತ್ತು ಸ್ವಾಯತ್ತ ಸಂಸ್ಥೆಗಳ ಪ್ರತಿನಿಧಿಗಳು, ಹಿಂದೂ ಧರ್ಮದಿಂದ ಬೌದ್ಧ ಧರ್ಮಕ್ಕೆ ಮತಾಂತರವಾಗಲು ಪೂರ್ವಾನುಮತಿ ಅಗತ್ಯವಿಲ್ಲವೆಂದು ಪ್ರತಿಪಾದಿಸಿದ್ದಾರೆ. ಸಿಖ್, ಜೈನ ಮತ್ತು ಬೌದ್ಧ ಧರ್ಮಗಳನ್ನು ಹಿಂದೂ ಧರ್ಮದಲ್ಲಿ ಸೇರಿಸಲಾಗಿದೆ ಎಂದು ಸಂವಿಧಾನದ 25 (2)ನೇ ವಿಧಿಯನ್ನು ಉಲ್ಲೇಖಿಸಿ, ಪೂರ್ವಾನುಮತಿಯ ಅಗತ್ಯವಿಲ್ಲವೆಂದು ಸಂಬಂಧಪಟ್ಟ ಕಚೇರಿಗಳು ಅರ್ಜಿಗಳನ್ನು ವಿಲೇವಾರಿ ಮಾಡುತ್ತಿವೆ. ಧಾರ್ಮಿಕ ಮತಾಂತರದಂತಹ ಸೂಕ್ಷ್ಮ ಪ್ರಕರಣಗಳಲ್ಲಿ ಕಾನೂನಿನ ನಿಬಂಧನೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ಈ ರೀತಿಯಾಗಿ ಪ್ರತಿಕ್ರಿಯಿಸುವುದು ಕಾನೂನು ಸಮರಗಳಿಗೆ ಕಾರಣವಾಗಬಹುದು. ಹಾಗಾಗಿ ಈ ಸ್ಪಷ್ಟೀಕರಣ ನೀಡಲಾಗಿದೆ' ಎಂದು ಅಧಿಸೂಚನೆಯಲ್ಲಿ ಹೇಳಿದೆ.

ಈ ಮೇಲಿನ ಕಾರಣಗಳನ್ನು ಉಲ್ಲೇಖಿಸಿ, ಗುಜರಾತ್ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ 2003ರ ಅಡಿಯಲ್ಲಿ, 'ಬೌದ್ಧ ಧರ್ಮವನ್ನು ಪ್ರತ್ಯೇಕ ಧರ್ಮವಾಗಿ ಪರಿಗಣಿಸಲಾಗುವುದು. ಈ ಕಾಯ್ದೆಯ ಸೆಕ್ಷನ್ 5 (1) ಮತ್ತು 5 (2)ರ ಅಡಿಯಲ್ಲಿ, ಬೌದ್ಧ, ಸಿಖ್ ಮತ್ತು ಜೈನ ಧರ್ಮಕ್ಕೆ ಮತಾಂತರಗೊಳ್ಳುವ ಹಿಂದೂಗಳು ನಿಗದಿತ ನಮೂನೆಯಲ್ಲಿ ಪೂರ್ವಾನುಮತಿ ಪಡೆಯುವುದು ಕಡ್ಡಾಯ' ಎಂದು ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

'ಹೆಣವಾಗುತ್ತಿರುವ ಗಣರಾಜ್ಯ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಸುಧೀಂದ್ರ ಕುಲಕರ್ಣಿ

'ಇಂಡಿಯಾ' ಗೆದ್ದರಷ್ಟೇ ಪ್ರಜಾಪ್ರಭುತ್ವದ ಉಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಿಜೆಪಿ ನಾಶ ಮಾಡುತ್ತಿದೆ. ಪ್ರಜಾತಂತ್ರ ವ್ಯವಸ್ಥೆ ಉಳಿಯಬೇಕಾದರೆ ಈ ಬಾರಿ ಚುನಾವಣೆಯಲ್ಲಿ 'ಇಂಡಿಯಾ' ಗೆಲ್ಲಬೇಕು ಎಂದು ರಾಜಕೀಯ ವಿಶ್ಲೇಷಕ ಸುಧೀಂದ್ರ ಕುಲಕರ್ಣಿ ಪ್ರತಿಪಾದಿಸಿದರು.

ಪರಕಾಲ ಪ್ರಭಾಕರ್ ಅವರ 'ದಿ ಕ್ರೂಕ್‌ಡ್ ಟಿಂಬರ್ ಆಫ್ ನ್ಯೂ ಇಂಡಿಯಾ' ಕೃತಿಯ ಕನ್ನಡ ಅನುವಾದ 'ಹೆಣವಾಗುತ್ತಿರುವ ಗಣರಾಜ್ಯ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಗುರುವಾರ ಅವರು ಮಾತನಾಡಿದರು.

ಈವರೆಗೆ 17 ಲೋಕಸಭಾ ಚುನಾವಣೆಗಳು ನಡೆದಿವೆ. ತುರ್ತು ಪರಿಸ್ಥಿತಿಯನ್ನು ಹೊರತುಪಡಿಸಿದರೆ ಉಳಿದ ಯಾವ ಸಂದರ್ಭದಲ್ಲಿಯೂ ಗಣತಂತ್ರ ವ್ಯವಸ್ಥೆ ಅಪಾಯಕಾರಿ ಸ್ಥಿತಿಯಲ್ಲಿ ಇರಲಿಲ್ಲ. ಈಗ ಅಘೋಷಿತ ತುರ್ತು ಪರಿಸ್ಥಿತಿಯನ್ನು ಮೋದಿ ತಂದಿಟ್ಟಿದ್ದಾರೆ ಎಂದು ಆರೋಪಿಸಿದರು.

ಮೋದಿ ಮತ್ತು ಬಿಜೆಪಿ ವಿಕಸಿತ ಭಾರತ್ ಎನ್ನುತ್ತಲೇ ಪ್ರಜಾಪ್ರಭುತ್ವವನ್ನು ಹತ್ತಿಕ್ಕಿದ್ದಾರೆ. ಸಂಸತ್ತಿಗೆ ಯಾವುದೇ ಮೌಲ್ಯ ಇಲ್ಲವಾಗಿದೆ. ಅಲ್ಲಿ ಯಾವುದೇ ಚರ್ಚೆಯಾಗುತ್ತಿಲ್ಲ. ಧ್ವನಿ ಎತ್ತಿದ ಸಂಸದರನ್ನು ಅಮಾನತು ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕೃತಿಯ ಅನುವಾದಕ ರಾಹು (ಆರ್.ಕೆ. ಹುಡಗಿ) ಮಾತನಾಡಿ, 'ನೀರಿಗೆ, ಅನ್ನಕ್ಕೆ, ಮೇವಿಗೆ ಬರಗಾಲ ಬಂದಾಗ ಜನಪರ ಸರ್ಕಾರವಿದ್ದರೆ ಹೇಗಾದರೂ ಒದಗಿಸಬಹುದು. ಆದರೆ, ಮಾನವೀಯತೆ ಇಲ್ಲದವರು ದೇಶ ಆಳುತ್ತಿದ್ದಾರೆ. ಮನುಷ್ಯತ್ವಕ್ಕೇ ಬರಗಾಲ ಬಂದಿರುವ ಕಾಲದಲ್ಲಿ ಬದುಕುತ್ತಿದ್ದೇವೆ' ಎಂದು ಕಳವಳ ವ್ಯಕ್ತಪಡಿಸಿದರು.



ಪರಕಾಲ ಪ್ರಭಾಕರ್ ಅವರ 'ದಿ ಕ್ರೂಕ್‌ಡ್ ಟಿಂಬರ್ ಆಫ್ ನ್ಯೂ ಇಂಡಿಯಾ' ಕೃತಿಯ ಕನ್ನಡ ಅನುವಾದ 'ಹೆಣವಾಗುತ್ತಿರುವ ಗಣರಾಜ್ಯ' ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಅನುವಾದಕ ರಾಹು (ಆರ್.ಕೆ. ಹುಡಗಿ), ರಾಜಕೀಯ ವಿಶ್ಲೇಷಕ ಸುಧೀಂದ್ರ ಕುಲಕರ್ಣಿ, ಮುಖ್ಯಮಂತ್ರಿಯವರ ಸಲಹೆಗಾರ ಬಿ.ಆರ್. ಪಾಟೀಲ, ಲೇಖಕ ರಾಜಪ್ಪ ದಳವಾಯಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ರೈತರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿರುವಾಗ 754 ಮಂದಿ ಮೃತಪಟ್ಟರು. ಅವರಿಗೆ ಅರ್ಧ ನಿಮಿಷ ಮೌನಾಚರಣೆ, ಕಂಬನಿ ಮಿಡಿಯಲು ಸರ್ಕಾರಕ್ಕೆ ಸಮಯ ಸಿಗಲಿಲ್ಲ. ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ, ಅತ್ಯಾಚಾರ, ಕೊಲೆ ಮಾಡಿದಾಗಲೂ ಭೇಟಿ ನೀಡಲು ಸಮಯ ಸಿಗಲಿಲ್ಲ. ಇಂಥ ಮನುಷ್ಯತ್ವ ಇಲ್ಲದ ಕಾಲದಲ್ಲಿ ಈ ಕೃತಿ ಮಾನವೀಯತೆಯ ಅಂಶವನ್ನು ಬಿತ್ತಬಲ್ಲದು ಎಂಬ ಆಶಯದಿಂದ ಅನುವಾದ ಮಾಡಿದ್ದೇನೆ' ಎಂದರು.

ಕೃತಿ ಬಗ್ಗೆ ಲೇಖಕ ರಾಜಪ್ಪ ದಳವಾಯಿ ಮಾತನಾಡಿ, 'ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಬಳಸಿಕೊಂಡು ಅಧಿಕಾರ ಹಿಡಿದವರೇ ಪ್ರಜಾಸತ್ತೆಯನ್ನು ಹೇಗೆ ನಾಶ ಮಾಡುತ್ತಿದ್ದಾರೆ ಎಂಬುದನ್ನು ಹೆಣವಾಗುತ್ತಿರುವ ಗಣರಾಜ್ಯ ಕೃತಿಯಲ್ಲಿ ವಿವರಿಸಲಾಗಿದೆ. 2014ರಿಂದ 2023ರವರೆಗಿನ ಪ್ರಮುಖ ಘಟನೆಗಳನ್ನು ಇಟ್ಟುಕೊಂಡು ವಿಶ್ಲೇಷಿಸಲಾಗಿದೆ' ಎಂದು ವಿವರಿಸಿದರು.

'ನರೇಂದ್ರ ಮೋದಿ ಪ್ರಧಾನಿಯಾದಾಗ ಮೊದಲ ಭಾಷಣದಲ್ಲಿ ಪೂರ್ವಸೂರಿಗಳನ್ನು ನೆನಪಿಸಿಕೊಂಡು ಈ ಸಾಲಿನಲ್ಲಿ ಮುಂದುವರಿದ ಭಾಗ ಎಂದು ಹೇಳಿಕೊಂಡಿದ್ದರು. ಮುಂದೆ 'ನನ್ನಿಂದಲೇ ಎಲ್ಲ' ಎನ್ನುವ ಮಟ್ಟಕ್ಕೆ ಸರ್ವಾಧಿಕಾರಿಯಾಗಿ ಬದಲಾದರು. ಮೋದಿಯವರ ಪ್ರಮುಖ ಎಲ್ಲ ಭಾಷಣಗಳನ್ನು ಈ ಕೃತಿಯಲ್ಲಿ ವಿಮರ್ಶೆ ಮಾಡಲಾಗಿದೆ. ಅದೇ ರೀತಿ ಆರ್‌ಎಸ್‌ಎಸ್, ಹಿಜಾಬ್ ಘಟನೆ, ರೈತರ ಹೋರಾಟ, ವಿಶ್ವವಿದ್ಯಾಲಯಗಳ ಸ್ಥಿತಿಗತಿ ಹೀಗೆ ಅನೇಕ ಸತ್ಯ ವಿಚಾರಗಳನ್ನು ನಮ್ಮ ಮುಂದಿಡುತ್ತದೆ' ಎಂದು ಹೇಳಿದರು.

ಕೃತಿ ಪರಿಚಯ

ಮೂಲಕೃತಿ: ದಿ ಕ್ರೂಕ್‌ಡ್ ಟಿಂಬರ್ ಆಫ್ ನ್ಯೂ ಇಂಡಿಯಾ
ಲೇಖಕ: ಪರಕಾಲ ಪ್ರಭಾಕರ್
ಪ್ರಕಾರ: ರಾಜಕೀಯ ವಿಶ್ಲೇಷಣೆ
ಅನುವಾದ ಕೃತಿ: ಹೆಣವಾಗುತ್ತಿರುವ ಗಣರಾಜ್ಯ
ಅನುವಾದಕ: ರಾಹು (ಆರ್.ಕೆ. ಹುಡಗಿ)
ಪ್ರಕಾಶನ: ಸೃಷ್ಟಿ ಪಬ್ಲಿಕೇಶನ್
ಪುಟ: 244
ದರ: ₹ 300

ಮುಖ್ಯಮಂತ್ರಿ ಸಿದ್ದರಾಮಯ್ಯ ಕೃತಿ ಬಿಡುಗಡೆ ಮಾಡಿದರು. ಮುಖ್ಯಮಂತ್ರಿಯವರ ಸಲಹೆಗಾರ ಬಿ.ಆರ್. ಪಾಟೀಲ, ಪ್ರಕಾಶಕ ಸೃಷ್ಟಿ ನಾಗೇಶ್ ಉಪಸ್ಥಿತರಿದ್ದರು.

ಆರ್‌ಟಿಐ ಅಡಿ ಚುನಾವಣಾ ಬಾಂಡ್ ವಿವರ ಒದಗಿಸಲು ಎಸ್‌ಬಿಐ ನಕಾರ

ಒಂದನೇ ಪುಟದಿಂದ...

ಆರ್‌ಟಿಐ ಕಾರ್ಯಕರ್ತ ಕಮಡೋರ್ (ನಿವೃತ್ತ) ಲೋಕೇಶ್ ಬಾತ್ರಾ ಅವರು ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಸಂಪೂರ್ಣ ವಿವರವನ್ನು, ಚುನಾವಣಾ ಆಯೋಗಕ್ಕೆ ಸಲ್ಲಿಸಿದ ರೀತಿಯಲ್ಲಿ ಡಿಜಿಟಲ್ ರೂಪದಲ್ಲಿ ನೀಡಬೇಕು ಎಂದು ಮಾರ್ಚ್ 13ರಂದು ಎಸ್‌ಬಿಐಗೆ ಆರ್‌ಟಿಐ ಅಡಿ ಕೋರಿಕೆ ಸಲ್ಲಿಸಿದ್ದರು.

ಆದರೆ, ಮಾಹಿತಿ ಬಹಿರಂಗಕ್ಕೆ ವಿನಾಯಿತಿ ನೀಡಿರುವ ಆರ್‌ಟಿಐ ಕಾಯ್ದೆಯ ಸೆಕ್ಷನ್ 8ನ್ನು ಉಲ್ಲೇಖಿಸಿ ಎಸ್‌ಬಿಐ ಮಾಹಿತಿ ನಿರಾಕರಿಸಿದೆ. 'ನೀವು ಕೋರಿರುವ ಮಾಹಿತಿಯು ಬಾಂಡ್ ಖರೀದಿ ಮಾಡಿದವರು ಹಾಗೂ ರಾಜಕೀಯ ಪಕ್ಷಗಳಿಗೆ ಸಂಬಂಧಿಸಿದೆ. ಇವು ಪರಸ್ಪರ ವಿಶ್ವಾಸವನ್ನು ಆಧರಿಸಿವೆ. ಹೀಗಾಗಿ, ಇವುಗಳ ಮಾಹಿತಿಯನ್ನು ಆರ್‌ಟಿಐ ಅಡಿ ನೀಡುವುದಕ್ಕೆ ಸೆಕ್ಷನ್ 8(1)(ಇ) ಹಾಗೂ (ಜೆ) ಅಡಿಯಲ್ಲಿ ವಿನಾಯಿತಿ ಇದೆ' ಎಂದು ಎಸ್‌ಬಿಐ, ಬಾತ್ರಾ ಅವರಿಗೆ ತಿಳಿಸಿದೆ.

ಚುನಾವಣಾ ಬಾಂಡ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಲು ಹಿರಿಯ ವಕೀಲ ಹರೀಶ್ ಸಾಳ್ವೆ ಅವರಿಗೆ ಕೊಟ್ಟ ಶುಲ್ಕ ಎಷ್ಟು ಎಂಬ ಮಾಹಿತಿಯನ್ನೂ ಬಾತ್ರಾ ಅವರು ಆರ್‌ಟಿಐ ಅಡಿ ಕೋರಿದ್ದರು. ಈ ಮಾಹಿತಿಯನ್ನು ಕೂಡ ಎಸ್‌ಬಿಐ ಒದಗಿಸಿಲ್ಲ.

ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಈಗಾಗಲೇ ಇರುವ ಮಾಹಿತಿಯನ್ನು ನೀಡಲು ಎಸ್‌ಬಿಐ ನಿರಾಕರಿಸಿರುವುದು ವಿಚಿತ್ರವಾಗಿದೆ ಎಂದು ಬಾತ್ರಾ ಹೇಳಿದ್ದಾರೆ. ತೆರಿಗೆದಾರರ ಹಣದಲ್ಲಿ ಸಾಳ್ವೆ ಅವರಿಗೆ ನೀಡಿರುವ ಶುಲ್ಕದ ಬಗ್ಗೆ ಮಾಹಿತಿ ನೀಡುವುದಕ್ಕೆ ಕೂಡ ಎಸ್‌ಬಿಐ ನಿರಾಕರಿಸಿದೆ ಎಂದು ಬಾತ್ರಾ ಹೇಳಿದ್ದಾರೆ.

ಆಕಸ್ಮಿಕ ಗುಂಡು ಹಾರಿ ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಾಲ್ಲೂಕಿನ ಮಲ್ಲೇನಹಳ್ಳಿ ಹಕ್ಕಿಪಿಕ್ಕಿ ತಾಂಡದಲ್ಲಿ ಏರ್ ಗನ್ ಹಿಡಿದು ಬಾಲಕ ವಿಷ್ಣುರಾಜ್ (8) ಆಟವಾಡುತ್ತಿದ್ದಾಗ, ಆಕಸ್ಮಿಕವಾಗಿ ಗುಂಡು ಹಾರಿ ಮೃತಪಟ್ಟಿದ್ದಾನೆ.

ಮನೆಯಲ್ಲಿದ್ದ ಏರ್ ಗನ್ ತೆಗೆದುಕೊಂಡು ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಹಾರಿದ ಗುಂಡು ಬಾಲಕನ ಎದೆಯ ಭಾಗಕ್ಕೆ ತಗುಲಿದೆ. ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಷ್ಟರಲ್ಲಿ ಬಾಲಕ ಮೃತಪಟ್ಟಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಅಸ್ಸಾಂ ಶಾಸಕ ಕರೀಂ ಉದ್ದೀನ್ ಬರಬುಇಯಾ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ

ಅಭಿವ್ಯಕ್ತಿಯ ದುರ್ಬಳಕೆಗೆ ಕಳವಳ



ನವದೆಹಲಿ (ಪಿಟಿಐ): ನ್ಯಾಯಾಂಗದ ಪರಿಶೀಲನೆಯಲ್ಲಿ ಇರುವ ವಿಚಾರಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶಗಳನ್ನು, ಪ್ರತಿಕ್ರಿಯೆಗಳನ್ನು ಹಾಗೂ ಲೇಖನಗಳನ್ನು ಪ್ರಕಟಿಸುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ತೀರ್ಪಿಗೆ ಕಾಯ್ದಿರಿಸಿರುವ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ತಪ್ಪುದಾರಿಗೆ ಎಳೆಯುವ ಪೋಸ್ಟ್‌ಅನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಿದ ಕಾರಣಕ್ಕೆ ಅಸ್ಸಾಂ ಶಾಸಕ ಕರೀಂ ಉದ್ದೀನ್ ಬರಬುಇಯಾ ಅವರ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮಕ್ಕೆ ಮುಂದಾಗಿರುವ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಬೇಲಾ ತ್ರಿವೇದಿ ಅವರ ವಿಭಾಗೀಯ ಪೀಠವು ಈ ಕಳವಳ ವ್ಯಕ್ತಪಡಿಸಿದೆ.

ಬೋಸ್ ಅವರು ಏಪ್ರಿಲ್ 10ರಂದು ನ್ಯಾಯಮೂರ್ತಿ ಸ್ಥಾನದಿಂದ ನಿವೃತ್ತರಾಗಿದ್ದಾರೆ.

'ಯಾವುದೇ ಟೀಕೆ ಅಥವಾ ದೂಷಣೆಯ ಹೊರೆಯನ್ನು ಹೊತ್ತುಕೊಳ್ಳುವಷ್ಟು ನಮ್ಮ ಹೆಗಲು ವಿಶಾಲವಾಗಿದೆ. ಆದರೆ, ನ್ಯಾಯಾಲಯದಲ್ಲಿ ಬಾಕಿ ಇರುವ ವಿಚಾರಗಳಿಗೆ ಸಂಬಂಧಿಸಿದಂತೆ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಕಟಿಸುವ ಮಾತುಗಳು ನ್ಯಾಯಾಲಯಗಳ ಅಧಿಕಾರವನ್ನು ದುರ್ಬಲಗೊಳಿಸುವ ಪ್ರವೃತ್ತಿಯನ್ನು ಹೊಂದಿದ್ದರೆ, ಅವುಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ' ಎಂದು ಪೀಠ ಹೇಳಿದೆ.

ವಾದ–ಪ್ರತಿವಾದದ ಸಂದರ್ಭದಲ್ಲಿ ವಕೀಲರು ಮಂಡಿಸುವ ವಾದಗಳಿಗೆ ನ್ಯಾಯಮೂರ್ತಿಗಳು ಪ್ರತಿಕ್ರಿಯೆ ನೀಡುವುದು ಬಹಳ ಸಹಜ. ಕೆಲವು ಸಂದರ್ಭಗಳಲ್ಲಿ ವಿಷಯವೊಂದರ ಪರವಾಗಿ ಅಥವಾ ಕೆಲವೊಮ್ಮೆ ವಿರುದ್ಧವಾಗಿ ಮಾತನಾಡುವುದು ಇರುತ್ತದೆ ಎಂದು ಪೀಠ ವಿವರಿಸಿದೆ.

'ಆದರೆ, ಅಂತಹ ಮಾತುಗಳು ಅರ್ಜಿದಾರರಿಗಾಗಲಿ, ಪ್ರತಿವಾದಿಗಳಿಗಾಗಲಿ, ಅವರನ್ನು ಪ್ರತಿನಿಧಿಸುವ ವಕೀಲರಿಗಾಗಲಿ ಸತ್ಯವನ್ನು ತಿರುಚಿದ ರೀತಿಯಲ್ಲಿ ಅಥವಾ ಸರಿಯಾದ ಸತ್ಯವನ್ನು ವಿವರಿಸದ ರೀತಿಯಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಹೇಳಿಕೆಗಳನ್ನು ಪ್ರಕಟಿಸುವ ಅಧಿಕಾರ ನೀಡುವುದಿಲ್ಲ' ಎಂದು ಪೀಠ ವಿವರಿಸಿದೆ.

ಶಾಸಕ ಬರಬುಇಯಾ ಅವರಿಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿಗೆ ಪೀಠವು ಆದೇಶಿಸಿದೆ. ಅವರು ವಿಚಾರಣೆಗೆ ಖುದ್ದು ಹಾಜರಿರಬೇಕು ಎಂದು ಹೇಳಿದೆ. ಚುನಾವಣೆ ಅರ್ಜಿಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ನ್ಯಾಯಾಲಯವು ತೀರ್ಪು ಕಾಯ್ದಿರಿಸಿದ್ದರೂ, ಬರಬುಇಯಾ ಅವರು ತೀರ್ಪು ತಮ್ಮ ಪರವಾಗಿ ಬಂದಿದೆ ಎಂದು ಫೇಸ್‌ಬುಕ್ ಮೂಲಕ ಮಾರ್ಚ್ 20ರಂದು ಹೇಳಿದ್ದರು. ನಂತರ ಏಪ್ರಿಲ್ 8ರಂದು, ಕೋರ್ಟ್ ಬರಬುಇಯಾ ಅವರ ಅರ್ಜಿಯನ್ನು ಮಾನ್ಯ ಮಾಡಿತ್ತು.

ಮುನಿಸಿಪಲ್ ಚುನಾವಣೆ: ನಿರ್ಬಂಧ ಇಲ್ಲ

ರಾಜ್ಯ ಚುನಾವಣಾ ಆಯೋಗದಿಂದ ಮಾನ್ಯತೆ ಪಡೆದಿರುವ ರಾಜಕೀಯ ಪಕ್ಷಗಳು ಮುನಿಸಿಪಲ್ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ ಎಂಬ ನಿರ್ಬಂಧ ಸಂವಿಧಾನದಲ್ಲಿ ಇಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ರಾಜ್ಯ ಚುನಾವಣಾ ಆಯೋಗವು (ಎಸ್‌ಇಸಿ) ರಾಜಕೀಯ ಪಕ್ಷಗಳಿಗೆ ಮುನಿಸಿಪಲ್ ಚುನಾವಣೆಯಲ್ಲಿ ಬಳಸಲು ಚಿಹ್ನೆಗಳನ್ನು ನೀಡುವುದು ತರ್ಕಬದ್ಧವಾಗಿಯೇ ಇದೆ ಎಂದು ಕೂಡ ಕೋರ್ಟ್ ಹೇಳಿದೆ.

ಕಣಕ್ಕೆ ಇಳಿಯುವ ಅಭ್ಯರ್ಥಿಗಳಿಗೆ ರಾಜಕೀಯ ಪಕ್ಷಗಳ ಚಿಹ್ನೆ ನೀಡುವುದನ್ನು ಸ್ಥಗಿತಗೊಳಿಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಬೇಕು ಎಂದು ಕೋರಿದ್ದ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್ ಈ ಆದೇಶ ನೀಡಿದೆ. ಅರ್ಜಿಯನ್ನು ತಿರಸ್ಕರಿಸಿದೆ.

'ರಾಜ್ಯ ಚುನಾವಣಾ ಆಯೋಗವು ರಾಜಕೀಯ ಪಕ್ಷಗಳಿಗೆ ಮುನಿಸಿಪಲ್ ಚುನಾವಣೆಯಲ್ಲಿ ಸ್ಪರ್ಧಿಸಲು ನೀಡಿರುವ ಮಾನ್ಯತೆಯು, ಆಯೋಗದ ಅಧಿಕಾರ ವ್ಯಾಪ್ತಿಯನ್ನು ಮೀರಿದ್ದೇನೂ ಅಲ್ಲ. ರಾಜಕೀಯ ಪಕ್ಷಗಳು ಮುನಿಸಿಪಲ್ ಚುನಾವಣೆಯಲ್ಲಿ ಸ್ಪರ್ಧಿಸಬಾರದು ಎಂಬ ನಿರ್ಬಂಧವೇನೂ ಇಲ್ಲ' ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಮತ್ತು ನ್ಯಾಯಮೂರ್ತಿ ಮನಮೀತ್ ಪಿ.ಎಸ್. ಅರೋರ ಅವರು ಇದ್ದ ವಿಭಾಗೀಯ ಪೀಠವು ಸ್ಪಷ್ಟಪಡಿಸಿದೆ.



ರಾಮನವಮಿ ಛತ್ತೀಸಗಢದ ಬಸ್ತರ್ ಜಿಲ್ಲೆಯ ಜಗ್ದಲ್ಪುರದಲ್ಲಿ ರಾಮನವಮಿ ಅಂಗವಾಗಿ ನಡೆದ ಶ್ರೀರಾಮ ಮೂರ್ತಿಯ ಮೆರವಣಿಗೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

ಕೇಂದ್ರ ಸರ್ಕಾರದ ಆಡಳಿತ ಯಂತ್ರ ನಿಯಂತ್ರಿಸಲು ಆಯೋಗಕ್ಕೆ ಪತ್ರ

ನವದೆಹಲಿ: ಕೇಂದ್ರೀಯ ಸಂಸ್ಥೆಗಳು ವಿರೋಧ ಪಕ್ಷಗಳ ನಾಯಕರ ವಿರುದ್ಧ ಪ್ರಕರಣಗಳನ್ನು ದಾಖಲಿಸುವುದನ್ನು ಮುಂದುವರಿಸಲು ಅತ್ಯುತ್ಸಾಹ ತೋರುತ್ತಿದ್ದು, ಅವಕ್ಕೆ ಕಡಿವಾಣ ಹಾಕಲು ಚುನಾವಣಾ ಆಯೋಗವು ಕೇಂದ್ರ ಸರ್ಕಾರ ಆಡಳಿತವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕು ಎಂದು ಮಾಜಿ ಅಧಿಕಾರಿಗಳ ಗುಂಪು ಗುರುವಾರ ಆಗ್ರಹಿಸಿದೆ.

ಪ್ರತಿಪಕ್ಷಗಳ ವಿರುದ್ಧ ಸೇಡಿನ ರಾಜಕಾರಣ ನಡೆಯುತ್ತಿದ್ದರೂ ಚುನಾವಣಾ ಆಯೋಗ ಮೌನವಾಗಿದೆ ಎಂಬ ಗ್ರಹಿಕೆ ಬೆಳೆಯುತ್ತಿದೆ ಎಂದು ಆ ಗುಂಪು ಬೇಸರ ವ್ಯಕ್ತಪಡಿಸಿದೆ.

ವಜಾಹತ್ ಹಬೀಬುಲ್ಲಾ, ಶಿವಶಂಕರ್ ಮೆನನ್ ಸೇರಿದಂತೆ 87 ಮಾಜಿ ಅಧಿಕಾರಿಗಳು 'ಕಾನ್‌ಸ್ಟಿಟ್ಯೂಷನಲ್ ಕಂಡಕ್ಟ್ ಗ್ರೂಪ್' (ಸಿಸಿಜಿ) ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದು, 'ರಾಜ್ಯಗಳಲ್ಲಿ ಹೇಗೆ ಸರ್ಕಾರಿ ಯಂತ್ರವು ಸಂಪೂರ್ಣ ಚುನಾವಣಾ ಆಯೋಗದ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತದೆಯೊ ಹಾಗೆಯೇ ಕೇಂದ್ರ ಸರ್ಕಾರದ ಮಟ್ಟದಲ್ಲಿನ ಚುಟುವಟಿಕೆಗಳು, ಕಾನೂನು ಜಾರಿ ಸಂಸ್ಥೆಗಳನ್ನು ಆಯೋಗ ನಿಯಂತ್ರಿಸಬೇಕು' ಎಂದು ಹೇಳಿದ್ದಾರೆ.

'ಭಾರತ ಸಂವಿಧಾನದ 324ನೇ ವಿಧಿಯ ಅಡಿಯಲ್ಲಿ ಆಯೋಗ ಅಧಿಕಾರ ಚಲಾಯಿಸಬೇಕು' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನ, ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ, ಕಾಂಗ್ರೆಸ್ ವಿರುದ್ಧ ಆದಾಯ ತೆರಿಗೆ ಇಲಾಖೆ ಕ್ರಮ ಹಾಗೂ ವಿರೋಧ ಪಕ್ಷಗಳ ಇತರ ನಾಯಕರಿಗೆ ಕೇಂದ್ರೀಯ ಸಂಸ್ಥೆಗಳು ನೋಟಿಸ್ ನೀಡಿರುವುದನ್ನು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಶ್ರೀನಗರ: ಉಗ್ರನ ಹತ್ಯೆ

ಶ್ರೀನಗರ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾದಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಉಗ್ರನೊಬ್ಬ ಹತ್ಯೆಯಾಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ. ಈತನನ್ನು ದನಿಶ್ ಶೇಖ್ ಎಂದು ಗುರುತಿಸಲಾಗಿದ್ದು, ಎಲ್‌ಇಟಿಯ ಉಪ ಸಂಘಟನೆ 'ದಿ ರೆಸಿಸ್ಟಂಟ್ ಫ್ರಂಟ್'ನಲ್ಲಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ.

ಕೇಜ್ರಿವಾಲ್ ಆಪ್ತ ಕಾರ್ಯದರ್ಶಿ ವಜಾ

19 ವರ್ಷಗಳ ಹಳೆಯ ಪ್ರಕರಣವನ್ನು ಉಲ್ಲೇಖಿಸಿ ಕ್ರಮ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಕಾರ್ಯದರ್ಶಿ ಬಿಭವ್ ಕುಮಾರ್ ಅವರನ್ನು ದೆಹಲಿ ಸರ್ಕಾರದ ಜಾಗೃತದಳದ ನಿರ್ದೇಶನಾಲಯ ವಜಾಗೊಳಿಸಿದೆ.

19 ವರ್ಷಗಳ ಹಳೆಯ ಪ್ರಕರಣವನ್ನು ಉಲ್ಲೇಖಿಸಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಸರ್ಕಾರಿ ಸಿಬ್ಬಂದಿಗೆ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿದ ಮತ್ತು ಬೆದರಿಕೆ ಹಾಕಿದ್ದ ಆರೋಪ ಅವರ ಮೇಲಿದೆ.

ಬಿಭವ್ ಕುಮಾರ್ ಅವರು ಕೇಜ್ರಿವಾಲ್ ಅವರಿಗೆ ಸರ್ಕಾರೇತರ ಸಂಸ್ಥೆ ಸ್ಥಾಪಿಸಿದ ದಿನಗಳಿಂದಲೂ ಆಪ್ತ ಸಹಾಯಕರಾಗಿದ್ದವರು. ಎರಡು ದಿನಗಳ ಹಿಂದೆಯಷ್ಟೇ ದೆಹಲಿ ಅಬಕಾರಿ ನೀತಿ ಹಗರಣದ ಜತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಅವರನ್ನು ವಿಚಾರಣೆಗೆ ಒಳಪಡಿಸಿತ್ತು. ಇದರ ಬೆನ್ನಲ್ಲೆ ಅವರನ್ನು ವಜಾಗೊಳಿಸಲಾಗಿದೆ.

ಸರ್ಕಾರೇತರ ವ್ಯಕ್ತಿಗಳನ್ನು ಸಚಿವರ ವೈಯಕ್ತಿಕ ಸಿಬ್ಬಂದಿಯಾಗಿ ನೇಮಿಸುವುದಕ್ಕೂ ಮೊದಲು ಅವರ ಗುಣ, ಸ್ವಭಾವ, ಪೂರ್ವಾಪರ ಪರಿಶೀಲನೆ ಮಾಡಬೇಕು ಎಂಬ ಕೇಂದ್ರ ಸರ್ಕಾರದ ನಿಯಮವನ್ನು ಇಲಾಖೆಯು ಆದೇಶದಲ್ಲಿ ಉಲ್ಲೇಖಿಲಿಸಿದೆ.

2007ರ ಜೂನ್ 1ರಂದು ನೋಯ್ಡಾ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಯೊಬ್ಬರು ಕುಮಾರ್ ಮತ್ತು ಇನ್ನೊಬ್ಬ ವ್ಯಕ್ತಿಯ ವಿರುದ್ಧ ಮೊಕದ್ದಮೆ ಹೂಡಿದ್ದರು.

ದೆಹಲಿ ಮುಖ್ಯಮಂತ್ರಿಯ ಖಾಸಗಿ ಕಾರ್ಯದರ್ಶಿಯ ನೇಮಕವು 'ಕಾನೂನು ಬಾಹಿರ' ಎಂಬುದನ್ನು ಗಮನಿಸಿದ ನಿರ್ದೇಶನಾಲಯವು ಕಳೆದ ವರ್ಷದ ನವೆಂಬರ್‌ನಲ್ಲಿ ಕುಮಾರ್ ಅವರಿಗೆ ಶೋಕಾಸ್ ನೋಟಿಸ್ ನೀಡಿತ್ತು.

ಕುಮಾರ್ ಅವರ ನೇಮಕಾತಿ ಕಾನೂನು ಬಾಹಿರವಾಗಿದ್ದು, ಅವರು ವಿವಿಧ ಏಜೆನ್ಸಿಗಳ ಅಡಿ ವಿಚಾರಣೆಗೆ ಒಳಪಟ್ಟಿರುವ ಕಾರಣ ಅವರನ್ನು ಹುದ್ದೆಯಿಂದ ತೆಗೆದುಹಾಕುವುದು ಅತ್ಯಗತ್ಯವಾಗಿತ್ತು ಎಂದು ಬಿಜೆಪಿ ಹೇಳಿಕೊಂಡಿದೆ. ಆದರೆ ಈ ಆದೇಶವನ್ನು ಪ್ರಶ್ನಿಸುವುದಾಗಿ ಎಎಪಿ ಮೂಲಗಳು ತಿಳಿಸಿವೆ.

'ಕುಮಾರ್ ಅವರನ್ನು ವಜಾಗೊಳಿಸಿರುವುದು ನಿಷ್ಪಕ್ಷಪಾತ ತನಿಖೆಗೆ ದಾರಿ ಮಾಡಿಕೊಡುತ್ತದೆ' ಎಂದು ದೆಹಲಿ ಬಿಜೆಪಿ ಘಟಕದ ಉಪಾಧ್ಯಕ್ಷ ಕಪಿಲ್ ಮಿಶ್ರಾ ಪ್ರತಿಕ್ರಿಯಿಸಿದ್ದಾರೆ. ಕಾರ್ಯದರ್ಶಿ ಹರೀಶ್ ಖುರಾನಾ ಅವರು, 'ಕುಮಾರ್ ನೇಮಕಾತಿ ನಿಯಮಗಳಿಗೆ ಅನುಗುಣವಾಗಿ ನಡೆಯದ ಕಾರಣ ಅವರನ್ನು ತೆಗೆದಿರುವುದು ಆಡಳಿತಾತ್ಮಕ ನಿರ್ಧಾರವಾಗಿದೆ' ಎಂದಿದ್ದಾರೆ.

ಸಿಬಿಐನಿಂದ ಕವಿತಾ ಬಂಧನ



ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರನ್ನು ಸಿಬಿಐ ಗುರುವಾರ ಬಂಧಿಸಿದೆ.

ಈಗಾಗಲೇ ಕವಿತಾ (46) ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದ್ದು, ಅವರು ತಿಹಾರ್ ಜೈಲಿನಲ್ಲಿದ್ದಾರೆ.

ಇಲ್ಲಿನ ವಿಶೇಷ ನ್ಯಾಯಾಲಯದ ಅನುಮತಿ ಪಡೆದ ಬಳಿಕ ಸಿಬಿಐ ಅವರನ್ನು ಬಂಧಿಸಿದ್ದು, ಶುಕ್ರವಾರ ನ್ಯಾಯಾಲಯದ ಮುಂದೆ ಹಾಜರುಪಡಿಸುವ ಸಾಧ್ಯತೆ ಇದೆ. ಅಲ್ಲಿಯವರೆಗೆ ಅವರು ತಿಹಾರ್ ಜೈಲಿನಲ್ಲಿಯೇ ಉಳಿಯಲಿದ್ದಾರೆ.

ಒಂದು ವೇಳೆ ನ್ಯಾಯಾಲಯವು ಕವಿತಾ ಅವರನ್ನು ಸಿಬಿಐ ವಶಕ್ಕೆ ಒಪ್ಪಿಸಿದರೆ, ಏಜೆನ್ಸಿಯ ಪ್ರಧಾನ ಕಚೇರಿಗೆ ಅವರನ್ನು ಸ್ಥಳಾಂತರಿಸಲಾಗುತ್ತದೆ. ಅಲ್ಲಿ ಅವರನ್ನು ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ವಿಚಾರಣೆಗೆ ಒಳಪಡಿಸುತ್ತಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಿಬಿಐ ವಿಶೇಷ ನ್ಯಾಯಾಲಯದಿಂದ ಅನುಮತಿ ಪಡೆದು ಶನಿವಾರ ಕವಿತಾ ಅವರನ್ನು ಜೈಲಿನೊಳಗೆ ಸಿಬಿಐ ವಿಚಾರಣೆ ನಡೆಸಿತ್ತು. ಸಹ– ಆರೋಪಿ ಬುಚ್ಚಿ ಬಾಬು ಅವರ ಫೋನ್‌ನಲ್ಲಿ ನಡೆಸಲಾಗಿದ್ದ ವಾಟ್ಸ್‌ಆ್ಯಪ್ ಸಂಭಾಷಣೆಗಳ ಕುರಿತು ಮತ್ತು ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಳ್ಳಲಾಗಿರುವ ದಾಖಲೆಗಳ ಕುರಿತು ಹಾಗೂ ಅಬಕಾರಿ ನೀತಿಗೆ ಸಂಬಂಧಿಸಿದಂತೆ ಎಎಪಿಗೆ ನೀಡಲಾಗಿದೆ ಎಂದು ಆರೋಪಿಸಲಾಗಿರುವ ₹100 ಕೋಟಿ ಕಿಕ್‌ಬ್ಯಾಕ್ ಕುರಿತಂತೆ ಕವಿತಾ ಅವರ ವಿಚಾರಣೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

'ಒತ್ತಡಕ್ಕೆ ಒಳಗಾಗಿ ರಾಜೀನಾಮೆ ನೀಡಿಲ್ಲ'



ರಾಜಕುಮಾರ್ ಆನಂದ್

ನವದೆಹಲಿ (ಪಿಟಿಐ): 'ಯಾವುದೇ ಒತ್ತಡಕ್ಕೆ ಒಳಗಾಗಿ ರಾಜೀನಾಮೆ ನೀಡಿಲ್ಲ. ನನಗೆ ಅನ್ಯಾಯ ಸಹಿಸಲಾಗುತ್ತಿರಲಿಲ್ಲ. ಹೀಗಾಗಿ, ರಾಜೀನಾಮೆ ನೀಡಿರುವೆ' ಎಂದು ದೆಹಲಿ ಸರ್ಕಾರದ ಸಚಿವ ರಾಜಕುಮಾರ್ ಆನಂದ್ ಅವರು ಗುರುವಾರ ತಿಳಿಸಿದ್ದಾರೆ.

ಆನಂದ್ ಬಿಜೆಪಿ ಸೇರಬಹುದು ಎಂಬ ಎಎಪಿ ನಾಯಕರ ಆರೋಪಗಳಿಗೆ ಪ್ರತಿಕ್ರಿಯಿಸಿದ ಆನಂದ್ ಅವರು, 'ರಾಜಕೀಯ ಎನ್ನುವುದು ಸಾಧ್ಯತೆಗಳ ಆಟ, ಮುಂದೇನಾಗಬಹುದು ಎಂದು ಯಾರಿಗೂ ಗೊತ್ತಾಗಲ್ಲ' ಎಂದರು.

'ತಾಂತ್ರಿಕವಾಗಿ ಆನಂದ್ ಅವರು ಇನ್ನೂ ಸಚಿವರಾಗಿಯೇ ಇದ್ದಾರೆ. ಆನಂದ್ ಅವರು ತಮ್ಮ ರಾಜೀನಾಮೆ ಪತ್ರವನ್ನು ಮುಖ್ಯಮಂತ್ರಿ ಕಚೇರಿಗೆ ತಲುಪಿಸಿದ್ದಾರೆ. ಆದರೆ ಮುಖ್ಯಮಂತ್ರಿಯವರು ಬಂಧನದಲ್ಲಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನನ್ನನ್ನು ಬೆದರಿಸಲಾಗದು: ಕಂಗನಾ

ಶಿಮ್ಲಾ (ಪಿಟಿಐ): 'ಇದು ನಿಮ್ಮ ಪೂರ್ವಿಕರ ಆಸ್ತಿಯಲ್ಲ. ನನ್ನನ್ನು ಬೆದರಿಸಿ, ಓಡಿಸಲು ಸಾಧ್ಯವಿಲ್ಲ'–

ಹೀಗೆಂದು ನಟಿ, ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್ ಅವರು ಹಿಮಾಚಲಪ್ರದೇಶದ ಸಚಿವ ವಿಕ್ರಮಾದಿತ್ಯ ಸಿಂಗ್ ಅವರ ವಿರುದ್ಧ ಗುರುವಾರ ಕಟುಶಬ್ದಗಳಿಂದ ವಾಗ್ದಾಳಿ ನಡೆಸಿದರು.

ಕಂಗನಾ ಅವರನ್ನು 'ವಿವಾದಗಳ ರಾಣಿ' ಎಂದು ವಿಕ್ರಮಾದಿತ್ಯ ಟೀಕಿಸಿದ್ದರು. ಮಂಡಿಯಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು ವಿಕ್ರಮಾದಿತ್ಯ ಸಿಂಗ್ ಅವರನ್ನು ತರಾಟೆಗೆ ತೆಗೆದುಕೊಂಡರು. 'ಇದು ಪ್ರಧಾನಿ ನರೇಂದ್ರ ಮೋದಿ ಅವರ ನವ ಭಾರತ. ಚಹಾ ಮಾರುತ್ತಿದ್ದ ಪುಟ್ಟ ಬಡ ಹುಡುಗ ದೇಶದ ಮಹಾನ್ ನಾಯಕರಾದ ಮತ್ತು ಜನರ ಪ್ರಧಾನ ಸೇವಕರಾಗಿರುವ ದೇಶ' ಎಂದರು.

ಕಂಗನಾ ಗೋಮಾಂಸ ಸೇವಿಸುತ್ತಾರೆ ಎಂದು ಈಚೆಗಷ್ಟೇ ವಿಕ್ರಮಾದಿತ್ಯ ಸಿಂಗ್ ಆರೋಪಿಸಿದ್ದರು. ಇದನ್ನು ಅಲ್ಲಗಳೆದ ಕಂಗನಾ, 'ದೆಹಲಿಯಲ್ಲಿ ದೊಡ್ಡ ಪಪ್ಪು ಇದ್ದಾರೆ. ಹಿಮಾಚಲ ಪ್ರದೇಶದಲ್ಲಿ ಛೋಟಾ ಪಪ್ಪು ಇದ್ದಾರೆ. ನಾನು ಗೋಮಾಂಸ ಸೇವಿಸುವುದಾಗಿ ಛೋಟಾ ಪಪ್ಪು ಆರೋಪಿಸಿದ್ದಾರೆ. ಏಕೆ ಈ ಕುರಿತು ಸಾಕ್ಷಿ ತೋರಿಸುತ್ತಿಲ್ಲ' ಎಂದು ಪ್ರಶ್ನಿಸಿದರು. 'ನಾನು ಆಯುರ್ವೇದ ಮತ್ತು ಯೋಗದ ಜೀವನಶೈಲಿ ಅನುಸರಿಸುತ್ತೇನೆ' ಎಂದು ಹೇಳಿದ್ದಾರೆ.

'ಚೀನಾ ಕುರಿತು ಪ್ರಧಾನಿ ದುರ್ಬಲ ಹೇಳಿಕೆ'


ಗಡಿ ವಿಷಯ ಸಂಬಂಧ ಮೋದಿ ನೀಡಿರುವ ಹೇಳಿಕೆಗೆ ಕಾಂಗ್ರೆಸ್ ತೀವ್ರ ಟೀಕೆ

ನವದೆಹಲಿ (ಪಿಟಿಐ): ಚೀನಾಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಹೇಳಿಕೆಯು ದುರ್ಬಲವಾಗಿದ್ದು, ಪರಿಣಾಮಕಾರಿಯಾಗಿಲ್ಲ ಎಂದು ಕಾಂಗ್ರೆಸ್ ಗುರುವಾರ ಟೀಕೆ ಮಾಡಿದೆ.

'ಗಡಿಯನ್ನು ಅತಿಕ್ರಮಿಸುತ್ತಿರುವ ಚೀನಾಗೆ ಪ್ರಬಲ ಸಂದೇಶವನ್ನು ಪ್ರಧಾನಿ ರವಾನಿಸಬಹುದಿತ್ತು. ಆದರೆ, ಅವರು ಹೇಡಿತನ ಮೆರೆದಿದ್ದಾರೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಪ್ರಧಾನಿ ಅವರು ನ್ಯೂಸ್‌ವೀಕ್ ಮ್ಯಾಗ್‌ಜಿನ್‌ಗೆ ನೀಡಿದ ಸಂದರ್ಶನದಲ್ಲಿ ಭಾರತ– ಚೀನಾ ಗಡಿ ಸೇರಿದಂತೆ ವಿವಿಧ ವಿಷಯಗಳ ಕುರಿತು ಮಾತನಾಡಿದ್ದರು.

ಆ ಕುರಿತು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಜೈರಾಮ್ ರಮೇಶ್ ಅವರು, 'ಭಾರತದ ಸಾರ್ವಭೌಮತ್ವವನ್ನು ಪದೇ ಪದೇ ಕೆಣಕುತ್ತಿರುವ ಚೀನಾಗೆ ಪ್ರಧಾನಿ ಪ್ರಬಲ ಸಂದೇಶ ಕೊಡಬಹುದಿತ್ತು. ಆದರೆ, ಅವರು ಎರಡು ದೇಶಗಳ ದ್ವಿಪಕ್ಷೀಯ ಸಂವಾದದಲ್ಲಿನ ಅಸಹಜತೆಯನ್ನು ಪರಿಹರಿಸಲು ಗಡಿ ಸಮಸ್ಯೆಯನ್ನು ತುರ್ತಾಗಿ ಪರಿಹರಿಸಬೇಕಿದೆ ಎಂದಷ್ಟೇ ಹೇಳಿದ್ದಾರೆ' ಎಂದು ತಿಳಿಸಿದ್ದಾರೆ.



ಜೈರಾಮ್ ರಮೇಶ್

'ಪ್ರಧಾನಿ ನೀಡಿರುವ ದುರ್ಬಲ ಮತ್ತು ಪರಿಣಾಮಕಾರಿಯಲ್ಲದ ಪ್ರತಿಕ್ರಿಯೆಯು ಭಾರತದ ಭೂ ಪ್ರದೇಶದ ಮೇಲೆ ತನ್ನ ಹಕ್ಕನ್ನು ಪ್ರತಿಪಾದಿಸುವಲ್ಲಿ ಚೀನಾವನ್ನು ಮತ್ತಷ್ಟು ಉತ್ತೇಜಿಸುವ ಸಾಧ್ಯತೆಯಿದೆ' ಎಂದು ಅವರು ಹೇಳಿದ್ದಾರೆ.

'ಪ್ರಧಾನಿಯವರ ಈ ಹೇಳಿಕೆಯು ಅವಮಾನಕರ ಮಾತ್ರವಲ್ಲ, ನಮ್ಮ ಗಡಿಗಳನ್ನು ರಕ್ಷಿಸುವಲ್ಲಿ ತೊಡಗಿರುವ ಮತ್ತು ಹುತಾತ್ಮರಿಗೂ ತೋರಿದ ಅಗೌರವ' ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

'ಮೋದಿ ಅವರು 2020ರ ಜೂನ್ 19ರಂದು ದೂರದರ್ಶನದಲ್ಲಿ ಭಾರತದ ನೆಲವನ್ನು ಯಾರೂ ಅತಿಕ್ರಮಿಸಿಲ್ಲ ಎಂದು ಹೇಳಿಕೆ ನೀಡಿದ್ದರು. ಈ ಹೇಳಿಕೆ ನೀಡಿ ಜನರನ್ನು ವಂಚಿಸಿದ್ದಕ್ಕಾಗಿ ಅವರು ದೇಶದ 140 ಕೋಟಿ ಜನರ ಕ್ಷಮೆ ಯಾಚಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಉತ್ತಮ ಸಂಬಂಧ ಒಳಿತು: ಚೀನಾ

ಬೀಜಿಂಗ್ (ಪಿಟಿಐ): ಭಾರತ ಹಾಗೂ ಚೀನಾ ನಡುವಿನ ಸಂಬಂಧವು ಉತ್ತಮವಾಗಿ, ಸ್ಥಿರವಾಗಿ ಇರುವುದು ಎರಡೂ ದೇಶಗಳ ಹಿತಾಸಕ್ತಿಗಳಿಗೆ ಪೂರಕ ಎಂದು ಚೀನಾ ಗುರುವಾರ ಹೇಳಿದೆ.

ಭಾರತದ ಪಾಲಿಗೆ ಚೀನಾ ಜೊತೆಗಿನ ಸಂಬಂಧವು ಮಹತ್ವದ್ದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಕ್ಕೆ ಪ್ರತಿಯಾಗಿ ಈ ಮಾತು ಬಂದಿದೆ.

ಮಿಲಿಟರಿ ಹಾಗೂ ರಾಜತಾಂತ್ರಿಕ ಮಟ್ಟದಲ್ಲಿ ರಚನಾತ್ಮಕ ಮಾತುಕತೆ ಮೂಲಕ ಎರಡೂ ದೇಶಗಳಿಗೆ (ಭಾರತ ಮತ್ತು ಚೀನಾ) ಗಡಿಯಲ್ಲಿ ಶಾಂತಿ ಸ್ಥಾಪಿಸಲು ಸಾಧ್ಯವಾಗುತ್ತದೆ ಎಂಬ ಭರವಸೆಯನ್ನು ಮೋದಿ ಅವರು ನ್ಯೂಸ್‌ವೀಕ್ ನಿಯತಕಾಲಿಕೆಗೆ ನೀಡಿರುವ ಸಂದರ್ಶನದಲ್ಲಿ ವ್ಯಕ್ತಪಡಿಸಿದ್ದಾರೆ.

'ಪ್ರಧಾನಿ ಆಡಿರುವ ಮಾತುಗಳನ್ನು ಚೀನಾ ಗಮನಿಸಿದೆ' ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೊ ನಿಂಗ್ ಹೇಳಿದ್ದಾರೆ.

'ಚೀನಾ ಮತ್ತು ಭಾರತದ ನಡುವಿನ ಸಂಬಂಧವು ಉತ್ತಮವಾಗಿದ್ದರೆ, ಸ್ಥಿರವಾಗಿದ್ದರೆ ಎರಡೂ ದೇಶಗಳ ಹಿತಾಸಕ್ತಿಗಳಿಗೆ ಒಳಿತು ಎಂಬುದು ನಮ್ಮ ನಂಬಿಕೆ. ಅದು ಈ ಪ್ರದೇಶದಲ್ಲಿ ಹಾಗೂ ಅದರ ಆಚೆಗೂ ಶಾಂತಿ ಮತ್ತು ಅಭಿವೃದ್ಧಿಗೆ ಪೂರಕ' ಎಂದು ನಿಂಗ್ ಅವರು ಹೇಳಿದ್ದಾರೆ. ಚೀನಾ ಜೊತೆಗಿನ ಸಂಬಂಧವು ಮಹತ್ವದ್ದು, ಮುಖ್ಯವಾದುದು ಎಂದು ಮೋದಿ ಅವರು ಸಂದರ್ಶನದಲ್ಲಿ ಹೇಳಿದ್ದಾರೆ. ಅವರು ಅಮೆರಿಕದ ನಿಯತಕಾಲಿಕೆಯೊಂದಕ್ಕೆ ಈಚೆಗೆ ಸಂದರ್ಶನ ನೀಡಿರುವುದು ಇದೇ ಮೊದಲು. 'ಗಡಿಗಳಲ್ಲಿ ಬಹುಕಾಲದಿಂದ ಉಂಟಾಗಿರುವ ಪರಿಸ್ಥಿತಿಯನ್ನು ತ್ವರಿತವಾಗಿ ಬಗೆಹರಿಸಬೇಕು ಎಂಬುದು ನನ್ನ ನಂಬಿಕೆ. ಆಗ ನಮ್ಮ ದ್ವಿಪಕ್ಷೀಯ ಸಂಬಂಧದಲ್ಲಿನ ಅಸಹಜತೆಗಳನ್ನು ಹಿಂದಕ್ಕೆ ಬಿಟ್ಟು ಸಾಗಲು ಸಾಧ್ಯವಾಗುತ್ತದೆ. ನಮ್ಮ ಸಂಬಂಧವು ಶಾಂತಿಯುತವಾಗಿ ಇರಬೇಕಿರುವುದು 2 ದೇಶಗಳಿಗೆ ಮಾತ್ರವೇ ಅಲ್ಲದೆ, ಇಡೀ ಜಗತ್ತಿಗೆ ಮಹತ್ವದ್ದು' ಎಂದು ಕೂಡ ಮೋದಿ ಅವರು ಹೇಳಿದ್ದಾರೆ.

ಸಿಎಎ: ಕಾಂಗ್ರೆಸ್ ಮೌನಕ್ಕೆ ಸಿಪಿಎಂ ಕಿಡಿ

ಸಂಘಪರಿವಾರ, ಬಿಜೆಪಿಯ ಮನಃಸ್ಥಿತಿಯನ್ನೇ ಪ್ರದರ್ಶಿಸುತ್ತಿದೆ: ಪಿಣರಾಯಿ

ತಿರುವನಂತಪುರ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿಚಾರದಲ್ಲಿ ಕಾಂಗ್ರೆಸ್ ಮೌನ ವಹಿಸಿದ್ದು, ಸಂಘಪರಿವಾರ ಮತ್ತು ಬಿಜೆಪಿಯ ಮನಃಸ್ಥಿತಿಯನ್ನೇ ಪ್ರದರ್ಶಿಸುತ್ತಿದೆ ಎಂದು ಕೇರಳದ ಆಡಳಿತರೂಢ ಸಿಪಿಎಂ ಗುರುವಾರ ಮತ್ತೊಮ್ಮೆ ವಾಗ್ದಾಳಿ ನಡೆಸಿದೆ.

ಸಿಪಿಎಂ ಅಭ್ಯರ್ಥಿ ವಿ. ಜಾಯ್ ಸ್ಪರ್ಧಿಸುತ್ತಿರುವ ಅಟ್ಟಿಂಗಲ್‌ನಲ್ಲಿ ನಡೆದ ಎಲ್‌ಡಿಎಫ್ ಚುನಾವಣಾ ಸಭೆ ಉದ್ದೇಶಿಸಿ ಮಾತನಾಡಿದ ಸಿಪಿಎಂ ಹಿರಿಯ ನಾಯಕ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಸಿಎಎ ಬಗ್ಗೆ ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ ಮೌನವಾಗಿದ್ದಾರೆ ಎಂದು ತಮ್ಮ ಆರೋಪಗಳನ್ನು ಪುನರುಚ್ಚರಿಸಿದರು.



ಯುಡಿಎಫ್ ಸಂಸದರು ಸಂಸತ್ತಿನಲ್ಲಿ ಯಾವುದೇ ವಿಷಯದ ಬಗ್ಗೆಯೂ ದನಿ ಎತ್ತದಿರುವುದಕ್ಕೆ ಮತದಾರರು ಭ್ರಮನಿರಸನಗೊಂಡಿದ್ದಾರೆ

ಪಿಣರಾಯಿ ವಿಜಯನ್
ಕೇರಳ ಮುಖ್ಯಮಂತ್ರಿ

'ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಸಿಎಎ ಬಗ್ಗೆ ಏನನ್ನೂ ಹೇಳಿಲ್ಲ. ಅಮೆರಿಕ ಸೇರಿದಂತೆ ಹಲವು ದೇಶಗಳು ಸಿಎಎ ವಿರೋಧಿಸಿವೆ ಮತ್ತು ಟೀಕೆ ಕೂಡ ಮಾಡಿವೆ. ಆದರೆ, ಕಾಂಗ್ರೆಸ್‌ಗೆ ಅಂತಹ ನಿಲುವು ತೆಗೆದುಕೊಳ್ಳಲು ಅಥವಾ ಬಿಜೆಪಿ, ಸಂಘ ಪರಿವಾರದ ಕಾರ್ಯ ಸೂಚಿಯನ್ನು ವಿರೋಧಿಸಲು ಸಾಧ್ಯವಾಗುತ್ತಿಲ್ಲ' ಎಂದು ವಿಜಯನ್ ಟೀಕಿಸಿದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಸಿಪಿಎಂ ನಾಯಕ ಥಾಮಸ್ ಐಸಾಕ್ ಅವರ ಉದಾಹರಣೆ ನೀಡಿ, ಜಾರಿ ನಿರ್ದೇಶನಾಲಯ (ಇ.ಡಿ), ಆದಾಯ ತೆರಿಗೆ ಇಲಾಖೆ ಮತ್ತು ಕೇಂದ್ರ ಇನ್ನಿತರ ತನಿಖಾ ಏಜೆನ್ಸಿಗಳು ತಮ್ಮದೇ ನಾಯಕರ ವಿರುದ್ಧ ಕ್ರಮ ತೆಗೆದುಕೊಂಡಾಗ ಕಾಂಗ್ರೆಸ್ ವಿರೋಧಿಸುತ್ತದೆ. ಆದರೆ, ಬೇರೆ ಪಕ್ಷಗಳ ನಾಯಕರ ಮೇಲೆ ಅವು ಕ್ರಮ ತೆಗೆದುಕೊಂಡರೆ ಅದು ಮೌನವಾಗಿರುತ್ತದೆ ಎಂದು ಕಿಡಿಕಾರಿದರು.

ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದಂತೆ ಕಾಂಗ್ರೆಸ್, ಕೇಜ್ರಿವಾಲ್ ವಿರುದ್ಧ ದೂರು ದಾಖಲಿಸಿದ್ದರಿಂದ ಇ.ಡಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಾಧ್ಯವಾಯಿತು ಎಂದೂ ವಿಜಯನ್ ಆರೋಪಿಸಿದರು. ಕೆಐಐಎಫ್‌ಬಿ ಮಸಾಲಾ ಬಾಂಡ್ ಪ್ರಕರಣದ ತನಿಖೆಗೆ ಸಂಬಂಧಿಸಿ ಐಸಾಕ್ ಅವರನ್ನು ಇ.ಡಿ ಏಕೆ ಬಂಧಿಸುತ್ತಿಲ್ಲ ಎಂದು ಕಾಂಗ್ರೆಸ್ ಪ್ರಶ್ನಿಸುತ್ತಿದೆ ಎಂದು ಕಿಡಿಕಾರಿದರು.

ಭಕ್ತರನ್ನು ನಿಭಾಯಿಸಲು ಗರ್ಭಗುಡಿಯಲ್ಲಿ ಅರ್ಚಕರ ವೇಷದಲ್ಲಿ ಖಾಕಿಪಡೆ

ಕಾಶಿ ದೇಗುಲ: ಪೊಲೀಸರಿಗೆ ಹೊಸ ವಸ್ತ್ರಸಂಹಿತೆ

ಪ್ರಜಾವಾಣಿ ವಾರ್ತೆ

ಲಖನೌ: ಕೊರಳಲ್ಲಿ ರುದ್ರಾಕ್ಷಿ ಮಾಲೆ ಧರಿಸಿ, ಹಣೆಯಲ್ಲಿ ಗಂಧ ಅಥವಾ ವಿಭೂತಿ ಹಚ್ಚಿಕೊಂಡು, ಗೆರುವಾ (ಕಿತ್ತಳೆ ಬಣ್ಣದ) ವಸ್ತ್ರ ಧರಿಸಿಕೊಂಡು ಥೇಟ್ ಅರ್ಚಕರಂತೆ ಪ್ರಸಿದ್ಧ ವಾರಾಣಸಿಯ ಕಾಶಿ ವಿಶ್ವನಾಥ ದೇಗುಲದ ಗರ್ಭಗುಡಿಯಲ್ಲಿ ಉತ್ತರಪ್ರದೇಶದ ಪೊಲೀಸ್ ಸಿಬ್ಬಂದಿ, ಭಕ್ತರು ದರ್ಶನಕ್ಕೆ ಬರುವ ವೇಳೆ ಕರ್ತವ್ಯ ನಿರ್ವಹಿಸಲಿದ್ದಾರೆ.

ವಿಶ್ವನಾಥನ ಗರ್ಭಗುಡಿಯ ಕರ್ತವ್ಯಕ್ಕೆ ನಿಯೋಜಿಸಲಾದ ಪೊಲೀಸ್ ಸಿಬ್ಬಂದಿಗೆ ಮಾತ್ರ ಈ ಹೊಸ ವಸ್ತ್ರಸಂಹಿತೆ ಅನ್ವಯಿಸಲಿದೆ. ಗರ್ಭಗುಡಿಯಲ್ಲಿ ಕರ್ತವ್ಯ ನಿಯೋಜಿತ ಮಹಿಳಾ ಪೊಲೀಸ್ ಸಿಬ್ಬಂದಿಯೂ ಈ ವಸ್ತ್ರ ಸಂಹಿತೆ ಪಾಲಿಸಲಿದ್ದಾರೆ. ದೇವಾಲಯದಲ್ಲಿ ಈ ಹೊಸ ಪ್ರಯೋಗ ಬುಧವಾರದಿಂದ ಆರಂಭವಾಗಿದೆ ಎಂದು ವಾರಾಣಸಿ ದೇವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

'ಭಕ್ತರ ಸೌಕರ್ಯ ಗಮನದಲ್ಲಿಟ್ಟುಕೊಂಡು ದೇವಾಲಯದಲ್ಲಿ ಸೌಹಾರ್ದ ವಾತಾವರಣ ಒದಗಿಸುವ ಉದ್ದೇಶದಿಂದ ಇದನ್ನು ಆರಂಭಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ದೇವಸ್ಥಾನದಲ್ಲಿ ಪೊಲೀಸರು ತಮ್ಮೊಂದಿಗೆ ಸರಿಯಾಗಿ ವರ್ತಿಸುವುದಿಲ್ಲ. ಜನಸಂದಣಿ ನಿಯಂತ್ರಿಸಲು ಆಗಾಗ್ಗೆ ದೈಹಿಕ ಬಲ ಬಳಸುತ್ತಾರೆ ಎಂದು ಭಕ್ತರಿಂದ ದೂರುಗಳು ಬಂದಿವೆ. ಪುರೋಹಿತರ ಮಾತನ್ನು ಸುಲಭವಾಗಿ ಪಾಲಿಸುವ ಭಕ್ತರು ಕೆಲವೊಮ್ಮೆ ಪೊಲೀಸರ ಮಾತನ್ನು ಕೇಳುವುದಿಲ್ಲ. ಪುರೋಹಿತರ ವೇಷದಲ್ಲಿ ಪೊಲಿಸರು ಭಕ್ತರ ಗುಂಪನ್ನು ಸೌಮ್ಯವಾಗಿ ನಿಭಾಯಿಸಬಹುದೆಂದು ಈ ಹೊಸ ವಸ್ತ್ರಸಂಹಿತೆ ಅಳವಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

'ಪುರೋಹಿತ ಪೊಲೀಸರು' ಭಕ್ತರನ್ನು 'ಹರ ಹರ ಮಹಾದೇವ್' ಜೈಕಾರದೊಂದಿಗೆ ಸ್ವಾಗತಿಸಲಿದ್ದಾರೆ. ವಾರಾಣಸಿಯ ಇತರ ಪ್ರಮುಖ ಧಾರ್ಮಿಕ ಸ್ಥಳಗಳ ಬಗ್ಗೆಯೂ ಭಕ್ತರಿಗೆ ಮಾಹಿತಿ ನೀಡಲಿದ್ದಾರೆ. ಅರ್ಚಕರಂತೆ ವೇಷ ಧರಿಸುವ ಪೊಲೀಸರು ಗರ್ಭಗುಡಿಯಲ್ಲಿ ಕರ್ತವ್ಯ ನಿರ್ವಹಿಸುವುದರಿಂದ ಅವರಿಗೆ ಮೂರು ದಿನಗಳ ವಿಶೇಷ ತರಬೇತಿ ಕೂಡ ನೀಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.






ಮತ ಪತ್ರ

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ-ಬಲಿದಾನಗಳ ಹಿಂದಿದ್ದ ಒಟ್ಟು ಆದರ್ಶಗಳ ಸಾರವೇ ನಮ್ಮ ಸಂವಿಧಾನ.
ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಾರಥ್ಯದ ಸಮಿತಿ, ಸತತ ಮೂರು ವರ್ಷಗಳ ಕಾಲ ವಿಶ್ವದ ಎಲ್ಲ ಸಂವಿಧಾನಗಳನ್ನು ಪರಾಮರ್ಶಿಸಿ ಸಿದ್ಧಪಡಿಸಿದ ಅತ್ಯುತ್ತಮ ಸಂವಿಧಾನ ನಮ್ಮದು.
ಅದರಲ್ಲಿನ ಅತ್ಯಂತ ಅರ್ಥಪೂರ್ಣ ಮತ್ತು ಕ್ರಾಂತಿಕಾರಕ ಹೆಜ್ಜೆಯೆಂದರೆ ಸರ್ವರಿಗೂ ಮತದಾನದ ಹಕ್ಕು. ಭಾರತೀಯರಾದ ನಾವು, ನಮಗೆ ಅರ್ಪಿಸಿಕೊಂಡಿರುವ ಸಾರ್ವಭೌಮ, ಪ್ರಜಾಪ್ರಭುತ್ವ, ಗಣರಾಜ್ಯದ ಆಧಾರಸ್ತಂಭವೇ ನಮ್ಮಿಂದ, ನಮಗಾಗಿ ಆಯ್ಕೆಯಾಗುವ ಜನಪ್ರತಿನಿಧಿಗಳು.
ಆದ್ದರಿಂದ ಮತದಾನ ನಮ್ಮ ಹಕ್ಕು ಮಾತ್ರವಲ್ಲದೆ, ನಾವು ನಿರ್ವಹಿಸಲೇಬೇಕಾದ ಅತ್ಯಂತ ಮೂಲಭೂತ ಕರ್ತವ್ಯವೆಂಬ ಭಾವನೆಯಿಂದ ಈ ಸಲದ ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸೋಣ.


ಇಂತಿ ನಿಮ್ಮ
ಪೂಜಾಗಾಂಧಿ

ಮತ ಆಮಿಷ: ಆಯೋಗದ ವಶ

₹45.67 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹79.66 ಕೋಟಿ
ಮದ್ಯ	₹146.10 ಕೋಟಿ (1.39 ಕೋಟಿ ಲೀ)
ಮಾದಕವಸ್ತು	₹9.70 ಕೋಟಿ (388.43 ಕೆ.ಜಿ.)
ಚಿನ್ನ	₹10.81 ಕೋಟಿ (19.57 ಕೆ.ಜಿ.)
ಬೆಳ್ಳಿ	₹69 ಲಕ್ಷ (230.04 ಕೆ.ಜಿ.)

ಎಂಥಾ ಮಾತು!



ಪ್ರಚಾರದ ಸಂದರ್ಭ ನಾನು ನರೇಂದ್ರ ಮೋದಿ ಫೋಟೊ ಬಳಸಬಾರದು ಎಂದು ಬಿಜೆಪಿಯವರು ಹೇಳುತ್ತಾರೆ. ಹಾಗಿದ್ದರೆ ಯಡಿಯೂರಪ್ಪ, ರಾಘವೇಂದ್ರ ಮತ್ತು ವಿಜಯೇಂದ್ರ ಅವರ ಫೋಟೊ ಇಟ್ಟುಕೊಂಡು ಹೋಗಿ ಚುನಾವಣೆ ಗೆದ್ದು ತೋರಿಸಲಿ ನೋಡೋಣ. ಮೋದಿ ಯಾರಪ್ಪನ ಮನೆಯ ಆಸ್ತಿಯೂ ಅಲ್ಲ. ತಾಕತ್ತಿದ್ದರೆ ಯಡಿಯೂರಪ್ಪ ಕುಟುಂಬದವರು ನರೇಂದ್ರ ಮೋದಿ ಫೋಟೊ ಬಿಟ್ಟು ಪ್ರಚಾರ ಮಾಡಿ ಗೆಲ್ಲಲಿ

ಕೆ.ಎಸ್. ಈಶ್ವರಪ್ಪ, ಬಿಜೆಪಿ ಮುಖಂಡ



ಈಶ್ವರಪ್ಪನವರ ಉದ್ಧಟತನದ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ. ಅದು ಅವರ ಹಣೆಬರಹ. ಏನಾಗುತ್ತೋ ಆಗಲಿ. ಯಡಿಯೂರಪ್ಪ ಹಾಗೂ ಅವರ ಮಕ್ಕಳ ಫೋಟೊ ಹಾಕಿ ಪ್ರಚಾರ ಮಾಡಲಿ ಎಂಬ ಬಗ್ಗೆಯೂ ಮಾತನಾಡುವುದಿಲ್ಲ. ಯಾರ ಫೋಟೊ ಹಾಕಬೇಕೆಂಬುದನ್ನು ನಾವು ತೀರ್ಮಾನಿಸುತ್ತೇವೆ

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ



ಕೆ.ಎಸ್. ಈಶ್ವರಪ್ಪ ಅವರು ಅವರ ತಪ್ಪು ಸರಿಪಡಿಸಿಕೊಳ್ಳುವವರೆಗೆ ಅವಕಾಶ ನೀಡುತ್ತೇವೆ. ಎಲ್ಲಿಯವರೆಗೆ ಅವರು ನಾಮಪತ್ರ ತುಂಬುವುದಿಲ್ಲವೋ ಅಲ್ಲಿವರೆಗೆ ಅಥವಾ ನಾಮಪತ್ರ ಸಲ್ಲಿಸಿದ ನಂತರ ತಪ್ಪಿನ ಅರಿವಾಗಿ ನಾಮಪತ್ರ ಹಿಂಪಡೆಯುವವರೆಗೂ ಅವರಿಗೆ ಪಕ್ಷ ಅವಕಾಶ ನೀಡುತ್ತದೆ

ರಾಧಾ ಮೋಹನ್‌ದಾಸ್ ಅಗರವಾಲ್, ಬಿಜೆಪಿ ರಾಜ್ಯ ಉಸ್ತುವಾರಿ

ಮೊದಲ ಮತದ ಸಂಭ್ರಮ



ಶಿವಕುಮಾರ್ ಪಿ. ಧರ್ಮಪುರ, ದೇವನಹಳ್ಳಿ ತಾಲ್ಲೂಕು

ನಮ್ಮ ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಜನರಿದ್ದಾರೆ ಎಂದು ಹೇಳುತ್ತಾರೆ. ಅವರಲ್ಲಿ ನಾನೂ ಒಬ್ಬನಾಗಿರುವುದಕ್ಕೆ ಸಂತಸವಾಗುತ್ತಿದೆ. ಮತದಾನ ಎನ್ನುವುದು ಸಂವಿಧಾನದಿಂದ ನಮಗೆ ಬಂದಿರುವ ಹಕ್ಕು. ಅದನ್ನು ಚಲಾಯಿಸುವ ಮೂಲಕ ದೇಶ ಕಟ್ಟುವಲ್ಲಿ ನಾನೂ ಭಾಗೀದಾರ ಎಂದು ಖುಷಿಯಾಗುತ್ತಿದೆ. ಮೊದಲ ಬಾರಿಗೆ ಮತ ಚಲಾಯಿಸಲು ತುಂಬಾ ಕುತೂಹಲದಿಂದ ಕಾಯುತ್ತಿದ್ದೇನೆ. ಮತದಾನ ಹೇಗೆ ಮಾಡಬೇಕು ಎಂದು ತಿಳಿಸಿಕೊಟ್ಟಿದ್ದಾರೆ. ನಾನು ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೆ ಮತದಾನ ಮಾಡುತ್ತೇನೆ. ನಮ್ಮ ಸ್ನೇಹಿತರೆಲ್ಲರೂ ಸೇರಿ ಮತದಾನ ಮಾಡಿಸುತ್ತೇವೆ. ಇದೇ ನಿಜವಾದ ಪ್ರಜಾಪ್ರಭುತ್ವ.

ಕಣ ಸ್ವಾರಸ್ಯ

ಇವರು ಗೆದ್ದರೆ ಮೂರು ಕಡೆ ಉಪ ಚುನಾವಣೆ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಶಾಸಕರಾದ ಕೆಲವರು, ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದು ಸಾಮಾನ್ಯವಾಗಿದೆ. ಹೀಗಾಗಿ, ಒಂದು ವರ್ಷದ ಆಸುಪಾಸು ಕೆಲವು ಕ್ಷೇತ್ರಗಳಿಗೆ ಉಪಚುನಾವಣೆ ನಡೆಯುವುದೂ ಸಹಜ ಎಂಬಂತೆ ಆಗಿದೆ.


ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ವಿಧಾನಸಭೆ ಚುನಾವಣೆ ನಡೆದು ಒಂದು ವರ್ಷದಲ್ಲೇ ಲೋಕಸಭೆ ಚುನಾವಣೆ ನಡೆಯುತ್ತಿದೆ. 2008, 2013, 2018, 2013ರಲ್ಲಿ ವಿಧಾನಸಭೆಗೆ ಚುನಾವಣೆ ನಡೆದಿತ್ತು. ಈ ಅವಧಿಯಲ್ಲಿ 'ಮೈತ್ರಿ'ಸರ್ಕಾರದ ಪ್ರಯೋಗ ನಡೆದರೂ ವಿಧಾನಸಭೆಗೆ ಅವಧಿಪೂರ್ವ ಚುನಾವಣೆ ನಡೆದಿಲ್ಲ. 2009, 2014, 2019ರಲ್ಲಿ ಲೋಕಸಭೆಗೆ ಚುನಾವಣೆ ನಡೆದಿತ್ತು.

2023ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಗೆದ್ದ ಮೂವರು, ಈಗ ವಿವಿಧ ಕ್ಷೇತ್ರಗಳಲ್ಲಿ ಕಣದಲ್ಲಿದ್ದಾರೆ. ಇವರು ಲೋಕಸಭೆಗೆ ಆಯ್ಕೆಯಾದರೆ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ. ಆರು ತಿಂಗಳೊಳಗೆ ಈ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಬೇಕಾಗುತ್ತದೆ.

● ಲೋಕಸಭಾ ಕ್ಷೇತ್ರ ● ವಿಧಾನಸಭಾ ಕ್ಷೇತ್ರ



ಬಸವರಾಜ ಬೊಮ್ಮಾಯಿ
● ಹಾವೇರಿ ● ಶಿಗ್ಗಾವಿ



ಎಚ್.ಡಿ.ಕುಮಾರಸ್ವಾಮಿ
● ಮಂಡ್ಯ ● ಚನ್ನಪಟ್ಟಣ



ಇ.ತುಕಾರಾಂ
● ಬಳ್ಳಾರಿ ● ಸಂಡೂರು

ಸುರಕ್ಷಿತ, ವಿಕಸಿತ ಭಾರತವೇ ನಮ್ಮ ಕಾರ್ಯಸೂಚಿ



'ಕಾಂಗ್ರೆಸ್‌ಗೆ ರಾಷ್ಟ್ರಮಟ್ಟದ ಪ್ರಮುಖ ವಿಷಯಗಳನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಹಲವು ವಿಷಯಗಳ ಬಗ್ಗೆ ಸುಳ್ಳು ಪ್ರಚಾರ ಮಾಡುತ್ತಿದೆ. ಕೇವಲ ಗ್ಯಾರಂಟಿಗಳನ್ನು ಪ್ರಸ್ತಾಪಿಸುತ್ತಿದೆ' ಎಂದು ಬಿಜೆಪಿಯ ರಾಜ್ಯ ಚುನಾವಣಾ ನಿರ್ವಹಣಾ ಉಸ್ತುವಾರಿ ಸಮಿತಿ ಸಂಚಾಲಕ, ಶಾಸಕ ವಿ.ಸುನಿಲ್‌ಕುಮಾರ್ ಟೀಕಿಸಿದರು. 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ:

● ರವಿಪ್ರಕಾಶ್ ಎಸ್.

ಪ್ರಜಾವಾಣಿ ಸಂದರ್ಶನ
ವಿ.ಸುನಿಲ್‌ಕುಮಾರ್

● ಇಲ್ಲಿ 28 ಸ್ಥಾನಗಳನ್ನು ಗೆಲ್ಲುವುದಕ್ಕೆ ಅಮಿತ್ ಶಾ ಗುರಿ ನೀಡಿದ್ದಾರೆ. ನಿಮ್ಮಲ್ಲಿರುವ ಬಣ ರಾಜಕೀಯ ಮತ್ತು ಕಿತ್ತಾಟದಿಂದ ಈ ಗುರಿ ಮುಟ್ಟಲು ಸಾಧ್ಯವೇ?

ರಾಜ್ಯದಲ್ಲಿ ಪಕ್ಷ ದೊಡ್ಡ ಮಟ್ಟದಲ್ಲಿ ವಿಸ್ತರಣೆ ಆಗಿದೆ. ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ಬರುವುದು ನಿಶ್ಚಿತ. ರಾಜ್ಯದಲ್ಲೂ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ. ಇದರಿಂದಾಗಿ ಸ್ಪರ್ಧೆಗೆ ಪೈಪೋಟಿ ಹೆಚ್ಚಾಗಿದೆ. ಟಿಕೆಟ್ ಸಿಗದಿದ್ದಾಗ ಅತೃಪ್ತಿ ಸಹಜ. ಈ ಬಾರಿ ಅಸಮಾಧಾನದ ಪ್ರಮಾಣ ಜಾಸ್ತಿ ಆಗಿದೆ. ಅಸಮಾಧಾನಿತರನ್ನು ಸಮಾಧಾನ ಮಾಡುವ ಮತ್ತು ಎಲ್ಲರನ್ನೂ ಸಂಘಟನೆಯೊಳಗೆ ಜೋಡಿಸುವ ಒಳ ಸಾಮರ್ಥ್ಯ ಪಕ್ಷದಲ್ಲಿ ಸದಾ ಇದ್ದೇ ಇದೆ. ಮೊದಲ ಶ್ರೇಣಿಯ ನಾಯಕರಲ್ಲಿ ಇಂತಹ ಅಸಮಾಧಾನಗಳಿದ್ದರೂ, ಕಾರ್ಯಕರ್ತರಲ್ಲಿ ಗೊಂದಲ ಇಲ್ಲ. 28 ಸ್ಥಾನಗಳ ಗುರಿ ತಲುಪಲು ಎಲ್ಲ ತಂತ್ರಗಾರಿಕೆ ಮಾಡುತ್ತೇವೆ.

● ಯಾವ ಅಂಶ ಮುಂದಿಟ್ಟುಕೊಂಡು ಮತ ಕೇಳುತ್ತೀರಿ?

ಸುರಕ್ಷಿತ ಭಾರತ, ಸಾಂಸ್ಕೃತಿಕ ಭಾರತ ಮತ್ತು ವಿಕಸಿತ ಭಾರತ ಹೆಸರಿನಲ್ಲಿ ಚುನಾವಣೆ ಎದುರಿಸುತ್ತಿದ್ದೇವೆ. ನರೇಂದ್ರ ಮೋದಿ ಅವರು ಪ್ರಧಾನಿ ಆದ ಬಳಿಕ ಭಾರತದ ಸುರಕ್ಷತೆ ಯಾವ ರೀತಿ ಉತ್ತಮವಾಯಿತು, ಸಾಂಸ್ಕೃತಿಕ ಭಾರತ ಯಾವ ರೀತಿ ವಿಕಸಿತ ಆಯಿತು ಎನ್ನುವುದನ್ನು ಹೇಳುತ್ತಿದ್ದೇವೆ. ಅಯೋಧ್ಯೆಯ ರಾಮಮಂದಿರದಿಂದ ಹಿಡಿದು ಅಂಜನಾದ್ರಿ ಬೆಟ್ಟದವರೆಗೆ ಸಾಂಸ್ಕೃತಿಕ ಭಾರತ ವಿಕಸಿತವಾಗಿದೆ. ಅಭಿವೃದ್ಧಿ ದೃಷ್ಟಿಯಿಂದ ವಿಶ್ವದ ಜನ ಭಾರತಕ್ಕೆ ಮನ್ನಣೆ ನೀಡುತ್ತಿದ್ದಾರೆ. ಅದನ್ನು ಜನರಿಗೆ ಮನವರಿಕೆ ಮಾಡಿಕೊಡುತ್ತಿದ್ದೇವೆ.

● ಜೆಡಿಎಸ್ ಜತೆ ಹೊಂದಾಣಿಕೆ ಬೇಡ ಎಂಬ ಅಭಿಪ್ರಾಯ ಸ್ಥಳೀಯ ಮಟ್ಟದಲ್ಲಿ ಇದ್ದರೂ ವರಿಷ್ಠರು ಯಾವ ಕಾರಣಕ್ಕೆ ಮೈತ್ರಿಗೆ ಹಸಿರು ನಿಶಾನೆ ನೀಡಿದರು?

ಕೇಂದ್ರ ನಾಯಕರು ಯಾವುದೇ ನಿರ್ಣಯ ತೆಗೆದುಕೊಳ್ಳಬೇಕಾದರೆ, ದೇಶ ಮತ್ತು ಪಕ್ಷದ ಒಳಿತನ್ನು ಗಮನದಲ್ಲಿ ಇಟ್ಟುಕೊಂಡೇ ತೀರ್ಮಾನ ತೆಗೆದುಕೊಳ್ಳುತ್ತಾರೆ. ಹೀಗಾಗಿ ಜೆಡಿಎಸ್ ಜತೆ ಹೊಂದಾಣಿಕೆ ಮಾಡಿಕೊಂಡರೆ ದೇಶಕ್ಕೂ, ರಾಜ್ಯದ ಜನತೆಗೂ ಒಳಿತಾಗುತ್ತದೆ ಎಂಬ ಕಾರಣಕ್ಕೆ ವರಿಷ್ಠರು ಈ ನಿರ್ಣಯ ತೆಗೆದುಕೊಂಡಿರಬಹುದು. ನಾವು ನಿರಂತರವಾಗಿ, ಸ್ವತಂತ್ರವಾಗಿ ಪಕ್ಷವನ್ನು ಬೆಳೆಸುತ್ತಾ, ಕಾಂಗ್ರೆಸ್- ಜೆಡಿಎಸ್ ಅನ್ನು ಸಮಾನವಾಗಿ ವಿರೋಧಿಸಿಕೊಂಡು ಬಂದಿದ್ದೇವೆ. ಹೀಗಾಗಿ, ತಕ್ಷಣದಲ್ಲಿ ಸಮಾಧಾನ ಆಗದಿದ್ದರೂ, ಎನ್‌ಡಿಎ ಬಲಗೊಳಿಸಬೇಕು ಎಂಬ ವರಿಷ್ಠರ ನಿಲುವಿಗೆ ನಾವೆಲ್ಲರೂ ಬದ್ಧರಾಗಿದ್ದೇವೆ.

● ತಳಮಟ್ಟದಲ್ಲಿ ಜೆಡಿಎಸ್ ಕಾರ್ಯಕರ್ತರ ಜತೆ ನಿಮ್ಮ ಕಾರ್ಯಕರ್ತರು ಸಮನ್ವಯ ಸಾಧಿಸಲು ಏನು ಮಾಡುತ್ತೀರಿ?

ಬೂತ್ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಎರಡೂ ಪಕ್ಷಗಳ ಕಾರ್ಯಕರ್ತರ ಮಧ್ಯೆ ಸಮನ್ವಯ ಸಾಧಿಸುವ ಕೆಲಸ ನಡೆದಿದೆ. ಗ್ರಾಮ ಮಟ್ಟದಲ್ಲೂ ಸಮನ್ವಯ ಕಾರ್ಯ ನಡೆದಿದೆ. ಎಲ್ಲ ಕ್ಷೇತ್ರಗಳಲ್ಲೂ ಎರಡೂ ಪಕ್ಷಗಳ ಪ್ರಮುಖರು ಪ್ರಚಾರದಲ್ಲಿ ಪಾಲ್ಗೊಳ್ಳುತ್ತಾರೆ. ಮೋದಿಯವರ ಸಮಾವೇಶದಲ್ಲಿ ಜೆಡಿಎಸ್ ಹಿರಿಯ ನಾಯಕರು ಭಾಗವಹಿಸುತ್ತಾರೆ.

'ಗ್ಯಾರಂಟಿ' ಸುಖಾನುಭವ ಪ್ರಚಾರಕ್ಕೆ ಸರ್ಕಾರದಿಂದ ₹100 ಕೋಟಿ ವೆಚ್ಚ

● ಕಾಂಗ್ರೆಸ್ ಗ್ಯಾರಂಟಿ ಎದುರು ಮೋದಿ ಗ್ಯಾರಂಟಿ ಎಂದು ಹೇಳುತ್ತಿದ್ದೀರಿ. ಯಾರ ಗ್ಯಾರಂಟಿ ಮತವಾಗಿ ಪರಿವರ್ತನೆಯಾಗಲಿದೆ?

ಮೋದಿ ಸರ್ಕಾರ ಎಲ್ಲ ವರ್ಗದ ಜನರಿಗೆ ಅನುಕೂಲ ಮಾಡಿಕೊಡುವ ಯೋಜನೆಗಳನ್ನೇ ಜಾರಿ ಮಾಡಿದೆ. ಮನೆ ಇಲ್ಲದವರಿಗೆ ಮನೆ, ಶೌಚಾಲಯ, ನಲ್ಲಿ ಮೂಲಕ ಶುದ್ಧ ಕುಡಿಯುವ ನೀರು, ಕಟ್ಟಿಗೆ ಬಳಸುತ್ತಿದ್ದ ಬಡವರಿಗೆ ಅಡುಗೆ ಅನಿಲ, ಆಯುಷ್ಮಾನ್ ಭಾರತ್ ಮೂಲಕ ₹5 ಲಕ್ಷದವರೆಗೆ ಆರೋಗ್ಯ ವಿಮೆ. ಇವು ಅರ್ಹ ಫಲಾನುಭವಿಗಳನ್ನು ತಲುಪುತ್ತಿವೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳನ್ನು ಜಾರಿ ಮಾಡುವುದಕ್ಕಾಗಿ ಹಲವು ಉತ್ತಮ ಯೋಜನೆಗಳನ್ನು ರದ್ದು ಮಾಡಿದೆ. ಅಲ್ಲದೇ, 10 ತಿಂಗಳಲ್ಲಿ ಉಳಿದ ಯಾವುದೇ ಅಭಿವೃದ್ಧಿಗೂ ಹಣ ಕೊಟ್ಟಿಲ್ಲ. ಮಹಿಳೆಯರಿಗೆ ₹2,000 ಕೊಟ್ಟು, ಪುರುಷರಿಂದ ₹4500 ಕಿತ್ತುಕೊಳ್ಳುತ್ತಿದ್ದಾರೆ. ಗ್ಯಾರಂಟಿಗಳ ಪ್ರಚಾರಕ್ಕಾಗಿ ₹100 ಕೋಟಿ ಖರ್ಚು ಮಾಡಿದೆ.

ರಾಹುಲ್ 17ರಂದು ರಾಜ್ಯದಲ್ಲಿ ಪ್ರಚಾರ

ಪ್ರಜಾವಾಣಿ ವಾರ್ತೆ



ರಾಹುಲ್ ಗಾಂಧಿ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ರಾಹುಲ್ ಗಾಂಧಿ ಇದೇ 17ರಂದು ಚುನಾವಣಾ ಪ್ರಚಾರ ಕೈಗೊಳ್ಳಲಿದ್ದಾರೆ.

17ರಂದು ಬೆಳಿಗ್ಗೆ ಮಂಡ್ಯ, ಸಂಜೆ 4 ಗಂಟೆಗೆ ಕೋಲಾರದಲ್ಲಿ ನಡೆಯಲಿರುವ ಚುನಾವಣಾ ಪ್ರಚಾರ ಸಮಾವೇಶಗಳಲ್ಲಿ ರಾಹುಲ್ ಭಾಗವಹಿಸಲಿದ್ದಾರೆ. ಅದೇ ದಿನ ಬೆಂಗಳೂರಿನಲ್ಲಿ ರೋಡ್ ಶೋ ಹಮ್ಮಿಕೊಳ್ಳುವ ಬಗ್ಗೆಯೂ ಚರ್ಚೆ ನಡೆದಿದೆ. ಆದರೆ, ಯಾವ ಕ್ಷೇತ್ರದ ವ್ಯಾಪ್ತಿಯಲ್ಲಿ ಆಯೋಜಿಸಬೇಕು ಎಂಬ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

'ರಾಜ್ಯದಲ್ಲಿ ಚುನಾವಣಾ ಪ್ರಚಾರಕ್ಕೆ ಬರುವಂತೆ ಪ್ರಿಯಾಂಕಾ ಗಾಂಧಿ ಅವರನ್ನೂ ಆಹ್ವಾನಿಸಲಾಗಿದೆ. ಅವರು ಬರಲು ಒಪ್ಪಿದ್ದಾರೆ. ಆದರೆ, ಇನ್ನೂ ದಿನ ನಿಗದಿ ಆಗಿಲ್ಲ' ಎಂದು ಮೂಲಗಳು ಹೇಳಿವೆ.

ಹೆಬ್ಬಾರ್ ಪುತ್ರ ವಿವೇಕ ಕಾಂಗ್ರೆಸ್‌ಗೆ




ಶಿರಸಿಯ ಬನವಾಸಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ವಿವೇಕ ಹೆಬ್ಬಾರ್ ಅವರನ್ನು ಕೆಪಿಸಿಸಿ ಉಪಾಧ್ಯಕ್ಷ ಐವನ್ ಡಿಸೋಜಾ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಾಯಿನಾಥ ಗಾಂವಕರ ಕಾಂಗ್ರೆಸ್ ಬಾವುಟ ನೀಡಿ ಪಕ್ಷಕ್ಕೆ ಸ್ವಾಗತಿಸಿದರು

ಶಿರಸಿ (ಉತ್ತರ ಕನ್ನಡ ಜಿಲ್ಲೆ): ಯಲ್ಲಾಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಶಿವರಾಮ ಹೆಬ್ಬಾರ್ ಪುತ್ರ ವಿವೇಕ ಹೆಬ್ಬಾರ್ ಮತ್ತು ಬೆಂಬಲಿಗರು ತಾಲ್ಲೂಕಿನ ಬನವಾಸಿಯಲ್ಲಿ ಗುರುವಾರ ಬಿಜೆಪಿ ತೊರೆದು, ಕಾಂಗ್ರೆಸ್ ಸೇರಿದರು.

ಕೆಪಿಸಿಸಿ, ಬನವಾಸಿ ಬ್ಲಾಕ್ ಆಶ್ರಯದಲ್ಲಿ ನಡೆದ ಕಾರ್ಯಕರ್ತರ ಸಮಾವೇಶದಲ್ಲಿ ವಿವೇಕ ಹೆಬ್ಬಾರ್ ಮತ್ತು ಬೆಂಬಲಿಗರಿಗೆ ಕೆಪಿಸಿಸಿ ಉಪಾಧ್ಯಕ್ಷ ಐವನ್ ಡಿಸೋಜಾ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಾಯಿನಾಥ ಗಾಂವಕರ ಅವರು ಕಾಂಗ್ರೆಸ್ ಶಾಲು ಹಾಕಿ, ಬಾವುಟ ನೀಡಿ ಪಕ್ಷಕ್ಕೆ ಸ್ವಾಗತಿಸಿದರು. ಈ ಸಂದರ್ಭದಲ್ಲಿ ವಿವೇಕ ಹೆಬ್ಬಾರ್ ಮಾತನಾಡಿ, 'ಬಿಜೆಪಿಯಲ್ಲಿ ಉಸಿರುಗಟ್ಟುವ ಸ್ಥಿತಿಯಿದ್ದ ಕಾರಣ ಕಾಂಗ್ರೆಸ್ ಸೇರಿದೆ. ಮತ್ತೆ ಮಾತೃಪಕ್ಷಕ್ಕೆ ಬಂದಿದ್ದು ಖುಷಿ ತಂದಿದೆ' ಎಂದರು. ವಿವಿಧ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಬಿಜೆಪಿಯ ನೂರಾರು ಕಾರ್ಯಕರ್ತರು ಕಾಂಗ್ರೆಸ್ ಸೇರಿದರು.

ಕಾಗೇರಿ ಪರ ಪ್ರಚಾರಕ್ಕೆ ಬಾರದ ಹೆಗಡೆ, ಹೆಬ್ಬಾರ್

● ಗಣಪತಿ ಹೆಗಡೆ



ಪುತ್ರ ಕಾಂಗ್ರೆಸ್ ಸೇರಿದ್ದರ ಬಗ್ಗೆ ಏನನ್ನೂ ಹೇಳಲ್ಲ. ನಾನು ಬಿಜೆಪಿ ಶಾಸಕ. ಆದರೆ, ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಪರ ಕೆಲಸ ಮಾಡುವ ಬಗ್ಗೆ ಇನ್ನೂ ನಿರ್ಣಯಿಸಿಲ್ಲ

ಶಿವರಾಮ ಹೆಬ್ಬಾರ್, ಶಾಸಕ, ಯಲ್ಲಾಪುರ



ಹೆಬ್ಬಾರ್, ಅನಂತಕುಮಾರ ಹೆಗಡೆ ಜತೆ ಪಕ್ಷದ ಹಲವು ಮುಖಂಡರು ಮಾತನಾಡಿದ್ದಾರೆ. ಇಬ್ಬರೂ ಪ್ರಚಾರಕ್ಕೆ ಬರುವರು ಎಂಬ ವಿಶ್ವಾಸ ನನಗಿದೆ

ವಿಶ್ವೇಶ್ವರ ಹೆಗಡೆ ಕಾಗೇರಿ, ಬಿಜೆಪಿ ಅಭ್ಯರ್ಥಿ, ಉತ್ತರಕನ್ನಡ ಲೋಕಸಭಾ ಕ್ಷೇತ್ರ



ಅನಂತಕುಮಾರ ಹೆಗಡೆ

ಕಾರವಾರ: ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಪರ ಪ್ರಚಾರ ಕಾರ್ಯದಿಂದ ಯಲ್ಲಾಪುರದ ಬಿಜೆಪಿ ಶಾಸಕ ಶಿವರಾಮ ಹೆಬ್ಬಾರ್ ಮತ್ತು ಹಾಲಿ ಬಿಜೆಪಿ ಸಂಸದ ಅನಂತಕುಮಾರ ಹೆಗಡೆ ದೂರ ಉಳಿದಿದ್ದಾರೆ. ಇವರಿಬ್ಬರ ಧೋರಣೆ ಕ್ಷೇತ್ರದಲ್ಲಿ ಚರ್ಚೆಗೆ ಕಾರಣವಾಗಿದೆ.

ವಿಶ್ವೇಶ್ವರ ಹೆಗಡೆ ಕಾಗೇರಿ ವಿರುದ್ಧ ಶಿವರಾಮ ಹೆಬ್ಬಾರ್ ಮತ್ತು ಅನಂತಕುಮಾರ ಹೆಗಡೆ ಅವರ ಶೀತಲಸಮರ ಮೊದಲಿನಿಂದ ಇದೆ. ಹಿಂದಿನ ಏಳು ಅವಧಿಯಿಂದಲೂ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಅನಂತಕುಮಾರ ಹೆಗಡೆ ಟಿಕೆಟ್ ಕೈತಪ್ಪಿದ ಬೇಸರದಿಂದ ಕ್ಷೇತ್ರದಿಂದ ದೂರ ಉಳಿದಿದ್ದಾರೆ.

ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗುವ ವದಂತಿ ಬಗ್ಗೆ ಸ್ವತಃ ಶಿವರಾಮ ಹೆಬ್ಬಾರ್ ಅಲ್ಲಗಳೆದಿದ್ದರು. ಆದರೆ, ಅವರ ಪುತ್ರ ವಿವೇಕ ಹೆಬ್ಬಾರ್ ಕಾಂಗ್ರೆಸ್ ಸೇರಿದ್ದು, ಅವರ ನಡೆ ಇನ್ನಷ್ಟು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ. ಅವರು ಪ್ರಚಾರ ಕಾರ್ಯಕ್ಕೆ ಬಾರದಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ನಡೆದಿದೆ.

'ಬಿಜೆಪಿಯ ಚಟುವಟಿಕೆಗಳಿಂದ ಅಂತರ ಕಾಯ್ದುಕೊಂಡಿರುವ ಶಿವರಾಮ ಹೆಬ್ಬಾರ್ ಅವರು ಚುನಾವಣಾ ಪ್ರಚಾರಕ್ಕೆ ಬಾರದೇ ತಟಸ್ಥರಾಗುವ ಸಾಧ್ಯತೆ ಇದೆ. ಆದರೆ, ತಮ್ಮ ಪುತ್ರನ ನೇತೃತ್ವದಲ್ಲಿ ಬೆಂಬಲಿಗರನ್ನು ಕಾಂಗ್ರೆಸ್ ಸೇರಲು ಮತ್ತು ಆ ಪಕ್ಷದ ಪರ ಕೆಲಸ ಮಾಡಲು ಬಿಟ್ಟಿದ್ದು ಸರಿಯಲ್ಲ' ಎಂದು ಬಿಜೆಪಿ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಅಭ್ಯರ್ಥಿ ಬದಲಿಸುವ ಪಕ್ಷದ ನಿರ್ಣಯಕ್ಕೆ ಅನಂತಕುಮಾರ ಹೆಗಡೆಯವರ ತಕರಾರು ಇರಲಿಲ್ಲ. ಆದರೆ ತಮ್ಮ ರಾಜಕೀಯ ವಿರೋಧಿಯಾದ ಕಾಗೇರಿಗೆ ಟಿಕೆಟ್ ನೀಡಿದ್ದು ಅವರ ಅಸಮಾಧಾನಕ್ಕೆ ಕಾರಣವಾಗಿರಬಹುದು. ಹೀಗಾಗಿ ಅವರು ಪ್ರಚಾರದಿಂದ ದೂರವಿದ್ದಾರೆ' ಎಂದು ಅನಂತಕುಮಾರ ಆಪ್ತರೊಬ್ಬರು ತಿಳಿಸಿದರು.

'ನನ್ನನ್ನೇಕೆ ಇನ್ನೂ ಉಚ್ಚಾಟಿಸಿಲ್ಲ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಬಿಜೆಪಿ ವರಿಷ್ಠರೊಂದಿಗೆ ಮಾತುಕತೆ ಮಾಡುವ ಕಾಲ ಮುಗಿದಿದೆ. ಇನ್ನು ಯಾರ ಜೊತೆಗೂ ಮಾತಾಡುವುದಿಲ್ಲ' ಎಂದು ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, 'ನನ್ನನ್ನು ಪಕ್ಷದಿಂದ ಇನ್ನೂ ಯಾಕೆ ಉಚ್ಚಾಟಿಸಿಲ್ಲ' ಎಂದು ಪ್ರಶ್ನಿಸಿದರು.

'ನನ್ನನ್ನು ಪಕ್ಷದಿಂದ ಉಚ್ಚಾಟಿಸಿದರಷ್ಟೇ ಇನ್ನಷ್ಟು ಕಟುವಾಗಿ ಮಾತಾಡಲು ಸಾಧ್ಯ' ಎಂದು ಅವರು ಹೇಳಿದರು.

'ನಾನು ಸ್ಪರ್ಧೆಯಿಂದ ಹಿಂದೆ ಸರಿಯುತ್ತೇನೆ ಎಂದು ಕೆಲವರು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಇದು ಬೆಂಬಲಿಗರಲ್ಲಿ ಗೊಂದಲ ಮೂಡಿಸುತ್ತಿದೆ. ನಾನು ಯಾವುದೇ ಕಾರಣಕ್ಕೂ ಸ್ಪರ್ಧೆಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ' ಎಂದರು.

'ಈಶ್ವರಪ್ಪ ಸ್ಪರ್ಧೆ ಅನುಮಾನ'



ಕಿಮ್ಮನೆ ರತ್ನಾಕರ

'ಲೋಕಸಭೆ ಚುನಾವಣೆಯಲ್ಲಿ ಕೆ.ಎಸ್. ಈಶ್ವರಪ್ಪ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಬಗ್ಗೆ ನಮಗೆ ಈಗಲೂ ಅನುಮಾನವಿದೆ. ಮತದಾನದ ಮುನ್ನಾ ದಿನವಾದ ಮೇ 6ರ ತನಕ ಈಶ್ವರಪ್ಪ ವಿಚಾರದಲ್ಲಿ ನಾವು (ಕಾಂಗ್ರೆಸ್) ಏನೂ ಮಾತನಾಡುವುದಿಲ್ಲ' ಎಂದು ಮಾಜಿ ಸಚಿವ ಕಿಮ್ಮನೆ ರತ್ನಾಕರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಶ್ವರಪ್ಪ ಅವರ ಸ್ಪರ್ಧೆಯಿಂದ ಕಾಂಗ್ರೆಸ್‌ಗೆ ಯಾವುದೇ ಲಾಭವಿಲ್ಲ, ನಷ್ಟವೂ ಇಲ್ಲ. ಎದುರಾಳಿ ಮತಗಳು ವಿಭಜನೆ ಆದರೆ ನಮಗೆ ಲಾಭವೇ. ಹಾಗೆಂದು ನಾವು ಅವರ ಸ್ಪರ್ಧೆಯನ್ನು ನಂಬಿ ಕುಳಿತಿಲ್ಲ. ಬದಲಿಗೆ ಗ್ಯಾರಂಟಿ ಯೋಜನೆಗಳನ್ನು ನಂಬಿ ಸ್ಪರ್ಧಿಸುತ್ತಿದ್ದೇವೆ' ಎಂದು ತಿಳಿಸಿದರು.

'ಬಿ.ವೈ. ರಾಘವೇಂದ್ರ ಹಾಗೂ ಈಶ್ವರಪ್ಪ ಇಬ್ಬರೂ ಹಿಂದುತ್ವದ ಬಗ್ಗೆ ಹೇಳುತ್ತಿದ್ದಾರೆ. ಈಶ್ವರಪ್ಪ ಚುನಾವಣೆಗೆ ನಾಮಪತ್ರ ಸಲ್ಲಿಸಿ, ಕೊನೆಯ ಗಳಿಗೆಯಲ್ಲಿ ತಟಸ್ಥವಾಗಿ ಉಳಿದು ಬಿಜೆಪಿ ಅಭ್ಯರ್ಥಿಗೆ ಬೆಂಬಲ ನೀಡಲಿದ್ದಾರೆ ಎಂಬ ಅನುಮಾನವಿದೆ' ಎಂದರು.

ಪ್ರೀತಂ ಗೌಡ ಗೈರು



ಮೈಸೂರು: ಏಪ್ರಿಲ್ 14ರಂದು ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿರುವ ಕಾರ್ಯಕ್ರಮದ ವೇದಿಕೆ ನಿರ್ಮಾಣದ ಭೂಮಿಪೂಜೆ ಗುರುವಾರ ನಡೆದ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಗೈರಾಗಿದ್ದರು. ಪಕ್ಷದ ಕಚೇರಿಯಲ್ಲಿ ಅವರ ನೇತೃತ್ವದಲ್ಲೇ ಮಧ್ಯಾಹ್ನ 12 ಗಂಟೆಗೆ ನಿಗದಿಯಾಗಿದ್ದ ಸುದ್ದಿಗೋಷ್ಠಿಯನ್ನೂ ಕಡೆ ಕ್ಷಣದಲ್ಲಿ ರದ್ದುಗೊಳಿಸಲಾಯಿತು. ಸಂಜೆ ಅಲ್ಲಿಯೇ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೊಂದಿಗೆ ಸುದ್ದಿಗೋಷ್ಠಿಯಲ್ಲಿ ಪ್ರೀತಂಗೌಡ ಪಾಲ್ಗೊಳ್ಳಲಿದ್ದಾರೆ ಎಂದು ಪಕ್ಷದ ವಕ್ತಾರರು ತಿಳಿಸಿದ್ದರು. ಆದರೆ ಅಲ್ಲಿಗೂ ಪ್ರೀತಂಗೌಡ ಬರಲಿಲ್ಲ. ಬದಲಿಗೆ, ಅವರು ಎಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಪ್ರಚಾರದಲ್ಲಿ ಪಾಲ್ಗೊಂಡಿದ್ದರು.

ಕುಕ್ಕರ್, ಸೀರೆ ಹಂಚುವಾಗ ಎಲ್ಲಿ ಹೋಗಿದ್ದರು?

'ನಾವೇನೂ ಪಾರ್ಟಿ ಮಾಡುತ್ತಿರಲಿಲ್ಲ'

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಕಾಂಗ್ರೆಸ್ ಪಕ್ಷದವರು ಮತದಾರರಿಗೆ ಕುಕ್ಕರ್, ಸೀರೆ, ಗಿಫ್ಟ್ ಕಾರ್ಡ್ ಹಂಚುವಾಗ ಕಾಣದ ಚುನಾವಣಾ ಅಧಿಕಾರಿಗಳು ಯುಗಾದಿ ಹಬ್ಬದೂಟ ತಡೆಯಲು ಓಡೋಡಿ ಬಂದರು. ನಾವೇನೂ ಅಲ್ಲಿ ಪಾರ್ಟಿ ಮಾಡುತ್ತಿರಲಿಲ್ಲ...

ಕೇತಗಾನಹಳ್ಳಿ ತೋಟದ ಮನೆಯಲ್ಲಿ ಬುಧವಾರ ಊಟಕ್ಕೆ ತಡೆಯೊಡ್ಡಿದ ಚುನಾವಣಾ ಅಧಿಕಾರಿಗಳ ಕಾರ್ಯವೈಖರಿ ವಿರುದ್ಧ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದ ಬಗೆ ಇದು.

ತಾಲ್ಲೂಕಿನ ಮತ್ತಿಕೆರೆ ಶೆಟ್ಟಿಹಳ್ಳಿಯಲ್ಲಿ ಮೈತ್ರಿಕೂಟದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಪರವಾಗಿ ಗುರುವಾರ ಪ್ರಚಾರ ನಡೆಸುವಾಗ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಹೊಸ ತೊಡಕು ಹಿನ್ನೆಲೆಯಲ್ಲಿ ತೋಟದ ಮನೆಯ ಕೆಲಸಗಾರರಿಗೆ ಊಟದ ವ್ಯವಸ್ಥೆ ಮಾಡಿದ್ದೆವು. ಕೆಲ ಮುಖಂಡರು ಸಹ ಊಟಕ್ಕೆ ಬರುವುದಾಗಿ ಹೇಳಿದ್ದರು. ನಾವೇನೂ ಅಲ್ಲಿ ಪಾರ್ಟಿ ಮಾಡುತ್ತಿರಲಿಲ್ಲ. ಇಲ್ಲವೇ ಸಾರ್ವಜನಿಕ ಸಮಾರಂಭ ಏರ್ಪಾಡು ಮಾಡಿರಲಿಲ್ಲ. ಎಲ್ಲರೂ ಊಟಕ್ಕೆ ಸೇರಲು ತೀರ್ಮಾನಿಸಿದ್ವಿ' ಎಂದರು.

'ಚುನಾವಣೆಯಲ್ಲಿ ಸೋಲುವ ಆತಂಕದಲ್ಲಿರುವ ಕಾಂಗ್ರೆಸ್‌ನವರು ದೂರು ನೀಡಿದ ತಕ್ಷಣ ಅಧಿಕಾರಿಗಳು ನಮ್ಮ ತೋಟದ ಮನೆಗೆ ಬಂದು ಪರಿಶೀಲನೆ ಮಾಡಿದರು. ಅದೇ ಕುಕ್ಕರ್ ಮತ್ತು ಸೀರೆ ಹಂಚಿದವರ ವಿರುದ್ಧ ಚುನಾವಣಾ ಆಯೋಗ ಇದುವರೆಗೆ ಯಾಕೆ ಕ್ರಮ ಕೈಗೊಂಡಿಲ್ಲ' ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ನವರು ನೀಡಿದ ದೂರಿನ ಮೇರೆಗೆ ಹಬ್ಬದೂಟ ತಡೆಯೊಡ್ಡಿರುವ ಚುನಾವಣಾ ಅಧಿಕಾರಿಗಳು, ರಾಜ್ಯ ಸರ್ಕಾರದ ಕೈಗೊಂಬೆಗಳಾಗಿರುವುದು ಸ್ಪಷ್ಟ. ರಾಮನಗರದಲ್ಲಿ ಮತದಾರರಿಗೆ ಹಂಚಲು ಸಂಗ್ರಹಿಸಿಟ್ಟಿದ್ದ ಸೀರೆ ಮತ್ತು ಡ್ರೆಸ್ ಪೀಸ್ ಅನ್ನು ಸಹ ಮೈತ್ರಿ ಪಕ್ಷದ ಕಾರ್ಯಕರ್ತರೇ ಪತ್ತೆ ಹಚ್ಚಿ ಹಿಡಿದುಕೊಟ್ಟರು. ಅಧಿಕಾರಿಗಳ ಕಾರ್ಯವೈಖರಿ ಹೇಗಿದೆ ಎಂಬುದು ಇದರಲ್ಲೇ ಗೊತ್ತಾಗುತ್ತದೆ ಎಂದರು.

'ಎಲ್ಲೆಡೆ ಹೊಸ ಹುರುಪು'



ನಿಖಿಲ್ ಕುಮಾರಸ್ವಾಮಿ

'ಪ್ರಚಾರಕ್ಕೆ ಹೋದ ಕಡೆಯಲ್ಲೆಲ್ಲಾ ಜನ ಹೊಸ ಹುರುಪಿನೊಂದಿಗೆ ಭಾಗವಹಿಸುತ್ತಿದ್ದಾರೆ. ಡಾ. ಮಂಜುನಾಥ್ ಅವರು ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ಹಾಗೂ ಸೇವೆಯನ್ನು ಜನರೇ ನೆನಪಿಸಿಕೊಳ್ಳುತ್ತಿದ್ದಾರೆ. ನಿಮಗೇ ಮತ ಹಾಕುವುದಾಗಿ ಭರವಸೆ ನೀಡುತ್ತಿದ್ದಾರೆ. ಜನರ ಪ್ರತಿಕ್ರಿಯೆ ನೋಡಿದಾಗ ಮಂಜುನಾಥ್ ಅವರ ಗೆಲುವು ಖಚಿತ. ಅವರಿಂದ ಕ್ಷೇತ್ರಕ್ಕೆ ಒಳ್ಳೆಯದಾಗಲಿದೆ' ಎಂದು ನಿಖಿಲ್ ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು. 'ತಂದೆ ಎಚ್.ಡಿ. ಕುಮಾರಸ್ವಾಮಿ ಅವರು ಸ್ಪರ್ಧಿಸಿರುವ ಮಂಡ್ಯ ಕ್ಷೇತ್ರದ 7 ವಿಧಾನಸಭಾ ಕ್ಷೇತ್ರಗಳಿಗೂ ಒಂದೊಂದು ದಿನವನ್ನು ಪ್ರಚಾರಕ್ಕೆ ಮೀಸಲಿಟ್ಟಿದ್ದೇನೆ. ಅಲ್ಲಿ ಪಕ್ಷದ ಕಾರ್ಯಕರ್ತರು ಬಲಿಷ್ಠವಾಗಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು 28 ಕ್ಷೇತ್ರಗಳಲ್ಲೂ ಪ್ರಚಾರ ಮಾಡುವ ಹುಮ್ಮಸ್ಸು ತೋರುತ್ತಿದ್ದಾರೆ. ಶೀಘ್ರದಲ್ಲೇ ಎಲ್ಲಾ ಕಡೆ ಸಂಚಾರ ಮಾಡಲಿದ್ದಾರೆ' ಎಂದರು.

'ಈಗಾಗಲೇ ಗೆದ್ದಿರುವೆ ಎನಿಸುತ್ತಿದೆ'

'ಬೆಳಿಗ್ಗೆಯಿಂದ ರಾತ್ರಿವರೆಗೂ ಚನ್ನಪಟ್ಟಣದಲ್ಲಿ ಪ್ರಚಾರ ಹಮ್ಮಿಕೊಂಡಿದ್ದು, 20ಕ್ಕೂ ಹೆಚ್ಚು ಗ್ರಾಮಗಳಲ್ಲಿ ಪ್ರಚಾರ ಮಾಡಿದ್ದೇನೆ. ಜನರಿಂದ ಸಿಗುತ್ತಿರುವ ಸ್ಪಂದನೆ ನೋಡಿದರೆ ನಾನು ಈಗಾಗಲೇ ಗೆದ್ದಿದ್ದೇನೆ ಎನಿಸುತ್ತಿದೆ. ಬಿಜೆಪಿ-ಜೆಡಿಎಸ್ ಎರಡೂ ಪಕ್ಷಗಳ ಕಾರ್ಯಕರ್ತರು ಅತ್ಯಂತ ಉತ್ಸಾಹದಿಂದ ಪ್ರಚಾರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ನನ್ನ ವೈದ್ಯಕೀಯ ಸೇವೆ ಬಗ್ಗೆ ಜನರೇ ಮಾತನಾಡುತ್ತಿದ್ದಾರೆ. ಗೆಲುವಿಗೆ ಇದಕ್ಕಿಂತ ಇನ್ನೇನು ಬೇಕು' ಎಂದು ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಜೊತೆಗಿದ್ದರು.

ಗ್ಯಾರಂಟಿ ಕಾರ್ಡ್ ಹಂಚಿಕೆ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರಿಗೆ ಆಮಿಷ ಒಡ್ಡಲು ಕಾಂಗ್ರೆಸ್ ಪಕ್ಷ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್‌ಗಾಂಧಿ ಅವರ ಮುದ್ರಿತ ಸಹಿ ಇರುವ ಗ್ಯಾರಂಟಿ ಕಾರ್ಡ್ ಹಂಚಲು ಮುಂದಾಗಿದೆ. ಇದನ್ನು ತಡೆಯಬೇಕು ಎಂದು ಚುನಾವಣಾ ಆಯೋಗಕ್ಕೆ ಬಿಜೆಪಿ ಮನವಿ ಮಾಡಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಒಕ್ಕಲಿಗ ಮತದಾರರ ವಿರುದ್ಧ ಸುಳ್ಳು, ಅಸಮರ್ಪಕ ಹೇಳಿಕೆಗಳನ್ನು ನೀಡಿದ್ದಾರೆ, ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಬಿಜೆಪಿ-ಜೆಡಿಎಸ್ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿರುವ ಸಂಬಂಧ ದೂರುಗಳನ್ನು ನೀಡಲಾಗಿದೆ. ಗ್ರಾಮಾಂತರ ಕ್ಷೇತ್ರದಲ್ಲಿ ಕಾನೂನು-ಸುವ್ಯವಸ್ಥೆ ಕಾಪಾಡುವಂತೆ ನಿರ್ದೇಶನ ನೀಡಬೇಕು ಎಂದು ಬಿಜೆಪಿ ಮನವಿ ಮಾಡಿದೆ.

ಎಡರಂಗ: ಪಾತಾಳಕ್ಕೆ ಕುಸಿದ ಸಂಸದ ಬಲ

ಚುನಾವಣೆಯಿಂದ ಚುನಾವಣೆಗೆ ಕಡಿಮೆಯಾಗುತ್ತಲೇ ಇದೆ ಮತ ಪ್ರಮಾಣ

• ಶಮಿನ್ ಜಾಯ್

ನವದೆಹಲಿ: 2004ರಲ್ಲಿ 59 ಸಂಸದರನ್ನು ಹೊಂದುವ ಮೂಲಕ ಸರ್ಕಾರವನ್ನೇ ನಿಯಂತ್ರಿಸುವ ಸ್ಥಿತಿಯಲ್ಲಿದ್ದ ಎಡ ಪಕ್ಷಗಳು ನಂತರದ 15 ವರ್ಷಗಳಲ್ಲಿ ಕೇವಲ 5 ಸ್ಥಾನಗಳಿಗೆ ಕುಸಿದಿದ್ದವು. ಮತ್ತೊಂದು ಚುನಾವಣೆ ಸನಿಹದಲ್ಲಿರುವಾಗ ಮೈತ್ರಿಕೂಟಗಳನ್ನು ಬದಲಿಸುವ ಮೂಲಕ ಮತ್ತು ಸ್ಥಾನ ಹೊಂದಾಣಿಕೆಯ ಮೂಲಕ ಅವು ಮರುಜೀವ ಪಡೆಯಲು ಯತ್ನಿಸುತ್ತಿವೆ.

ಕೊಂಚ ಮಟ್ಟಿಗಿನ ಅಸ್ತಿತ್ವ ಇರುವ ರಾಜ್ಯಗಳಲ್ಲಿ ಪಕ್ಷದ ಕಾರ್ಯಕರ್ತರನ್ನು ಹುರಿದುಂಬಿಸಲು ತಮ್ಮದೇ 'ಇಂಡಿಯಾ' ಮೈತ್ರಿಕೂಟದ ಮಿತ್ರಪಕ್ಷಗಳ ವಿರುದ್ಧ ಕೆಲವು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರೂ, ಎಡ ಪಕ್ಷಗಳು ಮುಖ್ಯವಾಗಿ ಗೆಲ್ಲುವ ಸಾಧ್ಯತೆ ಇರುವ ಕ್ಷೇತ್ರಗಳ ಮೇಲೆ ಗಮನ ನೆಟ್ಟಿವೆ.

ಎಡ ರಂಗದ ಪ್ರಮುಖ ಕೊಂಡಿಯಾದ ಸಿಪಿಎಂ ತಮಿಳುನಾಡಿನಲ್ಲಿ ಡಿಎಂಕೆಯಿಂದ ಎರಡು ಸ್ಥಾನಗಳನ್ನು, ರಾಜಸ್ಥಾನ, ತ್ರಿಪುರಾ ಮತ್ತು ಬಿಹಾರಗಳಲ್ಲಿ ಕಾಂಗ್ರೆಸ್‌ನಿಂದ ತಲಾ ಒಂದು ಸ್ಥಾನವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದು, ಆಂಧ್ರಪ್ರದೇಶದಲ್ಲಿಯೂ ಹೊಂದಾಣಿಕೆ ಕುದುರುವ ಭರವಸೆ ಹೊಂದಿದೆ.

ಇದೇ ರೀತಿ ಸಿಪಿಐ ಕೂಡ ತಮಿಳುನಾಡಿನಲ್ಲಿ ಎರಡು, ಬಿಹಾರದಲ್ಲಿ ಒಂದು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದ್ದು, ಕೆಲವು ರಾಜ್ಯಗಳಲ್ಲಿ ತಮ್ಮ ಮಿತ್ರಪಕ್ಷಗಳ ವಿರುದ್ಧವೇ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

2019ರ ಚುನಾವಣೆಯಲ್ಲಿ ಕೇರಳದ 20 ಕ್ಷೇತ್ರಗಳ ಪೈಕಿ ಒಂದನ್ನು ಮಾತ್ರ ಗೆದ್ದಿದ್ದ ಎಡ ಪಕ್ಷಗಳು, ಆ ರಾಜ್ಯದ ಬಗ್ಗೆ ಹೆಚ್ಚು ಭರವಸೆ ಹೊಂದಿದ್ದು, ತಮಿಳುನಾಡಿನ ನಾಲ್ಕು ಸ್ಥಾನಗಳನ್ನು ಉಳಿಸಿಕೊಳ್ಳುವ ಆಶಾಭಾವದಿಂದಿವೆ. ಕೇರಳದಲ್ಲಿ ಸಿಪಿಎಂ ವಿರುದ್ಧ ಸ್ಪರ್ಧಿಸಿ ಒಂದು ಸ್ಥಾನ ಗೆದಿದ್ದ ಆರ್‌ಎಸ್‌ಪಿ ಕೂಡ ರಾಷ್ಟ್ರೀಯ ಮಟ್ಟದಲ್ಲಿ ಎಡ ವರ್ಗಕ್ಕೆ ಸೇರಿಸಬಹುದಾದ ಪಕ್ಷವಾಗಿದೆ.

ರಾಜಸ್ಥಾನ ಮತ್ತು ಬಿಹಾರದಲ್ಲಿ ಪ್ರಬಲ ಮಿತ್ರಪಕ್ಷಗಳನ್ನು ಹೊಂದಿರುವ ಸಿಪಿಎಂ ಮತ್ತು ಸಿಪಿಐ ಈ ಬಾರಿ ಹೆಚ್ಚು ಕ್ಷೇತ್ರ ಗೆಲ್ಲುವ ಭರವಸೆಯಿಂದಿವೆ. ಬಿಹಾರದಲ್ಲಿ ಸಿಪಿಐ (ಎಂಎಲ್) ಎಲ್ ಮತಪ್ರಮಾಣ ಶೇ 0.33ರಿಂದ ಶೇ 0.22ಕ್ಕೆ ಕುಸಿದಿದ್ದರೂ ಮಹಾಘಟಬಂಧನ್‌ನಲ್ಲಿ ಮೂರು ಸ್ಥಾನಗಳನ್ನು ಪಡೆದಿದೆ.

ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಸಂಸತ್‌ನಲ್ಲಿ ಎಡ ಪಕ್ಷಗಳ ಸ್ಥಾನಗಳು ಹೆಚ್ಚಬೇಕಾದ ಅಗತ್ಯದ ಬಗ್ಗೆ ವಿವರಿಸುತ್ತಾ, 'ಎಡ ಪಕ್ಷಗಳು, ಮುಖ್ಯವಾಗಿ ಸಿಪಿಎಂನ, ಪ್ರಬಲ ಅಸ್ತಿತ್ವವು ಪರ್ಯಾಯ ಜಾತ್ಯತೀತ ಸರ್ಕಾರದ ಜನಪರ ನೀತಿ–ನಿಯಮಗಳ ಅಳವಡಿಕೆಯ ಖಾತರಿಗೆ ಅತ್ಯಗತ್ಯವಾಗಿದೆ' ಎಂದು ಹೇಳಿದ್ದಾರೆ.

ಸಂಸತ್‌ನಲ್ಲಿ ಎಡ ಪಕ್ಷಗಳ ಬಲ ಕಡಿಮೆ ಇದ್ದರೂ ವಿರೋಧ ಪಕ್ಷಗಳ ಕಾರ್ಯಸೂಚಿಯ ನೇತೃತ್ವ ವಹಿಸುವುದರಲ್ಲಿ ಅವುಗಳ ಪಾತ್ರ ಹಿರಿದಾಗಿರುತ್ತದೆ. ಅದು ಹಲವು ಬಾರಿ 'ಇಂಡಿಯಾ' ಕೂಟದಲ್ಲಿ ಮನಸ್ತಾಪಗಳಿಗೂ ಕಾರಣವಾಗಿದ್ದಿದೆ.



ಸೀತಾರಾಮ್ ಯೆಚೂರಿ

2004ರಲ್ಲಿ, ತನ್ನ ಅತ್ಯುತ್ತಮ ಸ್ಥಿತಿಯಲ್ಲಿ, ಸಿಪಿಎಂ 69 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 45ರಲ್ಲಿ ಗೆದ್ದು, ಶೇ 5.66 ಮತ ಪ್ರಮಾಣ ಪಡೆದಿತ್ತು. ಆದರೆ, 2019ರ ಹೊತ್ತಿಗೆ ಅದು ಮೂರು ಸ್ಥಾನಗಳಲ್ಲಿ ಮಾತ್ರ ಗೆಲ್ಲುವ ಮೂಲಕ ಶೇ 1.77 ಮತಪ್ರಮಾಣಕ್ಕೆ ಕುಸಿದಿತ್ತು.


2009ರಲ್ಲಿ ಸಿಪಿಎಂ 93 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 16ರಲ್ಲಿ ಗೆದ್ದು ಶೇ 5.33 ಮತಪ್ರಮಾಣ ತನ್ನದಾಗಿಸಿಕೊಂಡಿತ್ತು. 2014ರಲ್ಲಿ 69 ಸ್ಥಾನಗಳಲ್ಲಿ ಸ್ಪರ್ಧಿಸಿ, 9ರಲ್ಲಿ ಮಾತ್ರ ಗೆದ್ದು ಶೇ 3.28 ಮತ ಪ್ರಮಾಣ ಪಡೆದಿತ್ತು. ಹೀಗೆ ಚುನಾವಣೆಯಿಂದ ಚುನಾವಣೆಗೆ ಕುಸಿಯುತ್ತಿರುವ ಪಕ್ಷವು ಈ ಬಾರಿ 50ಕ್ಕಿಂತ ಕಡಿಮೆ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಚಿಂತನೆ ನಡೆಸಿದೆ.

ಸಿಪಿಐ ಕತೆ ಇದಕ್ಕಿಂತ ಭಿನ್ನವೇನಲ್ಲ. 2004ರಲ್ಲಿ 34 ಕ್ಷೇತ್ರಗಳಲ್ಲಿ ಸ್ಪರ್ಧಿಸಿ, ಶೇ 1.41 ಮತ ಪ್ರಮಾಣದೊಂದಿಗೆ 10 ಸ್ಥಾನ ಗೆದ್ದಿದ್ದ ಸಿಪಿಐ, 2009ರಲ್ಲಿ ಶೇ 1.43 ಮತ ಪ್ರಮಾಣದೊಂದಿಗೆ ನಾಲ್ಕು ಸ್ಥಾನಗಳನ್ನು, ಆನಂತರ 2014ರಲ್ಲಿ ಕೇವಲ ಶೇ 0.79 ಮತ ಪ್ರಮಾಣದೊಂದಿಗೆ ಒಂದು ಸ್ಥಾನ ಗೆದ್ದಿತ್ತು. 2019ರಲ್ಲಿ ಶೇ 0.59 ಮತ ಪ್ರಮಾಣದೊಂದಿಗೆ ಎರಡು ಸ್ಥಾನಗಳನ್ನು ಗೆದ್ದುಕೊಂಡಿತ್ತು.

ಸೊನ್ನೆಗೆ ಇಳಿದ ಫಾರ್ವರ್ಡ್ ಬ್ಲಾಕ್

2004 ಮತ್ತು 2009ರಲ್ಲಿ ತನ್ನ ಪ್ರತಿನಿಧಿಗಳನ್ನು ಹೊಂದಿದ್ದ ಫಾರ್ವರ್ಡ್ ಬ್ಲಾಕ್, ನಂತರದ ಎರಡು ಚುನಾವಣೆಗಳಲ್ಲಿ ಶೂನ್ಯ ಸಾಧನೆ ಮಾಡಿತು. ಅದರ ಮತ ಪ್ರಮಾಣವು ಶೇ 0.35ರಿಂದ ಶೇ 0.05ಗೆ ಕುಸಿಯಿತು. ಆರ್‌ಎಸ್‌ಪಿಯ ಮತ ಪ್ರಮಾಣವು ಶೇ 0.43ರಿಂದ ಶೇ 0.12ಕ್ಕೆ ಕುಸಿದು, ಅವುಗಳ ಪ್ರತಿನಿಧಿಗಳ ಸಂಖ್ಯೆ ಮೂರರಿಂದ ಒಂದಕ್ಕೆ ಇಳಿದಿತ್ತು.

ಪಶ್ಚಿಮ ಬಂಗಾಳದಲ್ಲಿ ಎಡ ರಂಗದ ಕುಸಿತದೊಂದಿಗೆ ಆರ್‌ಎಸ್‌ಪಿ ಮತ್ತು ಫಾರ್ವರ್ಡ್ ಬ್ಲಾಕ್ ಕೂಡ ತೀವ್ರ ಕುಸಿತಕ್ಕೊಳಗಾದವು. 2004ರಲ್ಲಿ ಪಶ್ಚಿಮ ಬಂಗಾಳದಿಂದ 26 ಸಿಪಿಎಂ ಸಂಸದರು ಲೋಕಸಭೆ ಪ್ರವೇಶಿಸಿದರೆ, 2009ರಲ್ಲಿ ಅವರ ಸಂಖ್ಯೆ 16ಕ್ಕೆ ಕುಸಿದಿತ್ತು. ಕಳೆದ ಬಾರಿಯಂತೂ ಎರಡು ಸ್ಥಾನಕ್ಕೆ ಅದು ಸೀಮಿತವಾಗಿತ್ತು. 1991ರಲ್ಲಿ ಪಕ್ಷವು 21 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು.



ಚುನಾವಣಾ ಕಣದಲ್ಲಿ...

ಮಹಾರಾಷ್ಟ್ರ ಸರ್ಕಾರ ಮರಾಠರನ್ನು ವಂಚಿಸಿದೆ: ಮನೋಜ್ ಜರಾಂಗೆ

ಲಾತೂರ್ (ಪಿಟಿಐ): ಮೀಸಲಾತಿಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರವು ಮರಾಠರನ್ನು ವಂಚಿಸಿದೆ ಎಂದು ಹೋರಾಟಗಾರ ಮನೋಜ್ ಜರಾಂಗೆ ಆರೋಪಿಸಿದ್ದು, ಮೀಸಲಾತಿ ಬೇಡಿಕೆಯನ್ನು ಪ್ರಾಮಾಣಿಕವಾಗಿ ಬೆಂಬಲಿಸುವ ರಾಜಕೀಯ ನಾಯಕರನ್ನು ಮಾತ್ರ ಸಮುದಾಯವು ಬೆಂಬಲಿಸಲಿದೆ ಎಂದು ಘೋಷಿಸಿದ್ದಾರೆ.

ಲಾತೂರ್ ಜಿಲ್ಲೆಯ ಉದ್ಗೀರ್‌ನಲ್ಲಿ ಬುಧವಾರ 'ಸಕಲ ಮರಾಠ ಸಮಾಜ'ದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಮರಾಠರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಕಲ್ಪಿಸುವ ಸಂಬಂಧ ರಾಜ್ಯ ವಿಧಾನಸಭೆಯು ಅಂಗೀಕರಿಸಿರುವ ಮಸೂದೆಯು ಕಾನೂನಿನ ವ್ಯಾಪ್ತಿಯಡಿ ಮಾನ್ಯವಾಗುವುದಿಲ್ಲ' ಎಂದು ತಿಳಿಸಿದರು.

'ಈಗಲೂ ಸಮಾಜವಾದಿ ಸಿದ್ಧಾಂತದೊಂದಿಗೆ ಇದ್ದೇನೆ'



ಬಲಿಯಾ (ಪಿಟಿಐ): ತಾವು ಇನ್ನೂ ಸಮಾಜವಾದಿ ಸಿದ್ಧಾಂತದೊಂದಿಗೆ ಗುರುತಿಸಿಕೊಂಡಿರುವಾಗಿ ತಿಳಿಸಿರುವ ಮಾಜಿ ಪ್ರಧಾನಿ ಚಂದ್ರಶೇಖರ್ ಪುತ್ರ ನೀರಜ್ ಶೇಖರ್, ಸಮಾಜವಾದಿ ಪಕ್ಷವು (ಎಸ್‌ಪಿ) ರಾಮ ಮನೋಹರ ಲೋಹಿಯಾ ಅವರ ಸಿದ್ಧಾಂತದಿಂದ ದೂರ ಸರಿಯುತ್ತಿದೆ ಎಂದು ಗುರುವಾರ ವಾಗ್ದಾಳಿ ನಡೆಸಿದರು.

ನೀರಜ್ ಅವರು ಉತ್ತರ ಪ್ರದೇಶದ ಬಲಿಯಾ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ.

'ಎಸ್‌ಪಿ ತಾನು ಸಮಾಜವಾದಿ ಸಿದ್ಧಾಂತದೊಂದಿಗೆ ಗುರುತಿಸಿಕೊಂಡಿರುವುದಾಗಿ ಹೇಳಿಕೊಳ್ಳುತ್ತದೆ. ಆದರೆ, ವಾಸ್ತವವಾಗಿ ಅದನ್ನು ಕೈಬಿಟ್ಟಿದೆ. ರಾಮ ಮನೋಹರ ಲೋಹಿಯಾ ಅವರು ಜಾತಿಯ ಗಡಿಗಳನ್ನು ಮೀರುವ ಬಗ್ಗೆ ಘೋಷಣೆಗಳನ್ನು ಮೊಳಗಿಸಿದರು. ಆದರೆ, ಇಂದು ಎಸ್‌ಪಿ ಜಾತಿ ಸಮೀಕ್ಷೆಯ ಬಾವುಟ ಹಾರಿಸುತ್ತಿದೆ' ಎಂದು ಅವರು ಟೀಕಿಸಿದರು.

ಚಂದ್ರಶೇಖರ್ ಅವರ ಕುಟುಂಬದ ಸಾಂಪ್ರದಾಯಿಕ ಕ್ಷೇತ್ರ ಎಂದೇ ಹೆಸರಾದ ಬಲಿಯಾ ಕ್ಷೇತ್ರದಿಂದ 2014ರ ಲೋಕಸಭಾ ಚುನಾವಣೆಯಲ್ಲಿ ಎಸ್‌ಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನೀರಜ್, ಸೋಲು ಕಂಡಿದ್ದರು. ನಂತರದ ಚುನಾವಣೆಯಲ್ಲಿ ಎಸ್‌ಪಿ ಅವರಿಗೆ ಟಿಕೆಟ್ ನಿರಾಕರಿಸಿತ್ತು. 2019ರಲ್ಲಿ ಅವರು ಬಿಜೆಪಿ ಸೇರಿದ್ದರು.

ಪಶ್ಚಿಮ ಬಂಗಾಳ ಮುಖ್ಯಮಂತ್ರಿಯಿಂದ ಮತಬ್ಯಾಂಕ್ ರಾಜಕಾರಣ: ಬಿಜೆಪಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಈದ್ ಉಲ್ ಫಿತ್ರ್ ಸಂದರ್ಭದಲ್ಲಿ ಮತಬ್ಯಾಂಕ್ ರಾಜಕಾರಣ ಮಾಡುತ್ತಿದ್ದಾರೆ ಎಂದು ಬಿಜೆಪಿ ಗುರುವಾರ ಆರೋಪಿಸಿದೆ.

'ಎಲ್ಲಾ ಸಮುದಾಯಗಳನ್ನು ಆರ್ಥಿಕವಾಗಿ ಮೇಲೆತ್ತಲು ಮುಖ್ಯಮಂತ್ರಿ ಯಾವ ಯೋಜನೆ ರೂಪಿಸಿದ್ದಾರೆ ಎಂಬುದನ್ನು ತಿಳಿಯಲು ಜನರು ಬಯಸಿದ್ದಾರೆ. ಆದರೆ ಮಮತಾ ಅವರು ಸಮಾಜವನ್ನು ವಿಭಜನೆ ಮಾಡಲು ಪ್ರಯತ್ನಿಸುತ್ತಿದ್ದಾರೆ ' ಎಂದು ಬಿಜೆಪಿ ರಾಜ್ಯಸಭಾ ಸದಸ್ಯ ಸಮಿಕ್ ಭಟ್ಟಾಚಾರ್ಯ ಹೇಳಿದರು.

ಬಲಿಷ್ಠ ಬಿಜೆಪಿ ಸರ್ಕಾರದಿಂದ ಉಗ್ರರ ನಿರ್ಮೂಲನೆ: ಮೋದಿ



ರಿಷಿಕೇಶ್ (ಪಿಟಿಐ): ಕೇಂದ್ರದಲ್ಲಿ ಬಿಜೆಪಿ ನೇತೃತ್ವದ 'ಬಲಿಷ್ಠ' ಸರ್ಕಾರ ಇರುವುದರಿಂದ ದೇಶದ ರಕ್ಷಣಾ ಪಡೆಗಳು ಭಯೋತ್ಪಾದಕರು ಇರುವ ಸ್ಥಳಗಳಿಗೇ ನುಗ್ಗಿ ಅವರನ್ನು ನಿರ್ಮೂಲನೆ ಮಾಡುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ದೇಶದಲ್ಲಿ ದುರ್ಬಲ ಮತ್ತು ಅಸ್ಥಿರ ಸರ್ಕಾರಗಳು ಇದ್ದಾಗ ಶತ್ರುಗಳು ಅದರ ಪ್ರಯೋಜನ ಪಡೆಯುತ್ತಾರೆ ಮತ್ತು ಭಯೋತ್ಪಾದನೆ ಹರಡುತ್ತಾರೆ ಎಂದು ಅವರು ಪ್ರತಿಪಾದಿಸಿದರು.

ಚುನಾವಣಾ ರ್‍ಯಾಲಿಯನ್ನು ಉದ್ದೇಶಿಸಿ ಇಲ್ಲಿ ಮಾತನಾಡಿದ ಅವರು, 'ಸ್ಥಿರ ಸರ್ಕಾರದಿಂದ ಆಗುವ ಪ್ರಯೋಜನಗಳು ಗೊತ್ತಿರುವುದರಿಂದ ದೇಶದಾದ್ಯಂತ 'ಫಿರ್ ಏಕ್ ಬಾರ್, ಮೋದಿ ಸರ್ಕಾರ್' (ಮತ್ತೊಮ್ಮೆ ಮೋದಿ ಸರ್ಕಾರ) ಎಂಬ ಘೋಷಣೆ ಕೇಳಿಬರುತ್ತಿದೆ' ಎಂದು ಹೇಳಿದರು.

ಉತ್ತರಾಖಂಡದ ಪೂಜನೀಯ ದೇವತೆಗಳಾದ ಮಾ ಧಾರಿ ದೇವಿ ಮತ್ತು ಜ್ವಲ್ಪಾ ದೇವಿಯ ಪ್ರತಿರೂಪವಾದ 'ಶಕ್ತಿ'ಯನ್ನು ನಿರ್ಮೂಲನೆ ಮಾಡುವ ಮಾತುಗಳನ್ನಾಡುತ್ತಿರುವ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಬೇಕು

ನರೇಂದ್ರ ಮೋದಿ, ಪ್ರಧಾನಿ

'ಹಿಂದಿನ ದುರ್ಬಲ ಕಾಂಗ್ರೆಸ್ ಸರ್ಕಾರಗಳು ಗಡಿಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲಿಲ್ಲ. ಈಗ ಗಡಿಗಳಲ್ಲಿ ರಸ್ತೆ ಮತ್ತು ಸುರಂಗಗಳನ್ನು ನಿರ್ಮಿಸಲಾಗುತ್ತಿದೆ' ಎಂದು ಹೇಳಿದರು.



ಜಾಗೃತಿ

ಲೋಕಸಭಾ ಚುನಾವಣೆಗಾಗಿ ಮತದಾನದ ಬಗ್ಗೆ ಜಾಗೃತಿ ಮೂಡಿಸಲು ಬಿಕಾನೇರ್‌ನಲ್ಲಿ ಮಹಿಳಾ ಕಾನ್‌ಸ್ಟೆಬಲ್‌ಗಳು ಗುರುವಾರ 'ನುಕ್ಕಡ್ ನಾಟಕ್' ಪ್ರದರ್ಶಿಸಿದರು–ಪಿಟಿಐ ಚಿತ್ರ

'ದಕ್ಷಿಣದಲ್ಲಿ ಬಿಜೆಪಿ ಪಾರಮ್ಯ: ಸುಳ್ಳಿನ ಕಾರ್ಖಾನೆಯ ಸುದ್ದಿ'

ನವದೆಹಲಿ/ ತಿರುವನಂತಪುರ (ಪಿಟಿಐ): ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ದಕ್ಷಿಣ ಭಾರತದಲ್ಲಿ ಅತ್ಯುತ್ತಮ ಸಾಧನೆ ಮಾಡಲಿದೆ ಎಂಬುದು ಆ ಪಕ್ಷದ ಸುಳ್ಳಿನ ಕಾರ್ಖಾನೆಯಿಂದ ಬಂದಿರುವ ಸುದ್ದಿ ಎಂದು ಕಾಂಗ್ರೆಸ್ ಮುಖಂಡ ಶಶಿ ತರೂರ್ ಅವರು ಗುರುವಾರ ಹೇಳಿದರು.

'ಆಡಳಿತಾರೂಢ ಪಕ್ಷವು ಉತ್ತರ ಭಾರತದಲ್ಲಿ ಕೋಮುವಾದ, ಧಾರ್ಮಿಕ ವಿಭಜನೆಯ ಮೂಲಕ ಜನರನ್ನು ಸೆಳೆಯುತ್ತಿದೆ. ಇದನ್ನು ದಕ್ಷಿಣಕ್ಕೂ ತರಬೇಡಿ' ಎಂದು ಪಿಟಿಐ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಜಾತ್ಯತೀತತೆಯು ದೇಶದ ಡಿಎನ್‌ಎಯಲ್ಲಿಯೇ ಇದೆ ಎಂದೂ ಹೇಳಿದರು.

'ಕಚ್ಚತೀವು ವಿಚಾರದಿಂದ ಬಾಂಧವ್ಯಕ್ಕೆ ಧಕ್ಕೆ'



ನವದೆಹಲಿ(ಪಿಟಿಐ): 'ಬಿಜೆಪಿಯು ಕಚ್ಚತೀವು ದ್ವೀಪವನ್ನು ಲೋಕಸಭಾ ಚುನಾವಣೆಯ ವಿಚಾರವನ್ನಾಗಿಸಿದ್ದು, ಇದು ಭಾರತ ಮತ್ತು ಶ್ರೀಲಂಕಾ ನಡುವಿನ ಬಾಂಧವ್ಯದ ಮೇಲೆ ಪರಿಣಾಮ ಬೀರಬಹುದು ಎಂಬುದನ್ನು ಕಡೆಗಣಿಸಲಾಗಿದೆ' ಎಂದು ಕೇಂದ್ರದ ಮಾಜಿ ಸಚಿವ ಯಶವಂತ ಸಿನ್ಹಾ ಗುರುವಾರ ಆರೋಪಿಸಿದರು.

'ದೇಶದ ಪ್ರಧಾನಿಯೇ ಈ ವಿಚಾರವನ್ನು ಎತ್ತಿರುವುದು ನಿರಾಶೆ ಉಂಟುಮಾಡಿದೆ. ಕಚ್ಚತೀವು ದ್ವೀಪವು ಅಂತರರಾಷ್ಟ್ರೀಯ ಜಲಗಡಿಯಲ್ಲಿ ಶ್ರೀಲಂಕಾದ ಭಾಗದಲ್ಲಿದೆ. ಹಾಗಾಗಿಯೇ ಅದು ಆ ದೇಶದ ಪಾಲಾಗಿದೆ' ಎಂದು ಹೇಳಿದರು.

'ಈ ವಿಚಾರವನ್ನು ಮುನ್ನೆಲೆಗೆ ತಂದಿರುವುದರಿಂದ, ಎರಡೂ ದೇಶಗಳ ನಡುವಿನ ಸಂಬಂಧ ಹದಗೆಡಲಿದೆ. ನೀವು ಈ ದ್ವೀಪವನ್ನು ಮರಳಿ ಪಡೆಯಲು ಸೇನಾಪಡೆಯನ್ನು ಕಳುಹಿಸುತ್ತಿರೋ' ಎಂದೂ ಅವರು ಪ್ರಶ್ನಿಸಿದರು.

ಎಂಎನ್‌ಎಸ್ ಪದಾಧಿಕಾರಿಗಳ ರಾಜೀನಾಮೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ನವನಿರ್ಮಾಣ ಸೇನಾದ (ಎಂಎನ್‌ಎಸ್) ಹಲವು ಪದಾಧಿಕಾರಿಗಳು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಮಹಾರಾಷ್ಟ್ರದಲ್ಲಿನ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟಕ್ಕೆ ಮಂಗಳವಾರ ಬೆಂಬಲ ಘೋಷಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಎಂಎನ್‌ಎಸ್ ಪ್ರಧಾನ ಕಾರ್ಯದರ್ಶಿ ಕೀರ್ತಿಕುಮಾರ್ ಶಿಂದೆ ಅವರೂ ಪಕ್ಷ ತೊರೆದಿದ್ದಾರೆ.

ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ರಾಹುಲ್ ವಾಗ್ದಾಳಿ

'ಎಂಎಸ್‌ಪಿ ಇಲ್ಲ, ಯುವಜನರಿಗೆ ಉದ್ಯೋಗವಿಲ್ಲ'

ಜೈಪುರ (ಪಿಟಿಐ): ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಗುರುವಾರ ವಾಗ್ದಾಳಿ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ರೈತರು ತಮ್ಮ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕೇಳುತ್ತಿದ್ದಾರೆ, ಯುವಜನರು ಉದ್ಯೋಗ ಬಯಸುತ್ತಿದ್ದಾರೆ, ಮಹಿಳೆಯರು ಹಣದುಬ್ಬರದಿಂದ ನಮ್ಮನ್ನು ಕಾಪಾಡಿ ಎಂದು ಕೇಳುತ್ತಿದ್ದಾರೆ. ಆದರೆ, ಯಾರೂ ಅವರ ಕಷ್ಟ ಕೇಳುತ್ತಿಲ್ಲ ಎಂದು ಹೇಳಿದರು.

ರಾಜಸ್ಥಾನದ ಬಿಕಾನೇರ್ ಲೋಕಸಭಾ ಕ್ಷೇತ್ರದ ಅನುಪ್‌ಗಢದ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಅವರು, 'ಇದು ಹಿಂದುಳಿದವರು, ದಲಿತರು, ಆದಿವಾಸಿಗಳು ಮತ್ತು ಬಡವರು ಸಾಮಾನ್ಯ ವರ್ಗದಲ್ಲಿ ಸ್ಪರ್ಧಿಸುತ್ತಿರುವ ಚುನಾವಣೆ' ಎಂದು ಹೇಳಿದರು.

'ಇಂದು ದೇಶದ ಅತಿ ದೊಡ್ಡ ಸಮಸ್ಯೆ ಎಂದರೆ ನಿರುದ್ಯೋಗ. ನಂತರದ್ದು ಹಣದುಬ್ಬರ. ಶೇ 90ರಷ್ಟು ಮಂದಿ ಹಣದುಬ್ಬರ ಇದೆ ಎನ್ನುತ್ತಾರೆ. ಆದರೆ, ಮಾಧ್ಯಮಗಳು 24 ಗಂಟೆಯೂ ಅಂಬಾನಿ ಮಗನ ವಿವಾಹ ಕಾರ್ಯಕ್ರಮ, ಪ್ರಧಾನಿ ಮೋದಿ ಮುಖವನ್ನೇ ತೋರಿಸುತ್ತಿರುತ್ತವೆ. ಒಮ್ಮೆ ಅವರು ಸಮುದ್ರದ ಒಳಗೆ ಹೋಗುತ್ತಾರೆ. ಮತ್ತೊಮ್ಮೆ ಸಮುದ್ರದ ಮೇಲೆ ವಿಮಾನದಲ್ಲಿ ಹಾರುತ್ತಾರೆ. ಇನ್ನೊಮ್ಮೆ ತಟ್ಟೆ ಬಡಿಯುತ್ತಾರೆ. ಹಲವು ಸಲ ಅವರು ಮೊಬೈಲ್‌ನಲ್ಲಿ ಫ್ಲ್ಯಾಶ್‌ಲೈಟ್ ತೋರಿಸಿ ಎಂದು ಜನರಿಗೆ ಮನವಿ ಮಾಡುತ್ತಾರೆ' ಎಂದು ರಾಹುಲ್ ಟೀಕಿಸಿದರು.

'ಬಡವರು, ಕೋಟ್ಯಧಿಪತಿಗಳ ನಡುವಿನ ಯುದ್ಧ'

'ಪ್ರಸ್ತುತ ಲೋಕಸಭಾ ಚುನಾವಣೆಯು ದೇಶದ ಬಡವರು ಮತ್ತು 20–25 ಮಂದಿ ಕೋಟ್ಯಧಿಪತಿಗಳ ನಡುವಿನ ಯುದ್ಧ' ಎಂದು ರಾಹುಲ್ ಗಾಂಧಿ ಪ್ರತಿಪಾದಿಸಿದರು.



'ಅಲ್ಪಾವಧಿಯ ಉದ್ಯೋಗದ 'ಅಗ್ನಿಪಥ' ಯೋಜನೆ ಬೇಕಿರಲಿಲ್ಲ. ಆದರೆ, ಮೋದಿ ಅವರು ಪ್ರಧಾನಿ ಕಾರ್ಯಾಲಯದಿಂದ ಅದನ್ನು ಜಾರಿ ಮಾಡಿದರು. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ರಚನೆ ಮಾಡಿದ ನಂತರ ಯೋಜನೆಯನ್ನು ರದ್ದುಪಡಿಸಲಾಗುವುದು' ಎಂದು ಅವರು ಭರವಸೆ ನೀಡಿದರು.

ಕಾಂಗ್ರೆಸ್ ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಲಾಯಿತು. ಆದರೆ, ಆಡಳಿತಾರೂಢ ಬಿಜೆಪಿಯು ದೊಡ್ಡ ಉದ್ದಿಮೆದಾರರಿಂದ ಚುನಾವಣಾ ಬಾಂಡ್‌ಗಳ ಮೂಲಕ ಹಣ ಪಡೆಯಿತು

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

'ಮೋದಿ ಅವರು ದೇಶದ ಅತ್ಯಂತ ಶ್ರೀಮಂತ 25–30 ಮಂದಿಯ ಸಾಲ ಮನ್ನಾ ಮಾಡಿದರು. ಆ ಹಣದಿಂದ 24 ವರ್ಷ ನರೇಗಾ ಕೂಲಿ ಪಾವತಿಸಬಹುದಿತ್ತು. ಬಿಜೆಪಿ ಸರ್ಕಾರ ರೈತರ ಸಾಲ ಮನ್ನಾ ಮಾಡಲಿಲ್ಲ. ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ರೈತರು ತೆರಿಗೆ ಕಟ್ಟುತ್ತಿದ್ದಾರೆ' ಎಂದು ಟೀಕಿಸಿದರು.

'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಾಡುವ ಮೊದಲ ಕೆಲಸ ಜಾತಿ ಜನಗಣತಿ. ಹಾಗೆಯೇ ಸರ್ಕಾರಿ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಗುತ್ತಿಗೆ ಕಾರ್ಮಿಕರ ಪದ್ಧತಿಯನ್ನು ಕ್ರಮೇಣ ನಿಲ್ಲಿಸಲಾಗುವುದು. ರೈತರ ಸಾಲ ಮನ್ನಾ ಮಾಡಲಾಗುವುದು' ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಲೋಕಸಭಾ ಅಭ್ಯರ್ಥಿಗಳಾಗಿದ್ದ ಬಿಕಾನೇರ್‌ನ ಗೋವಿಂದ ರಾಮ ಮೇಘವಾಲ್ ಮತ್ತು ಗಂಗಾನಗರದ ಕುಲ್‌ದೀಪ್ ಇಂದೋರಾ ಪರವಾಗಿ ರಾಹುಲ್ ಪ್ರಚಾರ ಮಾಡಿದರು.

ಚುಟುಕು

ತೆಲಂಗಾಣ: ಲೋಕಸಭಾ ಚುನಾವಣೆಯಲ್ಲಿ ಟಿಡಿಪಿ ಸ್ಪರ್ಧೆ ಇಲ್ಲ

ಹೈದರಾಬಾದ್ (ಪಿಟಿಐ): 'ಲೋಕಸಭಾ ಚುನಾವಣೆಗೆ ತೆಲಂಗಾಣದಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸದಿರಲು ತೆಲುಗು ದೇಶಂ (ಟಿಡಿಪಿ) ಪಕ್ಷ ನಿರ್ಧರಿಸಿದೆ. ಆದರೆ, ಯಾರನ್ನು ಬೆಂಬಲಿಸಬೇಕು ಎನ್ನುವ ಬಗ್ಗೆ ಇನ್ನೂ ತೀರ್ಮಾನಿಸಿಲ್ಲ' ಎಂದು ಟಿಡಿಪಿ ವಕ್ತಾರರಾದ ಜ್ಯೋತ್ಸ್ನಾ ತಿರುನಗರಿ ಹೇಳಿದ್ದಾರೆ.

ನೆರೆಯ ಆಂಧ್ರಪ್ರದೇಶದಲ್ಲಿ ತೆಲುಗು ದೇಶಂ, ಎನ್‌ಡಿಎ ಭಾಗವಾಗಿದೆ. ಆದರೆ, ತೆಲಂಗಾಣದಲ್ಲಿ ಪಕ್ಷವು ಸ್ಪರ್ಧೆ ಮಾಡುವುದಿಲ್ಲ. ಯಾರನ್ನು ಬೆಂಬಲಿಸಬೇಕು ಎಂಬ ಬಗ್ಗೆ ಪಕ್ಷದ ಹಿರಿಯ ನಾಯಕರು ಮುಂದಿನ ದಿನಗಳಲ್ಲಿ ನಿರ್ಧರಿಸಲಿದ್ದಾರೆ. ಇದುವರೆಗೆ ಆ ಬಗ್ಗೆ ಯಾವುದೇ ಸೂಚನೆ ಬಂದಿಲ್ಲ ಎಂದು ಅವರು ತಿಳಿಸಿದ್ದಾರೆ. ಜೂನ್ ಅಥವಾ ಜುಲೈನಲ್ಲಿ ನಡೆಯಲಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷವು ಸ್ಪರ್ಧಿಸುವ ಮೂಲಕ ರಾಜ್ಯ ರಾಜಕಾರಣದಲ್ಲಿ ಹೊಸ ಅಧ್ಯಾಯ ಆರಂಭಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಜಿಗಿ–ನೆಗೆದಾಟ

ಬಿಎಸ್‌ಪಿ ಸಂಸದ ಆರ್‌ಎಲ್‌ಡಿಗೆ

ನವದೆಹಲಿ (ಪಿಟಿಐ): ಬಿಎಸ್‌ಪಿ ಮುಖಂಡ ಹಾಗೂ ಸಂಸದ ಮಲೂಕ್ ನಗರ್ ಅವರು ಜಯಂತ್ ಚೌಧರಿ ನೇತೃತ್ವದ ರಾಷ್ಟ್ರೀಯ ಲೋಕ ದಳಕ್ಕೆ (ಆರ್‌ಎಲ್‌ಡಿ) ಗುರುವಾರ ಸೇರ್ಪಡೆಯಾದರು.

ಮಲೂಕ್ ಅವರು ಉತ್ತರ ಪ್ರದೇಶದ ಬಿಜ್ನೋರ್ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದರು. ಬಿಜ್ನೋರ್ ಪ್ರದೇಶದಲ್ಲಿ ಆರ್‌ಎಲ್‌ಡಿ ಅಭ್ಯರ್ಥಿಗಳ ಪರವಾಗಿ ಚುನಾವಣಾ ಪ್ರಚಾರ ನಡೆಸುವುದಾಗಿ ಮಲೂಕ್ ಅವರು ತಿಳಿಸಿದರು.

ಆರ್‌ಎಲ್‌ಡಿಯು ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟದ ಜೊತೆಗಿದೆ.

ಕಾಂಗ್ರೆಸ್‌ನ ಮಾಜಿ ವಕ್ತಾರ ಬಿಜೆಪಿಗೆ: ಕಾಂಗ್ರೆಸ್‌ನ ಮಾಜಿ ವಕ್ತಾರ ರೋಹನ್ ಗುಪ್ತಾ ಅವರು ಗುರುವಾರ ಬಿಜೆಪಿಗೆ ಸೇರ್ಪಡೆಗೊಂಡರು.


ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರ ಸಮ್ಮುಖದಲ್ಲಿ ರೋಹನ್ ಅವರು ಇತರ ಮುಖಂಡರ ಜತೆ ಪಕ್ಷಕ್ಕೆ ಸೇರಿದರು.

ಎಂಥಾ ಮಾತು!



ಒಂದು ಕಾಲದಲ್ಲಿ ಅಭಿವೃದ್ಧಿ ಹೊಂದುತ್ತಿದ್ದ ನಮ್ಮ ದೇಶದ ಇಂದಿನ ಪರಿಸ್ಥಿತಿಯನ್ನು ಜನರು ಗಮನಿಸುತ್ತಿದ್ದಾರೆ. ಇಂದು ಕಾನೂನು ಮತ್ತು ಸುವ್ಯವಸ್ಥೆ ಹೇಗಿದೆ? ದೇಶದ ನಿರುದ್ಯೋಗ ಮಟ್ಟ ಏನು? ನಮ್ಮ ಮಾಧ್ಯಮಗಳು ಮುಕ್ತವಾಗಿವೆಯೇ? ಆರೋಗ್ಯ ಮತ್ತು ಬಡತನ ಸೂಚ್ಯಂಕದಲ್ಲಿ ನಾವು ಎಲ್ಲಿದ್ದೇವೆ? ನಮ್ಮ ದೇಶದ ಗಡಿಗಳು ಯಾಕೆ ಕುಗ್ಗುತ್ತಿವೆ? ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಜನರು ಮತ ಹಾಕಲಿದ್ದಾರೆ ಮತ್ತು ಅವರು ಬದಲಾವಣೆ ತರಲು ಬಯಸಿದ್ದಾರೆ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ



ಹಿಂದೂ, ಮುಸ್ಲಿಂ, ಕ್ರೈಸ್ತ ಮತ್ತು ಯಹೂದಿಗಳನ್ನು ಬಿಜೆಪಿಯು ಸಮಾನವಾಗಿ ನೋಡುತ್ತಿದೆ. ಭಾರತದಲ್ಲಿ ಹುಟ್ಟಿರುವ ಎಲ್ಲರೂ ಭಾರತ ಮಾತೆಯ ಮಕ್ಕಳು ಎಂದು ನಾವು ನಂಬಿದ್ದೇವೆ. ಯಾರಿಗೂ ತಾರತಮ್ಯ ಮಾಡುವುದಿಲ್ಲ. ಬಿಜೆಪಿಯು ಮಹಿಳೆಯರಿಗೆ ಗೌರವ ನೀಡುತ್ತದೆ. ಈ ಕಾರಣಕ್ಕಾಗಿಯೇ ತ್ರಿವಳಿ ತಲಾಖ್ ಅನ್ನು ನಿಷೇಧಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆಡಳಿತದಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಪ್ರಬಲವಾಗುತ್ತಿದೆ. ಭಾರತದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರಲು ಮೋದಿ ಅವರು ಮಧ್ಯಪ್ರವೇಶಿಸಿ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧವನ್ನು ನಾಲ್ಕೂವರೆ ಗಂಟೆ ನಿಲ್ಲಿಸಿದ್ದಾರೆ

ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಕ್ಷೇತ್ರ ಮಹಾತ್ಮೆ



ಪಶ್ಚಿಮ ಬಂಗಾಳದ ಮಾಲ್ದಾ ಉತ್ತರ ಲೋಕಸಭಾ ಕ್ಷೇತ್ರವು ಈ ಬಾರಿ ತ್ರಿಕೋನ ಸ್ಪರ್ಧೆಗೆ ಸಾಕ್ಷಿಯಾಗಲಿದೆ. ಬಿಜೆಪಿ, ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಪ್ರಬಲ ಅಭ್ಯರ್ಥಿಗಳನ್ನೇ ಅಖಾಡಕ್ಕಿಳಿಸಿವೆ. ಬಿಜೆಪಿಯು ಖಗೆನ್ ಮುರ್ಮು ಅವರನ್ನು ಎರಡನೇ ಬಾರಿಯೂ ಕಣಕ್ಕಿಳಿಸಿದೆ. ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮಾಜಿ ಐಪಿಎಸ್ ಅಧಿಕಾರಿ ಪ್ರಸೂನ್ ಬ್ಯಾನರ್ಜಿ ಅವರನ್ನು ಅಭ್ಯರ್ಥಿಯನ್ನಾಗಿಸಿದರೆ, ಕಾಂಗ್ರೆಸ್ ಮುಸ್ತಾಕ್ ಆಲಂ ಅವರನ್ನು ಸ್ಪರ್ಧೆಗಿಳಿಸಿದೆ. 2019ರ ಚುನಾವಣೆಯಲ್ಲಿ ಖಗೆನ್ ಅವರು 84,288 ಮತಗಳ ಅಂತರದಿಂದ ಪ್ರತಿಸ್ಪರ್ಧಿ ಟಿಎಂಸಿಯ ಮೌಸಮ್ ನೂರ್ ಅವರನ್ನು ಪರಾಭವಗೊಳಿಸಿದ್ದರು. ಒಂದು ಕಾಲದಲ್ಲಿ ಪಕ್ಷದ ಭದ್ರಕೋಟೆಯಾಗಿದ್ದ ಈ ಕ್ಷೇತ್ರದಲ್ಲಿ ಮತ್ತೆ ಗೆಲುವಿನ ಹಳಿಗೆ ಮರಳುವ ವಿಶ್ವಾಸದಲ್ಲಿದೆ ಕಾಂಗ್ರೆಸ್. ಈ ಬಾರಿ ಆಡಳಿತಾರೂಢ ಟಿಎಂಸಿಯ ವಿರುದ್ಧ ಜನರು ತಿರುಗಿ ಬಿದ್ದಿರುವುದರಿಂದ ಪಕ್ಷದ ಅಭ್ಯರ್ಥಿ ಗೆಲ್ಲಬಹುದೆಂಬ ಲೆಕ್ಕಾಚಾರ ಬಿಜೆಪಿ ಮುಖಂಡರದ್ದಾಗಿದೆ. 2006ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದ ಪ್ರಸೂನ್ ಅವರು ಕೆಲಸದಿಂದ ನಿವೃತ್ತಿ ಪಡೆದು ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿದ್ದರು. ರಾಜಕೀಯದಲ್ಲಿ ಅನನುಭವಿಯಾದರೂ ರಾಜ್ಯದಲ್ಲಿ ತಮ್ಮ ಪಕ್ಷ ಅಧಿಕಾರದಲ್ಲಿರುವುದರಿಂದ ಇವರು ಗೆಲ್ಲುವ ವಿಶ್ವಾಸದಲ್ಲಿದ್ದಾರೆ. ಖಗೆನ್ ಅವರು ಈ ಹಿಂದೆ ಸಿಪಿಎಂನಿಂದ ಶಾಸಕರಾಗಿ ಆಯ್ಕೆಯಾಗಿದ್ದರು. 2019ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. ತೀವ್ರ ಕುತೂಹಲ ಮೂಡಿಸಿರುವ ಈ ಕ್ಷೇತ್ರದಲ್ಲಿ ಯಾರು ವಿಜಯಿಯಾಗುತ್ತಾರೆ ಎಂಬುದನ್ನು ಕಾದು ನೋಡಬೇಕು.

ಮುಖಾಮುಖಿ

ಛಿಂದವಾಢ (ಮಧ್ಯಪ್ರದೇಶ)



ನಕುಲ್‌ನಾಥ್

(ಕಾಂಗ್ರೆಸ್)

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಅವರ ಹಿಡಿತವಿರುವ ಛಿಂದವಾಢ ಲೋಕಸಭಾ ಕ್ಷೇತ್ರದಿಂದ ಈ ಬಾರಿಯೂ ಅವರ ಪುತ್ರ ನಕುಲ್‌ನಾಥ್ ಅವರನ್ನು ಕಾಂಗ್ರೆಸ್ ಸ್ಪರ್ಧೆಗಿಳಿಸಿದೆ. 1980ರಿಂದ 2014ರವರೆಗೆ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಕಮಲ್‌ನಾಥ್ ಅವರು ಸದ್ಯ ಛಿಂದವಾಢ ಕ್ಷೇತ್ರದ ಶಾಸಕರಾಗಿದ್ದಾರೆ. 2019ರ ಚುನಾವಣೆಯಲ್ಲಿ ನಕುಲ್‌ನಾಥ್ ಅವರು ಬಿಜೆಪಿಯ ನಾಥನ್ ಶಾ ಅವರನ್ನು 37,536 ಮತಗಳ ಅಂತರದಿಂದ ಪರಾಭವಗೊಳಿಸಿದ್ದರು. ಕಮಲ್‌ನಾಥ್ ಮತ್ತು ನಕುಲ್‌ನಾಥ್ ಅವರು ಬಿಜೆಪಿಗೆ ಸೇರುತ್ತಾರೆಂಬ ಊಹಾಪೋಹಗಳು ಎರಡು ತಿಂಗಳ ಹಿಂದೆ ದಟ್ಟವಾಗಿದ್ದವು. ನಕುಲ್‌ನಾಥ್ ಅವರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಿಂದ ಕಾಂಗ್ರೆಸ್ ಉಲ್ಲೇಖವನ್ನೂ ಕೈಬಿಟ್ಟಿದ್ದರು. ಬಳಿಕ ಪಕ್ಷದಲ್ಲೇ ಉಳಿಯುವುದಾಗಿ ಕಮಲ್‌ನಾಥ್ ಅವರು ಸ್ಪಷ್ಟಪಡಿಸಿದ್ದರು.

V/S



ವಿವೇಕ್ ಬಂಟಿ ಸಾಹು

(ಬಿಜೆಪಿ)

ವಿಧಾನಸಭಾ ಚುನಾವಣೆಯಲ್ಲಿ ಕಮಲ್‌ನಾಥ್ ವಿರುದ್ಧ ಎರಡು ಬಾರಿ ಸ್ಪರ್ಧಿಸಿ ಸೋತಿದ್ದ ವಿವೇಕ್ ಬಂಟಿ ಸಾಹು ಅವರನ್ನು ಬಿಜೆಪಿಯು ಛಿಂದವಾಢ ಕ್ಷೇತ್ರದಿಂದ ಅಖಾಡಕ್ಕಿಳಿಸಿದೆ. ಪಕ್ಷದ ಛಿಂದ್ವಾರಾ ಜಿಲ್ಲಾ ಘಟಕದ ಅಧ್ಯಕ್ಷರೂ ಆಗಿರುವ ವಿವೇಕ್ ಅವರು ಸ್ಥಳೀಯವಾಗಿಯೂ ಪ್ರಭಾವವಿರುವ ಮುಖಂಡರಾಗಿದ್ದಾರೆ. ಈ ಬಾರಿ ಕ್ಷೇತ್ರವನ್ನು ಕಮಲ್‌ನಾಥ್ ಅವರ ಹಿಡಿತದಿಂದ ಮುಕ್ತಗೊಳಿಸಬೇಕೆಂದು ಪಣ ತೊಟ್ಟಿರುವ ಬಿಜೆಪಿ ಮುಖಂಡರು, ವಿವೇಕ್ ಅವರ ಗೆಲುವಿಗಾಗಿ ಅವಿರತವಾಗಿ ಪ್ರಚಾರ ಮಾಡುತ್ತಿದ್ದಾರೆ. ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಸ್ ವಿಜಯವರ್ಗೀಯ ಅವರನ್ನು ಛಿಂದವಾಢದ ಉಸ್ತುವಾರಿಯನ್ನಾಗಿಯೂ ಬಿಜೆಪಿ ನೇಮಿಸಿದೆ. ಈ ಕ್ಷೇತ್ರದಲ್ಲಿ ಬಿಜೆಪಿಗೆ ಇದುವರೆಗೆ ಒಮ್ಮೆ ಮಾತ್ರ ಗೆಲ್ಲಲು ಸಾಧ್ಯವಾಗಿದೆ. ರಾಜ್ಯದಲ್ಲಿ ಬಿಜೆಪಿ ಆಡಳಿತದಲ್ಲಿರುವುದರಿಂದ ಈ ಬಾರಿ ವಿವೇಕ್ ಅವರು ಗೆದ್ದೇ ಗೆಲ್ಲುತ್ತಾರೆ ಎಂಬುದು ಬಿಜೆಪಿ ಮುಖಂಡರ ವಿಶ್ವಾಸ.

ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಜತೆ ಫಿನ್‌ಕೇರ್ ವಿಲೀನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕೇತರ ಹಣಕಾಸು ಕಂಪನಿಗಳಾದ ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಮತ್ತು ಫಿನ್‌ಕೇರ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಫಿನ್‌ಕೇರ್ ಎಸ್‌ಎಫ್‌ಬಿ) ವಿಲೀನಗೊಂಡಿವೆ.



ಮಾರ್ಚ್ 4ರಂದು ಭಾರತೀಯ ರಿಸರ್ವ್ ಬ್ಯಾಂಕ್ ಈ ವಿಲೀನಕ್ಕೆ ಒಪ್ಪಿಗೆ ನೀಡಿತ್ತು. ಏಪ್ರಿಲ್ 1ರಿಂದ ಈ ವಿಲೀನವು ಅಧಿಕೃತವಾಗಿ ಜಾರಿಗೆ ಬಂದಿದೆ ಎಂದು ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ತಿಳಿಸಿದೆ.


ಈ ವಿಲೀನವು ಎಯು ಎಸ್‌ಎಫ್‌ಬಿಯನ್ನು ದೇಶದಾದ್ಯಂತ ರಿಟೇಲ್ ಬ್ಯಾಂಕಿಂಗ್ ಫ್ರಾಂಚೈಸಿಯಾಗಿ ಅಭಿವೃದ್ಧಿಪಡಿಸಲು ನೆರವಾಗಲಿದೆ. ಬ್ಯಾಂಕ್‌ನ ವ್ಯಾಪ್ತಿಯ ವಿಸ್ತರಣೆ ಜೊತೆಗೆ ಗ್ರಾಹಕರಿಗೆ ಹೆಚ್ಚಿನ ಸೇವೆ ಒದಗಿಸಲು ಸಹಕಾರಿಯಾಗಲಿದೆ ಎಂದು ಹೇಳಿದೆ.

ಕೇವಲ ನಾಲ್ಕೂವರೆ ತಿಂಗಳಲ್ಲಿ ವಿಲೀನ ಪ್ರಕ್ರಿಯೆಯು ಪೂರ್ಣಗೊಂಡಿದೆ. ಇದರಿಂದ ಗ್ರಾಹಕರ ಸಂಖ್ಯೆಯು ಒಂದು ಕೋಟಿಗಿಂತಲೂ ಹೆಚ್ಚಳವಾಗಲಿದೆ. ಒಟ್ಟು ಸಿಬ್ಬಂದಿ ಸಂಖ್ಯೆ 43,500ಕ್ಕೆ ತಲುಪಿದೆ.

25 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬ್ಯಾಂಕ್‌ನ 2,350ಕ್ಕೂ ಹೆಚ್ಚು ಕೇಂದ್ರಗಳಿವೆ. ₹89,854 ಕೋಟಿ ಠೇವಣಿ ಹೊಂದಿದ್ದು, ಬ್ಯಾಲೆನ್ಸ್ ಶೀಟ್ ಗಾತ್ರವು ₹1.16 ಲಕ್ಷ ಕೋಟಿ ಆಗಿದೆ. ಮುಂದಿನ ದಿನಗಳಲ್ಲಿ ಗ್ರಾಹಕರಿಗೆ ಅತ್ಯುತ್ತಮ ಬ್ಯಾಂಕಿಂಗ್ ಸೇವೆ ಒದಗಿಸುವ ಗುರಿ ಹೊಂದಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

'ಎಯು ಕುಟುಂಬಕ್ಕೆ ಫಿನ್‌ಕೇರ್‌ನ ಷೇರುದಾರರು ಮತ್ತು ಉದ್ಯೋಗಿಗಳು ಸೇರ್ಪಡೆಯಾಗಿದ್ದಾರೆ. ಈ ವಿಲೀನವು ಕೇವಲ ಎರಡು ಬ್ಯಾಂಕ್‌ಗಳ ಸಮ್ಮಿಲನವನ್ನು ಪ್ರತಿನಿಧಿಸುವುದಿಲ್ಲ. ದೇಶದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯ ಶ್ರೇಷ್ಠತೆಯನ್ನು ಮರುವ್ಯಾಖ್ಯಾನಿಸುತ್ತದೆ' ಎಂದು ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಸಂಸ್ಥಾಪಕ, ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸಂಜಯ್ ಅಗರ್ವಾಲ್ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹955 (955)
ಪಾಮೋಲಿನ್	₹967 (968)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹285-388
ದ್ವಿತಳಿ (ಬಿ.ವಿ)	₹285-466

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹181
ಆರ್‌ಎಸ್‌ಎಸ್-5	₹174.50
ಗುಡ್ ಲಾಟ್	₹164.50

(ಪ್ರತಿ ಕೆ.ಜಿಗೆ)

ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಪರಿಷ್ಕೃತ ಮುನ್ನೋಟ ಪ್ರಕಟ

ಜಿಡಿಪಿ: ಶೇ 7ರಷ್ಟು ಪ್ರಗತಿ ನಿರೀಕ್ಷೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಭಾರತದ ಜಿಡಿಪಿ ಬೆಳವಣಿಗೆಯ ಮುನ್ನೋಟವನ್ನು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಪರಿಷ್ಕರಿಸಿದ್ದು, ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ.

ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿ ಹೂಡಿಕೆಯು ಸದೃಢವಾಗಿರಲಿದೆ. ಸರಕುಗಳ ಖರೀದಿಯೂ ಸುಧಾರಿಸಲಿದೆ. ಇದು ಆರ್ಥಿಕತೆ ಬೆಳವಣಿಗೆಯ ವೇಗಕ್ಕೆ ಸಹಕಾರಿಯಾಗಲಿದೆ ಎಂದು ಗುರುವಾರ ಬಿಡುಗಡೆಯಾಗಿರುವ ಪರಿಷ್ಕೃತ ಮುನ್ನೋಟದ ವರದಿ ತಿಳಿಸಿದೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಭಾರತದ ಜಿಡಿಪಿ ಬೆಳವಣಿಗೆಯು ಶೇ 6.7ರಷ್ಟು ಬೆಳವಣಿಗೆ ಸಾಧಿಸಲಿದೆ



ಎಂದು ಅಂದಾಜಿಸಿತ್ತು.

ಏಷ್ಯಾ ಮತ್ತು ಪೆಸಿಫಿಕ್ ವಲಯದಲ್ಲಿ ಆರ್ಥಿಕತೆಯ ಬೆಳವಣಿಗೆ ದೃಷ್ಟಿಯಲ್ಲಿ ಭಾರತವು ದೊಡ್ಡ ಎಂಜಿನ್ ಆಗಿದೆ ಎಂದು ಹೇಳಿದೆ.

2023–24 ಹಾಗೂ 2024–25ನೇ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕತೆಯು ತುಸು ಮಂದಗತಿಯಲ್ಲಿದ್ದರೂ 2025–26ನೇ ಆರ್ಥಿಕ ವರ್ಷದಲ್ಲಿ ಶೇ 7.2ರಷ್ಟು ಬೆಳವಣಿಗೆ ಕಾಣಲಿದೆ ಎಂದು ವರದಿ ತಿಳಿಸಿದೆ.

'ತಯಾರಿಕಾ ಮತ್ತು ಸೇವಾ ವಲಯದಲ್ಲಿನ ಸದೃಢವಾದ ಬೆಳವಣಿಗೆಯು 2023–24ನೇ ಹಣಕಾಸು ವರ್ಷದ ಆರ್ಥಿಕತೆಯ ಬೆಳವಣಿಗೆಗೆ ಸಹಕಾರಿಯಾಗಲಿದೆ. ಹೂಡಿಕೆಯೂ ಚೇತರಿಕೆ ಕಾಣಲಿದೆ. ಬಳಕೆಗೆ ಉತ್ತೇಜನ ಸಿಗಲಿದೆ. ಜಾಗತಿಕ ಬಿಕ್ಕಟ್ಟಿನಿಂದಾಗಿ ಹಣದುಬ್ಬರದ ಇಳಿಕೆ ಅಥವಾ ಏರಿಕೆ ಸ್ಥಿತಿಯು ಮುಂದುವರಿಯಲಿದೆ' ಎಂದು ಹೇಳಿದೆ.

'2024–25ನೇ ಸಾಲಿನಡಿ ಸರಕುಗಳ ರಫ್ತಿನಲ್ಲಿ ಸುಧಾರಣೆಯಾಗಲಿದೆ. ತಯಾರಿಕಾ ವಲಯದ ಉತ್ಪಾದಕತೆಯು ಏರಿಕೆಯಾಗಲಿದೆ. ಜೊತೆಗೆ, ಕೃಷಿ ಕ್ಷೇತ್ರದ ಉತ್ಪಾದನೆ ಕೂಡ ಹೆಚ್ಚಳವಾಗಲಿದೆ' ಎಂದು ಎಡಿಬಿ ವರದಿ ತಿಳಿಸಿದೆ.

'ಜಾಗತಿಕ ಬಿಕ್ಕಟ್ಟುಗಳ ಹೊರತಾಗಿಯೂ ಭಾರತದ ಆರ್ಥಿಕತೆಯು ಅತಿವೇಗವಾಗಿ ಬೆಳೆಯುತ್ತಿದೆ. ದೇಶೀಯ ಬೇಡಿಕೆ ಹೆಚ್ಚಳ ಮತ್ತು ಸರ್ಕಾರದ ನೀತಿಗಳು ಇದಕ್ಕೆ ಬೆನ್ನೆಲುಬಾಗಿವೆ' ಎಂದು ಎಡಿಬಿಯ ಭಾರತದ ನಿರ್ದೇಶಕ ಮಿಯೋ ಓಕಾ ಹೇಳಿದ್ದಾರೆ.

ಆರ್‌ಬಿಐ ವರದಿ: 2024–25ನೇ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆಯು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಅಂದಾಜಿಸಿದೆ.

ಈ ಬಾರಿ ಮುಂಗಾರು ಸಾಮಾನ್ಯವಾಗಿರಲಿದ್ದು, ಹಣದುಬ್ಬರದ ಒತ್ತಡ ತಗ್ಗಲಿದೆ. ಮತ್ತೊಂದೆಡೆ ತಯಾರಿಕಾ ಮತ್ತು ಸೇವಾ ವಲಯದ ಬೆಳವಣಿಗೆಯ ವೇಗವು ಸುಸ್ಥಿರವಾಗಿರಲಿದೆ ಎಂದು ಆರ್‌ಬಿಐ ತಿಳಿಸಿದೆ.

ಸುದ್ದಿ 2 ನಿಮಿಷ

4.45 ಲಕ್ಷ ಟನ್ ಕಚ್ಚಾ ಸೂರ್ಯಕಾಂತಿ ಎಣ್ಣೆ ಆಮದು

ನವದೆಹಲಿ (ಪಿಟಿಐ): ಮಾರ್ಚ್ ತಿಂಗಳಿನಲ್ಲಿ ದೇಶಕ್ಕೆ ದಾಖಲೆ ಪ್ರಮಾಣದಲ್ಲಿ ಕಚ್ಚಾ ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಳ್ಳಲಾಗಿದೆ.

ಒಟ್ಟು 4.45 ಲಕ್ಷ ಟನ್‌ನಷ್ಟು ಆಮದಾಗಿದೆ. ಫೆಬ್ರುವರಿಯಲ್ಲಿ 2.97 ಲಕ್ಷ ಟನ್ ಆಮದಾಗಿತ್ತು.

ಮಾರ್ಚ್‌ನಲ್ಲಿ ದೇಶದ ಒಟ್ಟು ಖಾದ್ಯ ತೈಲ ಆಮದು ಪ್ರಮಾಣವು 11.49 ಲಕ್ಷ ಟನ್‌ಗೆ ಮುಟ್ಟಿದೆ. ಭಾರತವು ಜಾಗತಿಕ ಮಟ್ಟದಲ್ಲಿನ ಖಾದ್ಯ ತೈಲದ ಬೆಲೆ ಇಳಿಕೆಯ ಲಾಭವನ್ನು ಪಡೆದುಕೊಂಡಿದೆ. ಹಾಗಾಗಿ, ಆಮದು ಪ್ರಮಾಣವು ಹೆಚ್ಚಳವಾಗಿದೆ ಎಂದು ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ಗುರುವಾರ ತಿಳಿಸಿದೆ.



2023ರ ಮಾರ್ಚ್‌ನಲ್ಲಿ 1.48 ಲಕ್ಷ ಟನ್ ಕಚ್ಚಾ ಸೂರ್ಯಕಾಂತಿ ಎಣ್ಣೆ ಆಮದು ಮಾಡಿಕೊಳ್ಳಲಾಗಿತ್ತು ಎಂದು ತಿಳಿಸಿದೆ.

ಫೆಬ್ರುವರಿಗೆ ಹೋಲಿಸಿದರೆ ಮಾರ್ಚ್‌ನಲ್ಲಿ ಕಚ್ಚಾ ಸೋಯಾಬಿನ್ ತೈಲ ಆಮದು ಏರಿಕೆಯಾಗಿದೆ. ಒಟ್ಟು 2.18 ಲಕ್ಷ ಟನ್ ಆಮದಾಗಿದೆ.

ಕಚ್ಚಾ ತಾಳೆ ಎಣ್ಣೆ ಆಮದು 5.51 ಲಕ್ಷ ಟನ್‌ನಿಂದ 3.81 ಲಕ್ಷ ಟನ್‌ಗೆ ಇಳಿಕೆಯಾಗಿದೆ. ಆರ್‌ಬಿಡಿ ಪಾಲ್ಮೋಲಿಯನ್ 1.69 ಲಕ್ಷ ಟನ್‌ನಿಂದ 93,799ಕ್ಕೆ ಕಡಿಮೆಯಾಗಿದೆ. ಆದರೆ, ಕಚ್ಚಾ ತಾಳೆ ಬೀಜ ಆಮದು 8,006 ಟನ್‌ನಿಂದ 10,499 ಟನ್‌ಗೆ ಹೆಚ್ಚಳವಾಗಿದೆ ಎಂದು ಎಸ್‌ಇಎ ತಿಳಿಸಿದೆ.

ಇಂಡೊನೇಷ್ಯಾ ಮತ್ತು ಮಲೇಷ್ಯಾದಲ್ಲಿ ತಾಳೆ ಎಣ್ಣೆ ಉತ್ಪಾದನೆ ಮತ್ತು ದಾಸ್ತಾನು ಇಳಿಕೆ ಆಗಿದೆ. ಇದರಿಂದ ಸೂರ್ಯಕಾಂತಿ ಎಣ್ಣೆಗಿಂತಲೂ ತಾಳೆ ಎಣ್ಣೆ ದರ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಮರ್ಸಿಡೀಸ್ ಬೆಂಜ್ ಕಾರು ಮಾರಾಟ ಶೇ 10ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಜರ್ಮನಿಯ ಐಷಾರಾಮಿ ಕಾರು ತಯಾರಿಕಾ ಕಂಪನಿ ಮರ್ಸಿಡೀಸ್ ಬೆಂಜ್, 2023–24ನೇ ಆರ್ಥಿಕ ವರ್ಷದಲ್ಲಿ ಭಾರತದಲ್ಲಿ ಒಟ್ಟು 18,123 ಕಾರುಗಳನ್ನು ಮಾರಾಟ ಮಾಡಿದೆ.

2022–23ರಲ್ಲಿ 16,497 ಕಾರುಗಳ ಮಾರಾಟವಾಗಿದ್ದವು. ಇದಕ್ಕೆ ಹೋಲಿಸಿದರೆ ಮಾರಾಟದಲ್ಲಿ ಶೇ 10ರಷ್ಟು ಏರಿಕೆಯಾಗಿದೆ. ಎಸ್‌ಯುವಿ ವಾಹನಗಳಿಗೆ ಹೆಚ್ಚಿದ ಬೇಡಿಕೆಯಿಂದಾಗಿ ಒಟ್ಟಾರೆ ಚಿಲ್ಲರೆ ಮಾರಾಟದಲ್ಲಿ ಏರಿಕೆಯಾಗಿದೆ ಎಂದು ಕಂಪನಿಯು ಗುರುವಾರ ತಿಳಿಸಿದೆ.

ಜನವರಿ–ಮಾರ್ಚ್ ತ್ರೈಮಾಸಿಕದ ಮಾರಾಟದಲ್ಲಿ ಶೇ 15ರಷ್ಟು ಏರಿಕೆ ಆಗಿದ್ದು, ಒಟ್ಟು 5,412 ಕಾರುಗಳು ಮಾರಾಟವಾಗಿವೆ. ಕಳೆದ ವರ್ಷದ ಇದೇ ಅವಧಿಯಲ್ಲಿ 4,697 ಕಾರು ಮಾರಾಟವಾಗಿದ್ದವು ಎಂದು ತಿಳಿಸಿದೆ.

ಪ್ರಸಕ್ತ ವರ್ಷದಲ್ಲಿ ಒಂಬತ್ತು ಹೊಸ ಮಾದರಿಯ ಕಾರುಗಳನ್ನು ಪರಿಚಯಿಸಲು ತೀರ್ಮಾನಿಸಲಾಗಿದೆ. ಈ ಪೈಕಿ ಮೂರು ವಿದ್ಯುತ್ ಚಾಲಿತ ಕಾರುಗಳಿವೆ. ಇದೇ ತಿಂಗಳಿನಲ್ಲಿ ನವದೆಹಲಿ ಮತ್ತು ಮುಂಬೈನಲ್ಲಿ ಹೊಸ ಷೋ ರೂಂ ಉದ್ಘಾಟಿಸಲಾಗುವುದು. ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಈ ವರ್ಷದಲ್ಲಿ ದೇಶದ 10 ನಗರಗಳಲ್ಲಿ 20 ವರ್ಕ್‌ಶಾಪ್ ಸೆಂಟರ್‌ಗಳನ್ನು ತೆರೆಯಲು ನಿರ್ಧರಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಎಸ್‌ಐಪಿ: ₹2 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ ₹2 ಲಕ್ಷ ಕೋಟಿ ಹೂಡಿಕೆಯಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಹೂಡಿಕೆಯಲ್ಲಿ ಶೇ 28ರಷ್ಟು ಏರಿಕೆಯಾಗಿದೆ.

ಭಾರತದ ಆರ್ಥಿಕತೆಯ ಮುನ್ನೋಟದಲ್ಲಿ ಚೇತರಿಕೆ ಹಾಗೂ ಮಾರುಕಟ್ಟೆಯಲ್ಲಿ ಹೂಡಿಕೆದಾರರ ಪಾಲ್ಗೊಳ್ಳುವಿಕೆಯು ಹೆಚ್ಚಿರುವುದೇ ಈ ಏರಿಕೆ ಕಾರಣವಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್‌ಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ.

2016–17ರಲ್ಲಿ ಮ್ಯೂಚುವಲ್ ಫಂಡ್‌ಗಳಲ್ಲಿ ₹43,921 ಕೋಟಿಯಷ್ಟು ಹೂಡಿಕೆಯಾಗಿತ್ತು. ಇದಕ್ಕೆ ಹೋಲಿಸಿದರೆ ಕಳೆದ ಏಳು ವರ್ಷಗಳ ಅವಧಿಯಲ್ಲಿ ಹೂಡಿಕೆಯಲ್ಲಿ ನಾಲ್ಕೂವರೆ ಪಟ್ಟು



ಹೆಚ್ಚಳವಾಗಿದೆ ಎಂದು ಹೇಳಿದೆ.

'ಫೆಬ್ರುವರಿಯಲ್ಲಿ ಎಸ್‌ಐಪಿಗಳ ಸರಾಸರಿ ಸಂಪತ್ತು ನಿರ್ವಹಣಾ ಮೊತ್ತವು (ಎಯುಎಂ) ₹10.52 ಲಕ್ಷ ಕೋಟಿ ಇತ್ತು.

ಮಾರ್ಚ್ ಅಂತ್ಯಕ್ಕೆ ₹10.71 ಲಕ್ಷ ಕೋಟಿಗೆ ತಲುಪಿದೆ. ಹೂಡಿಕೆದಾರರು ಶಿಸ್ತುಬದ್ಧವಾಗಿ ಸಂಪತ್ತಿನ ಕ್ರೋಡೀಕರಣಕ್ಕೆ ಒತ್ತು ನೀಡಿದ್ದಾರೆ. ಹಾಗಾಗಿ, ನಿರ್ವಹಣಾ ಸಂಪತ್ತಿನ ಮೊತ್ತವು ಏರಿಕೆಯಾಗಿದೆ' ಎಂದು ಎಎಂಎಫ್‌ಐನ ಮುಖ್ಯ ನಿರ್ವಾಹಕ ವೆಂಕಟ್ ಚಲಸಾನಿ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ 11-4-2024	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	930 (927)
ಪಾಮ್ ವಾರದ ಡೆಲಿವರಿ	965 (966)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	₹71,650 (71,100)
ಬೆಳ್ಳಿ ಕೆ.ಜಿ	₹82,450 (82,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಭಾರತಕ್ಕೆ ಭೇಟಿ ದೃಢಪಡಿಸಿದ ಮಸ್ಕ್

ನವದೆಹಲಿ (ಪಿಟಿಐ): ಅಮೆರಿಕದ ಎಲೆಕ್ಟ್ರಿಕ್ ಕಾರು ತಯಾರಿಕಾ ಕಂಪನಿ ಟೆಸ್ಲಾದ ಸಿಇಒ ಇಲಾನ್ ಮಸ್ಕ್ ಅವರು, ಇದೇ ತಿಂಗಳಿನಲ್ಲಿ ತಾವು ಭಾರತಕ್ಕೆ ಭೇಟಿ ನೀಡುವುದನ್ನು ದೃಢಪಡಿಸಿದ್ದಾರೆ.'ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಲು ನಾನು ಎದುರು ನೋಡುತ್ತಿದ್ದೇನೆ' ಎಂದು ಅವರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಏಪ್ರಿಲ್ 22ರಂದು ಮಸ್ಕ್ ಅವರು ಭಾರತಕ್ಕೆ ಭೇಟಿ ನೀಡಲಿದ್ದಾರೆ. ದೇಶದಲ್ಲಿ ಟೆಸ್ಲಾ ಕಂಪನಿಯ ಹೂಡಿಕೆ ಬಗ್ಗೆ ಅಧಿಕೃತವಾಗಿ ಘೋಷಿಸಲಿದ್ದಾರೆ ಎಂದು ಹೇಳಲಾಗಿದೆ.

ಐಫೋನ್‌ಗೆ ಕುತಂತ್ರಾಂಶ ದಾಳಿ

ಆಯ್ದ ಬಳಕೆದಾರರಿಗೆ ಆ್ಯಪಲ್‌ನಿಂದ ಎಚ್ಚರಿಕೆ ಸಂದೇಶ

ನವದೆಹಲಿ (ಪಿಟಿಐ): ಇಸ್ರೇಲ್ ಎನ್‌ಎಸ್‌ಒ ಗ್ರೂಪ್‌ನ ಪೆಗಾಸಸ್ ಕುತಂತ್ರಾಂಶ ಹಾಗೂ ಅತ್ಯಾಧುನಿಕ ಗೂಢಚರ್ಯೆ ತಂತ್ರಾಂಶದ (ಸ್ಪೈವೇರ್) ದಾಳಿ ಬಗ್ಗೆ ತನ್ನ ಆಯ್ದ ಬಳಕೆದಾರರ ಇ–ಮೇಲ್‌ಗಳಿಗೆ, ಐಫೋನ್ ತಯಾರಿಕಾ ಕಂಪನಿಯಾದ ಆ್ಯಪಲ್ ಎಚ್ಚರಿಕೆಯ ಸಂದೇಶವನ್ನು ಕಳುಹಿಸಿದೆ.

ಭಾರತ ಸೇರಿ ವಿಶ್ವದ 91 ರಾಷ್ಟ್ರಗಳಲ್ಲಿರುವ ತನ್ನ ಬಳಕೆದಾರರಿಗೆ ಬುಧವಾರ ಈ ಸಂದೇಶ ರವಾನಿಸಿದೆ. ಪತ್ರಕರ್ತರು, ಸಾಮಾಜಿಕ ಹೋರಾಟಗಾರರು, ರಾಜಕಾರಣಿಗಳು ಹಾಗೂ ರಾಯಭಾರಿಗಳು ಈ ತಂತ್ರಾಂಶದ ದಾಳಿಗೆ ಸಿಲುಕಿದ್ದಾರೆ ಎಂದು ಹೇಳಿದೆ.

ಕಂಪನಿಯು ಈ ಹಿಂದೆಯೂ ಇಂತಹ ದಾಳಿ ಬಗ್ಗೆ ಸಂಶೋಧನೆ ನಡೆಸಿತ್ತು. ಇದರ ಆಧಾರದ ಮೇಲೆ ಸರ್ಕಾರ ಅಥವಾ ಸರ್ಕಾರಿ ಪ್ರಾಯೋಜಿತ ಸಂಸ್ಥೆಗಳು ಈ ದಾಳಿಯ ಹಿಂದೆ ಇರಬಹುದು ಎಂದು ಸಂದೇಶದಲ್ಲಿ ಹೇಳಿದೆ. ಆದರೆ, ಯಾರ ಹೆಸರನ್ನೂ ಬಹಿರಂಗಪಡಿಸಿಲ್ಲ. 'ಕೆಲವು ಬಳಕೆದಾರರು ಪೆಗಾಸಸ್ ಕುತಂತ್ರಾಂಶ ಹಾಗೂ ಮರ್ಸಿನರಿ ಸ್ಪೈವೇರ್ ದಾಳಿಗೆ ಒಳಗಾಗಿರಬಹುದಾಗಿದೆ. ಈ ದಾಳಿಯು ಸೈಬರ್ ಅಪರಾಧ ಚಟುವಟಿಕೆ ಹಾಗೂ ಕುತಂತ್ರಾಂಶಕ್ಕಿಂತಲೂ ಹೆಚ್ಚು ಸಂಕೀರ್ಣವಾದುದು. ಈ ಸ್ಪೈವೇರ್ ನಿರ್ದಿಷ್ಟ ವ್ಯಕ್ತಿಗಳ ಐಫೋನ್‌ಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಿದೆ. ಉಳಿದ ಬಳಕೆದಾರರಿಗೆ ಇದರಿಂದ ತೊಂದರೆ ಇಲ್ಲ' ಎಂದು ತಿಳಿಸಿದೆ.

ಈ ದಾಳಿಯನ್ನು ತಡೆಗಟ್ಟುವುದು ಹಾಗೂ ಸುಲಭವಾಗಿ ಪತ್ತೆ ಹಚ್ಚುವುದು ಸವಾಲಿನಿಂದ ಕೂಡಿದೆ. ವಾಟ್ಸ್‌ಆ್ಯಪ್ ಕರೆಯ ಮೂಲಕ ಬಳಕೆದಾರರ ಫೋನ್‌ನಲ್ಲಿ ಈ ಕುತಂತ್ರಾಂಶವನ್ನು ಸ್ಥಾಪಿಸಬಹುದಾಗಿದೆ. ಇದು ಇತ್ತೀಚಿನ ಸುಧಾರಿತ ಡಿಜಿಟಲ್ ದಾಳಿಯಾಗಿದೆ ಎಂದು ಹೇಳಿದೆ.

ಈ ಬಗ್ಗೆ ಬಳಕೆದಾರರು ಎಚ್ಚರಿಕೆಯಿಂದ ಇರಬೇಕು. ಅನಾಮಧೇಯರು ಕಳುಹಿಸುವ ಲಿಂಕ್‌ಗಳನ್ನು ತೆರೆಯಬಾರದು. ಐಫೋನ್ ದಾಳಿಗೆ ಒಳಗಾಗಿದ್ದರೆ ಲಾಕ್‌ಡೌನ್ ಮೋಡ್ ಅನ್ನು ಸಕ್ರಿಯಗೊಳಿಸಬೇಕು ಎಂದು ಸೂಚಿಸಿದೆ.

'ಸುಪ್ರೀಂ' ಮೆಟ್ಟಿಲೇರಿದ್ದ ವಿವಾದ

ಪೆಗಾಸಸ್ ವಿವಾದವು ಭಾರತಕ್ಕೆ ಹೊಸದೇನಲ್ಲ. ಈ ಕುತಂತ್ರಾಂಶವನ್ನು ಸಾಮಾಜಿಕ ಹೋರಾಟಗಾರರು, ಪತ್ರಕರ್ತರು ಹಾಗೂ ರಾಜಕಾರಣಿಗಳ ಮೊಬೈಲ್ ಫೋನ್‌ಗೆ ನುಸುಳುವಂತೆ ಮಾಡಿ ಅವರ ಚಲನವಲನಗಳ ಮೇಲೆ ನಿಗಾ ಇಡಲಾಗಿದೆ ಎಂಬ ಆರೋಪ ಕೇಳಿಬಂದಿತ್ತು.

2021ರಲ್ಲಿ ಈ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಹಲವು ಮಂದಿ ಅರ್ಜಿ ಸಲ್ಲಿಸಿ, ತನಿಖೆ ನಡೆಸುವಂತೆ ಕೋರಿದ್ದರು.7

ಆರೋಪಗಳ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಸುಪ್ರೀಂ ಕೋರ್ಟ್, ತಾಂತ್ರಿಕ ಪರಿಣತರ ಸಮಿತಿಯನ್ನು ರಚಿಸಿತ್ತು. ಪರಿಶೀಲನೆ ನಡೆಸಿದ್ದ ಸಮಿತಿಯು ಮೊಬೈಲ್ ಫೋನ್‌ಗಳಲ್ಲಿ ಕುತಂತ್ರಾಂಶ ನುಸುಳಿರುವ ಬಗ್ಗೆ ನಿರ್ಣಾಯಕ ಪುರಾವೆಗಳು ಲಭಿಸಿಲ್ಲ. ಆದರೆ, ಕೇಂದ್ರ ಸರ್ಕಾರವು ಈ ವಿವಾದಕ್ಕೆ ಸಂಬಂಧಿಸಿದಂತೆ ಸಮಿತಿಯೊಂದಿಗೆ ಸಹಕರಿಸಲಿಲ್ಲ ಎಂದು ವರದಿಯಲ್ಲಿ ಹೇಳಿತ್ತು.

ಪಾಕ್‌ನಲ್ಲಿ ಪ್ರಪಾತಕ್ಕೆ ಬಿದ್ದ ಬಸ್: 17 ಯಾತ್ರಿಕರ ಸಾವು

ಕರಾಚಿ (ಪಿಟಿಐ): ಪಾಕಿಸ್ತಾನದ ಸಿಂಧ್ ಮತ್ತು ಬಲೂಚಿಸ್ತಾನ ಪ್ರಾಂತ್ಯಗಳ ಗಡಿ ಬಳಿ ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ಬಸ್ ಪ್ರಪಾತಕ್ಕೆ ಬಿದ್ದ ಪರಿಣಾಮ ಕನಿಷ್ಠ 17 ಜನರು ಮೃತಪಟ್ಟಿದ್ದು, 38 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಬಲೂಚಿಸ್ತಾನದ ಖುಜ್ದಾರ್ ಜಿಲ್ಲೆಯಲ್ಲಿರುವ ಮುಸ್ಲಿಂ ಸೂಫಿ ಸಂತ ಶಾ ನೂರಾನಿ ದೇಗುಲಕ್ಕೆ ಯಾತ್ರಾರ್ಥಿಗಳು ತೆರಳುತ್ತಿದ್ದಾಗ, ಹಬ್ ಪಟ್ಟಣದ ಬಳಿಯಿರುವ ಪ್ರಪಾತಕ್ಕೆ ಬುಧವಾರ ಬಸ್ ಬಿದ್ದಿದೆ. ಅಪಘಾತ ಸಂಭವಿಸಿದ ಸ್ಥಳ ಕರಾಚಿಯಿಂದ 100 ಕಿ.ಮೀ. ದೂರದಲ್ಲಿದೆ. 'ಬಸ್‌ನಲ್ಲಿದ್ದ ಯಾತ್ರಿಗಳು ಸಿಂಧ್ ಪ್ರಾಂತ್ಯದ ತಟ್ಟಾ ಪಟ್ಟಣಕ್ಕೆ ಸೇರಿದವರು. ಬುಧವಾರ ಮಧ್ಯಾಹ್ನ 2 ಗಂಟೆಗೆ ಯಾತ್ರೆಗೆ ಹೊರಟಿದ್ದರು. ರಾತ್ರಿ 8 ಗಂಟೆ ವೇಳೆಗೆ ಚಾಲಕನ ನಿಯಂತ್ರಣ ತಪ್ಪಿದ ಬಸ್ ಕಂದಕಕ್ಕೆ ಬಿದ್ದಿದೆ' ಎಂದು ಗೃಹ ಸಚಿವ ಮೊಹ್ಸಿನ್ ನಖ್ವಿ ತಿಳಿಸಿದ್ದಾರೆ.

'ಗಾಯಗೊಂಡವರು ಮತ್ತು ಮೃತಪಟ್ಟವರನ್ನು ಕರಾಚಿಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತದೇಹಗಳ ಗುರುತು ಪತ್ತೆಯಾಗಿದೆ. ಬಹುತೇಕರು ಒಂದೇ ಕುಟುಂಬಕ್ಕೆ ಸೇರಿದವರು' ಎಂದು ಹಬ್ ಪೊಲೀಸರು ಮಾಹಿತಿ ನೀಡಿದ್ದಾರೆ.

ಬ್ಯಾಂಕ್‌ಗೆ ₹2.25 ಲಕ್ಷ ಕೋಟಿ ವಂಚನೆ ಪ್ರಕರಣ

ವಿಯೆಟ್ನಾಂ ಮಹಿಳಾ ಉದ್ಯಮಿಗೆ ಮರಣ ದಂಡನೆ

ಹೋ ಚಿ ಮಿನ್ ಸಿಟಿ (ಎಎಫ್‌ಪಿ): ವಿಯೆಟ್ನಾಂನ ಇತಿಹಾಸದಲ್ಲೇ ಅತಿ ದೊಡ್ಡ ಹಗರಣವೆನಿಸಿದ ₹2.25 ಲಕ್ಷ ಕೋಟಿ (27 ಶತಕೋಟಿ ಡಾಲರ್) ವಂಚನೆ ಪ್ರಕರಣದಲ್ಲಿ ಪ್ರಮುಖ ರಿಯಲ್ ಎಸ್ಟೇಟ್ ಮಹಿಳಾ ಉದ್ಯಮಿ ಟ್ರೂಂಗ್ ಮೈ ಲ್ಯಾನ್ (67) ಅವರಿಗೆ ಇಲ್ಲಿನ ನ್ಯಾಯಾಲಯ ಮರಣದಂಡನೆ ವಿಧಿಸಿದೆ.

ಪ್ರಮುಖ ಡೆವಲಪರ್ ವ್ಯಾನ್ ಥಿನ್ಹ್ ಫಾಟ್‌ನ ಅಧ್ಯಕ್ಷರಾದ ಟ್ರೂಂಗ್ ಮೈ ಲ್ಯಾನ್ ಅವರ ವಕೀಲರ ವಾದಗಳನ್ನು ಮೂವರು ನ್ಯಾಯಮೂರ್ತಿಗಳಿದ್ದ ಸಮಿತಿಯು ತಿರಸ್ಕರಿಸಿತು. ಸೈಗಾನ್ ಕಮರ್ಷಿಯಲ್ ಬ್ಯಾಂಕ್‌ನಿಂದ (ಎಸ್‌ಸಿಬಿ) ಹಣವನ್ನು ವಂಚಿಸಿದ ಆರೋಪದಲ್ಲಿ ಲ್ಯಾನ್ ತಪ್ಪಿತಸ್ಥೆ ಎಂದು ನ್ಯಾಯಾಲಯ ತೀರ್ಪು ನೀಡಿದೆ.

ಲ್ಯಾನ್ ಅವರ ಪತಿ, ಹಾಂಗ್‌ಕಾಂಗ್‌ನ ಸಿರಿವಂತ ಉದ್ಯಮಿ ಎರಿಕ್ ಚು ನಾಪ್ ಕೀ ಅವರಿಗೆ ಒಂಬತ್ತು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ.

ಐದು ವಾರಗಳ ವಿಚಾರಣೆಯ ನಂತರ, ಲಂಚ ಮತ್ತು ಅಧಿಕಾರ ದುರುಪಯೋಗದಿಂದ ಹಿಡಿದು ಬ್ಯಾಂಕಿಂಗ್ ಕಾನೂನಿನ ಉಲ್ಲಂಘನೆ ಆರೋಪಗಳ ಮೇಲೆ ಇತರ 85 ಮಂದಿಗೆ ಶಿಕ್ಷೆ ವಿಧಿಸಲಾಯಿತು. ಇದರಲ್ಲಿ



ಹೋ ಚಿ ಮಿನ್ ಸಿಟಿಯ ನ್ಯಾಯಾಲಯದಲ್ಲಿ ಗುರುವಾರ ವಿಯೆಟ್ನಾಂನ ರಿಯಲ್ ಎಸ್ಟೇಟ್ ಉದ್ಯಮಿ ಟ್ರೂಂಗ್ ಮೈ ಲ್ಯಾನ್ ಅವರನ್ನು ಪೊಲೀಸರು ವಿಚಾರಣೆಗಾಗಿ ಹಾಜರುಪಡಿಸಿದ್ದರು–ಎಎಫ್‌ಪಿ ಚಿತ್ರ

ನಾಲ್ವರಿಗೆ ಜೀವಾವಧಿ ಶಿಕ್ಷೆ ಹಾಗೂ ಉಳಿದವರಿಗೆ 20 ವರ್ಷಗಳವರೆಗೂ ಜೈಲು ಶಿಕ್ಷೆ ವಿಧಿಸಲಾಗಿದೆ.

ಲ್ಯಾನ್ ಸುಮಾರು ₹1.5 ಲಕ್ಷ ಕೋಟಿ ದುರುಪಯೋಗಪಡಿಸಿಕೊಂಡಿದ್ದಾರೆ. ಆದರೆ, ಹಗರಣದಿಂದ ಆಗಿರುವ ಒಟ್ಟು ಹಾನಿಯು ಈಗ ₹2.25 ಲಕ್ಷ ಕೋಟಿಯಾಗಿದೆ ಎಂದು ಪ್ರಾಸಿಕ್ಯೂಟರ್‌ಗಳು ಗುರುವಾರ ಹೇಳಿದ್ದಾರೆ. ನಷ್ಟದ ಸಂಪೂರ್ಣ ಮೊತ್ತವನ್ನು ಲ್ಯಾನ್ ಭರಿಸಬೇಕು ಎಂದು ನ್ಯಾಯಾಲಯ ತೀರ್ಪಿನಲ್ಲಿ ಹೇಳಿದೆ.

ರಾಷ್ಟ್ರೀಯ ಭ್ರಷ್ಟಾಚಾರ ನಿಗ್ರಹದ ಭಾಗವಾಗಿ ಈ ಹಗರಣ ಸಂಬಂಧ ಲ್ಯಾನ್ ಸೇರಿದಂತೆ ದೇಶದ ಹಲವು ಉದ್ಯಮಿಗಳು ಮತ್ತು ಅಧಿಕಾರಿಗಳನ್ನು ಇತ್ತೀಚಿನ ವರ್ಷಗಳಲ್ಲಿ ಪೊಲೀಸರು ಬಂಧಿಸಿದ್ದರು. ಕಳೆದ ವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ಲ್ಯಾನ್ ಆತ್ಮಹತ್ಯೆ ಮಾಡಿಕೊಳ್ಳಲು ಉದ್ದೇಶಿಸಿರುವುದಾಗಿ ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ್ದರು.

ಇಸ್ರೇಲ್ ದಾಳಿ: ಹಮಾಸ್ ನಾಯಕನ ಮೂವರು ಮಕ್ಕಳ ಸಾವು

ಜೆರುಸಲೇಂ (ಎಪಿ): ಗಾಜಾದ ಮೇಲೆ ವಾಯು ದಾಳಿ ನಡೆಸಿರುವ ಇಸ್ರೇಲ್ ಪಡೆಗಳು, ಹಮಾಸ್ ಬಂಡುಕೋರರ ನಾಯಕ ಇಸ್ಮಾಯಿಲ್ ಹನಿಯೆಹ್ ಅವರ ಮೂವರು ಮಕ್ಕಳನ್ನು ಹತ್ಯೆ ಮಾಡಿವೆ.

ಈ ಮಾಹಿತಿಯನ್ನು ಹಮಾಸ್ ಗುಂಪಿನ ಅಧಿಕೃತ ಮಾಧ್ಯಮ ಖಚಿತಪಡಿಸಿದ್ದು, 'ತಮ್ಮ ಮಕ್ಕಳನ್ನು ಹತ್ಯೆ ಮಾಡಿದ ಇಸ್ರೇಲ್ ಸೇನೆ ವಿರುದ್ಧ ಇಸ್ಮಾಯಿಲ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ' ಎಂದು ತಿಳಿಸಿದೆ.

ಅಲ್ಲದೇ, 'ಇಸ್ಮಾಯಿಲ್ ಅವರ ನಾಲ್ವರು ಮೊಮ್ಮಕ್ಕಳನ್ನೂ ಇಸ್ರೇಲ್ ಪಡೆಗಳು ಹತ್ಯೆ ಮಾಡಿವೆ' ಎಂದೂ ಅದು ಹೇಳಿದೆ.

ಕೇಂದ್ರ ಗಾಜಾ ಮೇಲೆ ದಾಳಿ ನಡೆಸಿದ್ದನ್ನು ಒಪ್ಪಿಕೊಂಡಿರುವ ಇಸ್ರೇಲ್ ಸೇನೆ, ಬೇರೆ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಿಲ್ಲ.

'ನನ್ನ ಮಕ್ಕಳು ಮತ್ತು ಮೊಮ್ಮಕ್ಕಳ ಹತ್ಯೆಯು ಹಮಾಸ್ –ಇಸ್ರೇಲ್ ಮಧ್ಯೆ ನಡೆಯುತ್ತಿರುವ ಕದನ ವಿರಾಮ ಮಾತುಕತೆಗಳನ್ನು ಮತ್ತಷ್ಟು ಮೃದುಗೊಳಿಸಲು ಒತ್ತಡ ಹೇರುವುದಿಲ್ಲ' ಎಂದು ಅಲ್ ಜಜೀರಾ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಇಸ್ಮಾಯಿಲ್ ಅವರು ಹೇಳಿದ್ದಾರೆ.

ನಿಜ್ಜರ್ ಹತ್ಯೆ: ಟ್ರುಡೊ ಮತ್ತೆ ಪ್ರಸ್ತಾಪ

ಒಂದನೇ ಪುಟದಿಂದ...

ಭಾರತವು 2020ರಲ್ಲಿ ನಿಜ್ಜರ್‌ನನ್ನು ಭಯೋತ್ಪಾದಕ ಎಂದು ಘೋಷಿಸಿತ್ತು. ಟ್ರುಡೊ ಅವರು ಭಾರತವನ್ನು ಗುರಿಯಾಗಿಸಿಕೊಂಡು ಮಾಡಿರುವ ಆರೋಪವು 'ಆಧಾರವಿಲ್ಲದ್ದು' ಎಂದು ಕೇಂದ್ರ ಸರ್ಕಾರ ಹೇಳಿತ್ತು.

'ಜಗತ್ತಿನ ಯಾವುದೇ ಭಾಗದಿಂದ ಕೆನಡಾಕ್ಕೆ ಬರುವ ಯಾವುದೇ ವ್ಯಕ್ತಿಗೆ ಕೆನಡಾ ಪ್ರಜೆಗೆ ಇರುವ ಎಲ್ಲ ಹಕ್ಕುಗಳು ಇರುತ್ತವೆ. ನಾನು ಸಂಸತ್ತಿನಲ್ಲಿ ಪ್ರಸ್ತಾಪಿಸಿದ ನಿಜ್ಜರ್ ಹತ್ಯೆಯ ಪ್ರಕರಣ ಸೇರಿದಂತೆ ಎಲ್ಲ ಸಂದರ್ಭಗಳಲ್ಲಿ ನಾವು ಕೆನಡಾ ಪ್ರಜೆಗಳ ಪರವಾಗಿ ನಿಂತ ನಿದರ್ಶನಗಳು, ಸರ್ಕಾರದ ಬದ್ಧತೆಯನ್ನು ತೋರಿಸುತ್ತದೆ' ಎಂದು ಅವರು ಹೇಳಿದ್ದಾರೆ.

ಕೆನಡಾದ ನಿಯಮಗಳು ಹಾಗೂ ಮೌಲ್ಯಗಳನ್ನು ರಕ್ಷಿಸಲು, ವಿದೇಶಿ ಹಸ್ತಕ್ಷೇಪದಿಂದ ಕೆನಡಾದ ಪ್ರಜೆಗಳನ್ನು ರಕ್ಷಿಸಲು ಸರ್ಕಾರವು ತಾನು ಮಾಡಬಹುದಾದ ಎಲ್ಲ ಕೆಲಸಗಳನ್ನು ಮಾಡಿಲ್ಲ ಎಂಬ ಮಾತುಗಳಿಗೆ ಆಧಾರವಿಲ್ಲ ಎಂದು ಟ್ರುಡೊ ಹೇಳಿದ್ದಾರೆ.

ತಮ್ಮ ಸರ್ಕಾರವು ಕೆನಡಾದಲ್ಲಿನ ಅಲ್ಪಸಂಖ್ಯಾತರ ರಕ್ಷಿಸುವ ಕೆಲಸ ಮಾಡಿದೆ. ಅವರು ತೊರೆದುಬಂದಿರುವ ದೇಶಗಳಿಗೆ ಕಿರಿಕಿರಿ ಉಂಟಾದರೂ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಲು ಹಿಂದೇಟು ಹಾಕಿಲ್ಲ ಎಂದು ಕೂಡ ಅವರು ಸಮಿತಿಗೆ ವಿವರಿಸಿದ್ದಾರೆ.

2019 ಹಾಗೂ 2021ರ ಚುನಾವಣೆಯ ಮೇಲೆ ಪ್ರಭಾವ ಬೀರಲು ಚೀನಾದಿಂದ ಕಾರ್ಯಾಚರಣೆ ನಡೆದಿತ್ತು ಎಂಬ ಆರೋಪಗಳ ಬಗ್ಗೆ ವಿಚಾರಣಾ ಸಮಿತಿಯು ಪರಿಶೀಲನೆ ನಡೆಸುತ್ತಿದೆ.

ವೀಸಾ ಷರತ್ತು ಉಲ್ಲಂಘನೆ 12 ಭಾರತೀಯರ ಬಂಧನ

ಲಂಡನ್ (ಪಿಟಿಐ): ವೀಸಾ ಷರತ್ತುಗಳನ್ನು ಉಲ್ಲಂಘಿಸಿದ ಆರೋಪದ ಅಡಿಯಲ್ಲಿ ಬ್ರಿಟನ್ನಿನ ವಲಸೆ ಅಧಿಕಾರಿಗಳು 12 ಮಂದಿಯನ್ನು ಬಂಧಿಸಿದ್ದಾರೆ. ಇವರೆಲ್ಲರೂ ಭಾರತೀಯ ಪ್ರಜೆಗಳು ಎನ್ನಲಾಗಿದೆ.

ವೀಸಾ ಷರತ್ತು ಉಲ್ಲಂಘಿಸಿ, ಬೆಡ್ ಮತ್ತು ಕೇಕ್ ತಯಾರಿಕಾ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದ ಅನುಮಾನದ ಅಡಿಯಲ್ಲಿ ಅಧಿಕಾರಿಗಳು ಹಲವೆಡೆ ದಾಳಿ ನಡೆಸಿದ್ದರು. ಬಂಧಿತರದಲ್ಲಿ ಒಬ್ಬರು ಮಹಿಳೆ ಕೂಡ ಇದ್ದಾರೆ.

ಇಂಗ್ಲೆಂಡ್‌ನ ವೆಸ್ಟ್ ಮಿಡ್‌ಲೆಂಡ್ಸ್ ಪ್ರದೇಶದಲ್ಲಿ ಅಕ್ರಮವಾಗಿ ಕೆಲಸ ನಡೆಯುತ್ತಿದೆ ಎಂದು ಗುಪ್ತಚರ ಸಂಸ್ಥೆಗಳು ನೀಡಿದ್ದ ಮಾಹಿತಿ ಆಧರಿಸಿ ವಲಸೆ ಅಧಿಕಾರಿಗಳು ದಾಳಿ ನಡೆಸಿದ್ದರು. ಅಲ್ಲಿ ಏಳು ಮಂದಿ ಭಾರತೀಯ ಪ್ರಜೆಗಳನ್ನು ಬಂಧಿಸಲಾಗಿದೆ ಎಂದು ಬ್ರಿಟನ್ನಿನ ಗೃಹ ಸಚಿವಾಲಯ ಹೇಳಿದೆ. ಅಲ್ಲಿಗೆ ಸನಿಹದ ಕೇಕ್ ತಯಾರಿಕಾ ಘಟಕದಲ್ಲಿ ನಾಲ್ಕು ಮಂದಿ ಭಾರತೀಯರನ್ನು ಬಂಧಿಸಲಾಗಿದೆ. ವಲಸೆಗೆ ಸಂಬಂಧಿಸಿದ ನಿಯಮಗಳ ಉಲ್ಲಂಘನೆಯ ಕಾರಣಕ್ಕೆ ಭಾರತೀಯ ಮಹಿಳೆಯೊಬ್ಬರನ್ನು ಮನೆಯೊಂದರಲ್ಲಿ ಬಂಧಿಸಲಾಗಿದೆ ಎಂದು ಸಚಿವಾಲಯ ಹೇಳಿದೆ. ಬಂಧಿತರಲ್ಲಿ ನಾಲ್ಕು ಮಂದಿಯನ್ನು ಬ್ರಿಟನ್ನಿನಿಂದ ಹೊರಹಾಕುವ ಅಥವಾ ಭಾರತಕ್ಕೆ ರವಾನಿಸುವ ಸಾಧ್ಯತೆ ಇದೆ. ಇನ್ನು ಎಂಟು ಮಂದಿಗೆ ಕಾಲಕಾಲಕ್ಕೆ ಗೃಹ ಸಚಿವಾಲಯಕ್ಕೆ ಬಂದು ಸಹಿ ಹಾಕುವಂತೆ ಸೂಚಿಸಲಾಗಿದೆ.

ಇವರೆಲ್ಲ ಕೆಲಸ ಮಾಡುತ್ತಿದ್ದ ಎರಡು ಘಟಕಗಳು ಅಕ್ರಮವಾಗಿ ಕಾರ್ಮಿಕರನ್ನು ನೇಮಿಸಿಕೊಂಡಿದ್ದು ಅಥವಾ ಕೆಲಸಕ್ಕೆ ನೇಮಿಸಿಕೊಳ್ಳುವ ಮೊದಲು ಅವರ ಪೂರ್ವಾಪರ ಪರಿಶೀಲಿಸಲು ವಿಫಲವಾಗಿದ್ದು ಸಾಬೀತಾದರೆ ಅವುಗಳಿಗೆ ದಂಡ ವಿಧಿಸುವ ಸಾಧ್ಯತೆ ಇದೆ.

'ಜನರನ್ನು ಕಳ್ಳಸಾಗಣೆ ಮಾಡುವವರು, ಬ್ರಿಟನ್ನಿನಲ್ಲಿ ಕೆಲಸ ಮಾಡಲು ಅವಕಾಶ ಸಿಗುತ್ತದೆ ಎಂದು ಸುಳ್ಳು ಹೇಳಿರುತ್ತಾರೆ. ಆದರೆ ವಾಸ್ತವ ಏನೆಂದರೆ, ಅವರಿಗೆ ಕೆಲಸ ಮಾಡಲು ಅವಕಾಶ ಇರುವುದಿಲ್ಲ. ಅಕ್ರಮವಾಗಿ ಕೆಲಸ ಮಾಡುತ್ತಿರುವವರು, ಅಕ್ರಮವಾಗಿ ಕೆಲಸ ಮಾಡುವುದಕ್ಕೆ ನೆರವಾಗುವವರು ಕಾನೂನಿನ ಕ್ರಮ ಎದುರಿಸಬೇಕಾಗುತ್ತದೆ' ಎಂದು ವಲಸೆ ಅಧಿಕಾರಿಯೊಬ್ಬರು ಎಚ್ಚರಿಸಿದ್ದಾರೆ.



ಜಸ್‌ಪ್ರೀತ್ ಬೂಮ್ರಾಗೆ 5 ವಿಕೆಟ್ • ಮಿಂಚಿದ ಇಶಾನ್ ಕಿಶಾನ್, ಬೆಳಗಿದ ಸೂರ್ಯ

ಮುಂಬೈಗೆ ಸವಾಲಾಗದ ಆರ್‌ಸಿಬಿ

ಮುಂಬೈ (ಪಿಟಿಐ): 'ಇಶಾನ್ ಕಿಶನ್ ಮತ್ತು ರೋಹಿತ್ ಶರ್ಮಾ ಅವರು ಶತಕದ ಜೊತೆಯಾಟದಿಂದ ಮುಂಬೈ ಇಂಡಿಯನ್ಸ್ ತಂಡಕ್ಕೆ ಭದ್ರ ಅಡಿಪಾಯ ಹಾಕಿಕೊಟ್ಟ ನಂತರ ಸೂರ್ಯಕುಮಾರ್ ಯಾದವ್ ಕೇವಲ 19 ಎಸೆತಗಳಲ್ಲಿ 52 ರನ್ ಬಾರಿಸಿದರು. ಅವರ ವೈಭವದ ಆಟದಿಂದ ಮುಂಬೈ ತಂಡ, ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಆರ್‌ಸಿಬಿ 8 ವಿಕೆಟ್‌ಗೆ 196 ರನ್ ಗಳಿಸಿತು. ಈ ಮೊತ್ತ ಲೆಕ್ಕವೇ ಅಲ್ಲ ಎನ್ನುವಂತೆ ಆಡಿದ ಮುಂಬೈ ಇಂಡಿಯನ್ಸ್ ಇನ್ನೂ 27 ಎಸೆತಗಳು ಉಳಿದಿರುವಂತೆಯೇ 3 ವಿಕೆಟ್ ನಷ್ಟದಲ್ಲಿ 199 ರನ್ ಗಳಿಸಿತು.

ಮುಂಬೈ ವೇಗಿ ಜಸ್‌ಪ್ರೀತ್ ಬೂಮ್ರಾ 21 ರನ್ನಿಗೆ 5 ವಿಕೆಟ್ ಪಡೆದಿದ್ದು ಕಡಿಮೆ ಸಾಧನೆಯೇನೂ ಆಗಿರಲಿಲ್ಲ. ಅವರಿಗೆ ಎರಡು ಬಾರಿ ಹ್ಯಾಟ್ರಿಕ್ ಅವಕಾಶ ತಪ್ಪಿತು. ಐದು ವಿಕೆಟ್ ಗೊಂಚಲಲ್ಲಿ ವಿರಾಟ್ ಕೊಹ್ಲಿ ವಿಕೆಟ್ ಸಹ ಒಳಗೊಂಡಿತ್ತು.

ಇದು ಬೆಂಗಳೂರಿನ ತಂಡಕ್ಕೆ ಆರು ಪಂದ್ಯಗಳಲ್ಲಿ ಐದನೇ ಸೋಲು.

ರೋಹಿತ್ ಶರ್ಮಾ ಮತ್ತು ಇಶಾನ್ ಕಿಶನ್ (69, 34ಎ, 4x7, 6x5) ಮೊದಲ ವಿಕೆಟ್‌ಗೆ ಕೇವಲ 52 ಎಸೆತಗಳಲ್ಲಿ 101 ರನ್ ಸೇರಿಸಿದಾಗಲೇ ಪಂದ್ಯ ಬಹುತೇಕ ಆರ್‌ಸಿಯ ಕೈಜಾರಿತ್ತು. ಟಿ20ಯಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಸೂರ್ಯಕುಮಾರ್ ನಂತರ ಎದುರಾಳಿ ತಂಡದ ದುರ್ಬಲ ದಾಳಿಯನ್ನು ಹಿಗ್ಗಾಮುಗ್ಗ ದಂಡಿಸಿದರು. 5 ಬೌಂಡರಿ, 4 ಸಿಕ್ಸರ್‌ಗಳನ್ನೆತ್ತಿ ತಂಡವನ್ನು ಗೆಲುವಿನ ಬಳಿ ತಂದು ನಿಲ್ಲಿಸಿದರು. ಆಕಾಶ್ ದೀಪ್ ಮಾಡಿದ ಇನಿಂಗ್ಸ್‌ನ 16ನೇ ಓವರ್‌ನ ಮೂರನೇ ಎಸೆತವನ್ನು ಡೀಪ್ ಕವರ್ಸ್ ಮೇಲೆ ಸಿಕ್ಸರ್ ಎತ್ತಿದ ನಾಯಕ ಹಾರ್ದಿಕ್ ಪಾಂಡ್ಯ (6 ಎಸೆತಗಳಲ್ಲಿ 21) ಅವರು ಗೆಲುವಿನ ವಿಧಿಯನ್ನು ಪೂರ್ಣಗೊಳಿಸಿದರು.

ಇದಕ್ಕೆ ಮೊದಲು, ರಾಯಲ್ ಚಾಲೆಂಜರ್ಸ್ ತಂಡದ ಪರ ವಿರಾಟ್ ಕೊಹ್ಲಿ ಅಪರೂಪಕ್ಕೆ ವಿಫಲರಾದರು. ಮೊದಲನೇ ಓವರ್‌ನಲ್ಲಿ ಬೂಮ್ರಾ ಹಾಕಿದ ಒಳ್ಳೆಯ ಲೆಂಗ್ತ್ ಎಸೆತವನ್ನು ಆಡುವ ಪ್ರಯತ್ನದಲ್ಲಿ ಬ್ಯಾಟ್ ಅಂಚಿಗೆ ತಾಗಿದ ಚೆಂಡು ವಿಕೆಟ್‌ಕೀಪರ್ ಇಶಾನ್ ಕಿಶನ್ ಕೈಸೇರಿತು. ಆದರೆ ತಂಡ ಕುಸಿಯಲಿಲ್ಲ. ನಾಯಕ ಫಫ್ ಡುಪ್ಲೆಸಿ (61) ಅವರು ಈ ಬಾರಿಯ ಲೀಗ್‌ನಲ್ಲಿ ಮೊದಲ ಅರ್ಧ ಶತಕ ಗಳಿಸಿದರು. ರಜತ್ ಪಾಟೀದಾರ್ (50) ಸಹ ಅರ್ಧ ಶತಕ ಹೊಡೆದರಲ್ಲದೆ ಮೂರನೇ ವಿಕೆಟ್‌ಗೆ 82 ರನ್ ಜೊತೆಯಾಟವಾಡಿದರು.

ಆದರೆ ಇನಿಂಗ್ಸ್‌ನಲ್ಲಿ ಎದ್ದುಕಂಡಿದ್ದು ಕೊನೆಗಳಿಗೆಯಲ್ಲಿ ದಿನೇಶ್ ಕಾರ್ತಿಕ್ (ಅಜೇಯ 53, 23ಎ, 4X5, 6X4) ಅವರ ಬೀಸಾಟ. ಅವರು ಎದುರಿಸಿದ ಕೊನೆಯ ಏಳು ಎಸೆತಗಳಲ್ಲಿ ನಾಲ್ಕು ಸಿಕ್ಸರ್, ಒಂದು ಬೌಂಡರಿ ಬಾರಿಸಿ ತಂಡದ ಮೊತ್ತವನ್ನು ಇನ್ನೂರರ ಸಮೀಪ ತಲುಪಿಸಿದರು. 230ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಕನ್ನಡಿಗ, ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರು, ಸತತವಾಗಿ ವಿಫಲರಾಗುತ್ತಿರುವ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ವಿಕೆಟ್ ಪಡೆದರು. ಮೊದಲ ಸಲ ಅವಕಾಶ ಪಡೆದ ಆಲ್‌ರೌಂಡರ್ ವಿಲ್ ಜಾಕ್ಸ್ ಕೂಡ ಗಮನ ಸೆಳೆಯಲಿಲ್ಲ. ಎಲ್ಲ ಬೌಲರ್‌ಗಳ ಇಕಾನಮಿ ದರ ಎರಡಂಕಿ ದಾಟಿತ್ತು.



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೈಶಾಖ ವಿಜಯಕುಮಾರ್ ವಿಕೆಟ್ ಪಡೆದ ಸಂಭ್ರಮವನ್ನು ಜಸ್‌ಪ್ರೀತ್ ಬೂಮ್ರಾ ಅವರು ಸಹ ಆಟಗಾರ ರೋಹಿತ್ ಶರ್ಮಾ ಅವರೊಂದಿಗೆ ಹಂಚಿಕೊಂಡರು. ಎಎಫ್‌ಪಿ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	5	4	1	8	0.871
ಕೋಲ್ಕತ್ತ ನೈಟ್ ರೈಡರ್ಸ್	4	3	1	6	1.528
ಲಖನೌ ಸೂಪರ್ ಜೈಂಟ್ಸ್	4	3	1	6	0.775
ಚೆನ್ನೈ ಸೂಪರ್ ಕಿಂಗ್ಸ್	5	3	2	6	0.666
ಸನ್‌ರೈಸರ್ಸ್ ಹೈದರಾಬಾದ್	5	3	2	6	0.344
ಗುಜರಾತ್ ಟೈಟನ್ಸ್	6	3	3	6	-0.637
ಮುಂಬೈ ಇಂಡಿಯನ್ಸ್	5	2	3	4	-0.073
ಪಂಜಾಬ್ ಕಿಂಗ್ಸ್	5	2	3	4	-0.196
ರಾಯಲ್ ಚಾಲೆಂಜರ್ಸ್ ಬೆಂಗಳೂರು	6	1	5	2	-1.124
ಡೆಲ್ಲಿ ಕ್ಯಾಪಿಟಲ್ಸ್	5	1	4	2	-1.370

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (316 ರನ್)

ಪರ್ಪಲ್ ಕ್ಯಾಪ್: ಯಜುವೇಂದ್ರ ಚಾಹಲ್, ರಾಜಸ್ಥಾನ ರಾಯಲ್ಸ್ (10 ವಿಕೆಟ್)

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 8ಕ್ಕೆ 196 (20 ಓವರುಗಳಲ್ಲಿ)
ಕೊಹ್ಲಿ ಸಿ ಇಶಾನ್ ಬಿ ಬೂಮ್ರಾ 3 (9ಎ)
ಡುಪ್ಲೆಸಿ ಸಿ ಡೇವಿಡ್ ಬಿ ಬೂಮ್ರಾ 61 (40ಎ, 4x4, 6x3)
ವಿಲ್ ಜಾಕ್ಸ್ ಸಿ ಡೇವಿಡ್ ಬಿ ಮಧ್ವಾಲ್ 8 (6ಎ, 4x2)
ಪಾಟೀದಾರ್ ಸಿ ಇಶಾನ್ ಬಿ ಕೋಝಿ 50 (26ಎ, 4x3, 6x4)
ಮ್ಯಾಕ್ಸ್‌ವೆಲ್ ಎಲ್‌ಬಿಡಬ್ಲ್ಯು ಬಿ ಗೋಪಾಲ್ 0 (4)
ಕಾರ್ತಿಕ್ ಔಟಾಗದೆ 53 (23ಎ, 4x5, 6x4)
ಲೊಮ್ರೋರ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 0 (1)
ಸೌರವ್ ಸಿ ಮಧ್ವಾಲ್ ಬಿ ಬೂಮ್ರಾ 9 (8ಎ, 4x1)
ಆಕಾಶ್ ದೀಪ್ ಔಟಾಗದೆ 2 (2ಎ)
ಇತರೆ: 10 (ಬೈ 1, ಲೆಗ್‌ಬೈ 1, ವೈಡ್ 8)
ವಿಕೆಟ್ ಪತನ: 1–14 (ವಿರಾಟ್ ಕೊಹ್ಲಿ, 2.3), 2–23 (ವಿಲ್ ಜಾಕ್ಸ್, 3.4), 3–105 (ರಜತ್ ಪಾಟೀದಾರ್, 11.3), 4–108 (ಗ್ಲೆನ್ ಮ್ಯಾಕ್ಸ್‌ವೆಲ್, 12.2), 5–153 (ಫಫ್ ಡುಪ್ಲೆಸಿ, 16.4), 6–153 (ಮಹಿಪಾಲ್ ಲೊಮ್ರೋರ್ 16.5), 7–170 (ಸೌರವ್ ಚೌಹಾನ್, 18.3), 8–170 (ವೈಶಾಖ ವಿಜಯಕುಮಾರ್, 18.4),
ಬೌಲಿಂಗ್: ಮೊಹಮ್ಮದ್ ನಬಿ 1–0–7–0; ಜೆರಾಲ್ಡ್ ಕೋಝಿ 4–0–42–1; ಜಸ್‌ಪ್ರೀತ್ ಬೂಮ್ರಾ 4–0–21–5; ಆಕಾಶ್ ಮಧ್ವಾಲ್ 4–0–57–1; ಶ್ರೇಯಸ್ ಗೋಪಾಲ್ 4–0–32–1; ರೊಮಾರಿಯೊ ಶೆಫರ್ಡ್ 2–0–22–0; ಹಾರ್ದಿಕ್ ಪಾಂಡ್ಯ 1–0–13–0.

ಮುಂಬೈ ಇಂಡಿಯನ್ಸ್ 3ಕ್ಕೆ199 (15.3 ಓವರ್)
ಇಶಾನ್ ಸಿ ಕೊಹ್ಲಿ ಬಿ ಆಕಾಶ್ ದೀಪ್ 69 (34ಎ, 4X7, 6X5)
ರೋಹಿತ್ ಸಿ ಟೋಪ್ಲೆ ಬಿ ಜಾಕ್ಸ್ 38 (24ಎ, 4X3, 6X3)
ಸೂರ್ಯಕುಮಾರ್ ಸಿ ಲೊಮ್ರೋರ್ ಬಿ ವಿಜಯಕುಮಾರ್ 52 (19ಎ, 4X5, 6X4)
ಹಾರ್ದಿಕ್ ಪಾಂಡ್ಯ ಔಟಾಗದೆ 21 (6ಎ, 6X3)
ತಿಲಕ್ ವರ್ಮಾ ಔಟಾಗದೆ 16 (10ಎ, 4X3)
ಇತರೆ: 3 (ವೈಡ್ 3)
ವಿಕೆಟ್ ಪತನ: 1–101 (ಇಶಾನ್ ಕಿಶನ್, 8.5), 2–139 (ರೋಹಿತ್ ಶರ್ಮಾ, 11.2), 3–176 (ಸೂರ್ಯಕುಮಾರ್ ಯಾದವ್, 13.3)
ಬೌಲಿಂಗ್: ರೀಸ್ ಟೋಪ್ಲೆ 3–0–34–0, ಮೊಹಮ್ಮದ್ ಸಿರಾಜ್ 3–0–37–0, ಆಕಾಶ್ ದೀಪ್ 3.3–0–55–1, ಗ್ಲೆನ್ ಮ್ಯಾಕ್ಸ್‌ವೆಲ್ 1–0–17–0, ವೈಶಾಖ ವಿಜಯಕುಮಾರ್ 3–0–32–1, ವಿಲ್ ಜಾಕ್ಸ್ನ್ 2–0–24–1

ಪಂದ್ಯದ ಆಟಗಾರ: ಜಸ್‌ಪ್ರೀತ್ ಬೂಮ್ರಾ

ಜಯದ ಓಟದತ್ತ ರಾಹುಲ್ ಚಿತ್ತ

ಲಖನೌ ಸೂಪರ್‌ಜೈಂಟ್ಸ್–ಡೆಲ್ಲಿ ಕ್ಯಾಪಿಟಲ್ಸ್ ಹಣಾಹಣಿ ಇಂದು



ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ಕೆ.ಎಲ್. ರಾಹುಲ್ –ಪಿಟಿಐ ಚಿತ್ರ



ಡೆಲ್ಲಿ ಕ್ಯಾಪಿಟಲ್ಸ್ ತಂಡದ ಟ್ರಿಸ್ಟನ್ ಸ್ಟಬ್ಸ್ –ಪಿಟಿಐ ಚಿತ್ರ

ಲಖನೌ (ಪಿಟಿಐ): ಸತತ ಮೂರು ಪಂದ್ಯಗಳಲ್ಲಿ ಗೆದ್ದು ತುಂಬು ಆತ್ಮವಿಶ್ವಾಸದಲ್ಲಿರುವ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡವು ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಕಣಕ್ಕಿಳಿಯಲಿದೆ.

ರಿಷಭ್ ಪಂತ್ ನಾಯಕತ್ವದ ಡೆಲ್ಲಿ ತಂಡವು ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ. ತಂಡವು ಐದು ಪಂದ್ಯಗಳಲ್ಲಿ ಆಡಿದೆ. ಒಂದರಲ್ಲಿ ಗೆದ್ದು, ಉಳಿದ ಪಂದ್ಯಗಳಲ್ಲಿ ಸೋತಿದೆ. ರಾಹುಲ್ ಬಳಗವು ಮೂರನೇ ಸ್ಥಾನದಲ್ಲಿದೆ. ಎಲ್ಲ ವಿಭಾಗಗಳಲ್ಲಿಯೂ ಸಮತೋಲನ ಸಾಧಿಸಿರುವ ಲಖನೌ ತಂಡವು ಮೇಲ್ನೋಟಕ್ಕೆ ಡೆಲ್ಲಿಗಿಂತ ಬಲಿಷ್ಠವಾಗಿದೆ.

ಆದರೆ ತಂಡದ ಯುವ ವೇಗಿ ಮಯಂಕ್ ಯಾದವ್ ಅವರು ಈ ಪಂದ್ಯದಲ್ಲಿ ಕಣಕ್ಕಿಳಿಯುವುದು ಅನುಮಾನ. 150 ಕಿಲೋಮೀಟರ್ಸ್‌ಗಿಂತಲೂ ಹೆಚ್ಚು ವೇಗದ ಎಸೆತಗಳನ್ನು ಪ್ರಯೋಗಿಸುವ ಮೂಲಕ ಗಮನ ಸೆಳೆದಿದ್ದಾರೆ. ಅಲ್ಲದೇ ಲಖನೌ ತಂಡವು ಎರಡು ಪಂದ್ಯಗಳಲ್ಲಿ ಜಯಿಸಲು 21 ವರ್ಷದ ಬೌಲರ್ ಕಾರಣರಾಗಿದ್ದರು. ಕಳೆದ ಪಂದ್ಯದಲ್ಲಿ ಅವರು ಗುಜರಾತ್ ಟೈಟನ್ಸ್ ಎದುರು ಒಂದು ಓವರ್ ಮಾತ್ರ ಹಾಕಿದ್ದರು. ಹೊಟ್ಟೆನೋವಿನಿಂದಾಗಿ ಅಂಗಳ ತೊರೆದು ವಿಶ್ರಾಂತಿಗೆ ತೆರಳಿದ್ದರು. ಅವರ ಗೈರು ಹಾಜರಿಯಲ್ಲಿ ಯಶ್ ಠಾಕೂರ್ ಐದು ವಿಕೆಟ್ ಗಳಿಸಿ ಮಿಂಚಿದ್ದರು.

ಅವರೊಂದಿಗೆ ನವೀನ್ ಉಲ್ ಹಕ್, ಕೃಣಾಲ್ ಪಾಂಡ್ಯ ಮತ್ತು ಲೆಗ್ ಸ್ಪಿನ್ನರ್ ರವಿ ಬಿಷ್ಣೋಯಿ ಅವರು ಬೌಲಿಂಗ್ ಹೊಣೆ ನಿಭಾಯಿಸುವರು. ಬ್ಯಾಟಿಂಗ್ ಕೂಡ ಬಲಿಷ್ಠವಾಗಿದೆ. ಕ್ವಿಂಟನ್ ಡಿ ಕಾಕ್ ಮತ್ತು ರಾಹುಲ್ ಉತ್ತಮ ಆರಂಭ ನೀಡುವ ಸಮರ್ಥರು. ಕ್ವಿಂಟನ್ ಈಗಾಗಲೇ ಎರಡು ಅರ್ಧಶತಕಗಳನ್ನು ದಾಖಲಿಸಿದ್ದಾರೆ. ನಿಕೊಲಸ್ ಪೂರನ್ ಅಂತೂ ಸ್ಫೋಟಕ ಫಾರ್ಮ್‌ನಲ್ಲಿದ್ದಾರೆ. ಅವರಿಂದಾಗಿ ತಂಡಕ್ಕೆ ಕೊನೆ ಹಂತದ ಓವರ್‌ಗಳಲ್ಲಿ ರನ್‌ಗಳು ಸರಾಗವಾಗಿ ಹರಿದು ಬರುತ್ತಿವೆ. ಆದರೆ ಕನ್ನಡಿಗ ದೇವದತ್ತ ಪಡಿಕ್ಕಲ್ ಇನ್ನೂ ಲಯ ಕಂಡುಕೊಳ್ಳಬೇಕಿದೆ.

ಈಚೆಗೆ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಹೆಚ್ಚು ರನ್ ಬಿಟ್ಟುಕೊಟ್ಟಿದ್ದ ಡೆಲ್ಲಿ ಬೌಲರ್‌ಗಳು ಸೋಲಿಗೆ ಕಾರಣರಾಗಿದ್ದರು. ಅನುಭವಿ ಇಶಾಂತ್ ಶರ್ಮಾ, ಖಲೀಲ್ ಅಹಮದ್, ಸ್ಪಿನ್ನರ್ ಅಕ್ಷರ್ ಪಟೇಲ್ ಹಾಗೂ ಹೆನ್ರಿಚ್ ನಾಕಿಯಾ ಅವರು ಪ್ರಮುಖ ಬೌಲರ್‌ಗಳಾಗಿದ್ದಾರೆ. ಆದರೆ ನಾಯಕ ರಿಷಭ್ ಬ್ಯಾಟಿಂಗ್ ಲಯಕ್ಕೆ ಮರಳಿರುವುದು ತಂಡದಲ್ಲಿ ಸಮಾಧಾನ ಮೂಡಿಸಿದೆ. ತಂಡದಲ್ಲಿರುವ ಪಟಾಕಿಯಂತೆ ಸಿಕ್ಸರ್, ಬೌಂಡರಿ ಸಿಡಿಸುವ ಟ್ರಿಸ್ಟನ್ ಸ್ಟಬ್ಸ್ ಅವರಿಂದಾಗಿ ಮಧ್ಯಮ ಕ್ರಮಾಂಕ ಬಲಿಷ್ಠವಾಗಿದೆ. ಅಭಿಷೇಕ್ ಪೊರೆಲ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದರು. ಆದರೆ ಉಳಿದವರಿಂದ ನಿರೀಕ್ಷೆಯ ಮಟ್ಟದಲ್ಲಿ ರನ್‌ಗಳು ಹರಿದಿಲ್ಲ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ:ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್.


ಕೊಲೆ ಪ್ರಕರಣದ ಆರೋಪದಿಂದ ಕಳಂಕ

ಫುಟ್‌ಬಾಲ್ ದಿಗ್ಗಜ ಸಿಂಪ್ಸನ್ ನಿಧನ

ಲಾಸ್ ವೇಗಸ್ (ಎಪಿ): ಅಮೆರಿಕದ ಸಾರ್ವಕಾಲಿಕ ಶ್ರೇಷ್ಠ ಫುಟ್‌ಬಾಲ್ ತಾರೆ ಹಾಗೂ ಹಾಲಿವುಡ್ ನಟ ಓ.ಜೆ.ಸಿಂಪ್ಸನ್ (76) ಅವರು ಬುಧವಾರ ರಾತ್ರಿ ನಿಧನರಾದರು.

ಫುಟ್‌ಬಾಲ್ ಕ್ಷೇತ್ರ, ನಂತರ ನಟನೆ ಹಾಗೂ ಜಾಹೀರಾತು ರಂಗದಲ್ಲಿ ಮಿಂಚಿದ್ದ ಅವರು ಖ್ಯಾತಿಯ ಉತ್ತುಂಗಕ್ಕೆ ಏರಿದ್ದರು. ಆದರೆ 1994ರ ಜೂನ್‌ನಲ್ಲಿ ಲಾಸ್ ಏಂಜಲಿಸ್‌ನಲ್ಲಿ ಮಾಜಿ ಪತ್ನಿ ಮತ್ತು ಆಕೆಯ ಸ್ನೇಹಿತನನ್ನು ದಾರುಣವಾಗಿ ಹತ್ಯೆಗೈದ ಆರೋಪ ಅವರ ಹೆಸರಿಗೆ ಕಳಂಕ ತಂದಿತು. 9 ತಿಂಗಳ ಕಾಲ ವಿಚಾರಣೆ ನಡೆದು 1995ರ ಅಕ್ಟೋಬರ್‌ನಲ್ಲಿ ಅವರು ಖುಲಾಸೆಗೊಂಡಿದ್ದರು.

ಒರೆಂಥಾಲ್ ಜೇಮ್ಸ್ ಸಿಂಪ್ಸನ್ ಅವರು ಬುಧವಾರ ರಾತ್ರಿ ಲಾಸ್ ವೇಗಸ್‌ನಲ್ಲಿ ನಿಧನರಾಗಿದ್ದಾರೆ ಎಂದು ಅವರ ಕುಟುಂಬ 'ಎಕ್ಸ್' ಜಾಲತಾಣದಲ್ಲಿ ಗುರುವಾರ ಪ್ರಕಟಿಸಿದೆ. ಅವರು ಪ್ರಾಸ್ಟೇಟ್ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾರೆ ಎಂದು ತಿಳಿಸಲಾಗಿದೆ. ಅವರು ಕೊನೆಯುಸಿರೆಳೆದಾಗ ಮಕ್ಕಳು ಮತ್ತು ಮರಿಮಕ್ಕಳು ಜೊತೆಗಿದ್ದರು ಎಂದೂ ಹೇಳಿಕೆ ತಿಳಿಸಿದೆ.



ಓ.ಜೆ.ಸಿಂಪ್ಸನ್ ಎಎಫ್‌ಪಿ ಚಿತ್ರ

1994ರ ಕೊಲೆ ಪ್ರಕರಣದ ನಂತರ ಪೊಲೀಸರು ಅವರನ್ನು ಬೆನ್ನಟ್ಟಿ ಬಂಧಿಸಿದ ದೃಶ್ಯ ಟಿ.ವಿ.ಗಳಲ್ಲಿ ನೇರಪ್ರಸಾರ ಆಗಿತ್ತು. ಅತಿ ಹೆಚ್ಚು ಜನರು ಅದನ್ನು ವೀಕ್ಷಿಸಿದ್ದರು.

ಕೊಲೆ ಪ್ರಕರಣದಲ್ಲಿ ದೋಷಮುಕ್ತರಾದರೂ, ಸಿವಿಲ್ ಪ್ರಕರಣದಲ್ಲಿ ಅವರು ಗೋಲ್ಡ್‌ಮನ್ ಕುಟುಂಬಕ್ಕೆ ಪರಿಹಾರವಾಗಿ ಸುಮಾರು ₹279 ಕೋಟಿ (33.5 ದಶಲಕ್ಷ ಡಾಲರ್) ನೀಡಬೇಕೆಂದು ಆದೇಶ ನೀಡಲಾಗಿತ್ತು. ಇದರಲ್ಲಿ ಬಹುಪಾಲು ಬಾಕಿವುಳಿಸಿದ್ದರು.

ಅಮೆರಿಕದ ನ್ಯಾಷನಲ್ ಫುಟ್‌ಬಾಲ್ ಲೀಗ್‌ನಲ್ಲಿ ಅವರು ಹಾಲ್ ಆಫ್ ಫೇಮ್ ಗೌರವಕ್ಕೆ ಪಾತ್ರರಾಗಿದ್ದರು. 1973ರಲ್ಲಿ ಅವರು 'ಅತಿ ಅಮೂಲ್ಯ ಆಟಗಾರ' ಗೌರವವನ್ನೂ ಪಡೆದಿದ್ದರು. ಫುಟ್‌ಬಾಲ್‌ಗೆ ವಿದಾಯ ಹೇಳಿ ಚಿತ್ರರಂಗ ಮತ್ತು ಜಾಹೀರಾತುಗಳಲ್ಲಿ ನಟಿಸತೊಡಗಿದ ನಂತರ ಅವರ ಜನಪ್ರಿಯತೆ ಇನ್ನಷ್ಟು ಏರಿತ್ತು. ಕಿತ್ತಲೆಹಣ್ಣಿನ ರಸದಿಂದ ಹಿಡಿದು ಕಾರ್ ರೆಂಟಲ್‌ವರೆಗಿನ ಜಾಹೀರಾತುಗಳಲ್ಲಿ ಅವರು ಕಾಣಿಸಿಕೊಂಡಿದ್ದರು.

ದೇಶದ ಅತಿ ಹೆಚ್ಚು ಜನಪ್ರಿಯ ಕಪ್ಪು ವರ್ಣೀಯ ವ್ಯಕ್ತಿಯಾಗಿ ಪ್ರಸಿದ್ಧಿ ಪಡೆದಿದ್ದರು.

ಶ್ರವಣದೋಷವುಳ್ಳ ಆಟಗಾರರ ಐಪಿಎಲ್ 16ರಿಂದ

ನವದೆಹಲಿ (ಪಿಟಿಐ):ಎಂಟು ತಂಡಗಳು, ಇದೇ ತಿಂಗಳ 16 ರಿಂದ 19ರವರೆಗೆ ಜಮ್ಮುವಿನಲ್ಲಿ ಟಿ20 ಶ್ರವಣದೋಷವುಳ್ಳ ಆಟಗಾರರ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಭಾಗವಹಿಸಲಿವೆ.

ಡೆಫ್ ಪಂಜಾಬ್ ಲಯನ್ಸ್, ಡೆಫ್ ರಾಜಸ್ತಾನ್ ರಾಯಲ್ಸ್, ಡೆಫ್ ಕೊಚ್ಚಿ ಟಸ್ಕರ್ಸ್, ಡೆಫ್ ಡೆಲ್ಲಿ ಬುಲ್ಸ್, ಡೆಫ್ ಕೋಲ್ಕತ್ತ ವಾರಿಯರ್ಸ್, ಡೆಫ್ ಚೆನ್ನೈ ಬ್ಲಾಸ್ಟರ್ಸ್, ಡೆಫ್ ಹೈದರಾಬಾದ್ ಈಗಲ್ಸ್ ಮತ್ತು ಡೆಫ್ ಬೆಂಗಳೂರು ಬಾದಶಾಸ್.

ಫೈನಲ್‌ಗಿಂತ ಮೊದಲು 14 ಪಂದ್ಯಗಳು ನಡೆಯಲಿವೆ ಎಂದು ಇಂಡಿಯನ್ ಡೆಫ್ ಕ್ರಿಕೆಟ್ ಅಸೋಸಿಯೇಷನ್ ಹೇಳಿಕೆಯಲ್ಲಿ ತಿಳಿಸಿದೆ. ಜಮ್ಮುವಿನ ಮೌಲಾನಾ ಆಜಾದ್ ಸ್ಟೇಡಿಯಂನಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ. ಚಾಂಪಿಯನ್ ತಂಡ ₹2 ಲಕ್ಷ ಹಾಗೂ ರನ್ನರ್ ಅಪ್ ತಂಡ ₹1 ಲಕ್ಷ ಪಡೆಯಲಿವೆ

ಸೈರಸ್ ಪೂನಾವಾಲಾ ಗ್ರೂಫ್ ಆಫ್ ಕಂಪನಿಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸಹಯೋಗದಲ್ಲಿ ಟೂರ್ನಿ ನಡೆಯಲಿದೆ.

ಪ್ರಜ್ಞಾನಂದ, ವಿದಿತ್‌ಗೆ ಅಮೋಘ ಗೆಲುವು

ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ: ಭಾರತದ ಆಟಗಾರ್ತಿಯರಿಗೆ ಸೋಲು

ಟೊರಾಂಟೊ (ಪಿಟಿಐ): ಗ್ರ್ಯಾಂಡ್‌ಮಾಸ್ಟರ್‌ಗಳಾದ ಆರ್.ಪ್ರಜ್ಞಾನಂದ ಮತ್ತು ವಿದಿತ್ ಎಸ್.ಗುಜರಾತಿ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಆರನೇ ಸುತ್ತಿನಲ್ಲಿ ಅಮೋಘ ಜಯ ಗಳಿಸಿದರು.

ಇನ್ನೊಂದೆಡೆ ಭಾರತದ ಇನ್ನೊಬ್ಬ ಆಟಗಾರ ಡಿ.ಗುಕೇಶ್ ಅವರು ಅಮೆರಿಕದ ಹಿಕಾರು ನಕಾಮುರಾ ಜೊತೆ ಡ್ರಾ ಸಾಧಿಸಿ ಜಂಟಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಪ್ರಜ್ಞಾನಂದ ಅವರು ಬುಧವಾರ ನಡೆದ ಆರನೇ ಸುತ್ತಿನ ಪಂದ್ಯದಲ್ಲಿ ಅಜರ್‌ಬೈಜಾನ್‌ನ ನಿಜತ್ ಅಬಸೋವ್ ಅವರನ್ನು 45 ನಡೆಗಳಲ್ಲಿ ಸೋಲಿಸಿದರು. ಮಧ್ಯೆ ಎರಡು ಸುತ್ತುಗಳಲ್ಲಿ ಹಿನ್ನಡೆ ಕಂಡಿದ್ದ ಗುಜರಾತಿ ಅವರು ಬಿಳಿ ಕಾಯಿಗಳಲ್ಲಿ ಆಡಿ ಇನ್ನೊಂದು ಪಂದ್ಯದಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಅವರನ್ನು 40 ನಡೆಗಳಲ್ಲಿ ಸೋಲಿಸಿದರು.

ಇನ್ನೂ ಎಂಟು ಸುತ್ತುಗಳು ಉಳಿದಿರುವಂತೆ, ಓಪನ್ ವಿಭಾಗದಲ್ಲಿ 17 ವರ್ಷದ ಗುಕೇಶ್ ಮತ್ತು ಇಯಾನ್ ನೆಪೊಮ್‌ನಿಯಾಚಿ ಅವರು ತಲಾ ನಾಲ್ಕು ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಕರುವಾನಾ ಮತ್ತು ಪ್ರಜ್ಞಾನಂದ ತಲಾ 3.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.



ಆರನೇ ಸುತ್ತಿನ ಪಂದ್ಯದಲ್ಲಿ ಎದುರಾಳಿಗಳಾಗಿದ್ದ ಗುಕೇಶ್ ಮತ್ತು ಹಿಕಾರು ನಕಾಮುರಾ. ಪಿಟಿಐ ಚಿತ್ರ

ಎರಡನೇ ಶ್ರೇಯಾಂಕದ ಹಿಕಾರು ನಕಾಮುರಾ ಮತ್ತು ವಿದಿತ್ ಗುಜರಾತಿ ತಲಾ ಮೂರು ಪಾಯಿಂಟ್ಸ್ ಶೇಖರಿಸಿದ್ದಾರೆ. ಅಬಸೋವ್ ಮತ್ತು ಅಲಿರೇಝಾ (ತಲಾ 1.5) ಕೊನೆಯ ಸ್ಥಾನದಲ್ಲಿದ್ದಾರೆ.

ಫಿಡೆ ಧ್ವಜದಡಿ ಆಡುತ್ತಿರುವ ರಷ್ಯನ್ ಆಟಗಾರ ನೆಪೊಮ್‌ನಿಯಾಚಿ ಅವರು ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನಾ (ಅಮೆರಿಕ) ಜೊತೆ ಡ್ರಾ ಮಾಡಿಕೊಂಡರು.

ವೈಶಾಲಿ, ಹಂಪಿಗೆ ಹಿನ್ನಡೆ: ಮಹಿಳೆಯರ ವಿಭಾಗದಲ್ಲಿ, ಪ್ರಜ್ಞಾನಂದ ಅವರ ಅಕ್ಕ ಆರ್.ವೈಶಾಲಿ ಹಿನ್ನಡೆ ಅನುಭವಿಸಿದರು. ಫಿಡೆ ಪ್ರತಿನಿಧಿಸುತ್ತಿರುವ ರಷ್ಯಾದ ಕ್ಯಾಥರಿನಾ ಲಾಗ್ನೊ ಅವರು ಆರನೇ ಸುತ್ತಿನಲ್ಲಿ ವೈಶಾಲಿ ವಿರುದ್ಧ ಜಯಗಳಿಸಿದರು. ಕೋನೇರು ಹಂಪಿ ಕೂಡ ಸೋಲನುಭವಿಸಿದರು. ಚೀನಾದ ಟಿಂಗ್ಜಿ ಲೀ ಅವರು ಭಾರತ ಗ್ರ್ಯಾಂಡ್‌ಮಾಸ್ಟರ್ ಆಟಗಾರ್ತಿಯನ್ನು ಸೋಲಿಸಿದರು.

ವನಿತೆಯರ ವಿಭಾಗದ ಇನ್ನೆರಡು ಪಂದ್ಯಗಳಲ್ಲಿ ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ, ಬಲ್ಗೇರಿಯಾದ ನುರ್ಗ್ಯುಲ್ ಸಲಿಮೋವಾ ಅವರನ್ನು, ಚೀನಾದ ಝೊಂಗ್‌ವಿ ತಾನ್, ಉಕ್ರೇನ್‌ನ ಅನ್ನಾ ಮುಝಿಚುಕ್ ಅವರನ್ನು ಪರಾಭವಗೊಳಿಸಿದರು.

ಝೊಂಗ್‌ವಿ ತಾನ್ ಸದ್ಯ 4.5 ಪಾಯಿಂಟ್ಸ್ ಸಂಗ್ರಹಿಸಿ ಲೀಡ್‌ನಲ್ಲಿದ್ದಾರೆ. ಗೊರ್ಯಾಚ್ಕಿನಾ ಅವರಿಗಿಂತ ಅರ್ಧ ಪಾಯಿಂಟ್ಸ್ ಹಿಂದಿದ್ದು ಎರಡನೇ ಸ್ಥಾನದಲ್ಲಿದ್ದಾರೆ. ಲಾಗ್ನೊ 3.5 ಪಾಯಿಂಟ್ಸ್ ಸಂಗ್ರಹಿಸಿ ಮೂರನೇ ಸ್ಥಾನದಲ್ಲಿದ್ದಾರೆ. ವೈಶಾಲಿ ಮತ್ತು ಸಲಿಮೋವಾ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಅಚ್ಚರಿಯೆಂಬಂತೆ ಹಂಪಿ ಮತ್ತು ಮುಝಿಚುಕ್ (ತಲಾ 2 ಪಾಯಿಂಟ್) ಕೊನೆಯ ಸ್ಥಾನದಲ್ಲಿದ್ದಾರೆ.

ಬಿಎಫ್‌ಸಿ ಅಭಿಯಾನ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಎಫ್‌ಸಿ ತಂಡದ ಇಂಡಿಯನ್ ಸೂಪರ್ ಲೀಗ್ ಅಭಿಯಾನ ನಿರಾಶಾದಾಯಕ ಪ್ರದರ್ಶನದೊಡನೆ ಅಂತ್ಯಕಂಡಿತು. ಕೋಲ್ಕತ್ತದ ದೈತ್ಯ ತಂಡ ಮೋಹನ್ ಬಾಗನ್ ಸೂಪರ್ ಜೈಂಟ್ ತಂಡ ಶ್ರೀಕಂಠೀರವ ಕ್ರೀಡಾಂಗಣ ದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ 4–0 ಗೋಲುಗಳಿಂದ ಆತಿಥೇಯ ತಂಡವನ್ನು ಸೋಲಿಸಿತು.

ಸುಮಾರು 9,000 ಪ್ರೇಕ್ಷಕರ ಸಮ್ಮುಖದಲ್ಲಿ ಸಾಗಿದ ಈ ಪಂದ್ಯದಲ್ಲಿ ಹೆಕ್ಟರ್ ಯೂಸ್ಟೆ, ಮನ್ವೀರ್ ಸಿಂಗ್, ಅನಿರುದ್ಧ ಥಾಪಾ ಮತ್ತು ಅರ್ಮಾಂಡೊ ಸಾದಿಕು ಅವರು ಮೋಹನ್ ಬಾಗನ್ ಪರ ಗೋಲು ಗಳಿಸಿದರು. ಆದರೆ ಮೊದಲ ಅವಕಾಶ ದೊರೆತಿದ್ದು ಬಿಎಫ್‌ಸಿ ತಂಡಕ್ಕೆ. ಶಿವಾಲ್ಡೊ ಸಿಂಗ್ ಬಲಗಡೆಯಿಂದ ಎದುರಾಳಿ ರಕ್ಷಣೆ ಆಟಗಾರರನ್ನು ವಂಚಿಸಿ ಚೆಂಡನ್ನು ಚೆಟ್ರಿ ಅವರಿಗೆ ತಲುಪಿದರು. ಆದರೆ ನಾಯಕ ಹೆಡ್ ಮಾಡಿದ ಚೆಂಡು ಗೋಲಿನ ಮೇಲಿಂದ ಹಾದುಹೋಯಿತು.

ಎರಡೂ ತಂಡಗಳ ಆಟಗಾರರು ಆರಂಭದ ಕೆಲ ನಿಮಿಷ 'ಬಿಸಿ' ವಾತಾವರಣದಲ್ಲಿ ಆಡಿದರು. ಬಾಗನ್ ಆಟಗಾರರೊಂದಿಗೆ ವಾಗ್ವಾದದಲ್ಲಿ ತೊಡಗಿದ್ದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರಿಗೆ ಎಚ್ಚರಿಕೆ ನೀಡಲಾಯಿತು. ಇದಕ್ಕೆ ಮೊದಲು ರೆಫ್ರಿ ರಾಹುಲ್ ಗುಪ್ತಾ ಅವರು ಶಿವಾಲ್ಡೊ ಅವರಿಗೆ 'ಹಳದಿ ಕಾರ್ಡ್' ತೋರಿಸಿದರು.

ಸೆಂಟರ್ ಬ್ಯಾಕ್ ಹೆಕ್ಟರ್ ಯೂಸ್ಟೆ ಅವರು ಬಾಗನ್ ಪರ ಮೊದಲ ಗೋಲು ಗಳಿಸಿದರು. ಚೆಟ್ರಿ ಅವರು ಸಮ ಮಾಡುವ ಅವಕಾಶ ಕಳೆದುಕೊಂಡರು. ವಿರಾಮದ ನಂತರ ಬಾಗನ್ ಸ್ಪಷ್ಟ ಮೇಲುಗೈ ಸಾಧಿಸಿತು. 51ನೇ ನಿಮಿಷ ಮನ್ವೀರ್ ಅಂತರ ಹೆಚ್ಚಿಸಿದರು. 3 ನಿಮಿಷ ತರುವಾಯ ಅನಿರುದ್ಧ ಥಾಪಾ ಮುನ್ನಡೆಯನ್ನು 3–0ಗೆ ಹೆಚ್ಚಿಸಿದರು. 59ನೇ ನಿಮಿಷ ಅರ್ಮಾಂಡೊ ಸಾದಿಕು ನಾಲ್ಕನೇ ಗೋಲು ಗಳಿಸಿ ಬಾಗನ್ ಗೆಲುವಿನ ಅಂತರ ಹೆಚ್ಚಿಸಿದರು. ಮೋಹನ್ ಬಾಗನ್ ಈ ಗೆಲುವಿನೊಡನೆ 21 ಪಂದ್ಯಗಳಿಂದ 45 ಪಾಯಿಂಟ್ಸ್ ಸಂಗ್ರಹಿಸಿ ಲೀಗ್ ವ್ಯವಹಾರವನ್ನು ಎರಡನೇ ಸ್ಥಾನದಲ್ಲಿ ಮುಗಿಸಿತು. ಮುಂಬೈ ಎಫ್‌ಸಿ ಇಷ್ಟೇ ಪಂದ್ಯಗಳಿಂದ 47 ಪಾಯಿಂಟ್ಸ್ ಕಲೆಹಾಕಿದೆ.

ಐಎಸ್‌ಎಲ್ ಫೈನಲ್ ಮೇ 4ರಂದು

ಮುಂಬೈ (ಪಿಟಿಐ): ಈ ಋತುವಿನ ಇಂಡಿಯನ್ ಸೂಪರ್ ಲೀಗ್‌ನ ಫೈನಲ್ ಪಂದ್ಯ ಮೇ 4ರಂದು ನಡೆಯಲಿದೆ. ಪ್ಲೇ ಆಫ್ ಪಂದ್ಯಗಳು ಏಪ್ರಿಲ್ 19 ರಿಂದ ನಡೆಯಲಿವೆ ಎಂದು ಫುಟ್‌ಬಾಲ್ ಲೀಗ್‌ನ ಆಯೋಜಕರು ಗುರುವಾರ ಇಲ್ಲಿ ತಿಳಿಸಿದ್ದಾರೆ.

ಫೈನಲ್ ಪಂದ್ಯ ನಡೆಯುವ ತಾಣವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಲೀಗ್‌ನ ಆಯೋಜಕರಾದ ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಮಟ್ ಲಿಮಿಟೆಡ್ (ಎಫ್‌ಎಸ್‌ಡಿಎಲ್) ತಿಳಿಸಿದೆ.

'ಲೀಗ್‌ನ ಫೈನಲ್ ಮೇ 4ರಂದು ನಡೆಯಲಿದೆ. ಫೈನಲ್‌ಗೆ ಸ್ಪರ್ಧೆ ಏಪ್ರಿಲ್ 19ರಿಂದ ನಾಕೌಟ್, ಸೆಮಿಫೈನಲ್ (ತವರು ಮತ್ತು ಹೊರಗೆ ಮಾದರಿ) ಮೂಲಕ ನಡೆಯಲಿವೆ' ಎಂದು ಐಎಸ್‌ಎಲ್ ಹೇಳಿಕೆಯಲ್ಲಿ ತಿಳಿಸಿದೆ.

ಲೀಗ್‌ನಲ್ಲಿ ಮೊದಲ ಎರಡು ಸ್ಥಾನ ಗಳಿಸುವ ತಂಡಗಳು ನೇರವಾಗಿ ಸೆಮಿಫೈನಲ್‌ಗೆ ಅರ್ಹತೆ ಪಡೆಯುತ್ತವೆ. ಮೂರರಿಂದ ಆರರವರೆಗೆ ಸ್ಥಾನ ಪಡೆಯುವ ತಂಡಗಳು, ಸಿಂಗಲ್–ಲೆಗ್ ಪ್ಲೇ ಆಫ್ ಪಂದ್ಯಗಳನ್ನು ನಾಕೌಟ್ ಮಾದರಿಯಲ್ಲಿ ಆಡಲಿವೆ. ಇದರ ನಂತರ ಸೆಮಿಫೈನಲ್‌ನಲ್ಲಿ ಆಡುವ ಇನ್ನೆರಡು ತಂಡಗಳ ನಿರ್ಧಾರವಾಗಲಿದೆ.

ಈ ಬಾರಿಯ ಐಎಸ್‌ಎಲ್‌ನಲ್ಲಿ ಮುಂಬೈ ಸಿಟಿ ಎಫ್‌ಸಿ ಮತ್ತು ಮೋಹನ್ ಬಾಗನ್ ತಂಡ ಲೀಗ್ ಹಂತದಲ್ಲಿ ಶೀಲ್ಡ್ ಗೆಲುವಿಗೆ ಪೈಪೋಟಿಯಲ್ಲಿದೆ. ಪ್ಲೇ ಆಫ್ ತಂಡಗಳೂ ನಿರ್ಧಾರವಾಗಿವೆ.

ಪ್ಲೇ ಆಫ್‌ನ ಆರು ತಂಡಗಳು: ಮುಂಬೈ ಎಫ್‌ಸಿ, ಮೋಹನ್ ಬಾಗನ್ ಎಸ್‌ಜಿ, ಒಡಿಶಾ ಎಫ್‌ಸಿ, ಎಫ್‌ಸಿ ಗೋವಾ, ಕೇರಳ ಬ್ಲಾಸ್ಟರ್ಸ್‌ಎಫ್‌ಸಿ ಮತ್ತು ಚೆನ್ನೈಯಿನ್ ಎಫ್‌ಸಿ.

ಪ್ಲೇ ಆಫ್ ವೇಳಾಪಟ್ಟಿ: ನಾಕೌಟ್ ಪಂದ್ಯಗಳು: ಏಪ್ರಿಲ್ 19 ಮತ್ತು 20. ಸೆಮಿಫೈನಲ್ (ಮೊದಲ ಚರಣ): ಏ. 23 ಮತ್ತು 24. ಸೆಮಿಫೈನಲ್ (ಎರಡನೇ ಚರಣ): ಏಪ್ರಿಲ್ 28 ಮತ್ತು 29. ಫೈನಲ್ ಮೇ 4.

ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ವಿಶ್ವಾಸ

'ಒಲಿಂಪಿಕ್ಸ್ ಮುನ್ನವೇ 90 ಮೀ. ಮೈಲಿಗಲ್ಲು ಗುರಿ'

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಜಾವೆಲಿನ್ ಚಿನ್ನದ ಪದಕ ವಿಜೇತ ನೀರಜ್ ಚೋಪ್ರಾ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುನ್ನವೇ 90 ಮೀ. ಮೈಲಿಗಲ್ಲು ಸಾಧಿಸುವ ಗುರಿ ಹೊಂದಿದ್ದಾರೆ.

ಈಗ ನಡೆಯುತ್ತಿರುವ ಸಿದ್ಧತೆ ಗಮನಿಸಿದರೆ ಒಲಿಂಪಿಕ್ಸ್‌ಗೆ ಮೊದಲೇ ಈ ಗುರಿ ಸಾಕಾರಗೊಳ್ಳಬಹುದು ಎಂದು ಚೋಪ್ರಾ ಹೇಳಿದ್ದಾರೆ.

ಸ್ಪರ್ಧೆಯೊಂದರಲ್ಲಿ ಚೋಪ್ರಾ ಅವರ ಶ್ರೇಷ್ಠ ಎಸೆತ 89.94 ಮೀ. ದೂರ ದಾಖಲಾಗಿದೆ. ಈ ಸಾಧನೆ 2022ರ ಸ್ಟಾಕ್‌ಹೋಮ್ (ಸ್ವೀಡನ್) ಡೈಮಂಡ್ ಲೀಗ್‌ನಲ್ಲಿ ದಾಖಲಾಗಿತ್ತು.

ತರಬೇತಿಯ ವೇಳೆ ಅವರು ಜಾವೆಲಿನ್‌ಅನ್ನು 90 ಮೀ. ದೂರ ಎಸೆದಿದ್ದಾರೆ. ಆದರೆ ಸ್ಪರ್ಧೆಯಲ್ಲಿ ಈ ಮೈಲಿಗಲ್ಲು ಇದುವರೆಗೆ ದಾಟಿಲ್ಲ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಚಿನ್ನ ಉಳಿಸಿಕೊಳ್ಳುವ ಗುರಿ ಹೊಂದಿರುವ 26 ವರ್ಷದ ಚೋಪ್ರಾ, 'ನಾನು ಈ ಕೂಟಕ್ಕೆ ಮೊದಲೇ 90 ಮೀ. ದಾಟಲು ಪ್ರಯತ್ನಿಸುವೆ. ಪ್ಯಾರಿಸ್ ಒಲಿಂಪಿಕ್ಸ್‌ಗೆ ಮೊದಲೇ ಅದು ಈಡೇರಬಹುದು. ಸಿದ್ಧತೆ ಸುಗಮವಾಗಿ ಸಾಗುತ್ತಿದ್ದು, ಒಲಿಂಪಿಕ್ಸ್‌ವರೆಗೆ ಕಾಯಬೇಕಾಗಿಲ್ಲ. ಅದಕ್ಕೆ ಮೊದಲೇ ಸಾಕಾರಗೊಳ್ಳಬಹುದು' ಎಂದು ಗುರುವಾರ ಟರ್ಕಿಯಿಂದ ವರ್ಚುವಲ್ ಸಂವಾದದಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಹಾಲಿ ವಿಶ್ವ ಚಾಂಪಿಯನ್ ಚೋಪ್ರಾ ಅವರು, ಕೆಲ ಸಮಯದಿಂದ ಸ್ಪರ್ಧೆಗಳಿಲ್ಲದ ಕಾರಣ ಫಿಟ್ನೆಸ್ ಮತ್ತು ಸಾಮರ್ಥ್ಯವೃದ್ಧಿಯಲ್ಲಿ ನಿರತರಾಗಿದ್ದಾರೆ. ಇದು ಕೌಶಲದಲ್ಲಿ ಸುಧಾರಣೆ ಕಾಣಲು ನೆರವಾಗಿದೆ. ಇದರ ಜೊತೆಗೆ ದಕ್ಷಿಣ ಆಫ್ರಿಕಾ ಮತ್ತು ಟರ್ಕಿಯಲ್ಲಿ ಅವರು ಸ್ಟ್ರೆಂಥ್ ಮತ್ತು ಕಂಡಿಷನಿಂಗ್ ಶಿಬಿರದಲ್ಲೂ ಭಾಗಿಯಾಗಿದ್ದರು.



ನೀರಜ್ ಚೋಪ್ರಾ ಎಎಫ್‌ಪಿ ಚಿತ್ರ

'ಟೋಕಿಯೊ ಒಲಿಂಪಿಕ್ಸ್ ಯಶಸ್ಸಿನಿಂದ ನನ್ನ ಆತ್ಮವಿಶ್ವಾಸ ವೃದ್ಧಿಯಾಗಿದೆ. ಕೆಲವು ಸ್ಪರ್ಧೆಗಳಲ್ಲಿ ಯಶಸ್ಸೂ ಒಲಿದಿದೆ. ಎರಡು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಚಿನ್ನ, ಬೆಳ್ಳಿ, ಡೈಮಂಡ್ ಲೀಗ್‌ನಲ್ಲಿ ಟ್ರೋಫಿ, ಜೊತೆಗೆ ಕೆಲವು ಉತ್ತಮ ಥ್ರೋಗಳು. ಜೊತೆಗೆ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲೂ ಚಿನ್ನ ಉಳಿಸಿಕೊಂಡಿದ್ದೇನೆ' ಎಂದರು.

'ಟೋಕಿಯೊ ಮತ್ತು ಪ್ಯಾರಿಸ್ ಒಲಿಂಪಿಕ್ಸ್ ನಡುವೆ ದೊರೆತ ಯಶಸ್ಸು ನನ್ನಲ್ಲಿ ಸಾಕಷ್ಟು ವಿಶ್ವಾಸ ಮೂಡಿಸಿದೆ. ಪ್ರಬಲ ಸ್ಪರ್ಧಿಗಳ ಜೊತೆಗೆ ನಾನು ಉತ್ತಮ ಪೈಪೋಟಿ ನಡೆಸಬಲ್ಲೆ' ಎಂದಿದ್ದಾರೆ ಚೋಪ್ರಾ.

ಚೋಪ್ರಾ ಅವರು ಮೇ 10ರಂದು ದೋಹಾ ಡೈಮಂಡ್ ಲೀಗ್ ಕೂಟದ ಮೂಲಕ ಸ್ಪರ್ಧಾಕಣಕ್ಕೆ ಮರಳಲಿದ್ದಾರೆ. ಇದರ ನಂತರ ಜೂನ್ 18ರಂದು ಫಿನ್ಲೆಂಡ್‌ನ ತುರ್ಕುವಿನಲ್ಲಿ ಪಾವೊ ನೂರ್ಮಿ ಕೂಟ ನಡೆಯಲಿದೆ. ಅಲ್ಲಿ ಅವರಿಗೆ ಜರ್ಮನಿಯ 19 ವರ್ಷದ ಪ್ರತಿಭಾನ್ವಿತ ಮ್ಯಾಕ್ಸ್ ದೆಹ್ನಿಂಗ್ ಎದುರಾಗಲಿದ್ದಾರೆ. '90 ಮೀ. ಕ್ಲಬ್'ಗೆ ಸೇರ್ಪಡೆಗೊಂಡ ಇತ್ತೀಚಿನ ಪ್ರತಿಭಾವಂತ ಸ್ಪರ್ಧಿ ಅವರು.

ದಹ್ನಿಂಗ್ ಅವರು ನೀರಜ್ ಅವರಿಗೆ ಪ್ರಬಲ ಸವಾಲು ಒಡ್ಡುವ ಸ್ಪರ್ಧಿಯಾಗಿ ಮೂಡಿಬರುವ ಸಾಧ್ಯತೆಯಿದೆ. ಇತ್ತೀಚೆಗೆ ಜರ್ಮನಿಯ ಸ್ಪರ್ಧೆಯೊಂದರಲ್ಲಿ 90.20 ಮೀ. ದೂರ ಭರ್ಚಿಯನ್ನು ಎಸೆದಿರುವ ಅವರು ಈ ಸಾಧನೆ ಮಾಡಿದ ಅತಿ ಕಿರಿಯ ಸ್ಪರ್ಧಿ ಎನಿಸಿದ್ದಾರೆ.

'ಅವರನ್ನು ಸ್ಪರ್ಧೆಯಲ್ಲಿ ಎದುರಿಸಲು ತವಕದಿಂದ ಕಾಯುತ್ತಿದ್ದೇನೆ. ನಾನು ಟೋಕಿಯೊದಲ್ಲಿ ಪಾಲ್ಗೊಂಡಿದ್ದಾಗ ಅಲ್ಲಿ 90 + ಮೀಟರ್ ದೂರ ಎಸೆದ ಕೆಲವು ಸ್ಪರ್ಧಿಗಳಿದ್ದರು. ಇದು ದೊಡ್ಡ ವಿಷಯವಲ್ಲ. ಆ ನಿರ್ದಿಷ್ಟ ದಿನ ನೀವೇನು ಮಾಡುತ್ತೀರಿ ಎಂಬುದಷ್ಟೇ ಲೆಕ್ಕಕ್ಕೆ ಬರುತ್ತದೆ' ಎಂದು ಚೋಪ್ರಾ ಹೇಳಿದ್ದಾರೆ.

ಜೇನಾಗೂ ಸಾಧ್ಯತೆ: ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ 87.54 ಮೀ. ಸಾಧನೆ ದಾಖಲಿಸಿದ್ದ ಭಾರತದ ಇನ್ನೊಬ್ಬ ತಾರೆ, 28 ವರ್ಷದ ಕಿಶೋರ್ ಜೇನಾ ಅವರು ತಮಗಿಂತ ಮೊದಲು 90 ಮೀ. ಮೈಲಿಗಲ್ಲನ್ನು ದಾಟಿದರೆ ತಮಗೆ ಅಚ್ಚರಿಯೇನೂ ಆಗದು ಎಂದೂ ನೀರಜ್ ಹೇಳಿದ್ದಾರೆ.

'ವಿಶ್ವ ಚಾಂಪಿಯನ್‌ಷಿಪ್ ಮತ್ತು ಏಷ್ಯನ್ ಗೇಮ್ಸ್‌ನಲ್ಲಿ ಅವರು (ಜೇನಾ) ಸಾಧಿಸಿರುವ ಪ್ರಗತಿ ಗಮನಿಸಿದರೆ ಅವರು (ಕಿಶೋರ್) ನನಗಿಂತ ಮೊದಲೇ 90 ಮೀ. ದೂರ ದಾಟಬಹುದು' ಎಂದಿದ್ದಾರೆ.

ಬ್ಯಾಡ್ಮಿಂಟನ್: ಸಿಂಧು ಪ್ರಣಯ್ ನಿರ್ಗಮನ

ನಿಂಗ್ಬೊ (ಚೀನಾ) (ಪಿಟಿಐ): ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಮತ್ತು ಎಚ್.ಎಸ್.ಪ್ರಣಯ್ ಅವರು ಇಲ್ಲಿ ನಡೆಯುತ್ತಿರುವ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನ ಪ್ರಿ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲುವುದರೊಂದಿಗೆ ಭಾರತದ ಸವಾಲು ಅಂತ್ಯಗೊಂಡಿತು.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುಂಚಿವಾಗಿ ಉತ್ತಮ ಪ್ರದರ್ಶನಕ್ಕೆ ಪ್ರಯತ್ನಿಸುತ್ತಿರುವ ಸಿಂಧು, ಒಂದು ಗಂಟೆ ಒಂಬತ್ತು ನಿಮಿಷಗಳ ಕಾಲ ನಡೆದ ಸೆಣಸಾಟದಲ್ಲಿ ತೀವ್ರ ಪೈಪೋಟಿ ನೀಡಿದರು.

ಆದರೆ, ಚೀನಾದ ಆರನೇ ಶ್ರೇಯಾಂಕದ ಹಾನ್ ಯು ವಿರುದ್ಧ 18-21, 21-13, 17-21 ಅಂತರದಲ್ಲಿ ಸೋಲನುಭವಿಸಿದರು.ಗುರುವಾರದ ಪಂದ್ಯಕ್ಕೆ ಮೊದಲು 5-0 ದಾಖಲೆ ಹೊಂದಿದ್ದ ಯು ವಿರುದ್ಧ ಸಿಂಧು ಅವರ ಮೊದಲ ಸೋಲು ಇದಾಗಿದೆ.

ವಿಶ್ವದ 9ನೇ ರ‍್ಯಾಂಕ್‌ನ ಪ್ರಣಯ್ ಅವರು 43 ನಿಮಿಷಗಳ ಪಂದ್ಯದಲ್ಲಿ ಚೀನಾ ತೈಪೆಯ ಶ್ರೇಯಾಂಕ ರಹಿತ ಲಿನ್ ಚುನ್ ಯಿ ವಿರುದ್ಧ 18–21, 21–13, 17–21 ಅಂತರದಲ್ಲಿ ಸೋತರು.

ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ತನಿಶಾ ಕ್ರಾಸ್ಟೊ ಮತ್ತು ಅಶ್ವಿನಿ ಪೊನ್ನಪ್ಪ ಜೋಡಿ 17–21, 12–21ರಲ್ಲಿ ಮೂರನೇ ಶ್ರೇಯಾಂಕದ ಜಪಾನಿನ ನಮಿ ಮತ್ಸುಯಾಮಾ ಮತ್ತು ಚಿಹಾರು ಶಿಡಾ ಎದುರು ಸೋತಿತು.

ಸಂಕ್ಷಿಪ್ತ ಸುದ್ದಿ

ಮುಂಬೈ ತಂಡಕ್ಕೆ ದೇಸಾಯಿ

ನವದೆಹಲಿ (ಪಿಟಿಐ): ಸೌರಾಷ್ಟ್ರದ ವಿಕೆಟ್‌ಕೀಪರ್–ಬ್ಯಾಟರ್ ಹರ್ವಿಕ್ ದೇಸಾಯಿ ಅವರನ್ನು ಐಪಿಎಲ್ ಟೂರ್ನಿಯಲ್ಲಿ ಆಡುವ ಮುಂಬೈ ಇಂಡಿಯನ್ಸ್ ತಂಡವು ಸೇರ್ಪಡೆ ಮಾಡಿಕೊಂಡಿದೆ.

ವಿಷ್ಣು ವಿನೋದ್ ಅವರು ಮುಂಗೈ ಗಾಯದಿಂದಾಗಿ ವಿಶ್ರಾಂತಿ ಪಡೆದಿದ್ದಾರೆ. ಅವರ ಬದಲಿಗೆ ದೇಸಾಯಿ ಸ್ಥಾನ ಪಡೆದಿದ್ದಾರೆ. 24 ವರ್ಷದ ದೇಸಾಯಿ 46 ಪ್ರಥಮ ದರ್ಜೆ, 40 ಲಿಸ್ಟ್ ಎ ಹಾಗೂ 27 ದೇಶಿ ಟಿ20 ಪಂದ್ಯಗಳನ್ನು ಆಡಿದ್ದಾರೆ.

ಸ್ಯಾಮ್ಸನ್‌ಗೆ ದಂಡ

ಜೈಪುರ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದ ನಾಯಕ ಸಂಜು ಸ್ಯಾಮ್ಸನ್ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ. ಗುಜರಾತ್ ಟೈಟನ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ಸಂಜು ನಾಯಕತ್ವದ ತಂಡವು ನಿಗದಿಯ ಸಮಯದೊಳಗೆ ಓವರ್‌ಗಳನ್ನು ಪೂರ್ಣಗೊಳಿಸಲಿಲ್ಲ.

'ಗುಜರಾತ್ ಟೈಟನ್ಸ್ ತಂಡದ ಎದುರಿನ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ಬೌಲಿಂಗ್ ಪೂರ್ಣಗೊಳಿಸಲು ಹೆಚ್ಚು ಅವಧಿ ತೆಗೆದುಕೊಂಡಿತು. ಅದರಿಂದಾಗಿ ನಾಯಕ ಸಂಜು ಅವರಿಗೆ ದಂಡ ವಿಧಿಸಲಾಗಿದೆ ' ಎಂದು ಐಪಿಎಲ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿಶ್ವಕಪ್‌ನತ್ತ ಚಿತ್ತ

ಸಿಡ್ನಿ (ಪಿಟಿಐ): ಸತತ ಆಟದಿಂದಾಗಿ ಸಂಪೂರ್ಣ ದಣಿದು ಹೋಗಿದ್ದೆ. ಈ ವರ್ಷ ಟಿ20 ವಿಶ್ವಕಪ್ ಕೂಡ ಇರುವುದರಿಂದ ವಿಶ್ರಾಂತಿ ಅಗತ್ಯವಿತ್ತು. ಆದ್ದರಿಂದಲೇ ಐಪಿಎಲ್‌ನಲ್ಲಿ ಆಡಲಿಲ್ಲ ಎಂದು ಆಸ್ಟ್ರೇಲಿಯಾದ ಸ್ಪಿನ್ನರ್ ಆ್ಯಡಂ ಜಂಪಾ ಹೇಳಿದ್ದಾರೆ.

ಸ್ಕ್ವಾಷ್: ಕ್ವಾರ್ಟರ್‌ಗೆ ಅಕಾಂಕ್ಷಾ

ನವದೆಹಲಿ (ಪಿಟಿಐ): ಅಗ್ರಶ್ರೇಯಾಂಕದ ಆಟಗಾರ್ತಿ ಭಾರತದ ಅಕಾಂಕ್ಷಾ ಸಾಳುಂಕೆ ಅವರು ಆರ್‌ಸಿ ಪ್ರೊ ಸಿರೀಸ್ ಸ್ಕ್ವಾಷ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ. ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಆಕಾಂಕ್ಷಾ 3-2 (13-15, 11-6, 9-11, 11-5, 11-6) ನಾರ್ವೆಯ ಮೆಡೆಲೀನ್ ಹೈಲ್ಯಾಂಡ್ ವಿರುದ್ಧ ಗೆದ್ದರು. 41 ನಿಮಿಷ ನಡೆದ ಎರಡನೇ ಸುತ್ತಿನಲ್ಲಿ ಅವರು ಮೆಲುಗೈ ಸಾಧಿಸಿದರು. ಗೋವಾದ ಆಕಾಂಕ್ಷಾ ಅವರು ಎಂಟರ ಘಟ್ಟದಲ್ಲಿ ಈಜಿಪ್ಟ್‌ನ ಜಾನಾ ಸ್ವಾಫಿ ವಿರುದ್ಧ ಆಡಲಿದ್ದಾರೆ.





WT.5701.2024KAN